ಮಂಗಳೂರು
ಶನಿವಾರ, 4 ಏಪ್ರಿಲ್ 2026
ಸಂಪುಟ 48, ಸಂಚಿಕೆ 16, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
▸hosadigantha.com
▸epaper.hosadigantha.com
▸Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ತಾರಾಗಿರಿ ನೌಕಾಪಡೆಗೆ ಸೇರ್ಪಡೆ | ೦೭
ಪಾಕ್‌ನಲ್ಲಿ ಇಂಧನ ದರ ಭಾರೀ ಏರಿಕೆ | ೦೭
ಪುದುಚೇರಿಯಲ್ಲಿ ಮೋದಿ ರೋಡ್ ಶೋ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಸ್ವಾತಿ

ದಿನದ ಮಾತು

ಪರಿಶ್ರಮದಿಂದ ಯಶಸ್ಸು ಸಾಧ್ಯವೇ ವಿನಾ ಆಡಂಬರದಿಂದಲ್ಲ.
▲ಪಂಚತಂತ್ರ

ಅಂಗಾದಿತ್ಯ ಎಂದರೇನು?

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಲೂರು
• ಪುಟ ೬

ಕಿರುಸುದ್ದಿ

ಕಲಬುರಗಿಯಲ್ಲಿ ಮಾಜಿ ಸಚಿವರ ಅಳಿಯನ ಹತ್ಯೆ

• **ಕಲಬುರಗಿ:** ನಗರದಲ್ಲಿ ಭೀಕರ ಹತ್ಯೆ ಪ್ರಕರಣ ಗುರುವಾರ ತಡರಾತ್ರಿ ಬೆಳಕಿಗೆ ಬಂದಿದೆ. ಪಿಎನ್‌ಟಿ ಕಾಲೋನಿ ಸಮೀಪದ ವೆಂಕಟೇಶ್ವರ ಕಾಂಪ್ಲೆಕ್ಸ್‌ನಲ್ಲಿ ದುಷ್ಕರ್ಮಿಗಳು ದಾಳಿ ನಡೆಸಿ ಮಾಜಿ ಸಚಿವರೊಬ್ಬರ ಅಳಿಯನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆಗೈದಿದ್ದಾರೆ.



ಹತ್ಯೆಯಾದ ವ್ಯಕ್ತಿ ಅನಿಲ ರಾಠೋಡ್(45) ಎಂದು ಗುರುತಿಸಲಾಗಿದ್ದು, ಅವರು ಮಾಜಿ ಸಚಿವ ರೇವೂನಾಯಕ ಬೆಳಮಗಿ ಅವರ ಅಳಿಯರಾಗಿದ್ದಾರೆ. ಅನಿಲ ಅವರು ಫೈನಾನ್ಸ್ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು. ➡ಪುಟ ೪

ನಿವೃತ್ತ ನ್ಯಾ.ಸಂತೋಷ್ ಹೆಗ್ಡೆ ಆರೋಗ್ಯದಲ್ಲಿ ಏರುಪೇರು

• **ಬೆಂಗಳೂರು:** ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಕಾರ್ಯಕ್ರಮದ ವೇಳೆ ಸಮಾರಂಭದ ವೇದಿಕೆಯಲ್ಲಿಯೇ ಕುಸಿದುಬಿದ್ದಿದ್ದು, ಕೂಡಲೇ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ಶುಕ್ರವಾರ ಕೊಂಡಜ್ಜಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಭಾಜನರಾದ ಡಾ.ಪಿ.ಜಿ.ಆರ್.ಸಿಂಧ್ಯಾ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ನ್ಯಾ.ಸಂತೋಷ್ ಹೆಗ್ಡೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ➡ಪುಟ ೪

ಪರಂಪರೆ, ಅಭಿವೃದ್ಧಿ ಜತೆ ಜತೆಯಾಗಿರಲು ಬಿಜೆಪಿ ಶ್ರಮ: ಯೋಗಿ

• ಪುಟ ೭

ಪೇಟೆಂಟ್ ಔಷಧಗಳ ಮೇಲೆ 100% ಸುಂಕ ವಿಧಿಸಿದ ಟ್ರಂಪ್

• ಪುಟ ೭

ಧಾರ್ಮಿಕ ಆಚರಣೆ ತೀರ್ಮಾನ ನ್ಯಾಯಾಲಯಕ್ಕೆ ಪರಿಣತಿ ಇಲ್ಲ

• ಪುಟ ೭

ಕಾಂಗ್ರೆಸ್‌ಗೆ ಬಿಜೆಪಿ ಹೈಕಮಾಂಡ್ ಅಲ್ಲ: ಸಿಎಂ ಸಿದ್ದರಾಮಯ್ಯ

• ಪುಟ ೫

ಸಿಬಿಎಸ್ಇ ಹೊಸ ಪಠ್ಯಕ್ರಮ | ಹಲವು ಬದಲಾವಣೆ

6ನೇ ತರಗತಿಯಿಂದ 3ನೇ ಭಾಷೆ ಕಡ್ಡಾಯ

• **ಹೊಸದಿಲ್ಲಿ:** ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್-ಸಿಬಿಎಸ್‌ಇ) 2026-27ರಿಂದ ಜಾರಿಗೆ ಬರುವ ಹೊಸ ಪಠ್ಯಕ್ರಮವನ್ನು ಪ್ರಕಟಿಸಿದ್ದು, 6ನೇ ತರಗತಿಯಿಂದ ಮೂರನೇ ಭಾಷೆಯನ್ನು ಕಡ್ಡಾಯಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ವ್ಯವಸ್ಥೆ ಹಂತ ಹಂತವಾಗಿ ಜಾರಿಯಾಗುತ್ತಾ, 2031ರ ವೇಳೆಗೆ 10ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲೂ ಸಂಪೂರ್ಣವಾಗಿ ಅನ್ವಯವಾಗಲಿದೆ.

ಹೊಸ ಪಠ್ಯಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಶಿಫಾರಸುಗಳಿಗೆ ಅನುಗುಣವಾಗಿದ್ದು, ಈಗಿನ ಎರಡು ಭಾಷೆಗಳ ಬದಲು ವಿದ್ಯಾರ್ಥಿಗಳು 10ನೇ ತರಗತಿವರೆಗೆ ಮೂರು ಭಾಷೆಗಳನ್ನು ಕಲಿಯುವ ವ್ಯವಸ್ಥೆ ಅಳವಡಿಸಲಾಗುತ್ತಿದೆ. ಈ ಯೋಜನೆ ಪ್ರಕಾರ, 2026-27ರಿಂದ 6ನೇ ತರಗತಿಯಲ್ಲಿ 3ನೇ ಭಾಷೆ (ಆರ್3) ಪರಿಚಯವಾಗಲಿದ್ದು, ಕ್ರಮೇಣ 2030-31ರವರೆಗೆ 10ನೇ ತರಗತಿಗೂ ವಿಸ್ತರಿಸಲಾಗುತ್ತದೆ. 2031ರಲ್ಲಿ ಬೋರ್ಡ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಮೊದಲ ಬಾರಿಗೆ ಸಂಪೂರ್ಣ 3 ಭಾಷಾ ವ್ಯವಸ್ಥೆಯಲ್ಲಿ ಪರೀಕ್ಷೆಗೆ ಒಳಗಾಗಲಿದ್ದಾರೆ.

ಸಿಬಿಎಸ್‌ಇ ಅಧ್ಯಕ್ಷ ರಾಹುಲ್ ಸಿಂಗ್ ಪ್ರಕಾರ, 9ನೇ ತರಗತಿಗೆ ತಕ್ಷಣವೇ 3ನೇ ಭಾಷೆ ಕಡ್ಡಾಯವಾಗಲ್ಲ. ಆರ್1 (ಪ್ರಾಥಮಿಕ ಭಾಷೆ), ಆರ್2 (ಎರಡನೇ ಭಾಷೆ), ಆರ್3 (ಮೂರನೇ ಭಾಷೆ) ಎಂಬ 3 ಹಂತಗಳಲ್ಲಿ ಭಾಷಾ ವಿಷಯಗಳನ್ನು ವಿಂಗಡಿಸಲಾಗುತ್ತದೆ. ➡ಪುಟ ೪



ಮುಖ್ಯಾಂಶಗಳು

- 2026-27ರಿಂದ 6ನೇ ತರಗತಿಯಿಂದ ಮೂರನೇ ಭಾಷೆ(ಆರ್3) ಕಡ್ಡಾಯ
- 2031ರಿಂದ 10ನೇ ತರಗತಿ ಬೋರ್ಡ್‌ನಲ್ಲಿ ಮೂರು ಭಾಷೆಗಳಿಗೂ ಪ್ರತ್ಯೇಕ ಪರೀಕ್ಷೆ
- ಇಂಗ್ಲಿಷ್ ವಿದೇಶಿ ಭಾಷೆ ಎಂದು ವರ್ಗೀಕರಣ; ಒಂದೇ ವಿದೇಶಿ ಭಾಷೆ ಆಯ್ಕೆ ಅವಕಾಶ
- ಕನಿಷ್ಠ 2 ಭಾಷೆಗಳು ಭಾರತೀಯ ಮೂಲದವಾಗಿರಬೇಕು
- ಗಣಿತ, ವಿಜ್ಞಾನಕ್ಕೆ ಎರಡು ಮಟ್ಟದ(ಅಡ್ವಾನ್ಸ್ ಆಯ್ಕೆ) ವ್ಯವಸ್ಥೆ
- ಎಐ, ಕಂಪ್ಯೂಟೇಷನಲ್ ಥಿಂಕಿಂಗ್ 2029ರಿಂದ ಬೋರ್ಡ್ ಕಡ್ಡಾಯ ವಿಷಯ
- ಡೋಗ್ರಿ, ಮೈಥಿಲಿ, ಕೊಂಕಣಿ, ಸಂತಾಳಿ ಸೇರಿ 22 ಭಾರತೀಯ ಭಾಷೆಗಳ ಆಯ್ಕೆ

ಬಹು ಭಾಷಾ ಆಯ್ಕೆ

ಭಾಷಾ ಆಯ್ಕೆಗಳ ವ್ಯಾಪ್ತಿಯನ್ನೂ ಸಿಬಿಎಸ್‌ಇ ವಿಸ್ತರಿಸಿದ್ದು, ಡೋಗ್ರಿ, ಮೈಥಿಲಿ, ಕೊಂಕಣಿ ಮತ್ತು ಸಂತಾಳಿ ಭಾಷೆಗಳು 9ನೇ ತರಗತಿಯಲ್ಲಿ ಹೊಸದಾಗಿ ಸೇರಿಸಲ್ಪಟ್ಟಿವೆ. ಇದರಿಂದ ಸಂವಿಧಾನದ ಎಂಟನೇ ಪಟ್ಟಿ ಒಳಗೊಂಡ ಎಲ್ಲಾ 22 ಭಾರತೀಯ ಭಾಷೆಗಳನ್ನೂ ವಿದ್ಯಾರ್ಥಿಗಳಿಗೆ ಕಲಿಯುವ ಅವಕಾಶ ಲಭ್ಯವಾಗಲಿದೆ. ➡ಪುಟ ೪

ಸಿಟಿ, ಎಐ ಕಲಿಕೆ • ಪುಟ ೪

ಅಮೆರಿಕ-ಇಸ್ರೇಲ್, ಇರಾನ್ ಉದ್ವಿಗ್ನತೆ ಮತ್ತಷ್ಟು ತೀವ್ರ

ಇರಾನ್ ಸೇತುವೆ ಧ್ವಂಸ


• **ದುಬೈ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಉದ್ವಿಗ್ನತೆ ಮತ್ತಷ್ಟು ತೀವ್ರಗೊಂಡಿರುವ ಹಿನ್ನೆಲೆ, ಇತ್ತೀಚೆಗೆ ಇರಾನ್‌ನ ಕರಜ್ ಪ್ರದೇಶದಲ್ಲಿರುವ ಬಿ1 ತೈಲ ಸಂಪರ್ಕ ಸೇತುವೆ ಮೇಲೆ ನಡೆದ ದಾಳಿಯಲ್ಲಿ 8 ಮಂದಿ ನಾಗರಿಕರು ಮೃತಪಟ್ಟಿದ್ದು, 95 ಜನರು ಗಾಯಗೊಂಡಿದ್ದಾರೆ ಎಂದು ಇರಾನಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಈ ದಾಳಿಯನ್ನು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿವೆ. ದಾಳಿ ನಡೆದ ವೇಳೆ ಪ್ರವಾಸಿಗರು ಹಾಗೂ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.



ಇದಕ್ಕೆ ಪ್ರತಿಕ್ರಿಯೆ ನೀಡಿದ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಈ ದಾಳಿ ಇಸ್ಲಾಮಿಕ್ ಗಣರಾಜ್ಯದ ವಿರುದ್ಧದ ಅಪ್ರಚೋದಿತ ಯುದ್ಧವಾಗಿದ್ದು, ದೇಶ ತನ್ನ ಎಲ್ಲಾ ಸಾಮರ್ಥ್ಯಗಳನ್ನು ಬಳಸಿಕೊಂಡು ಪ್ರತಿರೋಧ ನೀಡಲಿದೆ ಎಂದು ಹೇಳಿದ್ದಾರೆ.

ಇದೇ ವೇಳೆ ಅವರು ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಅವರೊಂದಿಗೆ ಮಾತುಕತೆ ನಡೆಸಿ ಪ್ರಾದೇಶಿಕ ಭದ್ರತೆ ಕುರಿತ ಮಾಹಿತಿ ಹಂಚಿಕೊಂಡಿದ್ದಾರೆ. ಇದರ ನಡುವೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ, ಹಾರ್ಮುಜ್ ಜಲಸಂಧಿಯಲ್ಲಿ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅಂತಾರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ಹಡಗು ಸಂಚಾರವನ್ನು ನಿಯಂತ್ರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಉಂಟಾಗಿರುವ ಅಸ್ಥಿರತೆಗೆ ಅಮೆರಿಕ ಮತ್ತು ಇಸ್ರೇಲ್ ಕ್ರಮಗಳೇ ಕಾರಣ ಎಂದು ಆರೋಪಿಸಲಾಗಿದೆ.

ಅಮೆರಿಕಕ್ಕೆ ಇರಾನ್ ಎಚ್ಚರಿಕೆ: ಇನ್ನೊಂದೆಡೆ, ಅಮೆರಿಕದ ಬೆದರಿಕೆಗಳಿಗೆ ಪ್ರತಿಕ್ರಿಯೆ ನೀಡಿದ ಇರಾನ್, ಬಾಂಬ್ ದಾಳಿಗಳ ಮೂಲಕ ತನ್ನ ನಾಗರಿಕತೆಯನ್ನು ನಾಶಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ➡ಪುಟ ೪



ತೈಲ, ನೀರಿನ ಮೂಲಸೌಕರ್ಯ ಗುರಿಯಾಗಿಸಿ ಇರಾನ್ ದಾಳಿ

ಈ ನಡುವೆ ಇರಾನ್, ಕೊಲ್ಲಿ ದೇಶಗಳ ವಿವಿಧ ಭಾಗಗಳ ಮೇಲೆ ದಾಳಿ ಮುಂದುವರಿಸಿದೆ. ಕುವೈತ್‌ನ ಮಿನಾ ಅಲ್-ಅಹ್ಮದಿ ತೈಲ ಶುದ್ಧೀಕರಣ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ ಅದನ್ನು ನಿಯಂತ್ರಿಸಲು ಪ್ರಯತ್ನಿಸಿದ್ದಾರೆ. ಅಲ್ಲದೆ, ಕುಡಿಯುವ ನೀರಿನ ಪ್ರಮುಖ ಮೂಲವಾದ ಡಿಸಾಲಿನೇಶನ್ ಘಟಕಕ್ಕೂ ಹಾನಿಯಾಗಿದೆ ಎಂದು ತಿಳಿದುಬಂದಿದೆ. ಈ ದಾಳಿಗಳ ಪರಿಣಾಮ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಆತಂಕ ಹೆಚ್ಚಾಗಿದೆ. ಬಹ್ರೇನ್‌ನಲ್ಲೂ ಎಚ್ಚರಿಕಾ ಸೈರನ್‌ಗಳು ಮೊಳಗಿದರೆ, ಸೌದಿ ಅರೇಬಿಯಾ, ಇರಾನ್‌ನ ಕೆಲವು ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ಹೇಳಿದೆ. ಇಸ್ರೇಲ್ ಮೇಲೆಯೂ ಕ್ಷಿಪಣಿಗಳ ದಾಳಿ ವರದಿಯಾಗಿದೆ. ಯುಎಇಯಲ್ಲಿ ಒಂದು ಅನಿಲ ಕ್ಷೇತ್ರವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಅಮೆರಿಕ ಸೇನೆ ಉನ್ನತ ಅಧಿಕಾರಿಗಳ ಪದಚ್ಯುತಿ



• **ವಾಷಿಂಗ್ಟನ್:** ಅಮೆರಿಕ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಅವರು ಸೇನೆಯ ಅತ್ಯುನ್ನತ ಹುದ್ದೆಯಲ್ಲಿದ್ದ ಅಧಿಕಾರಿ ಸೇರಿದಂತೆ ಇನ್ನಿಬ್ಬರು ಜನರಲ್‌ಗಳನ್ನು ಹಠಾತ್ತಾಗಿ ಪದಚ್ಯುತಗೊಳಿಸಿದ್ದಾರೆ ಎಂದು ಪೆಂಟಗನ್ ತಿಳಿಸಿದೆ. ಈ ನಿರ್ಧಾರಕ್ಕೆ ಸ್ಪಷ್ಟ ಕಾರಣವನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ. ➡ಪುಟ ೪

ಅಮೆರಿಕದ ಯುದ್ಧ ವಿಮಾನ, ಕಾಪ್ಟರ್ ಪತನ

• **ಟೆಹ್ರಾನ್/ವಾಷಿಂಗ್ಟನ್:** ಇರಾನ್ ವಾಯು ರಕ್ಷಣಾ ದಳದ ದಾಳಿಯಿಂದ ಅಮೆರಿಕದ ಎಫ್-15 ಸ್ಟ್ರೈಕ್ ಈಗಲ್ ಯುದ್ಧ ವಿಮಾನ, ಬ್ಲಾಕ್ ಹಾಕ್ ಹೆಲಿಕಾಪ್ಟರ್ ಪತನವಾಗಿದ್ದು, ಯುದ್ಧ ವಿಮಾನದ ಇಬ್ಬರು ಪೈಲಟ್‌ಗಳು ಇದರಿಂದ ಆಚೆ ಜಿಗಿದಿದ್ದಾರೆ. ಅಮೆರಿಕವೂ ಈ ಯುದ್ಧ ವಿಮಾನದ ಮೇಲಿನ ದಾಳಿಯನ್ನು ದೃಢೀಕರಿಸಿದ್ದು, ಒಬ್ಬ ಪೈಲಟ್‌ನನ್ನು ರಕ್ಷಿಸಿರುವುದಾಗಿ ಹೇಳಿದೆ. ಹಾಗೆಯೇ, ಮತ್ತೊಬ್ಬನಿಗಾಗಿ ಶೋಧ ನಡೆಯುತ್ತಿದೆ ಎಂದು ಹೇಳಿಕೊಂಡಿದೆ.



ಹಾನಿ, ಸಾವಿನ ಸಂಖ್ಯೆ ಹೆಚ್ಚಳ

ಫೆ.28ರಿಂದ ಆರಂಭವಾದ ಈ ಯುದ್ಧದಲ್ಲಿ ಇರಾನ್‌ಲ್ಲಿ 1,900ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ವೆಸ್ಟ್ ಬ್ಯಾಂಕ್‌ಲ್ಲಿ ಎರಡು ಡಜನ್‌ಗಿಂತ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ➡ಪುಟ ೪

ಬಿಜಿಎಸ್ ಕ್ಯಾಂಪಸ್‌ನಲ್ಲಿ ಸಭೆ | ಭಾಗವತ್, ಅಮಿತ್ ಶಾ ಭಾಗಿ

ನೆಲಮಂಗಲದಲ್ಲಿಂದು ಧಾರ್ಮಿಕ ಸಭೆ

• **ನೆಲಮಂಗಲ(ಬೆಂಗಳೂರು ಗ್ರಾಮಾಂತರ):** ನಗರದ ಅರಿಶಿನಕುಂಟೆಯ ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಪಿಯು ಕಾಲೇಜು ಸಭಾಂಗಣದಲ್ಲಿ ಹಿಂದು ಧರ್ಮ ಆಚಾರ್ಯ ಮಹಾಸಭಾದಿಂದ ಶನಿವಾರ (ಏ.4) ಧಾರ್ಮಿಕ ಸಭೆ ಆಯೋಜಿಸಲಾಗಿದೆ.

ಈ ಧರ್ಮಸಭೆಯಲ್ಲಿ ದೇಶದ ನೂರಕ್ಕೂ ಹೆಚ್ಚು ಸ್ವಾಮೀಜಿಗಳು ಹಾಗೂ ಧಾರ್ಮಿಕ ಕೇಂದ್ರಗಳ ಪ್ರಮುಖರು ಪಾಲ್ಗೊಳ್ಳಲಿದ್ದು, ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ.

ಈಗಾಗಲೇ ಗುಜರಾತ್, ಉತ್ತರಪ್ರದೇಶ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಸ್ವಾಮೀಜಿಗಳು, ಸಾಧು-ಸಂತರು ಆದಿಚುಂಚನಗಿರಿ ಮಠ ಹಾಗೂ ಬಿಜಿಎಸ್ ಕ್ಯಾಂಪಸ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ರಾಜ್ಯದ ಹಲವು ಸ್ವಾಮೀಜಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.



ಬಿಗಿ ಭದ್ರತೆ

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿವಿಧ ಸ್ವಾಮೀಜಿಗಳು, ಸಂತರು ಆಗಮಿಸುತ್ತಿರುವ ಕಾರಣ ಭಾರೀ ಭದ್ರತೆ ಕೈಗೊಳ್ಳಲಾಗಿದೆ. ರಸ್ತೆಗಳಲ್ಲಿ ಕಾಲೇಜು, ಆಸ್ಪತ್ರೆ ಸುತ್ತಮುತ್ತಲ ಪ್ರದೇಶದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ➡ಪುಟ ೪

ಹಿಂದು ಸಂಘಟನೆಗಳ ಆಕ್ರೋಶ | ಆರೋಪ, ಪ್ರತ್ಯಾರೋಪ

ಹುಬ್ಬಳ್ಳಿಯಲ್ಲಿ ಲವ್ ಜಿಹಾದ್ ಯತ್ನ

• **ಹುಬ್ಬಳ್ಳಿ:** ಮಗಳ ಜತೆ ಸಲುಗೆ ಬೆಳೆಸಿ ಲವ್ ಜಿಹಾದ್‌ಗೆ ಯತ್ನಿಸಿದ್ದಲ್ಲದೇ, ಕಿರುಕುಳ ನೀಡುತ್ತಿದ್ದಾನೆ ಎಂದು ಮುಸ್ಲಿಂ ಯುವಕನ ಮೇಲೆ ಕುಟುಂಬವೊಂದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೆ, ಯುವಕನ ಕುಟುಂಬದವರು, ಲವ್ ಜಿಹಾದ್ ಸುಳ್ಳು ಆರೋಪವಾಗಿದ್ದು, ತಮ್ಮ ಹುಡುಗನ ಮೇಲೆ ಹಲ್ಲೆ ನಡೆಸಿ ಅಪಹರಣ ಮಾಡಿದ್ದಾರೆ ಎಂದು ಪ್ರತಿ ದೂರು ಸಲ್ಲಿಸಿದ್ದಾರೆ.

ಈ ನಡುವೆಯೇ ಹಿಂದು ಸಂಘಟನೆಗಳು ನಗರದಲ್ಲಿ ಪ್ರತಿಭಟನೆ ನಡೆಸಿ 'ಲವ್ ಜಿಹಾದ್' ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ. ಎಸ್‌ಎಸ್‌ಕೆ ಸಮಾಜದ ಜನರು ಹಾಗೂ ಹಿಂದು ಪರ ಸಂಘಟನೆಯವರು ಆತನನ್ನು ಕರೆದೊಯ್ದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದು, ಆತನ ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ತನಿಖೆಯ ಭರವಸೆ, ಪ್ರತಿಭಟನೆ ವಾಪಸ್: ಪ್ರಕರಣದ ಕುರಿತು ದೂರು ದಾಖಲಿಸಿಕೊಂಡು ಸಮಗ್ರ ತನಿಖೆ ನಡೆಸುವುದಾಗಿ ಪೊಲೀಸರು ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂಪಡೆದಿದ್ದಾರೆ. ➡ಪುಟ ೪



> ಘಟನೆ ಕುರಿತು ದೂರು ಹಾಗೂ ಪ್ರತಿದೂರು ದಾಖಲಾಗಿದ್ದು, ಈ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
> ■ **ಎನ್. ಶಶಿಕುಮಾರ್,** ಹು-ಧಾ ಕಮಿಷನರೇಟ್ ಘಟಕದ ಆಯುಕ್ತ

ಸಿಎಸ್‌ಗೆ ರಾಜ್ಯಪಾಲರ ಪತ್ರ

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ. ಈ ಕುರಿತು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ಅವರಿಗೆ ಪತ್ರ ಬರೆದಿದ್ದು, ಸರ್ಕಾರದ ನಿರ್ಧಾರವನ್ನು ಮರು ಪರಿಶೀಲನೆ ಮಾಡುವಂತೆ ತಿಳಿಸಲಾಗಿದೆ.

ಎಸ್ಸೆಸ್ಸೆಲ್ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕಗಳನ್ನು ನೀಡದೆ, ಕೇವಲ ಗ್ರೇಡ್ ನೀಡುವ ನಿರ್ಧಾರವನ್ನು ಮರುಪರಿಶೀಲಿಸಿ. ಭಾಷಾವೈವಿಧ್ಯತೆ, ಜಾಗೃತಿ, ಬೌದ್ಧಿಕ ಬೆಳವಣಿಗೆಯನ್ನು ಬೆಳೆಸುವಲ್ಲಿ ತೃತೀಯ ಭಾಷೆಯು ಪ್ರಮುಖ ಪಾತ್ರ ವಹಿಸುತ್ತದೆ. ➡ಪುಟ ೪

ಮುಖ್ಯ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿ ವಿಶ್ವಾಸ

ಭಾರತದಲ್ಲಿ ಪಿಒಕೆ ವಿಲೀನ ಶೀಘ್ರ

• **ಶ್ರೀನಗರ:** ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದು ಶೀಘ್ರದಲ್ಲೇ ಭಾರತದೊಂದಿಗೆ ಮತ್ತೆ ಏಕೀಕರಣಗೊಳ್ಳಲಿದೆ ಎಂದು ಅಖಿಲ ಭಾರತೀಯ ಇಮಾಮ್ ಸಂಘಟನೆ ಮುಖ್ಯ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿ ಶುಕ್ರವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಾಶ್ಮೀರದಲ್ಲಿ ನಿಂತು ನಮ್ಮ ನೆರೆಯ ದೇಶಕ್ಕೆ ನಾನು ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ಪಿಒಕೆ ಖಂಡಿತವಾಗಿಯೂ ಭಾರತಕ್ಕೆ ಮತ್ತೆ ಸೇರುತ್ತದೆ. ಏಕೆಂದರೆ ಪಿಒಕೆ ಜನರು ಅಲ್ಲಿ ಜನಾಭಿಪ್ರಾಯ ಸಂಗ್ರಹಿಸಲು ಬಯಸುತ್ತಾರೆ. ದೇವರ ಇಚ್ಛೆಯಿದ್ದರೆ, ಅವರ 'ಘರ್ ವಾಪಸಿ' ಶೀಘ್ರ ನಡೆಯಲಿದೆ. ಅದನ್ನು ಬಯಸುವುದು ಅಲ್ಲಿನ ಜನರೇ. ಇಂದು ಕಾಶ್ಮೀರ ಹೇಗೆ ಪ್ರಗತಿ ಹೊಂದುತ್ತಿದೆ ಎಂಬುದನ್ನು ನೋಡಿದರೆ, ಇಂತಹ ಅಭಿವೃದ್ಧಿಯನ್ನು ಕಂಡು ಸಂತಸಗೊಂಡು ಪಿಒಕೆ ಶೀಘ್ರದಲ್ಲೇ ಭಾರತದೊಂದಿಗೆ ಮತ್ತೆ ಸೇರಿಕೊಳ್ಳಲಿದೆ ಎಂದರು. ಕಳೆದ ವರ್ಷ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಪ್ರವಾಸಿಗರು ಸೇರಿ 25 ಮಂದಿ ಸಾವಿಗೀಡಾದ ಘಟನೆಯನ್ನು ಉಲ್ಲೇಖಿಸಿದ ಇಲ್ಯಾಸಿ, ಈ ಘಟನೆ ನಂತರ ಸ್ವಲ್ಪ ಸಮಯದವರೆಗೆ ಪ್ರವಾಸೋದ್ಯಮ ಕುಸಿದಿದೆ. ➡ಪುಟ ೪





ಇಂದಿನ ಕಾಶ್ಮೀರ ಅತ್ಯುತ್ತಮ

370ನೇ ವಿಧಿಯನ್ನು ರದ್ದುಗೊಳಿಸಿದ ಬಳಿಕ ಕಾಶ್ಮೀರ ಸಂಪೂರ್ಣ ರೂಪಾಂತರಗೊಂಡಿದೆ.ಇಂತಹ ಬದಲಾದ ಕಾಶ್ಮೀರವನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಇದು ಹೊಸ ಕಾಶ್ಮೀರ. ಇಂದಿನ ಕಾಶ್ಮೀರ ಅತ್ಯುತ್ತಮವಾಗಿದೆ; ಎಲ್ಲೆಡೆ ಸಮೃದ್ಧಿ ಇದೆ ಮತ್ತು ಪ್ರವಾಸೋದ್ಯಮ ಹೆಚ್ಚಾಗಿದೆ. ಇಲ್ಲಿನ ಜನರು ಸಂಪನ್ನರಾಗಿದ್ದಾರೆ. ➡ಪುಟ ೪

ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯಕ್ಕೆ ಬಲ



ನೌಕಾಪಡೆಗೆ ಐಎನ್‌ಎಸ್ ಅರಿದಮನ್ ಜಲಾಂತರ್ಗಾಮಿ ನೌಕೆ ಸೇರ್ಪಡೆ

• **ಹೊಸದಿಲ್ಲಿ:** ಭಾರತದ ರಕ್ಷಣಾ ಸಾಮರ್ಥ್ಯದಲ್ಲಿ ಮಹತ್ವದ ಬೆಳವಣಿಗೆಯಾಗಿ, ದೇಶದ ಮೂರನೇ ಸ್ವದೇಶಿ ಅಣುಶಕ್ತಿ ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಅರಿದಮನ್ ಅನ್ನು ಭಾರತೀಯ ನೌಕಾಪಡೆಗೆ ಶುಕ್ರವಾರ ಸೇರ್ಪಡೆ ಮಾಡಲಾಗಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,38,500(2,36,500) ಅಪರಂಜಿ ಚಿನ್ನ 14,950(15,010) ಆಭರಣ ಚಿನ್ನ: 13,835(13,880) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) $1=₹94.84

ಕಿರುಸುದ್ದಿ

ಏ.6ರಂದು ಪಿಲಿಕುಳ ಹೆರಿಟೇಜ್ ಹೌಸ್‌ನಲ್ಲಿ ಫನ್ ಸೈಕಲ್ ರೈಡ್

ಮಂಗಳೂರು: ಈರೋಕಿಡ್ಸ್ ಕೊಡಿಯಾಲ್‌ಬೈಲ್ ಮಂಗಳೂರು ವತಿಯಿಂದ ಮಂಗಳೂರು ಸೈಕಲ್ ಕಂಪೆನಿ ಹಾಗೂ ಸ್ಕೆಕ್ಲಿಂಗ್ ಭಟ್ರು ಸಹಯೋಗದಲ್ಲಿ ಏ.6ರಂದು ಬೆಳಗ್ಗೆ 9ರಿಂದ 11ರವರೆಗೆ ಪಿಲಿಕುಳ ಹೆರಿಟೇಜ್ ಹೌಸ್‌ನಲ್ಲಿ ಫನ್ ಸೈಕಲ್ ರೈಡ್ ಆಯೋಜಿಸಲಾಗಿದೆ. ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಫನ್ ಸೈಕಲ್ ರೈಡ್ ಉದ್ಘಾಟಿಸುವರು. ಎರಡು ವರ್ಷ ಮೇಲ್ಪಟ್ಟ ಮಕ್ಕಳು ಹೆತ್ತವರೊಂದಿಗೆ ಭಾಗವಹಿಸುವರು. ಪಿಲಿಕುಳ ಹೆರಿಟೇಜ್ ಹೌಸ್ ಸುತ್ತಲಿನ 2 ಕಿ.ಮೀ. ವ್ಯಾಪ್ತಿಯಲ್ಲಿ ಸೈಕಲ್ ರೈಡ್ ಇರಲಿದೆ. ವಯಸ್ಕರೂ ರೈಡ್‌ನಲ್ಲಿ ಭಾಗವಹಿಸಬಹುದು. ಪಾಲ್ಗೊಳ್ಳಲು 200 ರೂ. ನೋಂದಣಿ ಶುಲ್ಕ ಇರಲಿದ್ದು, ಭಾಗವಹಿಸುವವರಿಗೆ ಟೀ ಶರ್ಟ್, ಪ್ರಮಾಣಪತ್ರ ನೀಡಲಾಗುವುದು ಎಂದು ಈರೋಕಿಡ್ಸ್ ಕೊಡಿಯಾಲ್‌ಬೈಲ್ ಮ್ಯಾನೇಜಿಂಗ್ ಪಾಲುದಾರರಾದ ಆರತಿ ಶೆಟ್ಟಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಂಗಳೂರು ಸೈಕಲ್ ಕಂಪೆನಿಯ ಶ್ರೇಯಸ್ ನಾಯಕ್ ಉಪಸ್ಥಿತರಿದ್ದರು.

ತೆಲಿಕೆ – ನಲಿಕೆ: ತುಳುಭವನದಲ್ಲಿ ಏ.13ರಿಂದ ಮಕ್ಕಳ ಬೇಸಿಗೆ ಶಿಬಿರ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಏ. 13 ರಿಂದ 18 ರವರೆಗೆ 'ತೆಲಿಕೆ–ನಲಿಕೆ' ಮಕ್ಕಳ ಬೇಸಿಗೆ ಶಿಬಿರವನ್ನು ಮಂಗಳೂರಿನ ಉರ್ವಸ್ಟೋರ್‌ನಲ್ಲಿರುವ ತುಳುಭವನದಲ್ಲಿ ಆಯೋಜಿಸಿದೆ. 4ನೇ ತರಗತಿಯಿಂದ 8ನೇ ತರಗತಿ (9ರಿಂದ 13 ವರ್ಷದ) ವಿದ್ಯಾರ್ಥಿಗಳಿಗೆ ಶಿಬಿರದಲ್ಲಿ ಪಾಲ್ಗೊಳ್ಳಲು ಅವಕಾಶ ಇರುತ್ತದೆ. ಶಿಬಿರದಲ್ಲಿ ವಿದ್ಯಾರ್ಥಿಗಳಿಗಾಗಿ ತುಳುನಾಡಿನ ಜಾನಪದ ಕಥೆ, ತುಳು ಹಾಡು, ಕುಣಿತ, ಚಿತ್ರಕಲೆ, ನಾಟಕದ ಬಗ್ಗೆ ತರಬೇತಿ ನೀಡಲಾಗುವುದು. ಶಿಬಿರವು ಪೂರ್ಣ ಉಚಿತವಾಗಿದ್ದು, ಆಸಕ್ತರು ರೂ.100 ನೋಂದಾವಣಿ ಶುಲ್ಕ ಪಾವತಿಸಿ, ಏ. 10 ರೊಳಗೆ ತುಳು ಭವನದಲ್ಲಿ ಹೆಸರು ನೋಂದಾಯಿಸುವಂತೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಕಾಪಿಕಾಡ್ ತಿಳಿಸಿದ್ದಾರೆ. ಶಿಬಿರದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಮೊಬೈಲ್ ಸಂಖ್ಯೆ 7411572115 ಸಂಪರ್ಕಿಸುವಂತೆ ಅಕಾಡೆಮಿ ಪ್ರಕಟಣೆ ತಿಳಿಸಿದೆ.

ಏ.5-11: ಇರ್ದೆ-ಪಳ್ಳತ್ತಡ್ಕ ದರ್ಗಾ ಶರೀಫ್‌ನಲ್ಲಿ 50ನೇ ವರ್ಷದ ಉರೂಸ್

ಪುತ್ತೂರು: ಇರ್ದೆ ಸೀರೆ ಹೊಳೆಯ ಬಳಿ ಭಾವೈಕ್ಯ ಕೇಂದ್ರವಾಗಿರುವ ಇರ್ದೆ–ಪಳ್ಳತ್ತಡ್ಕ ದರ್ಗಾ ಶರೀಫ್‌ನಲ್ಲಿ 50ನೇ ವರ್ಷದ ಉರೂಸ್ ಮುಬಾರಕ್ ಹಾಗೂ 7 ದಿನಗಳ ಧಾರ್ಮಿಕ ಮತ ಪ್ರಭಾಷಣವು ಏ.5 ರಿಂದ ಪ್ರಾರಂಭಗೊಂಡು ಏ.11ರ ತನಕ ನಡೆಯಲಿದೆ ಎಂದು ಕೊರಿಂಗಿಲ ಜುಮಾ ಮಸೀದಿ ಉಪಾಧ್ಯಕ್ಷ ಆಲಿಕುಂಞ ಹಾಜಿ ಕೊರಿಂಗಿಲ ತಿಳಿಸಿದ್ದಾರೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.5ರಂದು ಅಲ್‌ಹಾಜ್ ಅಸ್ಸಯ್ಯದ್ ಕೆ.ಎಸ್. ಆಲಿ ತಂಙಳ್ ಕೊಂಬೋಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೊರಿಂಗಿಲ ಜುಮಾ ಮಸೀದಿ ಅಧ್ಯಕ್ಷ ಮಹಮ್ಮದ್ ಕುಂಞ ಹಾಜಿ ಕೊರಿಂಗಿಲ ಅಧ್ಯಕ್ಷತೆ ವಹಿಸಲಿದ್ದಾರೆ. ಅಲ್‌ಹಾಜ್ ಸಯ್ಯಿಯ್ಯದ್ ಹಾಶಿಂ ಬಾಕವಿ ತಂಙಳ್ ಕೊರಿಂಗಿಲ ದುವಾ ನೆರವೇರಿಸಲಿದ್ದಾರೆ. ಲುಕ್ಮಾನುಲ್ ಹಕೀಂ ಸಖಾಫಿ ಪುಲ್ಲಾರ ಮುಖ್ಯ ಪ್ರಭಾಷಣ ಮಾಡಲಿದ್ದಾರೆ. ಏ.6ರಂದು ರಾತ್ರಿ ಎ.ಎಂ. ನೌಶಾದ್ ಬಾಖವಿ ತಿರುವನಂತಪುರಂ ಮುಖ್ಯ ಪ್ರಭಾಷಣ ಮಾಡಲಿದ್ದಾರೆ. ಏ.7ರಂದು ರಾತ್ರಿ ಕೇರಳದ ಪತ್ತನಾಪುರದ ಇ.ಪಿ. ಅಬೂಬಕ್ಕರ್ ಅಲ್ ಖಾಸಿಮಿ ಪ್ರಭಾಷಣ ಮಾಡಲಿದ್ದಾರೆ. ಏ.8ರಂದು ಡಾ. ಹಾಫಿಳ್ ಜುನೈದ್ ಜೌಹರಿ ಕೊಲ್ಲಂ ಕೇರಳ ಪ್ರಭಾಷಣ ಮಾಡಲಿದ್ದಾರೆ. ಏ.9ರಂದು ರಾತ್ರಿ ಪೇರೋಡ್ ಮುಹಮ್ಮದ್ ಅಝ್ಹರಿ ಕೇರಳ ಅವರು ಪ್ರಭಾಷಣ ಮಾಡಲಿದ್ದಾರೆ. ಏ.10ರಂದು ರಾತ್ರಿ ಪುತ್ತೂರು ಕೇಂದ್ರ ಜುಮಾ ಮಸ್ಜಿದ್‌ನ ಮುದರ್ರಿಸ್ ಅಲ್ ಹಾಜ್ ಅಸ್ಸಯ್ಯದ್ ಅಹ್ಮದ್ ಪೂಕೋಯ ತಂಙಳ್ ಅವರು ದುವಾ ಆಶೀರ್ವಚನ ನೀಡಲಿದ್ದಾರೆ. ಕಾಸರಗೋಡು ಮೆಲ್ಪರಂಬ್ ಅಶ್ರಫ್ ರಹ್ಮಾನಿ ಚೌಕಿ ಪ್ರಭಾಷಣ ಮಾಡಲಿದ್ದಾರೆ. ಏ.11ರಂದು ಸಂಜೆ ಕೊರಿಂಗಿಲ ಜುಮಾ ಮಸೀದಿಯ ಖತೀಬ ಅಲ್‌ಹಾಜ್ ಜಿ.ಎಚ್. ಅಯ್ಯೂಬ್ ವಹಬಿ ನೇತೃತ್ವದಲ್ಲಿ ಉರೂಸ್ ಸಮಾರೋಪ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಕೊರಿಂಗಿಲ ಮಸೀದಿ ಅಧ್ಯಕ್ಷ ಮಹಮ್ಮದ್ ಕುಂಞ, ಉರೂಸ್ ಕಮಿಟಿ ಅಧ್ಯಕ್ಷ ಶಾಹುಲ್ ಹಮೀದ್ ಕೊರಿಂಗಿಲ, ಪ್ರಧಾನ ಕಾರ್ಯದರ್ಶಿ ಮೂಸಕುಂಞ ಬೆಟ್ಟಂಪಾಡಿ, ಸಲಹಾ ಸಮಿತಿ ಸದಸ್ಯ ಮಹಮ್ಮದ್ ಕುಕ್ಕುವಳ್ಳಿ ಉಪಸ್ಥಿತರಿದ್ದರು.

ಕಾನೂನು ಸಮಾಲೋಚಕರ ಹುದ್ದೆಗೆಅರ್ಜಿಆಹ್ವಾನ

ಮಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಿಷನ್ ಶಕ್ತಿ ಯೋಜನೆಯಡಿ ಸಖಿ ಒನ್ ಸ್ಟಾಪ್ ಸೆಂಟರ್ ಲೇಡಿಗೋಶನ್‌ಆಸ್ಪತ್ರೆ ಮಂಗಳೂರು ಇಲ್ಲಿ ಗುತ್ತಿಗೆಆಧಾರದ ಮೇಲೆ ಕಾನೂನು ಸಮಾಲೋಚಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಸಿಕ 25 ಸಾವಿರ ರೂ. ಗೌರವಧನ ಆಧಾರದಲ್ಲಿ ಕಾನೂನು ವಿಷಯದಲ್ಲಿ ಪದವಿ ಹಾಗೂ ಸರಕಾರಿ/ ಸ್ವಯಂಸೇವಾ ಸಂಸ್ಥೆಯಲ್ಲಿ ಮಹಿಳಾ ಸಬಲೀಕರಣ ಕ್ಷೇತ್ರಗಳಲ್ಲಿ ಕನಿಷ್ಠ 3 ವರ್ಷಗಳ ಅನುಭವ ಅಥವಾ ಯಾವುದೇ ನ್ಯಾಯಾಲಯದಲ್ಲಿ ಕನಿಷ್ಠ 2 ವರ್ಷಗಳ ದಾವೆ ಅನುಭವ ಹೊಂದಿರುವ 35 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹ ಅಭ್ಯರ್ಥಿಗಳು ಏಪ್ರಿಲ್ 10ರೊಳಗೆ ಸೂಕ್ತ ದಾಖಲೆಗಳೊಂದಿಗೆ ನಗರದ ಬಿಜೈಮೆಸ್ಕಾಂ ಬಳಿ ಇರುವ ಸ್ತ್ರೀಶಕ್ತಿಭವನದ 2 ನೇ ಮಹಡಿಯಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಬದಿ ನಿಂತಿದ್ದಾಗ ಗೂಡ್ಸ್ ಟೆಂಪೋ ಡಿಕ್ಕಿ

ಕುಂದಾಪುರ: ಕೆರ್ಕುಂಜೆ ಗ್ರಾಮದ ಕುಂಟನೇರಳಿನಲ್ಲಿರುವ ಅಂಬಾ ದೇವಿ ದೇವಸ್ಥಾನದ ಹತ್ತಿರ ರಸ್ತೆ ಬದಿ ನಿಂತಿದ್ದ ಸುಧೀಕ್ಷ (15) ಎಂಬವರಿಗೆ ಹೆಮ್ಮಾಡಿ–ಕೊಲ್ಲೂರು ರಸ್ತೆಯಲ್ಲಿ ವಂಡ್ಸೆ ಕಡೆಯಿಂದ ಹೆಮ್ಮಾಡಿ ಕಡೆಗೆ ಹೋಗುತ್ತಿದ್ದ ಗೂಡ್ಸ್ ಟೆಂಪೋ ಡಿಕ್ಕಿ ಹೊಡೆದ ಪರಿಣಾಮ ಗಾಯಗೊಂಡಿದ್ದ ಸುಧೀಕ್ಷ ಅವರನ್ನು ಗೂಡ್ಸ್ ಟೆಂಪೋ ಚಾಲಕ ಗಣೇಶ ಅವರು ಕುಂದಾಪುರ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಉಡುಪಿಯ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನಲ್ಲಿ ನಡೆದ ಅಂತರ್ ಕಾಲೇಜು ಸಾಂಸ್ಕೃತಿಕ ಮತ್ತು ವ್ಯವಹಾರ ನಿರ್ವಹಣೆ ಸ್ಪರ್ಧೆಯಾದ 'ಪೂರ್ಣಂ- 2026'ರಲ್ಲಿ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ತಂಡ ಜಾನಪದ ಸಮೂಹ ಗಾಯನದಲ್ಲಿ ಪ್ರಥಮ, ಗುಂಪು ನೃತ್ಯದಲ್ಲಿ ಪ್ರಥಮ, ಫ್ಯಾಶನ್ ಶೋನಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಸತತ ಮೂರನೇ ಬಾರಿ ಸಮಗ್ರ ಪುರಸ್ಕಾರವನ್ನು ಪಡೆದಿದೆ.

ಉಡುಪಿ ಜಿಲ್ಲೆಯಲ್ಲಿ ಇಬ್ಬರು ರೌಡಿಶೀಟರ್‌ಗಳ ಗಡಿಪಾರು

ಉಡುಪಿ: ಜಿಲ್ಲೆಯಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿದ್ದ ಇಬ್ಬರು ಕುಖ್ಯಾತ ವ್ಯಕ್ತಿಗಳನ್ನು ಉಡುಪಿ ಜಿಲ್ಲೆಯಿಂದ ಗಡಿಪಾರು ಮಾಡಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ವಿಶೇಷಕಾರ್ಯನಿರ್ವಾಹಕದಂಡಾಧಿಕಾರಿಯವರು ಏಪ್ರಿಲ್ 2ರಂದು ಆದೇಶ ಹೊರಡಿಸಿದ್ದಾರೆ.

ಕಾಪು ಪೊಲೀಸ್ ಠಾಣಾ ವ್ಯಾಪ್ತಿಯ ವಿಜೇತ ಮತ್ತು ಪಡುಬಿದ್ರಿ ವ್ಯಾಪ್ತಿಯ ಆರೀಫ್ ಸಾಹೇಬ್ ಗಡಿಪಾರು ಶಿಕ್ಷೆಗೆ ಒಳಗಾದವರು.





ಗಡಿಪಾರು ಮಾಡಿದ ಸ್ಥಳ

ಜಿಲ್ಲಾ ಪೊಲೀಸ್ ಇಲಾಖೆಯ ಶಿಫಾರಸಿನ ಮೇರೆಗೆ ವಿಜೇತನನ್ನು ಉತ್ತರ ಕನ್ನಡ ಜಿಲ್ಲೆಯ ಕಾರವಾರ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಹಾಗೂ ಆರೀಫ್ ಸಾಹೇಬ್‌ನನ್ನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ಆರೋಪಿಗಳ ಹಿನ್ನೆಲೆ

ಗಡಿಪಾರುಗೊಂಡವರ ಪೈಕಿ ಉದ್ಯಾವರ ಗ್ರಾಮದ ಪಿತ್ರೋಡಿಯ ವಿಜೇತ ಎಂಬಾತನ ವಿರುದ್ಧ ಕಾಪು ಪೊಲೀಸ್ ಠಾಣೆಯಲ್ಲಿ 4 ಕೊಲೆ ಯತ್ನ ಹಾಗೂ ಹಲ್ಲೆ ಪ್ರಕರಣಗಳು ದಾಖಲಾಗಿವೆ. ಮತ್ತೋರ್ವ ಆರೋಪಿ ಎಲ್ಲೂರು ಗ್ರಾಮದ ಮುದರಂಗಡಿ ನಿವಾಸಿ ಆರೀಫ್ ಸಾಹೇಬ್ ವಿರುದ್ಧ 5 ಕೊಲೆ ಯತ್ನ, ಹಲ್ಲೆ ಹಾಗೂ ಮಾದಕ ದ್ರವ್ಯ ಸೇವನೆ ಪ್ರಕರಣಗಳು ದಾಖಲಾಗಿದ್ದು, ಈತನ ವಿರುದ್ಧ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿತ್ತು.

ಲಾಯಿಲ ಗ್ರಾಮದ ದಲಿತ ಕುಟುಂಬಗಳ ಕರುಣಾಜನಕ ಕತೆ

ಇಲ್ಲಿ ರಸ್ತೆಗಳಿಗೆ ಡಾಮರೇ ಇಲ್ಲ!

ಬೆಳ್ತಂಗಡಿ: ಇದು ತಾಲೂಕು ಕೇಂದ್ರದಿಂದ ಕೂಗಳತೆಯ ದೂರದಲ್ಲಿರುವ ಲಾಯಿಲ ಗ್ರಾಮದ ಅತ್ಯಂತ ಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆಯನ್ನು ಹೊಂದಿರುವ ರಸ್ತೆಯ ಕರುಣಾಮಯ ಕಥೆ. ಇಲ್ಲಿ 80 ಕ್ಕೂ ಹೆಚ್ಚು ಕೇವಲ ದಲಿತ ಕುಟುಂಬಗಳೇ ಇವೆ. ಆದರೆ ಇಲ್ಲಿನ ರಸ್ತೆ ಮಾತ್ರ ಇಂದಿಗೂ ಡಾಮರೀಕರಣವನ್ನೇ ಕಂಡಿಲ್ಲ. ಒಂದು ಕಿ.ಮೀ. ಡಾಮರೀಕರಣಗೊಂಡ ರಸ್ತೆಯಲ್ಲಿ ಡಾಮರೀಕರಣದ ಅಸ್ಥಿಪಂಜರಗಳು ಕಾಣುತ್ತಿವೆ.

ಲಾಯಿಲ ಗ್ರಾಮದ ಲಾಯಿಲ ಸ್ಮಶಾನದಿಂದ ಹೊಳೆಬದಿ– ಕಾವಟೆ– ಬೆರ್ಕೆ– ಲಾಯಿಲಬೈಲು– ಗಾಣದಕೊಟ್ಯ– ಚಂದ್ಕೂರು ದೇವಸ್ಥಾನದ ತನಕದ ಈ ರಸ್ತೆಯ ಇಕ್ಕೆಲಗಳಲ್ಲಿ ಸುಮಾರು 80 ಹೆಚ್ಚು ದಲಿತ ಕುಟುಂಬಗಳು ವಾಸಿಸುತ್ತದೆ. ಇನ್ನೂ 70 ಕ್ಕೂ ಹೆಚ್ಚು ಇತರ ಕುಟುಂಬಗಳು ವಾಸಿಸುತ್ತವೆ. ದಿನನಿತ್ಯ ಈ ರಸ್ತೆಯನ್ನು ನೂರಾರು ಜನರು ವಿದ್ಯಾಭ್ಯಾಸ, ಕೆಲಸ ಕಾರ್ಯಗಳಿಗಾಗಿ ಉಪಯೋಗಿಸುತ್ತಾರೆ. ಆದರೂ ರಸ್ತೆ ಮಾತ್ರ ಪಕ್ಕಾ ಮಣ್ಣಿನದು. ಮಳೆಗಾಲದಲ್ಲಂತೂ ಈ ರಸ್ತೆಯಲ್ಲಿ ಸಂಚರಿಸುವುದು ಸಾಹಸಮಯವಾಗುತ್ತದೆ. ವಾಹನಗಳು ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಆದರಷ್ಟಕ್ಕೆ ಸಾಗುತ್ತದೆ. ಇನ್ನೂ ಈ ರಸ್ತೆಯಲ್ಲಿ ನಡೆದುಕೊಂಡು ಹೋಗುವವರಿಗೆ ಕೆಸರು ನೀರಿನ ಅಭಿಷೇಕ ಗ್ಯಾರಂಟಿ.



ಒಂದು ಕಿಮೀ ರಸ್ತೆಯ ಅಸ್ತಿಪಂಜರದಲ್ಲಿ ಅರ್ಧ ಕಿಮೀ ಕಾಂಕ್ರೀಟಿಕರಣ

ಲಾಯಿಲ ಸ್ಮಶಾನದಿಂದ ಚಂದ್ಕೂರು ತನಕದ ಈ ರಸ್ತೆ ಸುಮಾರು ಮೂರುವರೆ ಕಿಮೀ ಉದ್ದವಿದೆ. ಇದರಲ್ಲಿ ಒಂದು ಕಿಮೀ ರಸ್ತೆ 40 ವರ್ಷದ ಮೊದಲು ಡಾಮರೀಕರಣವಾಗಿತ್ತು. ಆದೀಗ ಡಾಮರು ಎದ್ದು ಹೋಗಿ ಕೇವಲ ಅಸ್ತಿಪಂಜರ ಮಾತ್ರ ಕಾಣುತ್ತಿದೆ. ಇದು ರಸ್ತೆ ಡಾಮರೀಕರಣವಾಗಿತ್ತು ಎಂಬುದಕ್ಕೆ ಸಾಕ್ಷಿ ನುಡಿಯುತ್ತಿದೆ. ಹಲವಾರು ವರ್ಷಗಳ ಬೇಡಿಕೆ ನಂತರ ಇತ್ತೀಚೆಗೆ ಅರ್ಧ ಕಿಮೀ ರಸ್ತೆ ಕಾಂಕ್ರೀಟಿಕರಣ ಮಾಡಲಾಗಿದೆ.

ನಿಜವಾದ ಅಭಿವೃದ್ಧಿ ಬೇಕು

ಸರ್ಕಾರಗಳು ದಲಿತರ ಅಭಿವೃದ್ಧಿ ಬಗ್ಗೆ ಕೇವಲ ಬೊಗಳೆ ಮಾತ್ರ ಬಿಡುತ್ತಿದ್ದು , ವಾಸ್ತವವಾಗಿ ದಲಿತ ಕಾಲನಿಗಳು ಸೇರಿದಂತೆ ದಲಿತ ಸಮುದಾಯ ಹೆಚ್ಚಾಗಿ ವಾಸಿಸುವ ಪ್ರದೇಶಗಳು ಇಂದಿಗೂ ಅಭಿವೃದ್ಧಿ ವಂಚಿತಗೊಂಡಿದೆ. ಬಜೆಟ್‌ನಲ್ಲಿ ಮೀಸಲಿಡುವ ಅನುದಾನಗಳು ದಲಿತರ ಹೆಸರಿನಲ್ಲಿ ದುರುಪಯೋಗವಾಗುತ್ತಿದೆ. ಇದು ವಾಸ್ತವ ಸತ್ಯ. ಇದು ಬದಲಾಗಿ ದಲಿತ ಸಮುದಾಯಗಳ ನಿಜವಾದ ಅಭಿವೃದ್ಧಿಯಾಗಬೇಕು. ತಾಲೂಕು ಕೇಂದ್ರದಿಂದ ಒಂದು ಕಿಮೀ ದೂರದಲ್ಲಿರುವ ಈ ರಸ್ತೆಯ ಪರಿಸ್ಥಿತಿ ಈ ರೀತಿಯಾದರೆ ಇನ್ನುಳಿದ ರಸ್ತೆಗಳ ಪರಿಸ್ಥಿತಿ ಯಾವ ರೀತಿ ಇರಬಹುದು ಎಂದು ಯೋಚಿಸುವಂತಾಗಿದೆ.

■ ಎಲ್. ಹರೀಶ್ ಕುಮಾರ್ , ಲಾಯಿಲಬೈಲು

ಚಂದ್ಕೂರು ದೇವಸ್ಥಾನಕ್ಕೆ ಹತ್ತಿರದ ರಸ್ತೆ

ಕನ್ನಡಿಗ ಪ್ರಧಾನಿ ಹೆಚ್.ಡಿ ದೇವೇಗೌಡರು ಲೋಕಾಕಲ್ಯಾಣಾರ್ಥಕ್ಕಾಗಿ 1996 ರಲ್ಲಿ ಯಾಗ ನಡೆಸಿದ ಇತಿಹಾಸದ ಪ್ರಸಿದ್ಧ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಚಂದ್ಕೂರು ಇಲ್ಲಿಗೆ ಬೆಳ್ತಂಗಡಿಯಿಂದ ಅತಿ ಹತ್ತಿರದ ರಸ್ತೆ ಇದಾಗಿದೆ. ಆದರೂ ಈ ರಸ್ತೆ ಇನ್ನೂ ದುರಸ್ತಿಗೊಳ್ಳದಿರುವುದು ದುರಂತವೇ ಸರಿ. ಸರ್ಕಾರಗಳು ಬಜೆಟ್‌ನಲ್ಲಿ ದಲಿತರ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂಪಾಯಿ ಮೀಸಲಿಟ್ಟರೂ ಅದು ಅಭಿವೃದ್ಧಿಗಾಗಿ ಬಳಕೆಯಾಗುವುದಿಲ್ಲ. ಪ್ರತಿ ವರ್ಷವೂ ಬಜೆಟ್ ನಲ್ಲಿಟ್ಟ ಅನುದಾನದಲ್ಲಿ 65% ರಿಂದ 70% ಮಾತ್ರ ಖರ್ಚು ಆಗುತ್ತಿದ್ದರೂ ಇನ್ನುಳಿದ ಅನುದಾನವನ್ನು ಇಂತಹ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗ ಮಾಡಬೇಕು ಎಂಬುದು ಜನರ ಆಗ್ರಹವಾಗಿದೆ.

ಕರೋಪಾಡಿ ಪದ್ಯಾಣ ಬ್ರಹ್ಮಕಲಶೋತ್ಸವ

ಅಷ್ಟಬಂಧ ಪ್ರತಿಷ್ಠೆ

ವಿಟ್ಲ: ದಕ್ಷಿಣ ಕನ್ನಡ ಜಿಲ್ಲೆಯ ಕರೋಪಾಡಿಯ ಪದ್ಯಾಣ ಶ್ರೀ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಮಾ.30ರಿಂದ ಏ.6ರವರೆಗೆ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಶುಕ್ರವಾರ ಅಷ್ಟಬಂಧ ಪ್ರತಿಷ್ಠಾ ಕಾರ್ಯಕ್ರಮಗಳು ನಡೆದವು.

ಏ.3ರಂದು ಬೆಳಗ್ಗೆ 7ರಿಂದ ಸ್ವಸ್ತಿ ಪುಣ್ಯಾಹ ವಾಚನ, ಮಹಾಗಣಪತಿ ಹೋಮ, ಅಂಕುರ ಪೂಜೆ, ಶಯ್ಯಾಪೂಜೆ, 10.56ರಿಂದ ಒದಗುವ ಮಿಥುನ ಲಗ್ನ ಸುಮುಹೂರ್ತದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರು, ಶ್ರೀ ಮಹಾಗಣಪತಿ, ಶ್ರೀ ಶಾಸ್ತಾರ ದೇವರ ಪುನರ್ ಪ್ರತಿಷ್ಠೆ, ಅಷ್ಟಬಂಧ ಪ್ರತಿಷ್ಠೆ, ಜೀವಕಲಶಾಭಿಷೇಕ, ಅಷ್ಟಬಂಗಲ ದರ್ಶನ, ಗೋದರ್ಶನ, ನಿದ್ರಾಕಲಶಾಭಿಷೇಕ, ಕುಂಭೇಶ ಕಲಶಾಭಿಷೇಕ, ಆವಾಹನಾದಿಗಳು, ನ್ಯಾಸಾದಿಗಳು, ಶಿಖರ ಪ್ರತಿಷ್ಠೆ, ಪ್ರತಿಷ್ಠಾ ಬಲಿ, ಪ್ರಸನ್ನ ಪೂಜೆ, ರುದ್ರ ಹೋಮ, ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಮಹಾಮಂಗಳಾರತಿ, ಸಂತರ್ಪಣೆ ನಡೆಯಿತು. ಸಂಜೆ ಕ್ಷೇತ್ರಾನುಷ್ಠಾನ ಪದ್ಧತಿ ನಿರ್ಣಯ, ಭದ್ರದೀಪ ಪ್ರತಿಷ್ಠೆ, ಪ್ರಾರ್ಥನೆ, ಕವಾಟ ಬಂಧನ, ಸೋಪಾನಪೂಜೆ, ಅಂಕುರಪೂಜೆ, ಶ್ರೀದುರ್ಗಾ ಪೂಜೆ ನಡೆದವು.



ಏ.6ರ ಧಾರ್ಮಿಕ ಕಾರ್ಯಕ್ರಮಗಳು

ಬೆಳಗ್ಗೆ 7ರಿಂದ ಗಣಪತಿ ಹೋಮ ಪಂಚಾಮೃತಾಭಿಷೇಕ, ಶಾಂತಿಹೋಮಾದಿಗಳ ಕಲಶಾಭಿಷೇಕ, ತತ್ವಕಲಶಾಭಿಷೇಕ, ಕುಂಭೇಶ ಕಲಶಾಭಿಷೇಕ, ಪರಿಕಲಶ ಸಹಿತ ದ್ರವ್ಯ ಕಲಶಾಭಿಷೇಕ, ಶತರುದ್ರ ಸಹಿತ ಬ್ರಹ್ಮಕುಂಭಾಭಿಷೇಕ, ಮಂತ್ರನ್ಯಾಸಾದಿಗಳು, ಮಹಾಬಲಿ ಪೀಠ ಪ್ರತಿಷ್ಠೆ, ಮಹಾಮಂಗಳಾರತಿ, ವೈದಿಕ ಮಂತ್ರಾಕ್ಷತೆ, ಸಂತರ್ಪಣೆ ನಡೆಯಲಿದೆ, ಅಂದು ಬೆಳಗ್ಗೆ 11ರಿಂದ ಧಾರ್ಮಿಕ ಸಭೆ ನಡೆಯಲಿದ್ದು, ಶ್ರೀರಾಮಚಂದ್ರಾಪುರ ಮಠಾಧೀಶ ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ ಮತ್ತು ಗೌರಿಗದ್ದೆ ಅವಧೂತ ವಿನಯ ಗುರೂಜಿ ಆಶೀರ್ವಚನ ನೀಡುವರು. ಸಂಜೆ 4.30ರಿಂದ ಸುಧರ್ಮ ಸಭೆ ನಡೆಯಲಿದ್ದು, ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ, ಕೊಂಡೆವೂರು ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡುವರು. ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಧಾರ್ಮಿಕ ಉಪನ್ಯಾಸ ನೀಡುವರು.

ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ವತಿಯಿಂದ ಹಣ್ಣು, ಪುಸ್ತಕ ವಿತರಣೆ

ಅಶಕ್ತ ಮಕ್ಕಳಿಗೆ ನೆರವು ಪುಣ್ಯದ ಕಾರ್ಯ

ಮಂಗಳೂರು: ಅಶಕ್ತ ಹಾಗೂ ಬಡ ಮಕ್ಕಳಿಗೆ ನೆರವಾಗುವುದು ಅತ್ಯಂತ ಪುಣ್ಯದ ಕಾರ್ಯವಾಗಿದೆ ಎಂದು ಶಾಸಕ ಡಿ.ವೇದವ್ಯಾಸ ಕಾಮತ್ ಹೇಳಿದರು.

ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆಯ ವತಿಯಿಂದ ಕೊರ್ಡೆಲ್ ಕ್ರಿಕೆಟರ್ಸ್ ಕುಲಶೇಖರ ಸಹಯೋಗದಲ್ಲಿ ಗುಡ್ ಫ್ರೈಡೇಯ ಸಾಮಾಜಿಕ ಸೇವಾ ಚಟುವಟಿಕೆಯ ಅಂಗವಾಗಿ ಶುಕ್ರವಾರ ವೆನ್ಲಾಕ್ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗೆ ಹಣ್ಣು ಹಂಪಲು, ಪುಸ್ತಕ ಹಾಗೂ ಇತರ ಅವಶ್ಯ ಪರಿಕರಗಳ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಬೆಥನಿ ಕನ್ಯಾ ಮಠದ ಭಗಿನಿ ಶುಭಾ ಪ್ರಾರ್ಥನಾ ವಿಧಿ ನೆರವೇರಿಸಿ ಆಶೀರ್ವಚನ ನೀಡಿದರು. ವೆನ್ಲಾಕ್ ಆಸ್ಪತ್ರೆಯ ಜಿಲ್ಲಾ ವೈದ್ಯಾಧಿಕಾರಿ ಡಾ.ಶಿವಪ್ರಕಾಶ್, ಸೈಂಟ್ ತೆರೆಸಾ ಶಾಲೆಯ ಉಪ ಪ್ರಾಂಶುಪಾಲೆ ಸಿ.ವಿದ್ಯಾ, ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಮಾಜಿ ಕಾರ್ಪೋರೇಟರ್ ಪದ್ಮನಾಭ ಅಮೀನ್, ಉದ್ಯಮಿ ಸಿಂಥಿಯಾ ಮೊರಾಸ್ ಮುಖ್ಯ ಅತಿಥಿಗಳಾಗಿದ್ದರು. ಪ್ರಮುಖರಾದಅರುಣ್ ಡಿಸೋಜಉರ್ವ, ಜೂಲಿಯೆಟ್ ಡಿಕುನ್ಹಾ ಉರ್ವಸ್ಟೋರ್, ಪ್ರೇಮಾ ಫೆರ್ನಾಂಡಿಸ್ ಎಕ್ಕೂರು, ಜೂಲಿಯನಾ ಮೊರಾಸ್, ಆಗ್ನೆಸ್ ರೆಬೆಲ್ಲೊ ಮುಂಬೈ, ರಿಯೊ ಮಿನೇಜಸ್, ಓಸ್ವಾಲ್ಡ್ ಡಿಕುನ್ಹ ಬಿಜೈ, ಮಧು ಬಿಜೈ, ಕೊರ್ಡೆಲ್ ಕ್ರಿಕೆಟರ್ಸ್‌ನ ನವೀನ್ ಫೆರ್ನಾಂಡಿಸ್, ಪ್ರವೀಣ್ ಫೆರ್ನಾಂಡಿಸ್, ಜೊನ್ಸಿ ರೇಗೊ, ಫಿಲಿಪ್ ಡಿಸೋಜ, ಸಂದೀಪ್ ಡಿಸೋಜ, ರೊನಾಲ್ಡ್ ಕೊರ್ಡೆಲ್ ಮತ್ತು ರಾಬರ್ಟ್ ಕೊರ್ಡೆಲ್ ಉಪಸ್ಥಿತರಿದ್ದರು.

ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆಯ ಸ್ಥಾಪಕ ಸಂಚಾಲಕ ಫ್ರ್ಯಾಂಕ್ಲಿನ್ ಮೊಂತೆರೊ ಸ್ವಾಗತಿಸಿ, ವಂದಿಸಿದರು. ವೇದಿಕೆಯ ಮಹಿಳಾ ಪ್ರಮುಖ್ ಪ್ರೀತಿ ಮಿನೇಜಸ್ ಕಾರ್ಯಕ್ರಮ ನಿರೂಪಿಸಿದರು.

ರಾಷ್ಟ್ರ ಮಟ್ಟದ 30 ತಂಡಗಳಲ್ಲಿ ಸ್ಥಾನ ಪಡೆದ ವಿವೇಕಾನಂದ

ಟೀಮ್ ಇಂಡಿಯಾ ಫಾರ್ 'ಎಫ್‌ಜಿಸಿ-2026'

ಪುತ್ತೂರು: ಭಾರತ ಸರಕಾರದ ನೀತಿ ಆಯೋಗದ ಅಡಿಯಲ್ಲಿ ಬರುವ ಎಐಎಂ–ಎಟಿಎಲ್ ವತಿಯಿಂದ 'ಟೀಮ್ ಇಂಡಿಯಾ ಫಾರ್ ಫಸ್ಟ್ ಗ್ಲೋಬಲ್ ಚಾಲೆಂಜಸ್ (ಎಫ್‌ಜಿಸಿ) ಗಾಗಿ ನಡೆಸಲ್ಪಟ್ಟ ಮೊದಲ ಹಂತದ ಸ್ಪರ್ಧೆಯಲ್ಲಿ ದೇಶದಾದ್ಯಂತ ನೂರಾರು ತಂಡಗಳು ಭಾಗವಹಿಸಿದ್ದು, ಅವುಗಳಲ್ಲಿ 30 ತಂಡಗಳ ಪ್ರಾಜೆಕ್ಟ್‌ಗಳು 2ನೇ ಹಂತಕ್ಕೆ ಆಯ್ಕೆಗೊಂಡಿದೆ. ಇವುಗಳಲ್ಲಿ ಪುತ್ತೂರಿನ ನೆಹರೂ ನಗರದಲ್ಲಿರುವ ವಿವೇಕಾನಂದ ಸೆಂಟ್ರಲ್ ಸ್ಕೂಲಿನ ವಿದ್ಯಾರ್ಥಿನಿಯರು ಪ್ರಸ್ತುತಪಡಿಸಿದ 'ಅನ್‌ಸ್ಪೋಕನ್ ಟ್ರೂತ್' ಎಂಬ ಮೊಬೈಲ್ ಅಪ್ಲಿಕೇಶನ್ ಸ್ಥಾನ ಪಡೆದುಕೊಂಡಿದೆ.



8ನೇ ತರಗತಿಯ ವಿದ್ಯಾರ್ಥಿನಿಯರಾದ ಮೇಧಾ ಭಟ್ (ಕೃಷ್ಣಮೂರ್ತಿ ಪಟ್ಲ ಮತ್ತು ಶ್ವೇತಾ ಸರಸ್ವತಿ ಬಂಗಾರಡ್ಕ ದಂಪತಿ ಪುತ್ರಿ), ಪ್ರಣಮ್ಯ ಜೆ. (ಜಯಪ್ರಕಾಶ್ ಬಿ.–ಮಾಧವಿ ಕೆ.ಎ. ದಂಪತಿ ಪುತ್ರಿ), ಮಾನ್ವಿ ಕಜೆ (ಡಾ. ಚರಣ್ ಕಜೆ–ರಮ್ಯಾ ಕಜೆ ದಂಪತಿ ಪುತ್ರಿ), ಆರಾಧನಾ ಬಿ.(ಡಾ. ಶ್ರೀಪ್ರಕಾಶ್ ಬಿ. ಪುತ್ರಿ) ಮತ್ತು ಸುಧೀಕ್ಷಾ ಎಸ್. ಭಟ್ (ರಾಘವೇಂದ್ರ ಪ್ರಸಾದ್ –ಶ್ರುತಿ ಎಂ.ಎಸ್ ದಂಪತಿ ಪುತ್ರಿ) ಅವರ ತಂಡ ಟಾಪ್ 30 ತಂಡಗಳಲ್ಲಿ ಆಯ್ಕೆಯಾಗಿ ಸ್ಪರ್ಧೆಯ 2ನೇ ಹಂತಕ್ಕೆ ಅರ್ಹತೆ ಪಡೆದಿದೆ. ಈ ಹಂತದಲ್ಲಿ ಆಯ್ಕೆಯಾದ ತಂಡವು, ಮುಂದಿನ 3ನೇ ಹಂತದಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಮೂಲತಃ ಪುತ್ತೂರಿನವರಾಗಿದ್ದು, ಪ್ರಸ್ತುತ ಅಮೆರಿಕದಲ್ಲಿ ನೆಲೆಸಿರುವ ಆನಂದವರ್ಧನ ಅವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ತರಬೇತಿಯನ್ನು, ಶಾಲಾ ಶಿಕ್ಷಕಿ ಹೇಮಾ ಭಟ್ ಮತ್ತು ಶಾಲಾ ಪ್ರಾಂಶುಪಾಲೆ ಸಿಂಧು ವಿ.ಜಿ. ಹಾಗೂ ಆಡಳಿತ ಮಂಡಳಿಯವರು ಮಾರ್ಗದರ್ಶನ ನೀಡಿದ್ದಾರೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ನಡೆದ ಮಂಗಳ ಸ್ವಾಸ್ಥ್ಯ ಸೇವಾ ಯಾತ್ರೆ-3.0 ಆರೋಗ್ಯ ಸೇವೆಯ ಸಮಾರೋಪ

ಉಚಿತ ಆರೋಗ್ಯ ತಪಾಸಣೆ, ಕನ್ನಡಕ, ಔಷಧಿ ವಿತರಣೆ

ಮಂಗಳೂರು: ನ್ಯಾಷನಲ್ ಮೆಡಿಕೋಸ್ ಸಂಸ್ಥೆ (ಎನ್‌ಎಂಒ), ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮಣಿಪಾಲ ಮತ್ತು ಮಂಗಳೂರು, ಕೆ.ಎಸ್. ಹೆಗ್ಡೆ ವೈದ್ಯಕೀಯ ಅಕಾಡೆಮಿ, ಮಂಗಳೂರು, ಯೇನಪೋಯ ವೈದ್ಯಕೀಯ ಕಾಲೇಜು ಮಂಗಳೂರು, ಕಣಚೂರು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಮಂಗಳೂರು ಹಾಗೂ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಸಹಯೋಗದೊಂದಿಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಂಗಳ ಸ್ವಾಸ್ಥ್ಯ ಸೇವಾ ಯಾತ್ರೆ–3.0ರ ಅಂಗವಾಗಿ ವ್ಯಾಪಕವಾದ ಆರೋಗ್ಯ ಸೇವೆಯ ಸಮಾರೋಪ ಸಮಾರಂಭವು ಮಂಗಳೂರಿನ ಸಂಘನಿಕೇತನ ಹಾಲ್‌ನಲ್ಲಿ ನಡೆಯಿತು. ಎಂಆರ್‌ಪಿಎಲ್, ಸೇವಾಭಾರತಿ ಮತ್ತು ಕೆಎಸ್‌ಎಸ್ ಸಂಸ್ಥೆಗಳು ಸಹಯೋಗ ನೀಡಿದವು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 30 ಕಡೆಗಳಲ್ಲಿ ಸಾಮಾನ್ಯ ಆರೋಗ್ಯ ತಪಾಸಣಾ ಶಿಬಿರ ಹಾಗೂ 5 ವಿಶೇಷ ಶಿಬಿರಗಳನ್ನು ಆಯೋಜಿಸಲಾಗಿತ್ತು. 1600 ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿ ಉಚಿತ ಔಷಧಿ, ಕನ್ನಡಕಗಳು ಮತ್ತು ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು ಒದಗಿಸಲಾಯಿತು. ವಿಶೇಷವಾಗಿ ದೃಷ್ಟಿ ನಷ್ಟ, ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ, ಹಿರಿಯರಲ್ಲಿ ಸಕ್ಕರೆ ಖಾಯಿಲೆ ಮತ್ತು ರಕ್ತದೊತ್ತಡಂತಹ ಸಮಸ್ಯೆಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲಾಯಿತು.



ಸಮಾರೋಪ ಸಮಾರಂಭದಲ್ಲಿ ನ್ಯಾಷನಲ್ ಮೆಡಿಕೋಸ್ ಸಂಸ್ಥೆಯ ಮಂಗಳೂರು ಮತ್ತು ಉಡುಪಿ ವಿಭಾಗದ ಮುಖ್ಯಸ್ಥ ಹಾಗೂ ಮಂಗಳ ಸ್ವಾಸ್ಥ್ಯ ಸೇವಾ ಯಾತ್ರೆ–3.0ರ ಪೋಷಕ ಹಾಗೂ ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ ಡಾ. ಕೃಷ್ಣಪ್ರಸಾದ್ ಕೂಡ್ಲು, ಆರ್‌ಎಸ್‌ಎಸ್ ಸಂಘಚಾಲಕ್ ಡಾ. ಪಿ. ವಾಮನ ಶೆಣೈ, ಮಂಗಳಾ ಆಸ್ಪತ್ರೆಯ ನಿರ್ದೇಶಕ ಡಾ. ಗಣಪತಿ ಭಟ್, ಕೆ.ಎಸ್. ಹೆಗ್ಡೆ ವೈದ್ಯಕೀಯ ಅಕಾಡೆಮಿಯ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ವಾದೀಶ್ ಭಟ್ ಮತ್ತು ಯೆನೆಪೋಯಾ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಮಕ್ಕಳ ಶಸ್ತ್ರಚಿಕಿತ್ಸಕ ಹಾಗೂ ಮೂತ್ರ ಶಾಸ್ತ್ರಜ್ಞ ಡಾ. ಸುಹಿತಾ ಜಿ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ನಿರಂತರ ನೇತ್ರ ಶಿಬಿರ

ಪ್ರಸಾದ್ ನೇತ್ರಾಲಯವು ನಾಶನಲ್ ಮೆಡಿಕೋಸ್ ಸಂಸ್ಥೆಯೊಂದಿಗೆ ನಿರಂತರ ನೇತ್ರ ಶಿಬಿರಗಳನ್ನು ನಡೆಸುತ್ತಿರುವ ಭಾಗವಾಗಿ ಸ್ವಾಬ್ರಕಟ್ಟೆ, ಕಂಬದಕೋಣೆ ಮತ್ತು ಬಾರ್ಕೂರಿನಲ್ಲಿ ಬೃಹತ್ ನೇತ್ರ ಶಿಬಿರಗಳು ನಡೆದವು. 375 ಕ್ಕೂ ಅಧಿಕ ರೋಗಿಗಳನ್ನು ಪರೀಕ್ಷಿಸಿ 190 ಜನರಿಗೆ ಉಚಿತ ಕನ್ನಡಕ ವಿತರಣೆಗೆ ಆಯ್ಕೆ ಮಾಡಲಾಯಿತು. ಹಾಗೂ 41 ರೋಗಿಗಳನ್ನು ಪೊರೆ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

100ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಮುಂದಿನ ಪೀಳಿಗೆಯ ಆರೋಗ್ಯ ವೃತ್ತಿಪರರ ಸಹಾನುಭೂತಿ, ಸಮರ್ಪಣೆ ಮತ್ತು ಶಕ್ತಿಯನ್ನು ಪ್ರದರ್ಶಿಸಿದರು.

ಕಿರುಸುದ್ದಿ

ಕುಮಾರಪರ್ವತ ಚಾರಣಕ್ಕೆ ಹೊಸ ನಿಯಮ ಜಾರಿ

ಸುಬ್ರಹ್ಮಣ್ಯ: ಪಶ್ಚಿಮ ಘಟ್ಟದ ಪುಷ್ಪಗಿರಿ ಶ್ರೇಣಿಯಲ್ಲಿರುವ ಪ್ರಸಿದ್ಧ ಕುಮಾರ ಪರ್ವತ ಚಾರಣಕ್ಕೆ ಅರಣ್ಯ ಇಲಾಖೆ ಹೊಸ ನಿಯಮಗಳನ್ನು ಜಾರಿಗೊಳಿಸಿದೆ.



ಚಾರಣಿಗರ ಸುರಕ್ಷತೆ ಹಾಗೂ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಹೊಸ ನಿಯಮಗಳ ಪ್ರಕಾರ ಚಾರಣಿಗರು ಆನ್‌ಲೈನ್ ಮೂಲಕ ಪೂರ್ವಭಾವಿಯಾಗಿ ಟಿಕೆಟ್ ಪಡೆಯುವುದು ಕಡ್ಡಾಯವಾಗಿದೆ. ಪ್ರತಿದಿನ 150 ಮಂದಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ವನ್ಯಜೀವಿಗಳ ಓಡಾಟದ ಹಿನ್ನೆಲೆಯಲ್ಲಿ ರಾತ್ರಿ ವಾಸ್ತವ್ಯಕ್ಕೆ ನಿಷೇಧ ವಿಧಿಸಲಾಗಿದೆ. ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಮಾತ್ರ ಚಾರಣಕ್ಕೆ ಅವಕಾಶವಿದ್ದು, ನಿಗದಿತ ಅವಧಿಯೊಳಗೆ ಚಾರಣ ಪೂರ್ಣಗೊಳಿಸಬೇಕು. ಶೇಷ ಪರ್ವತದವರೆಗೆ (ಸುಮಾರು 20 ಕಿ.ಮೀ.) ಚಾರಣವನ್ನು ಸೀಮಿತಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.

ನಾಳೆ ಡಾ.ಬಾಬು ಜಗಜೀವನ್ ರಾಂ ಜನ್ಮ ದಿನಾಚರಣೆ

ಮಂಗಳೂರು: ದ.ಕ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಂಗಳೂರು ಮಹಾನಗರಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏ. 5ರಂದು ಡಾ.ಬಾಬು ಜಗಜೀವನ್ ರಾಂ 119ನೇ ಜನ್ಮ ದಿನಾಚರಣೆಯನ್ನು ನಗರದ ಉರ್ವಸ್ಟೋರ್‌ನ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಭವನದ ಬದಲಾಗಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಮನೆಯಲ್ಲೇ ಮತದಾನ ಯೋಜನೆ

5987 ಮಂದಿ ಮತ ಚಲಾವಣೆ

ಕಾಸರಗೋಡು :ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ 85 ವರ್ಷಕ್ಕಿಂತ ಮೇಲ್ಪಟ್ಟ 2874 ಮಂದಿ ಮತದಾರರು ಮತ್ತು ದಿವ್ಯಾಂಗ ವಲಯದ 3113 ಮಂದಿ ಮತದಾರರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ. ಮನೆಯಲ್ಲಿ ಮತ ಚಲಾಯಿಸಿ ಸೇವೆಯಡಿ ಇಲ್ಲಿಯವರೆಗೆ 5987 ಜನರು ಮತ ಚಲಾಯಿಸಿದ್ದಾರೆ,

ಕಾಸರಗೋಡು ಜಿಲ್ಲೆಯಲ್ಲಿ 85 ವರ್ಷಕ್ಕಿಂತ ಮೇಲ್ಪಟ್ಟ 3281 ಜನರು ಮತ್ತು 3529 ಮಂದಿ ದಿವ್ಯಾಂಗ ವಿಭಾಗದವರಿಗೆ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ. ಈ ನಿಟ್ಟಿನಲ್ಲಿ ಮಂಜೇಶ್ವರದಲ್ಲಿ 85 ವರ್ಷ ಮೇಲ್ಪಟ್ಟ 317 ಮತ್ತು 589 ದಿವ್ಯಾಂಗರು, ಕಾಸರಗೋಡಿನಲ್ಲಿ 85 ವರ್ಷ ಮೇಲ್ಪಟ್ಟ 320 ಜನರು ಮತ್ತು 516 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದರು.

ಉದುಮದಲ್ಲಿ 85 ವರ್ಷ ಮೇಲ್ಪಟ್ಟ 525 ಜನರು ಮತ್ತು 687 ದಿವ್ಯಾಂಗರು, ಕಾಞಂಗಾಡಿನಲ್ಲಿ 85 ವರ್ಷ ಮೇಲ್ಪಟ್ಟ 913 ಜನರು ಮತ್ತು 711 ದಿವ್ಯಾಂಗರು, ತೃಕ್ಕರೀಪ್ಪುರದಲ್ಲಿ 85 ವರ್ಷ ಮೇಲ್ಪಟ್ಟ 799 ಜನರು ಮತ್ತು 610 ದಿವ್ಯಾಂಗರು ಇದುವರೆಗೆ ಮನೆಯಲ್ಲಿಯೇ ಮತ ಚಲಾಯಿಸಿದರು. ಮುಂದಿನ ದಿನಗಳಲ್ಲಿಯೂ ಮನೆ ಮತದಾನ ಸೇವೆ ಲಭ್ಯವಿರುತ್ತದೆ.

ಶತಮಾನದ ಅನುಭವದೊಂದಿಗೆ ಮತ್ತೊಂದು ಮತ

102ನೇ ವಯಸ್ಸಿನಲ್ಲಿ ಮನೆಯಲ್ಲೇ ಮತ ಚಲಾಯಿಸಿದ ಅನ್ನಮ್ಮ

ಕಾಸರಗೋಡು: ಈ ಬಾರಿಯ ವಿಧಾನಸಭಾ ಚುನಾವಣೆಯ ಅಂಗವಾಗಿ ಮನೆಯಲ್ಲೇ ಮತದಾನ ವ್ಯವಸ್ಥೆಯಡಿ 102 ವರ್ಷದ ಅನ್ನಮ್ಮ ಅಬ್ರಹಾಂ ಅವರು ಮತದಾನದಲ್ಲಿ ಭಾಗವಹಿಸಲು ವಯಸ್ಸು ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ.

ಒಂದು ಶತಮಾನದ ಅನುಭವದೊಂದಿಗೆ ಅವರು ಮತ್ತೊಮ್ಮೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದಾಗ ಅವರ ಮುಖದಲ್ಲಿ ನಾಗರಿಕ ಪ್ರಜ್ಞೆಯ ಹೆಮ್ಮೆ ಸ್ಪಷ್ಟವಾಗಿತ್ತು. ಅನ್ನಮ್ಮ ಅವರು ಪೊಂಗಲ್ ಇಳಯಾನಿ ತೊಟ್ಟಂ ನಿವಾಸಿ ದಿ.ಅಬ್ರಹಾಂ ಅವರ ಪತ್ನಿ. ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಪೊಂಗಲ್ ಸಾಂಸ್ಕೃತಿಕ ನಿಲಯದ 90ನೇ ಬೂತ್‌ನಲ್ಲಿ ಮತದಾರರಾಗಿರುವ ಅನ್ನಮ್ಮ ಅವರು ವಯಸ್ಸಿಗೆ ಸಂಬಂಧಿಸಿದ ಅಂಗವೈಕಲ್ಯದಿಂದಾಗಿ ಮತಗಟ್ಟೆಗೆ ಆಗಮಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅವರಿಗೆ ಮನೆ ಮತದಾನಕ್ಕೆ ಜಿಲ್ಲಾಡಳಿತವು ವ್ಯವಸ್ಥೆ ಮಾಡಿತು.



ಪೊಂಗಲ್ ಇಳಯಾನಿ ತೊಟ್ಟಂನಲ್ಲಿರುವ ಅವರ ಮನೆಗೆ ಮತಗಟ್ಟೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಮತದಾನಕ್ಕೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಕೊಟ್ಟರು. ಅಧಿಕಾರಿಗಳು ಮತದಾನದ ಗೌಪ್ಯತೆಯನ್ನು ಕಾಪಾಡಿಕೊಂಡು ಕಾರ್ಯ ವಿಧಾನಗಳನ್ನು ಪೂರ್ಣಗೊಳಿಸಿದರು.

ವಿಶೇಷ ಮತಗಟ್ಟೆ ಅಧಿಕಾರಿ ಇ.ಎಂ. ಶ್ರೀರಂಜಿನಿ, ಮೈಕ್ರೋ ವೀಕ್ಷಕ ವಿ.ಕೆ. ರಂಜಿತ್, ಅಬ್ದುಲ್ ರಹಿಮಾನ್ ಮತ್ತು ಇತರರ ನೇತೃತ್ವದ ತಂಡವು ಮನೆಗಳಿಗೆ ಭೇಟಿ ನೀಡುವ ಮೂಲಕ ಮತ ನೋಂದಣಿ ಪ್ರಕ್ರಿಯೆಯನ್ನು ನಡೆಸುತ್ತಿದೆ.

ಚಾರಣಕ್ಕೆ ತೆರಳಿದ್ದಾಕೆ ನಾಪತ್ತೆ: ಪೊಲೀಸ್ ಶ್ವಾನದಳದಿಂದ ಶೋಧ

ಮಡಿಕೇರಿ: ಚಾರಣಕ್ಕೆ ತೆರಳಿದ್ದ ಮಹಿಳೆಯೊಬ್ಬರು ನಾಪತ್ತೆಯಾಗಿರುವ ಕುರಿತು ವರದಿಯಾಗಿದೆ. ನಾಪೋಕ್ಲು ಸಮೀಪದ ಯವಕಪಾಡಿ ಗ್ರಾಮದ ಹೋಂಸ್ಟೇಯಲ್ಲಿ ತಂಗಿದ್ದ ಕೇರಳ ಮೂಲದ ಶರಣ್ಯ (36) ಎಂಬ ಮಹಿಳೆ ಗುರುವಾರ ಕೊಡಗಿನ ಅತ್ಯಂತ ಎತ್ತರದ ತ'ಡಿಯಂಡ'ಮೋಳ್ ಬೆಟ್ಟಕ್ಕೆ ಚಾರಣಕ್ಕೆಂದು ತೆರಳಿದ್ದು, ಅಲ್ಲಿಂದ ವಾಪಸಾಗಿಲ್ಲ ಎಂದು ಹೇಳಲಾಗಿದೆ. ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡಿ ಒಬ್ಬಳೇ ಬಂದಿದ್ದ ಈ ಮಹಿಳೆಯನ್ನು, ಆ ವ್ಯಾಪ್ತಿಯಲ್ಲಿ ಕಾಡಾನೆಗಳು ಇರುವ ಹಿನ್ನೆಲೆಯಲ್ಲಿ ಬೇರೆ ಪ್ರವಾಸಿಗರ ಜೊತೆಯಲ್ಲಿ ಚಾರಣಕ್ಕೆ ಕಳುಹಿಸಲಾಗಿತ್ತೆನ್ನಲಾಗಿದೆ. ಬೆಟ್ಟಕ್ಕೆ ತೆರಳಿದ್ದ ಇತರ ಪ್ರವಾಸಿಗರು ಹಿಂತಿರುಗಿ ಬಂದರೂ ಶರಣ್ಯ ಹಿಂತಿರುಗಿ ಬಾರದ ಕಾರಣ ಸ್ಥಳೀಯರು ಅರಣ್ಯ ಸಿಬ್ಬಂದಿಗಳಿಗೆ ವಿಷಯ ತಿಳಿಸಿದ್ದಾರೆ. ಈ ಬಗ್ಗೆ ಅಲ್ಲಿಯಸ್ಥಳೀಯನಿವಾಸಿಕುಡಿಯರ ಮುತ್ತಪ್ಪ ಎಂಬವರು ನಾಪೋಕ್ಲು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಅರಣ್ಯ ಇಲಾಖೆಯವರು, ಪೊಲೀಸರು ಹಾಗೂ ಗ್ರಾಮಸ್ಥರು ಬೆಟ್ಟದಲ್ಲೆಲ್ಲಾ ಹುಡುಕಾಡಿದರೂ ಮಹಿಳೆಯ ಸುಳಿವು ದೊರೆತಿಲ್ಲ ಎನ್ನಲಾಗಿದೆ.



ಆಕೆಯ ಮೊಬೈಲ್ ಕೇರಳ ನೆಟ್‌ವರ್ಕ್‌ನಲ್ಲಿರುವುದಾಗಿ ತಿಳಿದು ಬಂದಿದ್ದು, ನಾಪೋಕ್ಲು ಠಾಣಾಧಿಕಾರಿ ರಾಘವೇಂದ್ರ, ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಮತ್ತು ಸ್ಥಳೀಯರು ಶುಕ್ರವಾರ ಶ್ವಾನದಳದ ನೆರವಿನೊಂದಿಗೆ ಮತ್ತೆ ಶೋಧ ಕಾರ್ಯ ಮುಂದುವರೆಸಿದ್ದಾರೆ.

ಗುರುವಾರ ತಡ ರಾತ್ರಿಯವರೆಗೆ ಹಾಗೂ ಶುಕ್ರವಾರ ಸಂಜೆ ವರೆಗೂ ಬೆಟ್ಟದಲ್ಲಿ ಶೋಧ ನಡೆಸಿದರು ಶರಣ್ಯ ಅವರ ಸುಳಿವು ದೊರೆತಿಲ್ಲ . ಈ ಬಗ್ಗೆ ಇಲ್ಲಿಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶುಕ್ರವಾರ ಸಂಜೆ ಕೊಯ್ಕೊಡು ನಿವಾಸಿ ಯುವತಿ ಶರಣ್ಯಳ ಅಣ್ಣ ಶ್ಯಾಮ್ ಆಗಮಿಸಿದ್ದು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಕುಡಿಯರ ಮುತ್ತಪ್ಪ ತಿಳಿಸಿದ್ದಾರೆ.

ಶ್ರೀಶಾ ಸೌಹಾರ್ದ ಸೊಸೈಟಿ: 6ನೇ ವರ್ಷ ನಿರೀಕ್ಷೆಗೂ ಮೀರಿದ ಅದ್ವಿತೀಯ ಸಾಧನೆ

ಮಂಗಳೂರು: ಶ್ರೀಶಾ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯು 2025- 26ನೇ ಸಾಲಿನ ಆರ್ಥಿಕ ವರ್ಷದಲ್ಲಿ ನಿರೀಕ್ಷೆಗೂ ಮೀರಿ ರೂ.2.16 ಕೋಟಿ ನಿವ್ವಳ ಲಾಭದೊಂದಿಗೆ ಸೊಸೈಟಿಯ ಎಲ್ಲಾ ವಿಭಾಗಗಳಲ್ಲೂ ಅದ್ವಿತೀಯ ಹಾಗೂ ಅಪರೂಪದ ಸಾಧನೆ ಮಾಡಿದೆ.



ಏ.1ರಂದು ಪ್ರಧಾನ ಕಚೇರಿಯಲ್ಲಿ ಸಹಕಾರಿಯ ಅವಲೋಕನಾ ಸಭೆಯಲ್ಲಿ ಮಾತನಾಡಿದ ಸೊಸೈಟಿಯ ಅಧ್ಯಕ್ಷ ಎಂ.ಎಸ್.ಗುರುರಾಜ್, ಶ್ರೀಶಾ ಸೊಸೈಟಿ ಆರಂಭವಾಗಿ ಕೇವಲ ಆರು ವರ್ಷಗಳಷ್ಟೇ ಸಂದಿದ್ದರೂ ಸಾಧನೆಯಲ್ಲಿ ಬಹು ದೂರ ಕ್ರಮಿಸಿದೆ. ಈ ಆರ್ಥಿಕ ವರ್ಷದಲ್ಲಿ ಠೇವಣಿ ಸಂಗ್ರಹಣೆಯಲ್ಲಿ ಶೇ.30 ರಷ್ಟು ಏರಿಕೆಯೊಂದಿಗೆ ರೂ.54.30 ಕೋಟಿ ಹಾಗೆಯೇ ಸಾಲ ವಿತರಣೆಯಲ್ಲಿ ಶೇ.25 ರಷ್ಟು ಏರಿಕೆಯೊಂದಿಗೆ ರೂ.44.88 ಕೋಟಿ ತಲುಪಿರುವುದು ವಿಶೇಷ. ಸೊಸೈಟಿಯು ಶೇ.98 ವಸೂಲಾತಿಯೊಂದಿಗೆ ಹಾಗೂ ಶೇ.27 ಏರಿಕೆಯ ನಿವ್ವಳ ಲಾಭ ರೂ.2.16 ಕೋಟಿ ಗಳಿಸಿರುವುದು ಇದರ ಶಿಸ್ತುಬದ್ಧ ಆಡಳಿತ ಹಾಗೂ ಸಿಬ್ಬಂದಿ ವರ್ಗದ ಶ್ರಮವೇ ಕಾರಣ ಎಂದರು.

ಸೊಸೈಟಿಯು ಐದು ಶಾಖೆಗಳನ್ನು ಹೊಂದಿದ್ದು ಗ್ರಾಹಕರ ಅವಶ್ಯಕತೆ ತಕ್ಕಂತೆ ತ್ವರಿತಗತಿಯ ಸಾಲ ವಿತರಣೆ ಶ್ರೀಶಾದ ವಿಶೇಷತೆ ಆಗಿದೆ. ಈ ವರ್ಷ ಸೊಸೈಟಿಯು ಪ್ರತಿ ಷೇರಿಗೆ ರೂ.2740 ಲಾಭ ಗಳಿಸಿರುವುದು ಇದರ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ.ಠೇವಣಿ ಹಾಗೂ ನಿವ್ವಳ ಲಾಭದ ಅನುಪಾತ 1:4 ಆಗಿದೆ. ಅಂದರೆ ಪ್ರತಿ ಒಂದು ಕೋಟಿ ಠೇವಣಿಗೆ 4 ಲಕ್ಷ ನಿವ್ವಳ ಲಾಭ ಗಳಿಸಿರುವುದು ದೊಡ್ಡ ಸಾಧನೆಯೇ ಸರಿ.ಕೇವಲ 6 ವರ್ಷಗಳಲ್ಲೇ ರೂ.5.60 ಕೋಟಿ ಲಾಭಾಂಶದ ನಿಧಿಗಳನ್ನು ಹೊಂದಿರುವುದು ಒಂದು ದಾಖಲೆಯಾಗಿದೆ. ಸಹಕಾರಿಯು ಷೇರುದಾರರಿಗೆ ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷವೂ ಗರಿಷ್ಠ ನೀಡಬಹುದಾದ ಶೇ.25 ಡಿವಿಡೆಂಡ್ ನೀಡುತ್ತಿದೆ. ಇದೆಲ್ಲದರ ಜೊತೆಗೆ ಗಳಿಸಿದ ಲಾಭದ ಒಂದು ದೊಡ್ಡ ಪಾಲನ್ನು ಮರಳಿ ಸಮಾಜಮುಖಿ ಕಾರ್ಯಗಳ ಮೂಲಕ ಸಮಾಜಕ್ಕೇ ನೀಡುತ್ತಿದೆ. ಮುಖ್ಯವಾಗಿ ಆರೋಗ್ಯ,ಶಿಕ್ಷಣ ಮತ್ತು ಸಾಹಿತ್ಯ ಪ್ರಚಾರ - ಪ್ರಸಾರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಿದೆ ಎಂದರು.

ಆರಂಭದಿಂದಲೂ ಸೊಸೈಟಿ ಲೆಕ್ಕ ಪರಿಶೋಧಕರಿಂದ 'ಎ' ಗ್ರೇಡ್ ಮಾನ್ಯತೆ ಪಡೆಯುತ್ತಿದೆ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಸಾಧನೆಗಳೊಂದಿಗೆ, ಸಹಕಾರಿಯ ತತ್ವಾದರ್ಶಗಳನ್ನು ನಿಜ ಅರ್ಥದಲ್ಲಿ ಅಳವಡಿಸಿಕೊಂಡು ಸಮಾಜದ ಎಲ್ಲಾ ವರ್ಗದ ಜನರ ಕಷ್ಟ ನಷ್ಟಗಳಿಗೆ ಸ್ಪಂದಿಸಬೇಕೆಂಬುದು ತಮ್ಮ ಆಶಯ ಎಂದು ಗುರುರಾಜ್ ಹೇಳಿದರು.

ಶಿಕ್ಷಣ, ಸಾಂಸ್ಕೃತಿಕ ತಜ್ಞ ಡಾ. ಎಂ. ಮೋಹನ ಆಳ್ವರಿಗೆ ಬೆಂಗಳೂರು ನಗರ ವಿವಿಯಿಂದ ಗೌರವ ಡಾಕ್ಟರೇಟ್

ಮೂಡುಬಿದಿರೆ: ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸುತ್ತಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವರಿಗೆ, ಬೆಂಗಳೂರಿನ ನಗರ ವಿಶ್ವವಿದ್ಯಾಲಯ (ಡಾ. ಮನಮೋಹನ್‌ಸಿಂಗ್ ವಿಶ್ವವಿದ್ಯಾಲಯ) ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದೆ. ಏ. 4ರಂದು ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ 5ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಈ ಗೌರವ ಪ್ರದಾನ ನೇರವೇರಲಿದೆ.



ಡಾ. ಎಂ. ಮೋಹನ್ ಆಳ್ವರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸ್ಥಾಪಕ ಅಧ್ಯಕ್ಷರಾಗಿದ್ದು, ಕರಾವಳಿ ಕರ್ನಾಟಕದಲ್ಲಿ ಗುಣಮಟ್ಟದ ಶಿಕ್ಷಣವನ್ನು ಗ್ರಾಮೀಣ ಪ್ರದೇಶಗಳಿಗೆ ತಲುಪಿಸಿದ ಪ್ರಮುಖರಲ್ಲಿ ಅಗ್ರಗಣ್ಯರು. ಮೂಡುಬಿದಿರೆ ಕೇಂದ್ರವಾಗಿ ಕಾರ್ಯನಿರ್ವಹಿಸುವ ಆಳ್ವಾಸ್ ಸಂಸ್ಥೆಗಳ ಮೂಲಕ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ನೂರಾರು ಕೋರ್ಸ್‌ಗಳನ್ನು ಪ್ರಾರಂಭಿಸಿ ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ರೂಪಿಸಿದ್ದಾರೆ. ಅವರ ನೇತೃತ್ವದಲ್ಲಿ ಶಿಕ್ಷಣ ಮಾತ್ರವಲ್ಲದೆ ಕಲೆ, ಸಂಸ್ಕೃತಿ, ಕ್ರೀಡೆ ಮತ್ತು ವ್ಯಕ್ತಿತ್ವ ವಿಕಸನಕ್ಕೂ ಸಮಾನ ಮಹತ್ವ ನೀಡಲಾಗಿದೆ. 'ಆಳ್ವಾಸ್ ನುಡಿಸಿರಿ- ವಿರಾಸತ್' ಮೊದಲಾದ ಮಹತ್ವದ ಸಾಹಿತ್ಯಿಕ- ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವಲ್ಲಿ ಅವರ ಪಾತ್ರ ಶ್ಲಾಘನೀಯ. ಅವರ ಸಾಧನೆಯನ್ನು ಗುರುತಿಸಿ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ಬಂದಿದ್ದು, 2010ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಇತ್ತೀಚೆಗೆ ಉತ್ತರ ಪ್ರದೇಶದ ವಾರಾಣಸಿಯ ಬನಾರಸ್ ಹಿಂದೂ ವಿವಿಯಲ್ಲಿ ಭಾರತ ಸರ್ಕಾರದ ಆಯುಷ್ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ಆಯುರ್ವೇದ ವಿದ್ಯಾಪೀಠದ 29ನೇ ಪದವಿ ಪ್ರದಾನ ಸಮಾರಂಭದಲ್ಲಿ ಡಾ. ಎಂ. ಮೋಹನ್ ಆಳ್ವರಿಗೆ 'ಫೆಲೋ ಆಫ್ ರಾಷ್ಟ್ರೀಯ ಆಯುರ್ವೇದ ವಿದ್ಯಾಪೀಠ' ಎಂಬ ಪ್ರತಿಷ್ಠಿತ ಗೌರವ ಫೆಲೋಶಿಪ್ ನೀಡಿ ಗೌರವಿಸಲಾಗಿತ್ತು. ಈ ಎಲ್ಲಾ ಸಾಧನೆಗಳು ಮತ್ತು ದೀರ್ಘಕಾಲದ ಸಮರ್ಪಿತ ಸೇವೆಯನ್ನು ಪರಿಗಣಿಸಿ, ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ. ಅವರ ಕಾರ್ಯಶೈಲಿ ಮತ್ತು ದೃಷ್ಟಿಕೋನವು ಭವಿಷ್ಯದ ಶಿಕ್ಷಣ ವ್ಯವಸ್ಥೆಗೆ ಮಾದರಿಯಾಗಿದ್ದು, ಅನೇಕ ಶಿಕ್ಷಣತಜ್ಞರಿಗೆ ಪ್ರೇರಣೆಯಾಗುತ್ತಿದೆ.

ಗಣ್ಯರಿಂದ ಪ್ರದಾನ

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ಸ್ ಸಿಸ್ಟಮ್ಸ್‌ನ ಮಹಾನಿರ್ದೇಶಕ ಡಾ. ಬಿನಯಕುಮಾರ್ ದಾಸ್, ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ. ಸಿ. ಸುಧಾಕರ ಹಾಗೂ ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ರಮೇಶ್ ಬಿ.ಯವರ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಗಬ್ಬುನಾರುತ್ತಿವೆ ರಾಜಾ ಕಾಲುವೆಗಳು | ಮೌನವಾಗಿದ್ದಾರೆ ಪಾಲಿಕೆ ಅಧಿಕಾರಿಗಳು

ಇಲ್ಲಿ ನೀರಿಗಿಂತ ಡ್ರೈನೇಜ್‌ನದ್ದೇ ದೊಡ್ಡ ಸಮಸ್ಯೆ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್

ಸುರೇಶ್ ಡಿ. ಪಳ್ಳಿ

ದಿಗಂತ ವಾಟರ್ ಚೆಕ್

ಮಂಗಳೂರು: ಅಯ್ಯೋ! ನಮ್ಮ ವಾರ್ಡ್ ಕಥೆ ಎನ್ ಕೇಳ್ತೀರ.. ಹೇಳಿ ಪ್ರಯೋಜನ ಇಲ್ಲ ಸಾರ್, ಎಷ್ಟೇ ಅಧಿಕಾರಿಗಳು, ಜನಪ್ರತಿನಿಧಿಗಳು ಬರಲಿ ನಮ್ಮ ವಾರ್ಡ್‌ನ ಡ್ರೈನೇಜ್ ಸಮಸ್ಯೆಯಂತೂ ಬಗೆಹರಿಯುವ ಲಕ್ಷಣ ಕಾಣುತ್ತಿಲ್ಲ.

ಇದು, ಮಂಗಳೂರಿನ ಕಂಬ್ಳ ವಾರ್ಡ್‌ನ ಬಹುತೇಕ ನಿವಾಸಿಗಳು ಆಡುವ ಮಾತು.

ಇಲ್ಲಿ ಕುಡಿಯುವ ನೀರಿನ ಸಮಸ್ಯೆಯ ಜೊತೆಗೆ ಡ್ರೈನೇಜ್ ಸಮಸ್ಯೆ ಜೋರಾಗಿದೆ. ಕಳೆದ ಹಲವು ವರ್ಷಗಳಿಂದ ಇದಕ್ಕೆ ಮುಕ್ತಿ ದೊರಕಿಲ್ಲ. ಜೈಲ್ ರೋಡ್, ಪಿವಿಎಸ್, ವೇರ್ ಹೌಸ್, ಜನತಾ ಡಿಲಕ್ಸ್ ಪರಿಸರ ಮುಂತಾದೆಡೆ ನೀರಿನ ಸಮಸ್ಯೆ ಕಾಡುತ್ತಿದೆ.



ಮಂಗಳೂರು ನಗರದ ಎಂ.ಜಿ. ರಸ್ತೆಯ ಪಕ್ಕದಲ್ಲಿರುವ ರಾಜಕಾಲುವೆಯ ದುಃಸ್ಥಿತಿ.

ಕೇವಲ 2 ತಾಸು ನೀರು

ಬಹುತೇಕ ಕಡೆಗಳಲ್ಲಿ ಕೇವಲ ಎರಡು ತಾಸು ನೀರು ಬರುತ್ತಿದೆ. ಮುಂಜಾನೆ 5ರಿಂದ 7 ಗಂಟೆಯವರೆಗೆ ನೀರು ಬರುತ್ತಿದ್ದರೂ ಸಣ್ಣ ಡ್ರಮ್ ಕೂಡ ತುಂಬುವುದಿಲ್ಲ. ಅಷ್ಟು ಸಪೂರವಾಗಿ ನೀರು ಬರುತ್ತದೆ ಎಂದು ದೂರುತ್ತಾರೆ ವಾರ್ಡ್ ನಿವಾಸಿಗಳು. ಇತರ ವಾರ್ಡ್‌ಗಳಂತೆ ಇಲ್ಲೂ ಪ್ರೆಶರ್ ಸಮಸ್ಯೆ ಅತಿಯಾಗಿ ಕಾಡುತ್ತಿದೆ.

'ನಮ್ಮ ವಾರ್ಡ್‌ನಲ್ಲಿ ಡ್ರೈನೇಜ್ ಸಮಸ್ಯೆ ಅತಿಯಾಗಿ ಕಾಡುತ್ತಿದೆ. ರಾಜ ಕಾಲುವೆ, ಸೇರಿದಂತೆ ಚರಂಡಿಗಳ ಹೂಳೆತ್ತುವಿಕೆ ಕಾರ್ಯ ಕಳೆದ ಒಂದು ವರ್ಷದಿಂದ ಆಗಿಲ್ಲ. ಅಧಿಕಾರಿಗಳು ಮೌನವಾಗಿದ್ದಾರೆ. ಜನತೆಯ ಯಾವ ಕೆಲಸವೂ ಪಾಲಿಕೆಯಿಂದ ಆಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಇತ್ತೀಚೆಗೆ ಜಿಲ್ಲಾಧಿಕಾರಿಗಳು ಶೀಘ್ರ ಹೂಳೆತ್ತುವಿಕೆ ಕಾರ್ಯ ಆರಂಭಿಸಲು ಸೂಚನೆ ನೀಡಿದರೂ ಪಾಲಿಕೆ ಅಧಿಕಾರಿಗಳು ಮಾತ್ರ ಮೌನವಹಿಸಿದ್ದಾರೆ. ಇಂಜಿನಿಯರಿಂಗ್ ವಿಭಾಗ ಇದ್ದೂ ಇಲ್ಲದಂದಾಗಿದೆ' ಎಂದು ಪಾಲಿಕೆ ನಡೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಾರೆ ಕಂಬ್ಳ ವಾರ್ಡ್‌ನ ನಿಕಟಪೂರ್ವ ಕಾರ್ಪೋರೇಟರ್ ಲೀಲಾವತಿ ಪ್ರಕಾಶ್ ಅವರು.



ಜಲಾವೃತದ ಭೀತಿ

ಪ್ರತಿ ವರ್ಷ ಕೂಡ ಕಂಬ್ಳ ವಾರ್ಡ್ ಜಲಾವೃತದ ಭೀತಿ ಎದುರಿಸುತ್ತದೆ. ಈ ಬಾರಿಯಂತೂ ಇನ್ನೂ ಹೂಳೆತ್ತದ ಕಾರಣ ಮೊದಲ ಮಳೆಗೇ ಸಾಕಷ್ಟು ಅವಾಂತರ ಸೃಷ್ಟಿಯಾಗುವುದಂತೂ ಗ್ಯಾರಂಟಿ ಎನ್ನುತ್ತಾರೆ ವಾರ್ಡ್ ವಾಸಿಗಳು. ಇಲ್ಲಿನ ಎಂಪೈರ್ ಮಾಲ್ ಹಿಂಭಾಗ, ಜನತಾ ಡಿಲಕ್ಸ್ ಹೊಟೇಲ್ ರಸ್ತೆಯ ನಿವಾಸಿಗಳಂತೂ ಪ್ರತಿ ವರ್ಷ ಮಳೆಗಾಲದಲ್ಲಿ ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ. ನಗರದ ಮಧ್ಯಭಾಗದಲ್ಲಿರುವ ಈ ವಾರ್ಡ್ ಹೆಚ್ಚಿನ ಸಮಸ್ಯೆಯನ್ನು ಎದುರಿಸುತ್ತಿದೆ.

ಡ್ರೈನೇಜ್ ಸಮಸ್ಯೆಯಿಂದ ಕಂಗಾಲಾಗಿದ್ದೇವೆ

ಕರಂಗಲ್ಪಾಡಿ ಪ್ರದೇಶದ ಸಿ.ಜಿ. ಕಾಮತ್ ರಸ್ತೆಯಲ್ಲಿರುವ ಫರ್ನ್ಸ್ ವಿಲ್ಲಾ ನಿವಾಸಿಗಳಂತೂ ಡ್ರೈನೇಜ್ ಸಮಸ್ಯೆಯಿಂದ ಕಂಗಾಲಾಗಿ ಹೋಗಿದ್ದಾರೆ. ವರ್ಷವಿಡೀ ಕೆಟ್ಟ ವಾಸನೆಯೊಂದಿಗೆ ಬದುಕುವ ಸ್ಥಿತಿ ಇಲ್ಲಿನ ವಾಸಿಗಳದ್ದು.

ಪಾಲಿಕೆಗೆ ಸತತ ಮನವಿ ಮಾಡಿದರೂ ಯಾವುದೇ ಪರಿಹಾರ ಸಿಕ್ಕಿಲ್ಲ. ಒಂದು ವಾರದ ಹಿಂದೆ ಸ್ವತಃ ಜಿಲ್ಲಾಧಿಕಾರಿಯವನ್ನು ಸತತ 5 ಗಂಟೆಗಳ ಕಾಲ ಕಾದು ಮನವಿ ಸಲ್ಲಿಸಿದ್ದೇವೆ. ಇದುವರೆಗೆ ಪರಿಹಾರ ಸಿಕ್ಕಿಲ್ಲ ಎನ್ನುತ್ತಾರೆ ಇಲ್ಲಿನ ನಿವಾಸಿ ಲಿಲ್ಲಿ ಪಿಂಟೋ ಅವರು.

ಸದಾ ತೆರೆಯುವ ಮ್ಯಾನ್‌ಹೋಲ್!

ಈ ಪ್ರದೇಶದ ಮ್ಯಾನ್‌ಹೋಲ್‌ಗಳು ಪದೇಪದೇ ತುಂಬಿ ತುಳುಕುತ್ತಿದ್ದು, ದುರ್ನಾತ ಬೀರುತ್ತಿರುತ್ತದೆ. ಮಳೆಗಾಲದಲ್ಲಂತೂ ಡ್ರೈನೇಜ್ ನೀರಿನೊಂದಿಗೆ ಮಳೆ ನೀರು ಸೇರಿ ಮನೆ ಸುತ್ತಲಿನ ಪ್ರದೇಶವನ್ನು ಆಪೋಷನ ಪಡೆದುಕೊಳ್ಳುತ್ತದೆ. ಮಳೆ ನೀರು



ಹರಿಯುವ ತೋಡಿನಲ್ಲಿ ಡ್ರನೇಜ್ ನೀರು ಹರಿಯುವ ಸ್ಥಿತಿ ನಮ್ಮ ವಾರ್ಡ್‌ನದ್ದು ಎನ್ನುತ್ತಾರೆ ಲಿಲ್ಲಿ ಪಿಂಟೋ.

ಕೆಲವೆಡೆ ಎರಡು ತಾಸು ನೀರು



ನೀರಿನ ಪ್ರೆಶರ್ ಕೊರತೆ ಕಂಬ್ಳ ವಾರ್ಡ್‌ನಲ್ಲಿದೆ. ಕೆಲವೆಡೆ ಕೇವಲ ಎರಡು ತಾಸು ಮಾತ್ರ ನೀರು ಬರುತ್ತಿದ್ದು, ಇದು ಸಾಕಾಗುತ್ತಿಲ್ಲ ಎಂದು ಜನ ದೂರುತ್ತಿದ್ದಾರೆ. ಡ್ರೈನೇಜ್ ಸಮಸ್ಯೆಯಂತೂ ಮಿತಿಮೀರಿದೆ. ರಾಜ ಕಾಲುವೆಗಳ ಹೂಳೆತ್ತುವಿಕೆ ಕಾರ್ಯ ಇನ್ನೂ ಶುರು ವಾಗಿಲ್ಲ. ಜನತೆಯ ಕಷ್ಟವನ್ನು ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಸ್ಪಂದನೆ ಸಿಗದಿರುವುದು ವಿಪರ್ಯಾಸ.

■ **ಲೀಲಾವತಿ ಪ್ರಕಾಶ್,** ನಿಕಟಪೂರ್ವ ಕಾರ್ಪೋರೇಟರ್ ಕಂಬ್ಳ ವಾರ್ಡ್

ಜಿಲ್ಲಾಧಿಕಾರಿ ಸ್ಪಂದಿಸಲಿ



ನಮ್ಮ ವ್ಯಾಪ್ತಿಯಲ್ಲಿ ಡ್ರೈನೇಜ್ ಸಮಸ್ಯೆ ಗಂಭೀರವಾಗಿದ್ದು, ದುರ್ವಾಸನೆಯ ನಡುವೆಯೇ ಬದುಕುತ್ತಿದ್ದೇವೆ. ಹಿರಿಯ ನಾಗರಿಕರೇ ಹೆಚ್ಚು ಇರುವ ನಮ್ಮ ವ್ಯಾಪ್ತಿಯ ಸಮಸ್ಯೆಗೆ ಜಿಲ್ಲಾಡಳಿತ ಸ್ಪಂದಿಸಬೇಕು. ಈಗಾಗಲೇ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಿದ್ದೇವೆ. ಆದಷ್ಟು ಶೀಘ್ರ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಒತ್ತು ನೀಡಬೇಕು.

■ **ಲಿಲ್ಲಿ ಪಿಂಟೋ,** ಕರಂಗಲ್ಪಾಡಿ

ಬಾವಿ ಕೂಡ ಮಲಿನವಾಗಿದೆ

ಡ್ರೈನೇಜ್ ನೀರು ಇಲ್ಲಿನ ಬಾವಿಗಳಿಗೆ ಸೇರುವುದರಿಂದ ಬಾವಿಯ ನೀರು ಕೂಡ ಮಲಿನವಾಗುತ್ತಿದೆ. ಮುಂದೆ ಇದು ಜನತೆಯ ಆರೋಗ್ಯವನ್ನೂ ಹದಗೆಡಿಸಬಹುದು. ಪಾಲಿಕೆ ಅಧಿಕಾರಿ ಗಳು ಡ್ರೈನೇಜ್ ಸಮಸ್ಯೆಗೆ ಮುಕ್ತಿ ಕಾಣಿಸಬೇಕು.

■ **ವಿನಯಕೃಷ್ಣ** ಕಂಬ್ಳವಾರ್ಡ್ ನಿವಾಸಿ

ಮುಂದಿನ ವಾರ್ಡ್ -30
ಕೊಡಿಯಾಲ್‌ಬೈಲ್ ಪರಿಸರದ ಸ್ಥಿತಿಗತಿ

ಬಪ್ಪನಾಡು: ರಾಮ- ಹನುಮ ಜ್ಯೋತಿ ರಥ

ಮುಲ್ಕಿ: ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಅಯೋಧ್ಯೆಯ ಮಂದಿರದಲ್ಲಿ ಬೆಳಗುವ ಜ್ಯೋತಿ, ಗಂಗಾಜಲ ಹಾಗೂ ಅಯೋಧ್ಯೆ ಪುಣ್ಯ ಮೃತ್ತಿಕೆಯನ್ನೊಳಗೊಂಡ ರಥ ಮುಲ್ಕಿಯ ಬಪ್ಪನಾಡು ಕ್ಷೇತ್ರದಲ್ಲಿ ಭವ್ಯವಾಗಿ ಸ್ವಾಗತಿಸಲಾಯಿತು.

ಈ ಸಂದರ್ಭ ಕ್ಷೇತ್ರದ ಅರ್ಚಕ ಪ್ರಸಾದ್ ಭಟ್ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ರಥ ಆಗಮಿಸುವ ಸಂದರ್ಭ ಶ್ರೀರಾಮ ತಾರಕ ಜಪ, ಹನುಮಾನ್ ಚಾಲಿಸಾ ಹಾಗೂ ಭಜನೆ ಮಾಡಿ ಸ್ವಾಗತಿಸಲಾಯಿತು.

ಈ ಸಂದರ್ಭ ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ, ನಿವೃತ್ತ ಉಪನ್ಯಾಸಕ ವೈ. ಎನ್. ಸಾಲ್ಯಾನ್, ವಿಶ್ವನಾಥ್ ಬಪ್ಪನಾಡು, ಸಂಜೀವ ದೇವಾಡಿಗ ಅಕೌಂಟೆಂಟ್ ಶಿವಶಂಕರ್ ವರ್ಮ, ಭಾನುಮತಿ ಶೆಟ್ಟಿ ಕಕ್ವಗುತ್ತು, ಮುಲ್ಕಿ ನಪಂ ಮಾಜೀ ಅಧ್ಯಕ್ಷ ಸತೀಶ್ ಅಂಚನ್, ಮಾಜಿ ಸದಸ್ಯರಾದ ಪುರುಷೋತ್ತಮ ಬಡಗುಹಿತ್ಲು, ಹರ್ಷ ರಾಜ ಶೆಟ್ಟಿ, ಶೈಲೇಶ್ ಕುಮಾರ್, ಸುಭಾಷ್ ಶೆಟ್ಟಿ, ಈರಣ್ಣ ಅರಳಗುಂಡಿ, ಪ್ರಶಾಂತ್ ಕೆಎಸ್ ರಾವ್ ನಗರ, ನವೀನ್ ರಾಜ್, ವಕೀಲ ರವೀಶ್ ಕಾಮತ್, ರೋಹಿಣಿ ಶೆಟ್ಟಿ, ರಮೇಶ್ ಮೆಸ್ಕಾಂ ಬಪ್ಪನಾಡು ಉಪಸ್ಥಿತರಿದ್ದರು.



ಹೈಕಮಾಂಡ್ ಮೆಚ್ಚುಗೆಗಾಗಿ ಆರೋಪ: ಆರ್.ಅಶೋಕ

ಬೆಂಗಳೂರು: ಕೇವಲ ಹೈಕಮಾಂಡ್ ನಾಯಕರ ಮೆಚ್ಚುಗೆಗಾಗಿ ಪದೇ ಪದೇ ಇಲ್ಲಸಲ್ಲದ ಆರೋಪ ಮಾಡಿದರೆ ಅದು ಸತ್ಯ ಆಗುವುದಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.


ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಒಂದು ಸುಳ್ಳನ್ನು ನೂರು ಬಾರಿ ಅಲ್ಲ, ಸಾವಿರ ಬಾರಿ ಹೇಳಿದರೂ



ಅದು ಸತ್ಯವಾಗುವುದಿಲ್ಲ ಎಂದಿದ್ದಾರೆ. ತೆರಿಗೆ ಹಂಚಿಕೆ ಹೇಗೆ ನಡೆಯುತ್ತದೆ, ಅದಕ್ಕಿರುವ ಮಾನದಂಡಗಳು ಏನು, ಇವೆಲ್ಲ ತಮಗೆ ಚೆನ್ನಾಗಿ ಗೊತ್ತು. ಯುಪಿಎ ಅವಧಿಗೆ ಹೋಲಿಸಿದರೆ ಎನ್‌ಡಿಎ ಅವಧಿ ಯಲ್ಲಿ ಕರ್ನಾಟಕಕ್ಕೆ 3 ಪಟ್ಟು ಹೆಚ್ಚು ಹಣ ದೊರೆತಿದೆ ಎನ್ನುವ ಸತ್ಯ ನಿಮಗೂ ಗೊತ್ತು. ಎರಡೆರಡು ಬಾರಿ ಮುಖ್ಯಮಂತ್ರಿ ಆಗಿರುವ ತಮ್ಮಂತಹವರು ಕೇವಲ ಹೈಕಮಾಂಡ್ ನಾಯಕರ ಮೆಚ್ಚುಗೆಗಾಗಿ ಪದೇ ಪದೇ ಇಲ್ಲಸಲ್ಲದ ಆರೋಪ ಮಾಡಿ ರಾಜ್ಯದ ಜನತೆಯ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುವುದು ತಮಗೆ ಶೋಭೆ ತರುವುದಿಲ್ಲ ಎಂದು ಆಕ್ಷೇಪಿಸಿದ್ದಾರೆ.

ತಮ್ಮ ಮೊದಲ ಅವಧಿಯಲ್ಲಿದ್ದ ಗತ್ತು, ಗಾಂಭೀರ್ಯ, ಆತ್ಮವಿಶ್ವಾಸ ಇವು ಯಾವುದೂ ಈಗ ತಮ್ಮಲ್ಲಿ ಕಾಣುತ್ತಿಲ್ಲ. ಜನತಾ ಪರಿವಾರದಿಂದ, ಸಮಾಜವಾದಿ ಹಿನ್ನೆಲೆಯಿಂದ ಬಂದ ತಮಗೆ ಈ ರೀತಿ ಕುರ್ಚಿಗಾಗಿ, ಮಗನ ಭವಿಷ್ಯಕ್ಕಾಗಿ, ಗಾಂಧಿ ಕುಟುಂಬದ ಓಲೈಕೆ ಮಾಡುವ ಪರಿಸ್ಥಿತಿ ಬರಬಾರದಿತ್ತು . ರಾಜಕೀಯ ಜೀವನದ ಸಂಧ್ಯಾ ಕಾಲದಲ್ಲಿ ನಿಮಗೆ ಬಂದಿರುವ ಈ ದುಸ್ಥಿತಿ ಬಗ್ಗೆ ನನಗೆ ಕನಿಕರವಿದೆ. ಆದರೆ, ಸುಳ್ಳಿನ ಮೇಲೆ ಸುಳ್ಳು ಹೇಳಿ ತಮ್ಮ ವರ್ಚಸ್ಸಿಗೆ ತಾವೇ ಇನ್ನಷ್ಟು ಮಸಿ ಬಳಿಸಿಕೊಳ್ಳಬೇಡಿ ಎಂದು ಹೇಳಿದರು.

ರಾಮ ಬಾಣ



ಬಿಟ್ ಕಾಯಿನ್ ಪ್ರಕರಣ ರದ್ದತಿ ಕೋರಿ ಹೈಗೆ ರಾಬಿನ್ ಅರ್ಜಿ

ಬೆಂಗಳೂರು: ಬಿಟ್ ಕಾಯಿನ್ ಹಗರಣದ ರೂವಾರಿ ಶ್ರೀಕಾಂತ್ ಅಲಿಯಾಸ್ ಶ್ರೀಕಿ ಸ್ನೇಹಿತನಾದ ರಾಬಿನ್ ಖಂಡೇಲವಾಲ್ ಅವರು ತಮ್ಮ ವಿರುದ್ಧದ ವಂಚನೆ ಮತ್ತು ನಂಬಿಕೆ ದ್ರೋಹ ಪ್ರಕರಣ ರದ್ದತಿ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಬೆಂಗಳೂರಿನ ಜಯನಗರದ ಶ್ರೀಕಾಂತ್ ಮತ್ತು ಪಶ್ಚಿಮ ಬಂಗಾಳದ ಮೂಲದವನಾದ ಬಿಟ್ ಕಾಯಿನ್ ಟ್ರೇಡರ್ ರಾಬಿನ್ ಖಂಡೇಲವಾಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ಪೀಠವು ವಿಶೇಷ ಸರ್ಕಾರಿ ಅಭಿಯೋಜಕ ಪಿ.ಪ್ರಸನ್ನಕುಮಾರ್ ಅವರಿಗೆ ದಾಖಲೆಗಳನ್ನು ಪರಿಶೀಲಿಸಿ ವಾದಿಸುವಂತೆ ಸೂಚಿಸಿದೆ.

ಪ್ರಕರಣದ ಹಿನ್ನೆಲೆ : 2019ರಲ್ಲಿ ಕೃಷ್ಣ ಹಾಗೂ ರಾಬಿನ್ ಖಂಡೇಲವಾಲ್ ಅವರು ಭೇಟಿಯಾಗಿ 28 ಲಕ್ಷ ರೂ. ನೀಡಿದರೆ ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿ 28 ಲಕ್ಷದ ಜತೆ 17 ಲಕ್ಷ ಸೇರಿಸಿ ಒಟ್ಟು 45 ಲಕ್ಷ ರೂ. ನೀಡುತ್ತೇವೆ ಎಂದು ಖಾತೆ ನಂಬರ್ ಒಂದನ್ನು ನೀಡಿದ್ದರು. ಆದಕ್ಕೆ ತಾಂತ್ರಿಕ ತೊಂದರೆಯಿಂದಾಗಿ ಹಣ ಹೋಗಿರಲಿಲ್ಲ. ಹೀಗಾಗಿ, ಆನಂತರ ಅಜಿತ್ ಖಂಡೇಲವಾಲ್ ಎಂಬಾತನ ಖಾತೆ ನಂಬರ್‌ಗೆ ಹಣ ಹಾಕುವಂತೆ ಆರೋಪಿಗಳು ಸೂಚಿಸಿದ್ದರು. ಅದರಂತೆಯೇ ಅಜಿತ್ ಖಾತೆಗೆ ಹಣ ವರ್ಗಾಯಿಸಲಾಗಿತ್ತು. ಒಂದು ತಿಂಗಳ ನಂತರ ಹಣ ಕೇಳಿದಾಗ ಸ್ವಲ್ಪ ದಿನಗಳಲ್ಲೇ ವಾಪಸ್ ಮಾಡುವುದಾಗಿ ಹೇಳಿ, ಆನಂತರ ಆರೋಪಿಗಳು ಸಂಪರ್ಕಕ್ಕೆ ಸಿಕ್ಕಿಲ್ಲ. ಹೀಗಾಗಿ, ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಇಂದಿರಾ ನಗರದ ಯಶೋದಾದೇವಿ ದೂರು ನೀಡಿದ್ದರು. ಇದರ ಅನ್ವಯ ಶ್ರೀ ಕೃಷ್ಣ ಅಲಿಯಾಸ್ ಶ್ರೀಕಿ, ರುಬಿಟ್ ಆನ್‌ಲೈನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ರಾಬಿನ್ ಖಂಡೇವಾಲ್ ಮತ್ತು ಅಜಿತ್ ಖಂಡೇಲವಾಲ್ ವಿರುದ್ಧ ಅಶೋಕ ನಗರ ಠಾಣೆಯಲ್ಲಿ 2020ರ ನವೆಂಬರ್ 19ರಂದು ಪ್ರಕರಣ ದಾಖಲಾಗಿತ್ತು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದೂ ಸಂಗಮ ಮಾಡಲು ಹೊರಟರೆ ಬಿಗಿ ಪೊಲೀಸ್ ಬಂದೋಬಸ್ತ್ ವಿಪರೀತವೆನಿಸುತ್ತದೆ, ನಾವೇನೂ ಬಾಂಬುಗಳನ್ನು ತರುತ್ತೇವೆಯೇ?
- ಆರೆಸ್ಸೆಸ್ ಪ್ರಾಂತ ಪ್ರಚಾರಕ್ ಗುರುಪ್ರಸಾದ್
- ಲೋಕದಲ್ಲಿ ಜನ ಬಗ್ಗುವವರನ್ನು ಗುದ್ದುತ್ತಾರೆ, ಗುದ್ದುವವರೆದುರು ಬಗ್ಗುತ್ತಾರೆ!

ದಿನ ಭವಿಷ್ಯ

ಮೇಷ
ವೃತ್ತಿ ಕೌಶಲ ಸುಧಾರಣೆಗೆ ಪ್ರೇರಣೆ ಸಿಗಲಿದೆ. ಸಹೋದ್ಯೋಗಿ ಜತೆ ಹೊಂದಾಣಿಕೆ ಮುಖ್ಯ. ಬದಲಾವಣೆ ವಿರೋಧಿಸಬೇಡಿ.

ವೃಷಭ
ಸಂಗಾತಿಯ ಅಭಿಪ್ರಾಯಕ್ಕೆ ಮನ್ನಣೆ ಕೊಡಿ. ಆದರಿಂದ ವಿವಾದ ಅಂತ್ಯ. ವೃತ್ತಿಯಲ್ಲಿ ಹಿರಿಯರ ಸಹಕಾರ. ಆರ್ಥಿಕ ಒತ್ತಡ ಅಂತ್ಯ.

ಮಿಥುನ
ಭಾವನಾತ್ಮಕ ಏರುಪೇರು. ಸಂಬಂಧದಲ್ಲಿ ಒಡಕು. ಗ್ರಹಗತಿ ಅಷ್ಟೇನೂ ಪೂರಕವಾಗಿಲ್ಲ. ಮುಖ್ಯ ಕಾರ್ಯಕ್ಕೆ ತುಸು ಕಾಲ ಕಾಯುವುದೊಳಿತು.

ಕಟಕ
ವೃತ್ತಿಯಲ್ಲೂ ವೈಯಕ್ತಿಕವಾಗಿಯೂ ಸಂಕಷ್ಟ ಎದುರಿಸುವಿರಿ. ಪರಿಸ್ಥಿತಿ ನಿಮಗೆ ಪ್ರತಿಕೂಲ. ಇಷ್ಟದೇವರ ಪ್ರಾರ್ಥನೆ ಮಾಡಿ.

ಸಿಂಹ
ಉತ್ಸಾಹದ ದಿನ. ಕಾರ್ಯ ಸಂಪೂರ್ಣ. ಭಿನ್ನಮತ ನಿವಾರಣೆ. ಜಡತ್ವ ಬಿಟ್ಟು ಕೆಲಸ ಮಾಡಿ. ಆರೋಗ್ಯ ಸಮಸ್ಯೆ ಪರಿಹಾರ.

ಕನ್ಯಾ
ನಿಮ್ಮ ತಪ್ಪಿಗೆ ಸಂಗಾತಿಯ ಮೇಲೆ ದೂರು ಹಾಕಬೇಡಿ. ವೃತ್ತಿ ಸಮಸ್ಯೆ ನೀವು ತಿಳಿದುಕೊಂಡಷ್ಟು ಕಠಿಣವಾಗಿಲ್ಲ.

ತುಲಾ
ಅಶಾಂತ ಮನಸ್ಸು. ನಿಮ್ಮ ಚಿಂತನೆಗಳು ಕಾರ್ಯರೂಪಕ್ಕೆ ಬರದಿರುವ ಚಿಂತೆ. ಅಧ್ಯಾತ್ಮ ಧ್ಯಾನ ನಿಮಗೆ ಸಹಕಾರಿಯಾದೀತು.

ವೃಶ್ಚಿಕ
ಮನೆಯವರ ಜತೆ ಪ್ರೀತಿಯಿಂದ ನಡೆದುಕೊಳ್ಳಿ. ಅಧಿಕಾರ ಚಲಾವಣೆ ಒಳಿತು ತರದು. ಮುನಿಸು ನಿವಾರಣೆಗೆ ಗಮನ ಕೊಡಿ. ವೆಚ್ಚ ಅಧಿಕ.

ಧನು
ಆರ್ಥಿಕ ಪರಿಸ್ಥಿತಿ ಸುಧಾರಣೆ. ಕಾಡುತ್ತಿದ್ದ ಚಿಂತೆ ಪರಿಹಾರದ ಲಕ್ಷಣ ತೋರಿಬರುತ್ತದೆ. ಕೋಪತಾಪ ನಿಯಂತ್ರಿಸಿ. ಸಮಾಧಾನಚಿತ್ತರಾಗಿರಿ.

ಮಕರ
ನಿಮ್ಮ ಅಸಹನೆಗೆ ಇತರರ ಮೇಲೆ ರೇಗುವಿರಿ. ಸಂಘರ್ಷದ ಮನೋಭಾವ ಬಿಡಿ. ಇತರರ ಮನಸ್ಥಿತಿ ಅರಿತು ವ್ಯವಹರಿಸಿ.

ಕುಂಭ
ಗ್ರಹಗತಿ ಪೂರಕ. ಸಂಬಂಧದಲ್ಲಿ ಸುಧಾರಣೆ. ಮಾನಸಿಕ ನಿರಾಳತೆ. ಹಣದ ಬಿಕ್ಕಟ್ಟು ಪರಿಹಾರ. ಹಳೆಯ ಸ್ನೇಹಿತರ ಭೇಟಿ. ಇಷ್ಟದ ವಸ್ತು ಖರೀದಿ.

ಮೀನ
ನಿಮ್ಮ ಸುತ್ತಲಿನ ಬದಲಾವಣೆಗೆ ಹೊಂದಿಕೊಳ್ಳಿ. ದೂರವಾಗಿ ನಿಲ್ಲಬೇಡಿ. ಸಣ್ಣ ವಿಷಯಕ್ಕೆ ಅಸಹನೆಯಿಂದ ರೇಗದಿರಿ. ಶಾಂತಚಿತ್ತತೆ ಮುಖ್ಯ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 2,7,0,3

ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾಧನೆ ಶೂನ್ಯ: ಸಂಸದ

ದುರ್ಬಲ ಆರ್ಥಿಕತೆ: ಕಾಗೇರಿ

ಕಲಬುರಗಿ: ರಾಜ್ಯದ ರಾಜಕೀಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನಡುವಿನ ಒಳ ಜಗಳದಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳೇ ಹಿನ್ನಡೆಯಾಗುತ್ತಿವೆ ಎಂದು ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆರೋಪಿಸಿದ್ದಾರೆ.

ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ತಮ್ಮ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿಎಂ ಸ್ಥಾನವನ್ನು ಹೇಗೆ ಪಡೆಯಬೇಕು ಎಂಬ ಚಿಂತನೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಈ ಇಬ್ಬರ ನಡುವಿನ ಕಚ್ಚಾಟದಿಂದ ರಾಜ್ಯದ ಆರ್ಥಿಕ ಸ್ಥಿತಿ ದುರ್ಬಲವಾಗುತ್ತಿದ್ದು, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಟೀಕಿಸಿದರು.

ಇದೇ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧವೂ ಅವರು ವಾಗ್ದಾಳಿ ನಡೆಸಿದ ಅವರು, ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಮಾತನಾಡುವುದೇ ಸಾಧನೆ ಎಂಬ ಭ್ರಮೆಯಲ್ಲಿ ಇರಬಾರದು ಎಂದ ಅವರು, ಕಳೆದ ಮೂರು ವರ್ಷಗಳಲ್ಲಿ ಐಟಿಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವರು ಮಾಡಿದ ಸಾಧನೆಗಳ ಬಗ್ಗೆ ಸ್ಪಷ್ಟನೆ ನೀಡಲಿ ಎಂದು ಸವಾಲು ಹಾಕಿದರು.



ಕಲಬುರಗಿಯಲ್ಲಿ ಕುಡಿಯುವ ನೀರಿನ ಕೊರತೆ, ಹಾಳಾದ ರಸ್ತೆಗಳು ಹಾಗೂ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಉಲ್ಲೇಖಿಸಿದ ಅವರು, ವಿವಿಧ ಮಾಫಿಯಾ ಚಟುವಟಿಕೆಗಳನ್ನೂ ನಿಯಂತ್ರಿಸಲು ಕ್ರಮ ಕೈಗೊಳ್ಳಲಿ ಮೊದಲು ಎಂದು ಸಲಹೆ ನೀಡಿದರು. ಇಸ್ರೇಲ್-ಇರಾನ್ ಯುದ್ಧ ಪರಿಸ್ಥಿತಿಯ ಹಿನ್ನೆಲೆ ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ, ಕೊರೋನಾ ಸಮಯದಂತೆ ಎಚ್ಚರಿಕೆಯಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕಾಗಿದೆ. ಕೇಂದ್ರ ಸರ್ಕಾರದ ದೂರದೃಷ್ಟಿಯಿಂದ ದೇಶದಲ್ಲಿ ಸ್ಥಿರತೆಯಿದ್ದು, ಪಕ್ಕದ ಮನೆಯಲ್ಲಿ ಬೆಂಕಿ ಬಿದ್ದಾಗ ಚಳಿ ಕಾಯಿಸಿಕೊಳ್ಳುವಂತ ಕೆಲಸವನ್ನು ವಿಪಕ್ಷಗಳು ಮಾಡಬಾರದು. ಯುದ್ಧದಂತಹ ಗಂಭೀರ ವಿಷಯವನ್ನು ರಾಜಕೀಯಕ್ಕೆ ಬಳಸಬಾರದು ಎಂದು ಕಾಗೇರಿ ಎಚ್ಚರಿಸಿದ ಅವರು, ಪೆಟ್ರೋಲ್-ಡೀಸೆಲ್ ಸಮಸ್ಯೆ ಇದ್ದರೆ ರಾಜ್ಯ ಸರ್ಕಾರವೂ ತನ್ನ ಹೊಣೆಗಾರಿಕೆ ನಿರ್ವಹಿಸಬೇಕು ಎಂದು ಹೇಳಿದರು.

ಬಾಗಲಕೋಟೆ ಹಾಗೂ ದಾವಣಗೆರೆ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ವಿಶ್ವಾಸ ಬಲವಾಗಿದೆ. ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿನ ಕಾಂಗ್ರೆಸ್ ಆಡಳಿತದಿಂದ ಜನರು ಭ್ರಮನಿರಸನಗೊಂಡಿದ್ದಾರೆ. ಹೀಗಾಗಿ ಬಿಜೆಪಿ ಗೆಲುವು ಸಾಧಿಸಲಿದೆ.
■ **ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ**

ಹುಬ್ಬಳ್ಳಿಯಲ್ಲಿ ಲವ್ ಜಿಹಾದ್ ಯತ್ನ

ಪುಟ 0➜ಸದ್ಯ ಪೊಲೀಸ್ ವಶದಲ್ಲಿರುವ ಸಮೀರ್ ಮುಲ್ಲಾ ಗಾಯಗೊಂಡಿದ್ದರಿಂದ ನಗರದ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಜಿಮ್‌ನಲ್ಲಿ ಸಮೀರ್ ಮುಲ್ಲಾ ನನ್ನೊಂದಿಗೆ ಸಲುಗೆ ಬೆಳೆಸಿದ್ದಾನೆ. ನಂಬಿಸಿ ಮನೆಗೆ ಕರೆದು ಆತ ಪಾನೀಯದಲ್ಲಿ ಏನೋ ಬೆರೆಸಿ, ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾನೆ. ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಂಡು ವೈರಲ್ ಮಾಡುವುದಾಗಿ ಬೆದರಿಕೆ ಹಾಕಿ, ಕಿರುಕುಳ ನೀಡುತ್ತಿದ್ದ. ಇದೇ ರೀತಿ ಬೇರೆ ಯುವತಿಯರ ಜತೆ ಮಾಡಿದ್ದಾನೆ ಎಂದು ಆರೋಪಿಸಿ ಯುವತಿ ವಿಡಿಯೋ ಮಾಡಿ ಹರಿಬಿಟ್ಟಿದ್ದಾಳೆ.

ಈ ಪ್ರಕರಣದ ಕುರಿತು ಯುವತಿ ಕುಟುಂಬಸ್ಥರು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಯುವಕ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಯುವಕ ಕುಟುಂಬಸ್ಥರು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸಮೀರ್ ಮುಲ್ಲಾ ಎಂಬ ಯುವಕನ ಜಿಮ್‌ಗೆ ನಮ್ಮ ಮಗಳು ಹೋಗುತ್ತಿದ್ದಳು. ಯುವಕ ನನ್ನ ಮಗಳೊಂದಿಗೆ ಸಲುಗೆ ಬೆಳೆಸಿ, ಒಂದು ದಿನ ಪಾನೀಯದಲ್ಲಿ ಏನೋ ಬೆರೆಸಿ ಅವಳೊಂದಿಗೆ ಅಸಭ್ಯವಾಗಿ ವರ್ತಿಸಿದ್ದಲ್ಲದೇ ಆಗಾಗ ಕಿರುಕುಳ ನೀಡಿ, ಬೆದರಿಕೆ ಹಾಕಿದ್ದಾನೆ ಎಂದು ಯುವತಿ ತಾಯಿ ಆರೋಪಿಸಿದ್ದಾರೆ.

ಸಮೀರ್ ಕುಟುಂಬದಿಂದ ಬೆದರಿಕೆ: ಅಷ್ಟೇ ಅಲ್ಲದೇ ಶುಕ್ರವಾರ ಬೆಳಗ್ಗೆ ಅವನ ಕುಟುಂಬಸ್ಥರು ಮನೆಗೆ ಏಕಾಏಕಿ ಮುತ್ತಿಗೆ ಹಾಕಿ ನನ್ನ ಮಗಳನ್ನು ಹಾಗೂ ನಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ. ಜಿಮ್‌ನಲ್ಲಿ ಅನೇಕ ಹುಡುಗಿಯರ ತಲೆ ಕೆಡಿಸುತ್ತಿದ್ದಾನೆ. ಲವ್ ಜಿಹಾದ್‌ಗೆ ಯತ್ನಿಸುತ್ತಿದ್ದು, ಆತನಿಗೆ ಶಿಕ್ಷೆಯಾಗಬೇಕು. ನನ್ನ ಮಗಳಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿದರು.

ಈ ಆರೋಪವನ್ನು ತಳ್ಳಿಹಾಕಿದ ಯುವಕನ ಸಹೋದರಿ ಶೈಸಿನ್ ಮುಲ್ಲಾ, ಸಮೀರ್ ಹಾಗೂ ಯುವತಿ ಕಳೆದ ಮೂರು ವರ್ಷದಿಂದ ಪ್ರೀತಿಸುತಿದ್ದರು. ಅವಳು ನಮ್ಮೊಂದಿಗೆ ಶಾಪಿಂಗ್, ಸಮಾರಂಭ ಹಾಗೂ ಪಾರ್ಟಿಗಳಿಗೆ ಬಂದಿದ್ದಾಳೆ. ಆದರೆ, ಈಗ ಆ ಕುಟುಂಬಸ್ಥರು ಲವ್ ಜಿಹಾದ್ ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ಶುಕ್ರವಾರ ಬೆಳಗ್ಗೆ ಕುಟುಂಬಸ್ಥರು ಅವರ ಸಮಾಜದ ನೂರು ಜನರನ್ನು ಕರೆದುಕೊಂಡು ಮನೆಗೆ ಬಂದು ನಮ್ಮ ಸಹೋದರ ಮೇಲೆ ಹಲ್ಲೆ ನಡೆಸಿ ಅಪಹರಿಸಿಕೊಂಡು ಹೋಗಿದ್ದಾರೆ. ಸಹೋದರ ಏನು ತಪ್ಪು ಮಾಡಿಲ್ಲ. ಆತನ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

6ನೇ ತರಗತಿಯಿಂದ 3ನೇ ಭಾಷೆ ಕಡ್ಡಾಯ

ಪುಟ 0➜ಒಂದೇ ಭಾಷೆಯನ್ನು ಒಂದಕ್ಕಿಂತ ಹೆಚ್ಚು ಹಂತಗಳಲ್ಲಿ ಕಲಿಯಲು ಅವಕಾಶ ಇರುವುದಿಲ್ಲ; ಪಠ್ಯಪುಸ್ತಕಗಳು ಒಂದೇ ಇದ್ದರೂ ಪಠ್ಯಕ್ರಮ ಹಾಗೂ ಮೌಲ್ಯಮಾಪನ ವಿಧಾನಗಳಲ್ಲಿ ವ್ಯತ್ಯಾಸ ಇರುತ್ತದೆ.

ಇಂಗ್ಲಿಷ್ ವಿದೇಶಿ ಭಾಷೆ: ಹೊಸ ಪಠ್ಯಕ್ರಮದಲ್ಲಿ ಇಂಗ್ಲಿಷ್ ಭಾಷೆಯನ್ನು ವಿದೇಶಿ ಭಾಷೆ ಎಂದು ವರ್ಗೀಕರಿಸಿರುವುದು ಪ್ರಮುಖ ಬದಲಾವಣೆಯಾಗಿದ್ದು, ಮೂರು ಭಾಷೆಗಳಲ್ಲೂ ಒಂದೇ ವಿದೇಶಿ ಭಾಷೆಯನ್ನು ಮಾತ್ರ ಆಯ್ಕೆ ಮಾಡಬಹುದಾಗಿದೆ. ಇದರ ಪರಿಣಾಮವಾಗಿ, ವಿದ್ಯಾರ್ಥಿಗಳು ಇಂಗ್ಲಿಷ್ ಜತೆಗೆ ಮತ್ತೊಂದು ವಿದೇಶಿ ಭಾಷೆಯನ್ನು ಆಯ್ಕೆ ಮಾಡುವ ಅವಕಾಶ ಸೀಮಿತವಾಗಲಿದೆ. ಮಾತ್ರವಲ್ಲದೇ ಮೂರು ಭಾಷೆಗಳಲ್ಲೂ ಕನಿಷ್ಠ ಎರಡು ಭಾಷೆಗಳು ಭಾರತೀಯ ಮೂಲದವಾಗಿರಬೇಕು ಎಂಬ ನಿಯಮವನ್ನು ಪಠ್ಯಕ್ರಮ ಸ್ಪಷ್ಟಪಡಿಸಿದೆ.

ಸಿಟಿ, ಎಐ ಕಲಿಕೆ

ಹೊಸ ಪಠ್ಯಕ್ರಮದಲ್ಲಿ ಕಂಪ್ಯೂಟೇಷನಲ್ ಥಿಂಕಿಂಗ್ (ಸಿಟಿ), ಕೃತಕ ಬುದ್ಧಿಮತ್ತೆ(ಎಐ), ವೃತ್ತಿಪರ ಶಿಕ್ಷಣ, ಕಲೆ ಹಾಗೂ ದೈಹಿಕ ಶಿಕ್ಷಣಗಳನ್ನು ಕಡ್ಡಾಯವಾಗಿ ಸೇರಿಸಲಾಗಿದೆ. ಸಿಟಿ ಮತ್ತು ಎಐ ವಿಷಯಗಳು ಆರಂಭದಲ್ಲಿ ಒಳಮೌಲ್ಯಮಾಪನದ ಮೂಲಕ ಪರಿಚಯವಾಗಲಿದ್ದು, 2029ರಿಂದ ಬೋರ್ಡ್ ಪರೀಕ್ಷೆಯ ಕಡ್ಡಾಯ ವಿಷಯಗಳಾಗಲಿವೆ. ಸಾಮಾಜಿಕ ವಿಜ್ಞಾನ ವಿಷಯದಲ್ಲಿ ಪ್ರಕರಣ ಅಧ್ಯಯನ, ನಕ್ಷೆ ಕಾರ್ಯ ಮತ್ತು ಡೇಟಾ ವಿಶ್ಲೇಷಣೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಮೌಲ್ಯಮಾಪನ ಮಾದರಿಯಲ್ಲಿ ಯಾವುದೇ ಬದಲಾವಣೆ ಇಲ್ಲದೆ 80 ಅಂಕ ಬೋರ್ಡ್ ಪರೀಕ್ಷೆ ಹಾಗೂ 20 ಅಂಕ ಒಳಮೌಲ್ಯಮಾಪನ ಮುಂದುವರಿಯಲಿದೆ.

ಬಹು ಭಾಷಾ ಆಯ್ಕೆ

ಪುಟ 0➜**ವಿದೇಶದಲ್ಲಿರುವ ಸಿಬಿಎಸ್‌ಇ ಶಾಲೆಗಳಿಗೆ ಎರಡು ಭಾರತೀಯ ಭಾಷೆಗಳ ಬದಲು ಒಂದೇ ಭಾರತೀಯ ಭಾಷೆ ಕಲಿಸುವ ಸಡಿಲಿಕೆ ನೀಡಲಾಗಿದೆ. ರಾಷ್ಟ್ರೀಯ ಕರಿಕಲಮ್ ಫ್ರೇಮ್ವರ್ಕ್ ಫಾರ್ ಎಜುಕೇಶನ್ 2023 ಶಿಫಾರಸುಗಳ ಆಧಾರದ ಮೇಲೆ ರೂಪುಗೊಂಡ ಈ ಪಠ್ಯಕ್ರಮವು ಮುಂದಿನ ಐದು ವರ್ಷಗಳಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆಯ ರೂಪುರೇಷೆಯನ್ನೇ ಬದಲಾಯಿಸುವ ಪ್ರಮುಖ ಹೆಜ್ಜೆಯಾಗಲಿದೆ.**

ಪರೀಕ್ಷಾ ಮಾದರಿಯಲ್ಲಿ ಬದಲಾವಣೆ: ಪರೀಕ್ಷಾ ಮಾದರಿಯಲ್ಲೂ ಹಂತ ಹಂತವಾಗಿ ಬದಲಾವಣೆ ತರಲಾಗುತ್ತಿದೆ. 2027ರ ಬೋರ್ಡ್ ಪರೀಕ್ಷೆಗಳು ಹಳೆಯ ಪಠ್ಯಪುಸ್ತಕಗಳ ಆಧಾರದಲ್ಲಿಯೇ ನಡೆಯಲಿದ್ದು, 2028ರಿಂದ ಆರ್1 ಮತ್ತು ಆರ್2 ಭಾಷೆಗಳಿಗಾಗಿ ಎರಡು ದಿನಗಳಲ್ಲಿ ಪರೀಕ್ಷೆಗಳು ನಡೆಯಲಿವೆ. 2031ರಿಂದ ಮೂರು ದಿನಗಳಲ್ಲಿ ಆರ್1, ಆರ್2 ಮತ್ತು ಆರ್3 ಭಾಷೆಗಳಿಗಾಗಿ ಪ್ರತ್ಯೇಕ ಪರೀಕ್ಷೆಗಳು ನಡೆಯಲಿವೆ.

ಎರಡು ಮಟ್ಟದ ವ್ಯವಸ್ಥೆ: ಇದೇ ವೇಳೆ, 2026-27ರಿಂದ 9ನೇ ತರಗತಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಎರಡು ಮಟ್ಟದ ವ್ಯವಸ್ಥೆ ಪರಿಚಯಿಸಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿಗಳು 80 ಅಂಕಗಳ ಸಾಮಾನ್ಯ ಪರೀಕ್ಷೆ ಬರೆಯಬೇಕಾಗಿದ್ದು, ಹೆಚ್ಚುವರಿ ಸಾಮರ್ಥ್ಯ ಹೊಂದಿರುವವರು 25 ಅಂಕಗಳ ಅಡ್ವಾನ್ಸ್ ಪರೀಕ್ಷೆ ಬರೆಯಬಹುದಾಗಿದೆ. ಈ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಸೇರಿಸಲಾಗುವುದಿಲ್ಲ, ಆದರೆ, ಪ್ರತ್ಯೇಕವಾಗಿ ಅಂಕಪಟ್ಟಿಯಲ್ಲಿ ಉಲ್ಲೇಖಿಸಲಾಗುತ್ತದೆ.

ಭಾರತದಲ್ಲಿ ಪಿಒಕೆ ವಿಲೀನ ಶೀಘ್ರ

ಪುಟ 0➜ಆದರೆ ಕಾಶ್ಮೀರದಲ್ಲಿ ಈಗ ಭಯದ ವಾತಾವರಣವಿಲ್ಲದ ಕಾರಣ ಎಲ್ಲರೂ ಭೇಟಿ ನೀಡಬೇಕೆಂದು ನಾನು ಹೇಳಲು ಬಯಸುತ್ತೇನೆ ಎಂದರು.

ಮೋದಿ ಮಧ್ಯಸ್ಥಿಕೆಯಿಂದ ಯುದ್ಧ ಅಂತ್ಯಗೊಂಡು ಶಾಂತಿ: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕುರಿತು ಮಾತನಾಡಿದ ಅವರು, ಯುದ್ಧಗಳು ಎಲ್ಲರಿಗೂ ಹಾನಿ ಮಾಡುತ್ತವೆ; ಅವು ವಿನಾಶದ ಸಂಕೇತ. ಆದರಿಂದ ಯಾರಿಗೂ ಒಳಿತಾಗುವುದಿಲ್ಲ. ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ನನಗೆ ಭರವಸೆ ಇದೆ ಮತ್ತು ದೇವರು ಬಯಸಿದರೆ, ಅವರು ಮಧ್ಯಸ್ಥಿಕೆ ವಹಿಸುತ್ತಾರೆ ಮತ್ತು ಯುದ್ಧವು ಶೀಘ್ರದಲ್ಲೇ ಕೊನೆಗೊಳ್ಳುತ್ತದೆ. ಶಾಂತಿ ಮತ್ತು ನೆಮ್ಮದಿ ಇರುತ್ತದೆ ಎಂದು ಇಲ್ಯಾಸಿ ನುಡಿದರು.

ಇಂದಿನ ಕಾಶ್ಮೀರ ಅತ್ಯುತ್ತಮ

ಪುಟ 0➜**ಇಲ್ಲಿ ಯುವಕರು, ಮಕ್ಕಳು ಕಲ್ಲು ಎಸೆಯುತ್ತಿದ್ದ ಕಾಲವಿತ್ತು. ಆದರೆ ಇಂದು ಅವರ ಕೈಯಲ್ಲಿ ಪೆನ್ನುಗಳಿವೆ. ಅವರು ಅಧ್ಯಯನ ಮಾಡುತ್ತಿದ್ದಾರೆ ಎಂಬುದನ್ನು ಅಹ್ಮದ್ ಇಲ್ಯಾಸಿ ಬೊಟ್ಟು ಮಾಡಿದರು.**

ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯಕ್ಕೆ ಬಲ

ಪುಟ 0➜ಈ ಮೂಲಕ ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯ (ಭೂಮಿ, ಗಗನ, ಸಮುದ್ರ) ಇನ್ನಷ್ಟು ಬಲಿಷ್ಠಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಅತ್ಯಂತ ರಹಸ್ಯವಾಗಿರುವ ಎಸ್‌ಎಸ್‌ಬಿಎನ್ (ಶಿಪ್ ಸಬ್‌ಮರ್ಸಿಬಲ್ ಬ್ಯಾಲಿಸ್ಟಿಕ್ ನ್ಯೂಕ್ಲಿಯರ್) ಯೋಜನೆಯಲ್ಲಿ ನಿರ್ಮಿತವಾದ ಈ ನೌಕೆ, ಹಲವು ತಿಂಗಳ ಸಮುದ್ರ ಪರೀಕ್ಷೆಗಳ ನಂತರ ಕಾರ್ಯಾಚರಣೆಗೆ ಸಜ್ಜಾಗಿದೆ. ಈ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಭಾಗವಹಿಸಿದ್ದರು. ಭಾರತದ ಮೊದಲ ಅಣುಶಕ್ತಿ ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಅರಿಹಂತ 2016ರಲ್ಲಿ ಸೇರ್ಪಡೆಯಾಗಿದ್ದು, ನಂತರ 2024ರಲ್ಲಿ ಐಎನ್‌ಎಸ್ ಅರಿಘಾಟ್ ಸೇರಿತು. ಈಗ ಐಎನ್‌ಎಸ್ ಅರಿದಮನ್ ಸೇರ್ಪಡೆಯಿಂದ ದೇಶದ ಸಮುದ್ರಾಧಾರಿತ ಅಣು ತಡೆ ಸಾಮರ್ಥ್ಯವು ಗಮನಾರ್ಹವಾಗಿ ವೃದ್ಧಿಯಾಗಿದೆ.

ಭಾರತವು ಅಮೆರಿಕ, ರಷ್ಯಾ, ಯುಕೆ, ಫ್ರಾನ್ಸ್ ಮತ್ತು ಚೀನಾ ಸೇರಿದಂತೆ ಅಣುಶಕ್ತಿ ಜಲಾಂತರ್ಗಾಮಿ ಹೊಂದಿರುವ ಕೆಲವು ದೇಶಗಳ ಪಟ್ಟಿಗೆ ಸೇರಿದೆ. ಈ ನೌಕೆಗಳು ದೂರದಿಂದಲೇ ಶತ್ರುಗಳ ಮೇಲೆ ಅಣು ದಾಳಿ ನಡೆಸುವ ಸಾಮರ್ಥ್ಯ ಹೊಂದಿದ್ದು, ದೇಶದ ಭದ್ರತೆಗೆ ಪ್ರಮುಖವಾಗಿವೆ. 1998ರ ಪೋಖ್ರಾಣ್ ಅಣು ಪರೀಕ್ಷೆಗಳ ನಂತರ ಭಾರತ 'ನೋ ಫಸ್ಟ್ ಯೂಸ್' ನೀತಿಯನ್ನು ಅನುಸರಿಸುತ್ತಿದ್ದು, 'ಕ್ರೆಡಿಬಲ್ ಮಿನಿಮಮ್ ಡಿಟರೆನ್ಸ್' ತತ್ವವನ್ನು ಮುಂದುವರಿಸಿದೆ. ಈ ಹಿನ್ನಲೆಯಲ್ಲಿ ಐಎನ್‌ಎಸ್ ಅರಿದಮನ್ ಸೇರ್ಪಡೆ ಮಹತ್ವದ ಹೆಜ್ಜೆ ಎಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಕಲಬುರಗಿಯಲ್ಲಿ ಮಾಜಿ ಸಚಿವರ ಅಳಿಯನ ಹತ್ಯೆ

ಪುಟ 0➜ತಡರಾತ್ರಿ ವೇಳೆ ಆಟೋದಲ್ಲಿ ಬಂದ ಮೂವರ ತಂಡ, ಅನಿಲ ಅವರ ಕಚೇರಿಗೆ ನುಗ್ಗಿ ಮಾರಕಾಸ್ತ್ರಗಳಿಂದ ಭೀಕರ ಹಲ್ಲೆ ನಡೆಸಿದೆ. ದಾಳಿಯಿಂದ ಗಂಭೀರವಾಗಿ ಗಾಯಗೊಂಡ ಅನಿಲ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ನಂತರ ಆರೋಪಿಗಳು ಪರಾರಿಯಾಗಿದ್ದಾರೆ. ಹಣಕಾಸು ವ್ಯವಹಾರ ಸಂಬಂಧಿತ ವೈಷಮ್ಯವೇ ಹತ್ಯೆಗೆ ಕಾರಣವಾಗಿರಬಹುದು ಎಂದು ಪ್ರಾಥಮಿಕ ಶಂಕೆ ವ್ಯಕ್ತವಾಗಿದೆ. ಮಾಹಿತಿ ತಿಳಿದು ಸ್ಥಳಕ್ಕೆ ಪೊಲೀಸ್ ಆಯುಕ್ತ ಶರಣಪ್ಪ ಢಗೆ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸೂಕ್ಷ್ಮ ಪರಿಶೀಲನೆಗಾಗಿ ಸೂಕೊ ತಂಡ ಹಾಗೂ ಡಾಗ್ ಸ್ಕ್ವಾಡ್ ನಿಯೋಜಿಸಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಶೋಧಕಾರ್ಯ ತೀವ್ರಗೊಳಿಸಿದ್ದಾರೆ. ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹರಿತವಾದ ಆಯುಧಗಳಿಂದ ಕೊಲೆ ಮಾಡಲಾಗಿದೆ. ಹಣಕಾಸಿನ ವಿಷಯಕ್ಕೆ ಕೊಲೆ ನಡೆದಿದೆ ಎಂಬ ಪ್ರಾಥಮಿಕ ಹಂತದ ಮಾಹಿತಿ ಲಭಿಸಿದ್ದು, ಆರೋಪಿಗಳ ಬಂಧನದ ಬಳಿಕವೇ ಕೊಲೆಗೆ ನಿಖರ ಮಾಹಿತಿ ಒದಗಲಿದೆ. ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತಂಡ ರಚನೆ ಮಾಡಲಾಗಿದ್ದು, ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು.
■ **ಡಾ.ಶರಣಪ್ಪ ಎಸ್.ಡಿ., ನಗರ ಕಮಿಷನರ್**

ಬಿಗಿ ಭದ್ರತೆ

ಪುಟ 0➜ಕೇಂದ್ರ ಸರ್ಕಾರದ ವಿಶೇಷ ಜಾಗೃತ ತಂಡಗಳು ಹೆಚ್ಚಿನ ನಿಗಾ ವಹಿಸಿವೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಬೆಳಗ್ಗೆ 10 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು 11.30ಕ್ಕೆ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಮಧ್ಯಾಹ್ನ 2.30ರ ಸುಮಾರಿಗೆ ಧಾರ್ಮಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ನಿವೃತ್ತ ನ್ಯಾ.ಸಂತೋಷ್ ಹೆಗ್ಡೆ ಆರೋಗ್ಯದಲ್ಲಿ ಏರುಪೇರು

ಪುಟ 0➜ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವಾಗಲೇ ಸ್ವಲ್ಪಮಟ್ಟಿಗೆ ಅಸ್ವಸ್ಥರಾಗಿದ್ದರು, ಹಾಗಾಗಿ ತುಸು ಮಾತನಾಡಿ ಆಸೀನರಾದರು. ಆಗ ಅಸ್ವಸ್ಥತೆ ತೀವ್ರವಾದಾಗ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸಹಾಯದೊಂದಿಗೆ ಕಾರ್ಯಕ್ರಮದಿಂದ ತೆರಳುತ್ತಿರುವಾಗ ವೇದಿಕೆಯಲ್ಲಿಯೇ ಕುಸಿದು ಬಿದ್ದರು.

ಕೂಡಲೇ ವೇದಿಕೆಯಲ್ಲಿ ನೆರೆದಿದ್ದ ಯು.ಟಿ. ಖಾದರ್ ಇನ್ನಿತರ ಗಣ್ಯರು, ಗಾಳಿ ಬೀಸಿ ತುರ್ತು ಚಿಕಿತ್ಸೆ ನೀಡಿದರು, ಬಳಿಕ ಗೈಡ್ಸ್ ಅವರು ಆಂಬುಲೆನ್ಸ್ ಕರೆಯಲು ಮುಂದಾದರು, ಆಗ ಯು.ಟಿ. ಖಾದರ್ ಅವರು ತಮ್ಮದೇ ವಾಹನದಲ್ಲಿ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು. ವಯೋಸಹಜ ಸುಸ್ತು ಅಥವಾ ರಕ್ತದೊತ್ತಡದ ಏರುಪೇರಿನಿಂದ ಅವರು ಅಸ್ವಸ್ಥರಾಗಿರಬಹುದು ಎಂದು ತಿಳಿದುಬಂದಿದೆ.

ಸಿಎಸ್‌ಗೆ ರಾಜ್ಯಪಾಲರ ಪತ್ರ

ಪುಟ 0➜ಹೀಗಾಗಿ ಗ್ರೇಡ್ ನೀಡಿದರೆ ಶೈಕ್ಷಣಿಕ ಪ್ರಾಮುಖ್ಯತೆ ಕಡಿಮೆ ಮಾಡಬಹುದು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಸರ್ಕಾರದ ಈ ನಿರ್ಧಾರ ವಿದ್ಯಾರ್ಥಿಗಳು ಕಲಿಯುವ ಆಸಕ್ತಿಯ ಮೇಲೆ ಪರಿಣಾಮ ಬೀರಬಹುದು. ಶಿಕ್ಷಣದ ಮೇಲೆ ಬೀರುವ ಪರಿಣಾಮ ಬಗ್ಗೆ ಪೋಷಕರಿಗೂ ಆತಂಕ ಇದ್ದು, ರಾಜ್ಯಪಾಲರು ಈ ವಿಷಯವನ್ನು ಗಮನಿಸಿದ್ದಾರೆ. ಹೀಗಾಗಿ ಶೈಕ್ಷಣಿಕ, ಆಡಳಿತಾತ್ಮಕ ಅಂಶ ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸಂಬಂಧಿತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಶೈಕ್ಷಣಿಕ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತ ಕ್ರಮಕೈಗೊಳ್ಳಿ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೂ ಸಲ್ಲಿಕೆಯಾಗಿರುವ ನಡುವೆ ರಾಜ್ಯಪಾಲರ ಕಡೆಯಿಂದ ಬಂದಿರುವ ಈ ಪತ್ರ ಪ್ರಾಮುಖ್ಯತೆ ಪಡೆದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಬಾರದು ಮತ್ತು ಅಂಕ ಪಟ್ಟಿಯಿಂದ ಹೊರಗಿಡುವಂತೆ ವಿವಿಧ ಕನ್ನಡ ಪರ ಸಂಘಟನೆಗಳು ಸರ್ಕಾರಕ್ಕೆ ಒತ್ತಾಯಿಸಿದ್ದವು. ಆ ಬೆನ್ನಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 525 ಅಂಕಗಳು ನಿಗದಿ ಮಾಡಿ, ತೃತೀಯ ಭಾಷೆಯ ಅಂಕಕ್ಕೆ ಸರ್ಕಾರ ಕೊಕ್ ನೀಡಿತ್ತು. ತೃತೀಯ ಭಾಷೆ ಪರೀಕ್ಷೆಯ ಅಂಕವನ್ನು ಗ್ರೇಡ್ ಮೂಲಕ ನೀಡಲಾಗುತ್ತದೆ. ಆದರೆ, ವಿದ್ಯಾರ್ಥಿಗಳು ತೃತೀಯ ಭಾಷೆಯ ಪರೀಕ್ಷೆಯನ್ನು ಬರೆಯುವುದು ಕಡ್ಡಾಯ ಎಂದು ಶಿಕ್ಷಣ ಇಲಾಖೆ ಹೇಳಿರುವುದು ಭಾರೀ ಚರ್ಚೆಗೂ ಗ್ರಾಸವಾಗಿತ್ತು.

ಇರಾನ್ ಸೇತುವೆ ಧ್ವಂಸ

ಪುಟ 0➜ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಶಿಲಾಯುಗಕ್ಕೆ ತಳ್ಳುವ' ಬೆದರಿಕೆಯನ್ನು ತೀವ್ರವಾಗಿ ಖಂಡಿಸಿ, ಇದು ಅಜ್ಞಾನ ಮತ್ತು ಯುದ್ಧ ಅಪ ರಾಧದ ಉದ್ದೇಶವನ್ನು ತೋರಿಸುತ್ತದೆ ಎಂದು ಹೇಳಿದೆ. ಅಮೆರಿಕ ತನ್ನ ಸೈನಿಕ ಕಾರ್ಯಾಚರಣೆಗಳನ್ನು ಮುಂದುವರಿಸುವುದಾಗಿ ಹೇಳಿದ್ದು, ಇರಾನ್ ತನ್ನ ಪ್ರತಿರೋಧದ ನಿಲುವನ್ನು ಮುಂದುವರಿಸಿದೆ. ಈ ಬೆಳವಣಿಗೆಗಳಿಂದ ಮಧ್ಯಪ್ರಾಚ್ಯದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾಗುವ ಸಾಧ್ಯತೆ ವ್ಯಕ್ತವಾಗಿದೆ.

ಹಾನಿ, ಸಾವಿನ ಸಂಖ್ಯೆ ಹೆಚ್ಚಳ

ಪುಟ 0➜**ಅಮೆರಿಕ 13 ಸೈನಿಕರನ್ನು ಕಳೆದುಕೊಂಡಿದ್ದು, ಇಸ್ರೇಲ್‌ನಲ್ಲಿ 19 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ಭೂದಾಳಿಯಿಂದ 1,300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಲಕ್ಷಾಂತರ ಜನರು ಸ್ಥಳಾಂತರಗೊಂಡಿದ್ದಾರೆ. ಒಟ್ಟಾರೆ, ಯುದ್ಧದ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುತ್ತಿದ್ದು, ಸೈನಿಕ ದಾಳಿಗಳು ಮತ್ತು ಆರ್ಥಿಕ ಪರಿಣಾಮಗಳು ಜಾಗತಿಕ ಮಟ್ಟದಲ್ಲಿ ಆತಂಕ ಉಂಟುಮಾಡುತ್ತಿವೆ. ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿದರೂ ಶಾಂತಿಯ ಸಾಧ್ಯತೆ ಇನ್ನೂ ಅನಿಶ್ಚಿತವಾಗಿಯೇ ಇದೆ.**

ಅಮೆರಿಕ ಸೇನೆ ಉನ್ನತ ಅಧಿಕಾರಿಗಳ ಪದಚ್ಯುತಿ

ಪುಟ 0➜ಇದೇ ವೇಳೆ ಅಮೆರಿಕ ಇರಾನ್ ವಿರುದ್ಧ ಯುದ್ಧ ನಡೆಸುತ್ತಿರುವುದರಿಂದ ಈ ಕ್ರಮ ಹೆಚ್ಚು ಗಮನ ಸೆಳೆಯುತ್ತಿದೆ. ಜನರಲ್ ರ್‍ಯಾಂಡಿ ಜಾರ್ಜ್ ಅವರು ತಕ್ಷಣದಿಂದಲೇ ಸೇನಾ ಮುಖ್ಯಸ್ಥ ಹುದ್ದೆಯಿಂದ ನಿವೃತ್ತಿಯಾಗಲಿದ್ದಾರೆ. ಅವರು 2023ರಿಂದ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಜತೆಗೆ ಜನರಲ್ ಡೇವಿಡ್ ಹೋಡ್ನೆ ಮತ್ತು ಮೇಜರ್ ಜನರಲ್ ವಿಲಿಯಂ ಗ್ರೀನ್ ಅವರನ್ನು ಕೂಡ ವಜಾಗೊಳಿಸಲಾಗಿದೆ. ಇವರ ಬದಲಿಗೆ ಜನರಲ್ ಕ್ರಿಸ್ಟೋಫರ್ ಲಾನೇವ್ ಅವರನ್ನು ತಾತ್ಕಾಲಿಕ ಸೇನಾ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಈ ನಾಯಕತ್ವ ಬದಲಾವಣೆಗಳು ಇರಾನ್ ವಿರುದ್ಧದ ಯುದ್ಧ ಮುಂದುವರಿದಿರುವ ಸಮಯದಲ್ಲಿ ಮಾಡಿರುವುದು ವಿಶೇಷ. ಮಧ್ಯಪ್ರಾಚ್ಯಕ್ಕೆ ಅಮೆರಿಕದ ಸೈನ್ಯವನ್ನು ಹೆಚ್ಚಾಗಿ ಕಳುಹಿಸಲಾಗುತ್ತಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯುದ್ಧದ ಅವಧಿ ಬಗ್ಗೆ ಸ್ಪಷ್ಟತೆ ನೀಡದಿದ್ದರೂ ಮುಂದಿನ ವಾರಗಳಲ್ಲಿ ದಾಳಿಗಳು ತೀವ್ರವಾಗಲಿವೆ ಎಂದು ಹೇಳಿದ್ದಾರೆ.

ಗಣತಿಗೆ ಸಚಿವಾಲಯ ಸಿಬ್ಬಂದಿ ಬೇಡ: ವಿಶಾಲಾಕ್ಷಿ

ಬೆಂಗಳೂರು: ವಿಧಾನಸಭೆ ಸಚಿವಾಲಯದ ಅಧಿಕಾರಿ, ನೌಕರರನ್ನು ಜನಗಣತಿ ಕಾರ್ಯಗಳಿಗೆ ಯಾವುದೇ ಕಾರಣಕ್ಕೂ ಬಿಟ್ಟು ಕೊಡಬಾರದೆಂದು ಸಭಾಧ್ಯಕ್ಷರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರಿಗೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪತ್ರ ಬರೆದಿದ್ದಾರೆ.



ವಿಧಾನಸಭೆ ಸಚಿವಾಲಯವು ಲೋಕಸಭಾ ಸಚಿವಾಲಯದ ಮಾದರಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಅಧೀನ ಸಂಸ್ಥೆಯಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ 3 ಅಂಗಗಳಲ್ಲಿ ಒಂದಾದ ಶಾಸಕಾಂಗದ ವ್ಯಾಪ್ತಿಗೆ ಒಳಪಡುತ್ತದೆ. ಶಾಸಕಾಂಗದ ಮುಖ್ಯಸ್ಥರು ಸಭಾಧ್ಯಕ್ಷರು. ಅದೊಂದು ಸಾಂವಿಧಾನಿಕ ಹುದ್ದೆ.

ಈ ಸಚಿವಾಲಯವು ಸಭಾಧ್ಯಕ್ಷರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಕಾರ್ಯಾಂಗಕ್ಕೆ ಮತ್ತು ವಿಧಾನಮಂಡಲಕ್ಕೆ ತನ್ನದೇ ಆದ ಮೂಲಭೂತ ವ್ಯವಸ್ಥೆಗಳಿದ್ದು, ಕಾರ್ಯಾಂಗವು ಶಾಸಕಾಂಗಕ್ಕೆ ಉತ್ತರದಾಯಿಯಾಗಿದೆ ವಿನಾ ಕಾರ್ಯಾಂಗಕ್ಕೆ ಅಧೀನವಾಗಿರುವುದಿಲ್ಲ ಎಂದೂ ಪತ್ರದಲ್ಲಿ ಹೇಳಿದ್ದಾರೆ.

ವಿಧಾನಸಭೆಯ ಸಚಿವಾಲಯದಲ್ಲಿ ಕೆಲಸ ಮಾಡುವ ಅಧಿಕಾರಿಗಳು, ನೌಕರರ ಮೇಲೆ ದ್ವಿ-ನಿಯಂತ್ರಣವು ಸಭಾಧ್ಯಕ್ಷರ ಘನತೆ ಮತ್ತು ಶಾಸಕಾಂಗ ಸಭೆಯ ಸ್ವಾತಂತ್ರ್ಯಕ್ಕೆ ಅವಮಾನಕರವಾಗಿದೆ. ಅಲ್ಲದೆ, ಸಚಿವಾಲಯದ ಕೆಲಸ ಕಾರ್ಯಗಳಿಗೆ ಹೆಚ್ಚುವರಿ ಸಿಬ್ಬಂದಿ ಮಂಜೂರಾಗಿಲ್ಲದ ಕಾರಣ ಕಾರ್ಯದೊತ್ತಡ ಹೆಚ್ಚಾಗಿದೆ. ಸಚಿವಾಲಯವು ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಕಾರ್ಯಗಳನ್ನೂ ನಿರ್ವಹಿಸಬೇಕಾಗಿದೆ ಎಂದಿದ್ದಾರೆ.

ಈ ಮಧ್ಯೆ, ಅನೇಕ ಸಚಿವರು, ಸರ್ಕಾರದ ಮುಖ್ಯ ಸಚೇತಕರು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮುಖ್ಯ ತಕರು, ಹಲವು ಶಾಸಕರು ವಿಧಾನಸಭೆ ಸಚಿವಾಲಯದ ಕಾರಿ, ನೌಕರರನ್ನು ಕಾರ್ಯಾಂಗದ ಚುನಾವಣೆ, ಮತದಾರರ ಪಟ್ಟಿ, ಹಿಂದುಳಿದ ವರ್ಗಗಳ ಜಾತಿ ಗಣತಿ, ಮತ ಎಣಿಕೆ ಮತ್ತಿತರ ಯಾವುದೇ ಕೆಲಸ ಕಾರ್ಯಗಳಿಗೆ ನಿಯೋಜಿಸುವುದಕ್ಕೆ ಅವಕಾಶ ಕಲ್ಪಿಸಬಾರದೆಂದು ಸಭಾಧ್ಯಕ್ಷರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ ಎಂದು ಪತ್ರದಲ್ಲಿ ನಮೂದಿಸಿದ್ದಾರೆ.

ಬಾಲ ಗರ್ಭಿಣಿ ಪ್ರಕರಣ: ಪೊಲೀಸರಿಗೆ ವರದಿ ನೀಡಿ

ಬೆಂಗಳೂರು: 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರಲ್ಲಿ ಗರ್ಭಧಾರಣೆ ಪ್ರಕರಣಗಳು ಗಂಭೀರ ಕಾನೂನು ವಿಷಯವಾಗಿದ್ದು, ಇಂತಹ ಪ್ರಕರಣಗಳನ್ನು ಕಡ್ಡಾಯವಾಗಿ ಪೊಲೀಸರಿಗೆ ವರದಿ ಮಾಡಬೇಕು ಎಂದು ಆರೋಗ್ಯ ಇಲಾಖೆ ಖಾಸಗಿ ಆಸ್ಪತ್ರೆಗಳಿಗೆ ಕಟ್ಟುನಿಟ್ಟಿನ ಸರ್ಕಾರ ಸೂಚನೆ ನೀಡಿದೆ.

ಮಕ್ಕಳ ಲೈಂಗಿಕ ಅಪರಾಧಗಳಿಂದ ರಕ್ಷಣೆಯ ಕಾಯ್ದೆ 2012 ಅನ್ವಯ, ಬಾಲಗರ್ಭಿಣಿ ಪ್ರಕರಣಗಳು ವರದಿ ಮಾಡಬೇಕಾದ ಅಪರಾಧಗಳಾಗಿವೆ. ಸೆಕ್ಷನ್ 19(1) ಪ್ರಕಾರ, ಯಾವುದೇ ವ್ಯಕ್ತಿಗೆ ಇಂತಹ ಅಪರಾಧ ನಡೆದಿದೆ ಅಥವಾ ನಡೆಯುವ ಸಾಧ್ಯತೆ ಇದೆ ಎಂಬ ಮಾಹಿತಿ ದೊರೆತರೆ, ಅದನ್ನು ತಕ್ಷಣವೇ ವಿಶೇಷ ಬಾಲ ನ್ಯಾಯ ಪೊಲೀಸ್ ಘಟಕ ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ನೀಡುವುದು ಕಡ್ಡಾಯವಾಗಿದೆ. ಬಾಲ ಗರ್ಭಿಣಿ ಪ್ರಕರಣಗಳು ದಾಖಲಾಗಿದೆಯಾದರೆ, ಸಂಬಂಧಿತ ವೈದ್ಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು. ವರದಿ ಮಾಡಲು ವಿಫಲವಾದಲ್ಲಿ, ವೈದ್ಯರು ಹಾಗೂ ಆಸ್ಪತ್ರೆಗಳ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಖಾಸಗಿ ಆಸ್ಪತ್ರೆಗಳಿಗೆ ಸೂಚನೆ

ಪೋಕ್ಸೋ ಪ್ರಕರಣಗಳ ವಿವರಗಳನ್ನು ಸರಿಯಾಗಿ ದಾಖಲಿಸಬೇಕು. ವೈದ್ಯಕೀಯ ದಾಖಲೆಗಳನ್ನು ಕಾನೂನುಬದ್ಧವಾಗಿ ಸಂಗ್ರಹಿಸಬೇಕು. ರೋಗಿಯ ಗೌಪ್ಯತೆಯನ್ನು ಕಾಪಾಡಬೇಕು. ತನಿಖಾ ಅಧಿಕಾರಿಗಳಿಗೆ ಅಗತ್ಯ ಸಹಕಾರ ನೀಡಬೇಕು. ವೈದ್ಯರು ಹಾಗೂ ಸಿಬ್ಬಂದಿಗೆ ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಮೂಡಿಸಬೇಕು. ಈ ಮಾರ್ಗಸೂಚಿಗಳು ತಕ್ಷಣದಿಂದಲೇ ಜಾರಿಯಾಗಿದ್ದು, ಪಾಲಿಸದಿದ್ದಲ್ಲಿ ಸಂಬಂಧಿತ ಆಸ್ಪತ್ರೆ ಹಾಗೂ ವೈದ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ತಿಳಿಸಿದ್ದಾರೆ.

ಪುಸ್ತಕ ವಿತರಣೆ



ಬಾಗಲಕೋಟೆ ನಗರ ಉಪ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿರೂರು ಗ್ರಾಮದಲ್ಲಿ ಮಹಿಳೆಯರು ಭಾರತದ ಸಂವಿಧಾನ ಹಾಗೂ ರಾಜಕೀಯ ಪುಸ್ತಕ ನೀಡಿ ಗೌರವಿಸಿದರು.

ಎಲ್ಲರಿಗೂ ಸಿಂಧ್ಯಾ ಮಾದರಿ: ಖಾದರ್

ಬೆಂಗಳೂರು: ಪಿ.ಜಿ.ಆರ್ ಸಿಂಧ್ಯಾ ಅವರಿಗೆ ಲಭಿಸಿದ ಗೌರವ ಡಾಕ್ಟರೇಟ್ ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಅವರಿಗೆ ಲಭಿಸಿದ ಗೌರವವಾಗಿದ್ದು, ಎಲ್ಲರಿಗೂ ಮಾದರಿಯಾದ ಸಿಂಧ್ಯಾ ಅವರ ವ್ಯಕ್ತಿತ್ವವನ್ನು ಯುವಕರು ಅನುಸರಿಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಕರೆ ನೀಡಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ಶುಕ್ರವಾರ ಕೊಂಡಜ್ಜಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಭಾಜನರಾದ ಡಾ.ಪಿ.ಜಿ.ಆರ್.ಸಿಂಧ್ಯ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗೌರದ ಡಾಕ್ಟರೇಟ್ ಸಿಂಧ್ಯಾ ಅವರ ವ್ಯಕ್ತಿತ್ವ, ರಾಜಕೀಯ ಕ್ಷೇತ್ರದಲ್ಲಿ ಕಪ್ಪುಚುಕ್ಕೆಯಿಲ್ಲದೇ ಮಾಡಿದ ಕೆಲಸ, ಸಾಮಾಜಿಕ ಕಳಕಳಿ, ಪರಿಶ್ರಮಕ್ಕೆ ರಾಜ್ಯದ ಜನತೆ ಗೌರವ ಅರ್ಪಿಸುವ ಪ್ರೀತಿಪೂರ್ವಕ ಗೌರವವಾಗಿದೆ ಎಂದರು.

ಶಾಸಕ ಸುರೇಶ್ ಕುಮಾರ್, ನಿವೃತ್ತ ನ್ಯಾ. ಸಂತೋಷ ಹೆಗ್ಡೆ, ಸಿಂಧ್ಯಾ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಇಂಜಿನಿಯರ್ ಆಗಲು ಇಂಜಿನಿಯರಿಂಗ್ ಕಾಲೇಜು, ವೈದ್ಯರಾಗಲು ವೈದ್ಯಕೀಯ ಕಾಲೇಜು ಹೀಗೆ ನಾನಾ ವಿಷಯಗಳಿಗೆ ವಿವಿಧ ಕಾಲೇಜುಗಳಿದೆ ಎಂದರು.



ವಿಧಾನಸೌಧದ ಮೂರನೇ ಮಹಡಿ ಹತ್ತುವುದು ಸುಲಭದ ಮಾತಲ್ಲ. ಕಷ್ಟಪಟ್ಟರೆ ಸಾಮಾನ್ಯ ಮನುಷ್ಯನೂ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನದ ಫಲವನ್ನು ಗಳಿಸಬಹುದು ಎಂಬುದಕ್ಕೆ ನನ್ನ ಜೀವನ ಉದಾಹರಣೆಯಾಗಿದೆ.

■ ಪಿಜಿಆರ್ ಸಿಂಧ್ಯಾ, ಮಾಜಿ ಸಚಿವ

ಶಾಸಕ ಸುರೇಶ್ ಕುಮಾರ್ ಮಾತನಾಡಿ, ಸಿಂಧ್ಯಾ ಅವರು ಆದರ್ಶ ರಾಜಕೀಯ ಮುತ್ಸದ್ದಿಯಾಗಿದ್ದು, ಅವರು ಗೌರವ ಡಾಕ್ಟರೇಟ್ ಪಡೆದು ದೊಡ್ಡವರಾಗಲ್ಲ. ಬದಲಾಗಿ ಪ್ರಶಸ್ತಿಯ ಮೌಲ್ಯ ಹೆಚ್ಚಾಗಲಿದೆ ಎಂದರು. ವಿಶ್ರಾಂತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ, ಕೊಂಡಜ್ಜಿ ಬ.ಷಣ್ಮುಖಪ್ಪ ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರಧಾನಿ ಮೋದಿ ಸಾಲವನ್ನೇ ಮಾಡಿಲ್ಲವೇ: ಡಿಕೆಶಿ

ದಾವಣಗೆರೆ: ನಾವು ಸಾಲ ಮಾಡಿದ್ದೀವಿ ಅಂದುಕೊಳ್ಳೋಣ. ಪ್ರಧಾನಿ ನರೇಂದ್ರ ಮೋದಿ ಸಾಲವನ್ನೇ ಮಾಡಿಲ್ಲವೇ? ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಪಕ್ಷದ ನಾಯಕರನ್ನು ಪ್ರಶ್ನಿಸಿದ್ದಾರೆ. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರದಿಂದ ಸಾಧ್ಯವಾಗಿಲ್ಲ. ಈಗ ನಾವು ಜನರಿಗೆ ಹಣ ಕೊಟ್ಟಿರುವುದಕ್ಕೆ ಬಿಜೆಪಿ ಸರ್ಕಾರದ ಹೊರೆ ಒಂದಿಷ್ಟು ಕಡಿಮೆಯಾಗಿದೆ. ಬಿಜೆಪಿಯವರು ಜನರ ಖಾತೆಗೆ 15 ಲಕ್ಷ ಹಾಕುತ್ತೇವೆಂದಿದ್ದರು. ಅಚ್ಚೇ ದಿನ ತರುತ್ತೇವೆಂದಿದ್ದರು. ಅಚ್ಚೇ ದಿನ್ ಬಂತಾ? 15 ಲಕ್ಷ ಖಾತೆಗೆ ಹಾಕಿದ್ರಾ? ನಮಗೆ ಬೇಡ, ನಮ್ಮ ಸರ್ಕಾರವನ್ನು ಟೀಕಿಸುತ್ತಿರುವ ಬಿಜೆಪಿಯವರ ಖಾತೆಗಾದರೂ ಬಂದಿದೆಯಾ? ಕೇಂದ್ರವೂ ನಮ್ಮ ರೀತಿ ಯೋಜನೆ ಕೊಡಲಿ. ಜನರ ಖಾತೆಗಳಿಗೆ ತಿಂಗಳಿಗೆ ಕನಿಷ್ಠ 10 ಸಾವಿರ ರೂ. ಹಾಕಲಿ ಎಂದು ವ್ಯಂಗ್ಯವಾಡಿದರು.



ರಾಜ್ಯದ ಜನರಿಗೆ ಸಿಎಂ ವಂಚನೆ: ವಿ.ಸೋಮಣ್ಣ

ಬಾಗಲಕೋಟೆ: ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರು ತಮ್ಮ ಅಧಿಕಾರವನ್ನು ಸ್ವಂತಕ್ಕೋಸ್ಕರ, ಸ್ವಾರ್ಥಕ್ಕೋಸ್ಕರ ಮತ್ತು ರಾಜ್ಯದ ಜನರಿಗೆ ವಂಚನೆ ಮಾಡುವ ಕೆಲಸ ಮಾಡಿ, ಈ ರಾಜ್ಯವನ್ನು ಕತ್ತಲೆ ಕೋಣೆಯಲ್ಲಿಡುವ ಕೆಲಸ ಮಾಡಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಆರೋಪಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಬೆಂಗಳೂರು ನಗರದ ಅಭಿವೃದ್ಧಿಯಲ್ಲಿ ನಮ್ಮದೇ ಆದ ಪಾಲುದಾರಿಕೆಯನ್ನು ಕೊಟ್ಟಿದ್ದೇವೆ ಎಂದು ತಿಳಿಸಿದರು. ಯಾವುದೇ ಶಾಸಕರೂ ತನ್ನ ಕಾರ್ಯ ಕ್ಷೇತ್ರಕ್ಕೆ ಹೋಗಿ ನಾನು ಒಳ್ಳೆಯ ಕೆಲಸ ಮಾಡಿದ್ದೇನೆ. ನನ್ನಿಂದ ಇಷ್ಟು ಕೆಲಸ ಆಗಿದೆ ಎಂದು ಹೇಳುವ ನೈತಿಕತೆಯನ್ನು ಕೇವಲ ವಿಪಕ್ಷದವರಷ್ಟೇ ಅಲ್ಲ ಆಡಳಿತ ಪಕ್ಷದವರೂ ಕಳಕೊಂಡಿದ್ದಾರೆ ಎಂದು ನುಡಿದರು. ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಿತಿ ಮೀರಿದೆ. ಅವ್ಯವಸ್ಥೆಯ ಆಗರವಾಗಿದೆ. ತಮ್ಮವರೇ ನಿಂದಿಸಿದರೂ ಎಚ್ಚೆತ್ತುಕೊಳ್ಳದ ನಿರ್ಲಿಪ್ತ ಸರ್ಕಾರ ಸಿದ್ದರಾಮಯ್ಯನವರದು ಎಂದು ಟೀಕಿಸಿದ ಅವರು, ಮೂಲಭೂತ ಸೌಕರ್ಯದತ್ತ ಎಲ್ಲೂ ಗಮನ ಕೊಡದೇ ಇಡೀ ಸಚಿವ ಸಂಪುಟ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ ಎಂದು ದೂರಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಕೀ ಉತ್ತರ ಪ್ರಕಟ

ಬೆಂಗಳೂರು: ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ವಿಷಯವಾರು ಕೀ ಉತ್ತರಗಳನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಏ.5 ರವರೆಗೆ ಕಾಲಾವಕಾಶ ನೀಡಲಾಗಿದೆ. ಮಂಡಳಿಯ ಜಾಲತಾಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ವಿಷಯವಾರು ಕೀ ಉತ್ತರಗಳನ್ನು ಪ್ರಕಟಿಸಲಾಗಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ವೆಬ್‌ಸೈಟ್ ಮೂಲಕ ಏ.5ರ ಸಂಜೆ 5.30 ರ ಒಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮಂಡಳಿಯ ನಿರ್ದೇಶಕ ಗೋಪಾಲಕೃಷ್ಣ ಎಚ್. ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮಣ್ಣ ಬಿಜೆಪಿಯಲ್ಲಿ ಕೆಲಸವಿಲ್ಲದಿರುವ ಮಂತ್ರಿ: ಸಿಎಂ ಸಿದ್ದರಾಮಯ್ಯ

ಕೈಗೆ ಬಿಜೆಪಿ ಹೈಕಮಾಂಡಲ್ಲ

ಬಾಗಲಕೋಟೆ: ಬಿಜೆಪಿಯವರು ಮುಖ್ಯಮಂತ್ರಿ ಸ್ಥಾನದ ಕುರಿತು ಪದೇ ಪದೇ ಮಾತನಾಡಲು ಅವರೇನು ನಮ್ಮ ಪಕ್ಷದ ಹೈಕಮಾಂಡ್ ಅಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ನಮ್ಮ ಪಕ್ಷದ ಹೈಕಮಾಂಡ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹದಿನೈದು ದಿನಗಳಲ್ಲಿ ಸಿಎಂ ತಮ್ಮ ಸ್ಥಾನವನ್ನು ಬಿಟ್ಟು ಹೋಗುತ್ತಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ ಸೋಮಣ್ಣ ಬಿಜೆಪಿಯಲ್ಲಿ ಕೆಲಸವಿಲ್ಲದಿರುವ ಮಂತ್ರಿ. ಅವರಿಗೆ ಯಾವ ಕಡತವೂ ಹೋಗುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಸೋಲುತ್ತಾರೆಂದು ತಿಳಿದು ಮುಖ್ಯಮಂತ್ರಿಗಳನ್ನು 5 ದಿನ ಪ್ರಚಾರಕ್ಕೆ ಇಳಿಸಿದ್ದಾರೆ ಹಾಗೂ ಒಂದೂವರೆ ತಿಂಗಳು ಮಾತ್ರ ಸಿಎಂ ಅಧಿಕಾರದಲ್ಲಿರುತ್ತಾರೆ ಎಂಬ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಹೇಳಿಕೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸೋಮಣ್ಣ ಅವರಿಗೆ ಪ್ರಚಾರ ಮಾಡಲು ಸಮಯವಿಲ್ಲ. ಕ್ಷೇತ್ರದಲ್ಲಿ ಸೋಲುತ್ತೇವೆ ಎಂದು ತಿಳಿದಿರುವುದರಿಂದ ಹೆಚ್ಚು ಪ್ರಚಾರ ಮಾಡುತ್ತಿಲ್ಲ. ಮುಖ್ಯಮಂತ್ರಿಗಳ ಸ್ಥಾನದ ಬಗ್ಗೆ ಮಾತನಾಡಲು ಅವರೇನು ಕಾಂಗ್ರೆಸ್ ಹೈಕಮಾಂಡ್ ಅಲ್ಲ ಎಂದರು.

ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಅವರ ಮಾತಿನಲ್ಲಿ ಸತ್ಯವಿಲ್ಲ ಹಾಗೂ ಹೇಳಿದಂತೆ ನಡೆದುಕೊಳ್ಳುತ್ತಿಲ್ಲವಾದ್ದರಿಂದ ಅವರ ಬಗ್ಗೆ ಹೆಚ್ಚು ಪ್ರತಿಕ್ರಿಯೆ ನೀಡಲಿಚ್ಚಿಸುವುದಿಲ್ಲ. ಬಾಗಲಕೋಟೆ ಕ್ಷೇತ್ರದಲ್ಲಿ ಬಿಜೆಪಿ ಸೋಲುತ್ತಿವೆ ಎಂಬ ಭಯದಿಂದ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದರು.

ಪಕ್ಷದಿಂದ ಉಚ್ಚಾಟಿಸಲ್ಪಟ್ಟಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನೇ ಗೋಗ ರೆದು ಕರೆ ತಂದು ಪ್ರಚಾರ ಕಾರ್ಯಕ್ಕೆ ಇಳಿಸಿದ್ದಾರೆ. ಇದು ಅವರ ದ್ವಂದ್ವ ನೀತಿ ಎಂದರಲ್ಲದೆ, ಕರ್ನಾಟಕ ದಲ್ಲಿ ಬಿಜೆಪಿ ಹೀನಾಯ ಸ್ಥಿತಿಯಲ್ಲಿದೆ ಎಂದರು.

ಲೋಕಸಭಾ ಸ್ಥಾನಗಳನ್ನು ಹೆಚ್ಚಿಸುವುದರಿಂದ ರಾಜ್ಯಕ್ಕಾಗುವ ಲಾಭವೇನು ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಹೆಚ್ಚಿಸಬೇಕು ಆದರೆ, ಧೋರಣೆ ಇರಬಾರದು. ದಕ್ಷಿಣದ ರಾಜ್ಯಗಳಿಗೆ ಕಡಿಮೆ, ಉತ್ತರದ ರಾಜ್ಯಗಳಿಗೆ ಹೆಚ್ಚಿನ ಸ್ಥಾನ ಕೊಡುವ ಕೆಲಸ ಮಾಡಬಾರದು ಎಂದರು.



ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಲಿ: ಮುಖ್ಯಮಂತ್ರಿ

ಗ್ಯಾಸ್ ಸಿಲಿಂಡರ್ ಅಭಾವದ ಬಗ್ಗೆ ಸಿಎಂ ಸಿದ್ದರಾಮಯ್ಯ ಮಾತನಾಡಿ, ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಅದು ಅವರ ಕರ್ತವ್ಯ. ರಾಜ್ಯ ಸರ್ಕಾರ ವಿತರಣೆ ಮಾಡುತ್ತದೆಯಷ್ಟೇ ಎಂದರು. ಆಟೋ ಚಾಲಕರು ಆಹಾರ ಸಚಿವರ ಮನೆಗೆ ಮುತ್ತಿಗೆ ಹಾಕುವುದಾಗಿ ಹೇಳಿರುವ ಬಗ್ಗೆ ಮಾತನಾಡಿ ನರೇಂದ್ರ ಮೋದಿಯವರ ಮನೆಗೆ ಮುತ್ತಿಗೆ ಹಾಕಬೇಕು ಎಂದರು. ರಾಜ್ಯದ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ಯತ್ನಾಳ್ ಅವರು ಆರೋಪಿಸಿರುವ ಬಗ್ಗೆ ಮಾತನಾಡಿ, ಅಲ್ಪಸಂಖ್ಯಾತರು ಈ ರಾಜ್ಯದ ನಾಗರಿಕರಲ್ಲವೇ? ಅವರ ಜನಸಂಖ್ಯೆ ಶೇ. 14%ರಷ್ಟಿದ್ದು ಎಲ್ಲರಿಗೂ ಅನುದಾನ ನೀಡಿದಂತೆ ಅವರಿಗೂ ನೀಡಲಾಗಿದೆ ಎಂದರು.

ದುರಾಡಳಿತದ ವಿರುದ್ಧ ಮತ ಹಾಕಿ: ಸಿ.ಟಿ.ರವಿ

ಸರ್ಕಾರದ ವಿರುದ್ಧ ಬಿಜೆಪಿ ಚಾರ್ಜ್‌ಶೀಟ್

ದಾವಣಗೆರೆ: ಕಾಂಗ್ರೆಸ್ ದುರಾಡಳಿತಕ್ಕೆ ಸಂಬಂಧಿಸಿದಂತೆ ಬಿಜೆಪಿ ಚಾರ್ಜ್‌ಶೀಟ್ ಬಿಡುಗಡೆ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದ ಮತದಾರರು ಈ ಕೆಟ್ಟ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮನಸ್ಸು ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಶ್ವಾಸ ವ್ಯಕ್ತಪಡಿಸಿದರು.



ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಬೆಲೆ ಏರಿಕೆ, ದುರಾಡಳಿತದ ವಿರುದ್ಧ ಚಾರ್ಜ್ ಶೀಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಚಾರ್ಜ್‌ಶೀಟ್ ಬಿಜೆಪಿ ತಯಾರಿಸಿಲ್ಲ. ಮಾಧ್ಯಮಗಳಲ್ಲಿ ಬಂದ ಸುದ್ದಿಗಳನ್ನು ಆಧರಿಸಿ ಇದನ್ನು ಬಿಡುಗಡೆ ಮಾಡಲಾಗಿದೆ. ಜನಮಾನಸದಲ್ಲಿ ಆಗಿರುವ ಎಲ್ಲಾ ಚರ್ಚೆಯನ್ನು ಇಟ್ಟುಕೊಂಡೇ ಈ ಆರೋಪ ಪಟ್ಟಿಯನ್ನು ತಯಾರು ಮಾಡಿದ್ದೇವೆ ಎಂದರು.

ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಕೆಟ್ಟ ಕಾರಣಕ್ಕೆ ಸುದ್ದಿಯಲ್ಲಿದೆಯೇ ಹೊರತು ಒಂದು ದಿನವೂ ಅಭಿವೃದ್ಧಿ ಕೆಲಸ ಮಾಡಿದ್ದಕ್ಕೆ ಸುದ್ದಿಯಲ್ಲಿರಲಿಲ್ಲ. ಬೆಂಗಳೂರಿನ ರಸ್ತೆ ಗುಂಡಿಗಳಿಗೆ ಬಲಿಯಾದವರ ಸಂಖ್ಯೆ ನೂರಾರು ಇದೆ. ಭ್ರಷ್ಟಾಚಾರ, ಬೆಲೆ ಏರಿಕೆ, ದರೋಡೆ ಪ್ರಕರಣ, ಡ್ರಗ್ಸ್ ದಂಧೆ ಎಗ್ಗಿಲ್ಲದೆ ನಡೆದಿದೆ. ರೈತರ ಆತ್ಮಹತ್ಯೆಯಲ್ಲಿ ಇಡೀ ದೇಶದಲ್ಲೇ ಕರ್ನಾಟಕಕ್ಕೆ ಎರಡನೇ ಸ್ಥಾನ. ಸರ್ಕಾರಿ ನೌಕರರ ಆತ್ಮಹತ್ಯೆ. ಬಾಣಂತಿ ಮತ್ತು ಹಸುಗೂಸುಗಳ ಸರಣಿ ಸಾವುಗಳು ನಡೆದಿವೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಆರ್ಥಿಕ ಶಿಸ್ತೇ ಇಲ್ಲ: ಅಶೋಕ

ಸಿದ್ದರಾಮಯ್ಯ ಸರ್ಕಾರಕ್ಕೆ ಆರ್ಥಿಕ ಶಿಸ್ತೇ ಇಲ್ಲ. ಒಂದೇ ಒಂದು ಅಭಿವೃದ್ಧಿ ಕಾರ್ಯವನ್ನೂ ಮಾಡಿಲ್ಲ. ಸುಳ್ಳು ಹೇಳಿಕೊಂಡೇ ಮೂರು ವರ್ಷ ಕಳೆದಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯಗೆ ಸುಳ್ಳುರಾಮಯ್ಯ ಎಂಬ ಬಿರುದು ಕೊಡಬೇಕು. ಗ್ಯಾರಂಟಿಗಳ ವಿಚಾರವಾಗಿಯಂತೂ ಸುಳ್ಳಿನ ಪುಂಗಿ ಊದುತ್ತಿದ್ದಾರೆ. ಇಂದಿರಾ ಕಿಟ್ ಕೊಡ್ತೇವೆ ಅಂದ್ರು, ಎಲ್ಲಿ ಕೊಟ್ಟಿದ್ದಾರೆ? ಅನ್ನಭಾಗ್ಯ ಯೋಜನೆಗೆ ಅಕ್ಕಿ ಕೊಡುತ್ತಿರುವುದು ಕೇಂದ್ರ ಸರ್ಕಾರ. ಆದರೆ ಚೀಲ ಮಾತ್ರ ಸಿದ್ದರಾಮಯ್ಯ ಅವರದ್ದು. ಕೇಂದ್ರ ಸರ್ಕಾರದ ಅಕ್ಕಿಗೆ ಕನ್ನ ಹಾಕುವ ಇವರು ಕನ್ನರಾಮಯ್ಯ ಎಂದು ವ್ಯಂಗ್ಯವಾಡಿದರು.

ಐವರು ಸಾಧಕರಿಗೆ ಬಾಬೂಜಿ ಪ್ರಶಸ್ತಿ

ಬೆಂಗಳೂರು: ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರ ನೀಡುವ 2026ನೇ ಸಾಲಿನ ಪ್ರತಿಷ್ಠಿತ ಡಾ. ಬಾಬು ಜಗಜೀವನ ರಾಮ್ ಪ್ರಶಸ್ತಿಯನ್ನು ಘೋಷಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶೋಷಿತರ ಪರವಾಗಿ ಮತ್ತು ಕಲೆ, ಸಾಹಿತ್ಯ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದ ಐವರು ಗಣ್ಯರನ್ನು ಈ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಚಿಸಲಾಗಿದ್ದ ಉನ್ನತ ಮಟ್ಟದ ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಅರ್ಹ ಸಾಧಕರ ಪಟ್ಟಿಗೆ ಸರ್ಕಾರವು ಅನುಮೋದನೆ ನೀಡಿದೆ. ಪ್ರಶಸ್ತಿ ಪುರಸ್ಕೃತರಿಗೆ ತಲಾ ರೂ. 5.00 ಲಕ್ಷ ನಗದು ಬಹುಮಾನ ಹಾಗೂ 20 ಗ್ರಾಂ ಚಿನ್ನದ ಪದಕ ನೀಡಿ ಗೌರವಿಸಲಾಗುವುದು.

ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮದಿನವಾದ ಏ.5 ರಂದು ವಿಧಾನಸೌಧ ಪೂರ್ವ ದ್ವಾರದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗುವ ವಿಶೇಷ ಕಾರ್ಯಕ್ರಮದಲ್ಲಿ ಈ ಎಲ್ಲಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್‌ಕುಮಾರ್ ತಿಳಿಸಿದ್ದಾರೆ.



ಡಿಂಗ್ರಿ ನರಸಪ್ಪ



ಚಂದ್ರಮ್ಮ



ನಾರಾಯಣ



ನರಸೀಯಪ್ಪ



ಸರಜೂ

ಪ್ರಶಸ್ತಿ ಪುರಸ್ಕೃತರ ವಿವರ: ಚಂದ್ರಮ್ಮ (ಬೆಂಗಳೂರು ಕೇಂದ್ರ): ಬೆಂಗಳೂರಿನ ಭುವನೇಶ್ವರಿನಗರದ ನಿವಾಸಿಯಾದ ಇವರು, ಸಂಘಟನೆ, ಸಾಮಾಜಿಕ ಹೋರಾಟ ಹಾಗೂ ಭೂ ಆಂದೋಲನ ಕ್ಷೇತ್ರಗಳಲ್ಲಿ ಸಲ್ಲಿಸಿದ ಸುದೀರ್ಘ ಸೇವೆಯನ್ನು ಗುರುತಿಸಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಡಿಂಗ್ರಿ ನರಸಪ್ಪ (ಕಲಬುರಗಿ ವಿಭಾಗ): ರಾಯಚೂರು ಜಿಲ್ಲೆಯ ಆಶಾಪುರ ನಿವಾಸಿಯಾದ ಇವರು, ಜಾನಪದ ಕಲಾ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಕೊಡುಗೆಗಾಗಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸರಜೂ ಕಾಟ್ಕರ್ (ಬೆಳಗಾವಿ ವಿಭಾಗ): ಬೆಳಗಾವಿಯವರಾದ ಇವರು, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ನಾರಾಯಣ (ಮೈಸೂರು ವಿಭಾಗ): ಮೈಸೂರಿನ ಮಾಜಿ ಮೇಯರ್ ಆಗಿರುವ ಇವರು, ಆಡಳಿತ ಮತ್ತು ಸಮಾಜ ಸೇವೆಯಲ್ಲಿನ ತಮ್ಮ ದಕ್ಷ ಹಾಗೂ ಜನಪರ ಕಾರ್ಯಗಳಿಗಾಗಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನರಸೀಯಪ್ಪ (ಬೆಂಗಳೂರು ವಿಭಾಗ): ತುಮಕೂರಿನ ಮಾಜಿ ನಗರಸಭೆ ಸದಸ್ಯರಾದ ಇವರು, ಜನಸಾಮಾನ್ಯರ ಪರವಾದ ಹೋರಾಟ ಮತ್ತು ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಕ್ಕಾಗಿ ಆಯ್ಕೆಯಾಗಿದ್ದಾರೆ.

ಡ್ರಗ್ಸ್ ಜಾಲ: ಮುಂಬೈಗೆ ಮೈಸೂರು ಪೊಲೀಸರು

ಮೈಸೂರು: ಜಿಲ್ಲೆಯ ಹುಣಸೂರು ಸಮೀಪ ತೋಟದ ಮನೆಯಲ್ಲಿ ಕೋಟ್ಯಂತರ ರೂ. ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದು ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಪ್ರಕರಣದ ತನಿಖೆ ಯನ್ನು ಚುರುಕುಗೊಳಿಸಿದ್ದು, ಡ್ರಗ್ಸ್ ದಂಧೆಯ ಜಾಲದ ಜಾಡು ಹಿಡಿದು ಪೊಲೀಸರ ಒಂದು ತಂಡ ಮುಂಬೈಗೆ ತೆರಳಿದೆ.

ಹುಣಸೂರಿನ ರತ್ನಪುರಿ ಬಳಿ ದಾಸನಪುರ ತೋಟದ ಮನೆಯ ಮೇಲೆ ದಾಳಿ ನಡೆಸಿದ್ದ ಪೊಲೀಸರು ಕೋಟ್ಯಂತರ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಕ್ಕೆ ಪಡೆದು ಇಬ್ಬರನ್ನು ಬಂಧಿಸಿದ್ದರು. ಮಾದಕ ವಸ್ತುಗಳನ್ನು ಜಿಲ್ಲಾ ಪೊಲೀಸರು ನ್ಯಾಯಾಲಯಕ್ಕೆ ತೆರಳಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ಎಫ್‌ಎಸ್‌ಎಲ್ ವಿಭಾಗಕ್ಕೆ ರವಾನಿಸಿದ್ದರು.

ಬಂಧಿತ ಇಬ್ಬರು ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದ್ದು, ಅವರುಗಳ ಸಿಮ್ ಕಾರ್ಡ್‌ಗಳ ಪರಿಶೀಲನೆ ನಡೆಸಿದ ವೇಳೆ ಆರೋಪಿಗಳ ಸಂಪರ್ಕದಲ್ಲಿ ಇದ್ದ ಇಬ್ಬರು ಮುಂಬೈನಲ್ಲಿ ನೆಲೆಸಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ದೊರಕಿದೆ. ಎಸ್‌ಪಿ ಅವರ ಸೂಚನೆ ಮೇರೆಗೆ ಐವರ ತಂಡ ತನಿಖೆಗಾಗಿ ಮುಂಬೈಗೆ ತೆರಳಿದೆ. ಬಂಧಿತರ ಸಂಪರ್ಕದಲ್ಲಿದ್ದ ಆ ಇಬ್ಬರ ವಿಳಾಸವನ್ನೂ ಪಡೆದಿರುವ ಪೊಲೀಸರು, ಅಲ್ಲಿನ ಪೊಲೀಸ್ ಅಧಿಕಾರಿಗಳ ನೆರವಿನಲ್ಲಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಏ.24ರಿಂದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶ



ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ವತಿಯಿಂದ ಏಪ್ರಿಲ್ 24 ರಿಂದ 26 ರವರೆಗೆ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಫ್‌ಕೆಸಿಸಿಐನ ಅಧ್ಯಕ್ಷೆ ಉಮಾರೆಡ್ಡಿ ತಿಳಿಸಿದರು.

ಎಫ್‌ಕೆಸಿಸಿಐನ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 3 ದಿನಗಳ ಈ ಸಮಾವೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಮತ್ತು ಆಹಾರ ಸಂರಕ್ಷಣಾ ಕ್ಷೇತ್ರಗಳಲ್ಲಿ ಇರುವ ಅವಕಾಶಗಳು, ಹೂಡಿಕೆ ಮತ್ತು ನಾವೀನ್ಯತೆಗೆ ಒಂದು ಜಾಗತಿಕ ವೇದಿಕೆಯಾಗಲಿದೆ. ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ರೈತರು, ಉದ್ಯಮಿಗಳು ಭೇಟಿ ನೀಡುವ ಸಾಧ್ಯತೆ ಇದೆ ಎಂದರು.

ಸ್ಟಾರ್ಟ್‌ಅಪ್ ಮತ್ತು ಹಲವು ಉದ್ದಿಮೆಗಳು ಹೂಡಿಕೆಗೆ ಈ ಸಮಾವೇಶ ಸಹಕಾರಿಯಾಗಲಿದೆ. ಭೂಮಿ, ಬೀಜ, ವಿಜ್ಞಾನ, ಸಂಶೋಧನೆ, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಸಂಪರ್ಕಿಸುವ ಜಾಗತಿಕ ವೇದಿಕೆಯಂತೆ ವಿನ್ಯಾಸಗೊಳಿಸಲಾಗಿದೆ. ಕೃಷಿಕರು, ತಂತ್ರಜ್ಞಾನ ಕ್ಷೇತ್ರದ ಉದ್ಯಮಿಗಳು, ಸರ್ಕಾರದ ಪ್ರತಿನಿಧಿಗಳು ಇದರಲ್ಲಿ ನೇರ ಸಂವಾದ ನಡೆಸುವ ಅವಕಾಶಗಳು ಇದೆ ಎಂದು ಮಾಹಿತಿ ನೀಡಿದರು. ಈ ಸಮಾವೇಶ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಆದಾಯ ಹೆಚ್ಚಳಕ್ಕೆ ಆರ್ಥಿಕವಾಗಿ ಅವರು ಸಬಲರಾಗಲು ಇದು ಸಹಕಾರಿಯಾಗಲಿದೆ. ಸುಮಾರು 300 ಕ್ಕೂ ಹೆಚ್ಚು ಪ್ರದರ್ಶಕರು, 30 ಸಾವಿರಕ್ಕೂ ಹೆಚ್ಚು ವ್ಯವಹಾರ ಪ್ರತಿನಿಧಿಗಳು, ಹಣಕಾಸು ಸಂಸ್ಥೆಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರೈತರಿಂದ 2227 ತಳಿಗಳ ಸಂಗ್ರಹ | ಸರ್ಕಾರದಿಂದ 490 ರೈತರಿಗೆ ಪ್ರೋತ್ಸಾಹಧನ

ದೇಸಿ ತಳಿ ಸಂರಕ್ಷಣೆಗೆ ಕೃಷಿ ಇಲಾಖೆ ಉತ್ತೇಜನ

▸ ದೇವಿತಾ.ಸಿ.ಎಸ್

ದಿಗಂತ ವಿಶೇಷ

ಬೆಂಗಳೂರು: ದೇಸಿ ಬೆಳೆ ತಳಿಗಳ ಸಂರಕ್ಷಣೆ ಹಾಗೂ ಪುನರುಜ್ಜೀವನಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೃಷಿ ಇಲಾಖೆ ಯು ಆರಂಭಿಸಿದ್ದ, ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮಕ್ಕೆ ರೈತರಿಂದ ಉತ್ತಮ ಪತ್ರಿಕ್ರಿಯೆ ವ್ಯಕ್ತವಾಗಿದೆ.

ಹವಾಮಾನ ಬದಲಾವಣೆ ಮತ್ತು ರಾಸಾಯನಿಕ ಕೃಷಿ ಹೆಚ್ಚುತ್ತಿರುವ ಪರಿಣಾಮಗಳ ನಡುವೆಯೂ ದೇಸಿ ಬೆಳೆ ತಳಿಗಳು ಹೆಚ್ಚು ಸಹನಶೀಲತೆ ಹಾಗೂ ಪೌಷ್ಟಿಕ ಗುಣಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಅವುಗಳ ಉತ್ತೇಜನಕ್ಕೆ ಕೃಷಿ ಇಲಾಖೆಯು ವಿಶೇಷ ಆದ್ಯತೆ ನೀಡುತ್ತಿದೆ. ಈ ನಿಟ್ಟಿನಲ್ಲಿ ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮದಡಿ, ಇಲ್ಲಿಯವರೆಗೆ ಒಟ್ಟು 609 ರೈತರಿಂದ 2227 ತಳಿಗಳನ್ನು ಸಂರಕ್ಷಿಸಲಾಗಿದ್ದು, ಮೊದಲನೆ ಹಂತದ ಮೌಲ್ಯಮಾಪನವನ್ನು ಪೂರ್ಣಗೊಳಿಸಲಾಗಿದೆ.



ಇಂದಿನ ದಿನಗಳಲ್ಲಿ ಬರುತ್ತಿರುವ ಅಧಿಕ ಇಳುವರಿ ತಳಿಗಳಿಂದಾಗಿ ದೇಸಿ ತಳಿಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ನಮ್ಮ ತಳಿಗಳ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

■ ಡಾ.ಜಿ.ಟಿ.ಪುತ್ರ, ನಿರ್ದೇಶಕ

ಇಲಾಖೆ ಕಳೆದ ವರ್ಷದ ಏಪ್ರಿಲ್-ಮೇ ತಿಂಗಳಲ್ಲಿ ದೇಸಿ ತಳಿಗಳನ್ನು ಸಂಗ್ರಹಿಸಲು ಆರಂಭಿಸಿತ್ತು. ಸಂಗ್ರಹಿತ ತಳಿಗಳ 20 ಬೆಳೆಗಳನ್ನು 8 ಆಯ್ದ ಸ್ಥಳಗಳಲ್ಲಿ ಈಗಾಗಲೇ ಬೆಳೆಯಲಾಗಿದೆ. 15 ಮಂದಿ ವಿಜ್ಞಾನಿಗಳ ತಂಡ ಪ್ರಾಯೋಗಿಕವಾಗಿ ಬೆಳೆದು ಅವುಗಳ ಗುಣಲಕ್ಷಣಗಳು, ಪೌಷ್ಟಿಕಾಂಶಗಳ ಮೌಲ್ಯಮಾಪನ ಕಾರ್ಯ ಕೈಗೊಳ್ಳಲಾಗುತ್ತದೆ. ನಂತರ ಇವುಗಳನ್ನು ಶುದ್ಧೀಕರಿಸಿ, ಎರಡನೇ ಹಂತದ ಬೆಳೆಯನ್ನು ಶೀಘ್ರದಲ್ಲೇ ಬೆಳೆಯಲಾಗುತ್ತದೆ. ಇದಾದ ಬಳಿಕ ಯಾವ ತಳಿಗಳು ನಕಲಿ ಎಂಬುದು ಪತ್ತೆಹಚ್ಚಿ, ಜೀನೊಮಿಕ್ ಅಧ್ಯಯನ ಮತ್ತು ಪೋಷಕಾಂಶಗಳ ಗುಣಗಳನ್ನು ಮೌಲೀಕರಿಸಲಾಗುತ್ತದೆ.

ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಣಿ

ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಜಿಕೆವಿಕೆಯಲ್ಲಿ (ಯುಎಎಸ್) ಬೀಜ ಬ್ಯಾಂಕ್ ಸ್ಥಾಪಿಸಲಾಗಿದೆ. ಅಳಿವಿನ ಅಂಚಿನಲ್ಲಿರುವ ಸಾಂಪ್ರದಾಯಿಕ ತಳಿಗಳಾದ ಭತ್ತ, ರಾಗಿ, ಜೋಳ, ಹೆಸರುಕಾಳು, ತೊಗರಿ, ಉದ್ದು ಸೇರಿದಂತೆ ಇತರ ಸ್ಥಳೀಯ ಧಾನ್ಯಗಳನ್ನು ಸಂರಕ್ಷಿಸಲಾಗುತ್ತಿದೆ. ರೈತರು ಈಗಲೂ ತಮ್ಮ ಬಳಿ ಇರುವ ಪುರಾತನ ದೇಸಿ ತಳಿಗಳನ್ನು ಕೃಷಿ ಇಲಾಖೆಯ ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಾಯಿಸಿಕೊಂಡು, ಇಲಾಖೆಗೆ ದೇಸಿ ತಳಿಗಳನ್ನು ಕೊಡಬಹುದಾಗಿದೆ. ನಂತರ ತಳಿಗಳಲ್ಲಿನ ಬೆಳವಣಿಗೆಯನ್ನು ಗುರುತಿಸಿ ರೈತರಿಗೆ ಪ್ರೋತ್ಸಹ ಧನವನ್ನು ನೀಡಲಾಗುತ್ತಿದ್ದು, ಇಲ್ಲಿಯವರೆಗೆ ಒಟ್ಟು 490 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ.

609 ರೈತರಿಂದ ಸಂಗ್ರಹ: ಉತ್ತರ ಕನ್ನಡ, ಮಂಡ್ಯ, ಬೆಳಗಾವಿ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ರೈತರಿಂದ ಭತ್ತ, ರಾಗಿ, ಜೋಳ, ತೊಗರಿ, ಹುರುಳಿ, ಅವರೆ, ಅಲಸಂದೆ, ಮಡಕಿಕಾಳು, ಹುಚ್ಚೆಳ್ಳು, ಕುಸುಬೆ, ಎಳ್ಳು, ನವಣೆ, ಸಾಮೆ, ಊದಲು, ಕೊರಲೆ, ಹಾರಕ, ಬರಗು, ಗೋಧಿ, ಮೆಣಸಿನಕಾಯಿ, ಮೆಕ್ಕೆ, ಹುಚ್ಚೆಳ್ಳು, ಗೋರಿ, ಮೆಣಸಿನಕಾಯಿ ಹೀಗೆ ನಾನಾ 2200ಕ್ಕೂ ಹೆಚ್ಚು ತಳಿಗಳನ್ನು 609 ಕ್ಕೂ ಹೆಚ್ಚು ರೈತರಿಂದ ಸಂಗ್ರಹಿಸಲಾಗಿದೆ.

ಸಿಎಂರಿಂದ ಕುಟುಂಬ ರಾಜಕೀಯ

ಪಾಂಡವಪುರ: ಸಿಎಂ ಸಿದ್ದರಾಮಯ್ಯಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ತಾಲೂಕಿನ ಟಿ.ಎಸ್.ಛತ್ರ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಸರ್ಕಾರಿ ಶಾಲೆಯ ಕಟ್ಟಡ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಟ್ಟಡ ವೀಕ್ಷಣೆ ಮಾಡಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರು ತಮ್ಮ ಮೊದಲ ಮಗ ರಾಕೇಶ ಇದ್ದಾಗ ಅವರನ್ನು ರಾಜಕೀಯವಾಗಿ ಬೆಳೆಸಿದರು. ಆತನ ಅಕಾಲಿಕ ಮರಣದ ನಂತರ ಅವರ ಎರಡನೇ ಮಗನನ್ನು ಡಾ. ಯತೀಂದ್ರನನ್ನು ಬೆಳೆಸುತ್ತಿದ್ದಾರೆ. ಯಾತಕ್ಕಾಗಿ ತಮ್ಮ ಎರಡನೇ ಮಗನಿಗೆ ಅಧಿಕಾರಕೊಟ್ಟು ಕೂರಿಸಿದ್ದೀರಿ. ಹಣ ವಸೂಲಿ ಮಾಡುವುದಕ್ಕಾ ಎಂದು ಪ್ರಶ್ನಿಸಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕುಟುಂಬದಲ್ಲಿ ಕುಟುಂಬ ರಾಜಕೀಯ ಇಲ್ಲವೇ? ಅವರ ಕುಟುಂಬದಲ್ಲಿ ಎಷ್ಟು ಮಂದಿ ರಾಜಕೀಯದಲ್ಲಿದ್ದಾರೆ, ಇದೀಗ ಅವರ ಕುಟುಂಬದ ಸದಸ್ಯರನ್ನು ಕೆಎಂಎಫ್‌ಅಧ್ಯಕ್ಷರನ್ನಾಗಿ ಮಾಡಲು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬದ 2-3 ಮಂದಿ ಶಾಸಕರಾಗಿರುವ ಕುಟುಂಬಗಳಿಲ್ಲವೇ? 2018ರಲ್ಲಿ ದೇವೇಗೌಡರು ನನ್ನ ಮಗನನ್ನು ಮುಖ್ಯಮಂತ್ರಿ ಮಾಡಿ ಎಂದು ಅರ್ಜಿಹಿಡಿದು ಕೊಂಡು ಹೋಗಿದ್ರಾ? ಹೀಗಿರುವಾಗ ನನ್ನ ಕುಟುಂಬದ ರಾಕೀಯದ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ ಎಂದು ಹರಿಹಾಯ್ದರು.



ಸಿಎಂ ಕುರ್ಚಿ ಬಿಡಲ್ಲ: ಎಚ್ಡಿಕೆ

ಸಿಎಂ ಅಧಿಕಾರದ ರುಚಿ ನೋಡಿರುವ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡೋದಿಲ್ಲ 2013ರ ಚುನಾ ವಣೆಯ ವೇಳೆ ಇದೇ ನನ್ನ ಕೊನೆಯ ಚುನಾವಣೆ ಎಂಬುದಾಗಿ ಹೇಳಿದ್ದರು. ಇದೀಗ ಕೊನೆಯವರೆಗೂ ಚುನಾವಣಾ ರಾಜಕೀಯದಿಂದ ದೂರ ಆಗೋದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಬಿಜೆಪಿ ಆಡಳಿತದ ಬಗ್ಗೆ ಆರೋಪಿಸುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು.

ಸಂಪಾದಕೀಯ

ಜನಗಣತಿಗೆ ಚಾಲನೆ

ದೇಶದಲ್ಲಿ ಸಮಗ್ರ ಜನಗಣತಿಗೆ ಕೊನೆಗೂ ಚಾಲನೆ ನೀಡಲಾಗಿದೆ. ಪ್ರತೀ ಹತ್ತು ವರ್ಷಗಳಿಗೊಮ್ಮೆ ನಡೆದುಕೊಂಡು ಬರುತ್ತಿದ್ದ ಜನಗಣತಿಯು ನಿಯಮಪ್ರಕಾರ 2021ರಲ್ಲಿ ನಡೆಯಬೇಕಿತ್ತಾದರೂ, ಕೊರೋನಾ ಕಾರಣದಿಂದಾಗಿ ಮುಂದೂಡಲ್ಪಟ್ಟಿತ್ತು. ಅಲ್ಲಿಂದ ಬಳಿಕ ವಿವಿಧ ಕಾರಣಗಳಿಂದಾಗಿ ಮುಂದೂಡುತ್ತಲೇ ಬಂದ ಜನಗಣತಿ ಇದೀಗ ಕೊನೆಗೂ ಅಧಿಕೃತವಾಗಿ ಚಾಲನೆ ಪಡೆದಿರುವುದು ವಿಹಿತ ಬೆಳವಣಿಗೆ. ಈಗಾಗಲೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಪರಿಗಣಿತವಾಗಿರುವ ಭಾರತದ ಜನಸಂಖ್ಯೆಯು 140 ಕೋಟಿ ದಾಟಿದೆ ಎಂದು ಹೇಳಲಾಗುತ್ತಿದ್ದು, ಜನಗಣತಿಯಿಂದ ನಿಖರ ಅಂಕಿಅಂಶ ದೊರಕಲಿದೆ. ಇದರ ಜತೆಗೇ ಜನರ



ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ಹಾಗೂ ಇನ್ನಿತರ ವಿವರಗಳೂ ಜನಗಣತಿಯಿಂದ ನಿಖರವಾಗಿ ದಾಖಲಾಗಲಿದೆ. ಸರಕಾರವು ಇದಕ್ಕಾಗಿ ಸಕಲ ಸಿದ್ಧತೆಗಳನ್ನು ನಡೆಸಿದ್ದು, ಡಿಜಿಟಲ್ ತಂತ್ರಜ್ಞಾನವನ್ನು ಇದಕ್ಕೆ ಬಳಸಿಕೊಳ್ಳುವುದರಿಂದ ಜನಗಣತಿಯು ಹೆಚ್ಚು ಸುಲಭವಾಗಿ ಮತ್ತು ನಿಖರವಾಗಿ ನಡೆಯಲಿದೆಯೆಂದು ನಿರೀಕ್ಷಿಸಲಾಗಿದೆ. ಇದರ ಜತೆಗೆ, ಜನರೇ ಸ್ವಯಂ ನೋಂದಣಿ ಮಾಡಿಕೊಳ್ಳಲೂ ಅವಕಾಶ ಕಲ್ಪಿಸಲಾಗಿದೆ. ಸರಕಾರದ ಅಧಿಕೃತ ಜಾಲತಾಣದಲ್ಲಿ ಜನರು ಸ್ವಯಂ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಆ ಜನಗಣತಿಯು ಕೆಲವು ಹಂತಗಳಲ್ಲಿ ನಡೆಯಲಿದ್ದು, 2027ರ ವೇಳೆಗೆ ದೇಶದ ಒಟ್ಟು ಜನಸಂಖ್ಯೆಯ ಬಗ್ಗೆ ತಾತ್ಕಾಲಿಕ ವರದಿ ಬಿಡುಗಡೆಯಾಗುವ ಸಾಧ್ಯತೆಯಿದೆ. ಮೊದಲ ಹಂತದಲ್ಲಿ ಮನೆ ಪಟ್ಟಿ ಮತ್ತು ಮನೆಗಳ ಗಣತಿ ನಡೆಯಲಿದ್ದು, ಬಳಿಕ ಎರಡನೇ ಹಂತದಲ್ಲಿ ವ್ಯಕ್ತಿಗತ ಮಾಹಿತಿಗಳನ್ನು ಕಲೆ ಹಾಕಲಾಗುತ್ತದೆ.

ಸರಕಾರದ ಯೋಜನೆಗಳ ಸಮಗ್ರ ಅನುಷ್ಠಾನಕ್ಕೆ, ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಜನಗಣತಿಯು ಅತ್ಯಗತ್ಯವಾಗಿದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲು, ಅಗತ್ಯವಿರುವಲ್ಲಿ ಮೂಲಭೂತ ಸೌಕರ್ಯಗಳನ್ನು ಏರ್ಪಡಿಸಲು ಜನಗಣತಿಯು ಅವಶ್ಯ ಮಾಹಿತಿಗಳನ್ನು ಒದಗಿಸುತ್ತದೆ.

ಈ ಹಿನ್ನೆಲೆಯಲ್ಲಿ ಜನಗಣತಿ ಕಾರ್ಯದಲ್ಲಿ ಸರಕಾರದೊಂದಿಗೆ ಸಹಕರಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಹಾಗಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಸರಕಾರ ಬಯಸುವ ಮಾಹಿತಿಗಳನ್ನು ಪ್ರಾಮಾಣಿಕವಾಗಿ ನೀಡಬೇಕಾದುದು ಅಗತ್ಯವಾಗಿದೆ. ಜನರು ನೀಡುವ ಮಾಹಿತಿಯು ಗೌಪ್ಯವಾಗಿರಲಿದ್ದು, ಮಾಹಿತಿ ಸೋರಿಕೆಯಾಗುವ ಸಾಧ್ಯತೆಗಳೇ ಇಲ್ಲ ಎಂಬುದಾಗಿ ಸರಕಾರವು ಈಗಾಗಲೆ ಆಶ್ವಾಸನೆ ನೀಡಿದೆ. ಈ ವಿಷಯದಲ್ಲಿ ಸರಕಾರವು ಹೆಚ್ಚಿನ ನಿಗಾ ವಹಿಸುವುದು ಅತ್ಯವಶ್ಯವಾಗಿದೆ. ಒಟ್ಟಿನಲ್ಲಿ 15 ವರ್ಷಗಳ ಅಂತರದ ಬಳಿಕ ನಡೆಯುತ್ತಿರುವ ಜನಗಣತಿಯು ದೇಶದ ಜನಸಂಖ್ಯೆಯ ಸಮಗ್ರ ಚಿತ್ರಣ ನೀಡುವಂತಾಗಲಿ.

ಅಂಗಾದಿತ್ಯ ಎಂದರೇನು?

ಸೂರ್ಯನು ಜಾತಕದಲ್ಲಿ ಆತ್ಮಕಾರಕ. ಇದು ವ್ಯಕ್ತಿಯೊಬ್ಬನ ಜೀವನದ ದಿಕ್ಕನ್ನು ನಿರ್ಧರಿಸುತ್ತದೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವೇದ ಜ್ಯೋತಿಷ್ಯದ ಪ್ರಕಾರ ಅಂಗಾದಿತ್ಯ ಎಂದರೆ; ಒಬ್ಬ ವ್ಯಕ್ತಿಯ ಜಾತಕದಲ್ಲಿ ಅಥವಾ ಆತ ಹುಟ್ಟಿದ ಸಮಯದಲ್ಲಿ ಸೂರ್ಯನು ಯಾವ ನಕ್ಷತ್ರದಲ್ಲಿ ಇದ್ದಾನೋ ಅದರ ಆಧಾರದ ಮೇಲೆ, ಸೂರ್ಯನ ಪ್ರಭಾವ ಅಥವಾ ಆಶೀರ್ವಾದವು ಆತನ ದೇಹದ ಯಾವ ಅಂಗದ ಮೇಲೆ ಉಂಟಾಗಿದೆ ಎನ್ನುವ ಪರಿಕಲ್ಪನೆ. ಹೀಗೆ ಆತನ ಪ್ರಭಾವವು ಯಾವ ರೀತಿಯಲ್ಲಿ ಅವನ ಆರೋಗ್ಯ, ಆರ್ಥಿಕತೆ, ಆಯುಸ್ಸು, ಯಶಸ್ಸು ಮತ್ತು ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದನ್ನು ವ್ಯಕ್ತಿಯ ಅಂಗದ ಮೇಲೆ ಬೀಳುವ ಸೂರ್ಯನ ದೃಷ್ಟಿಯನ್ನು ಅವಲಂಬಿಸಿ ನಿರ್ಧರಿಸಲಾಗುತ್ತದೆ. ಅದರೊಂದಿಗೆ ಜಾತಕದಲ್ಲಿ ಲಗ್ನದಿಂದ ಎರಡನೇ ಮನೆ ಮತ್ತು ಹನ್ನೊಂದನೇ ಮನೆಯನ್ನೂ ಪರಿಗಣಿಸಬೇಕಾಗುತ್ತದೆ. ಗುರು ಶುಕ್ರ ಮತ್ತು ಬುಧ ಗ್ರಹಗಳು ಜಾತಕನಲ್ಲಿ ಯಾವ ಮನೆಗಳಲ್ಲಿ ಇದ್ದು ಏನೆಲ್ಲಾ ಫಲಗಳನ್ನು, ಪರಿಣಾಮಗಳನ್ನು ಬೀರುತ್ತಿದ್ದಾರೆ ಎನ್ನುವುದನ್ನು ಪರಿಗಣಿಸಿ ಸೂಕ್ತ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಸೂರ್ಯನು ಜಾತಕದಲ್ಲಿ ಆತ್ಮಕಾರಕ. ಇದು ವ್ಯಕ್ತಿಯೊಬ್ಬನ ಜೀವನದ ದಿಕ್ಕನ್ನು ನಿರ್ಧರಿಸುತ್ತದೆ. ಜನ್ಮ ಸಮಯದಲ್ಲಿ ಸೂರ್ಯನು ಯಾವ ನಕ್ಷತ್ರದಲ್ಲಿ ಇದ್ದಾನೆ ಎನ್ನುವುದನ್ನು ಮೊದಲಿಗೆ ಲೆಕ್ಕಾಚಾರ ಹಾಕಿಕೊಳ್ಳಬೇಕಾಗುತ್ತದೆ. ಬಳಿಕ ಅದನ್ನು ಆಧರಿಸಿ ಸೂರ್ಯನು ಜಾತಕನ ಯಾವ ಅಂಗದ ಮೇಲೆ ಪ್ರಭಾವ ಬೀರುತ್ತಿದ್ದಾನೆ ಎನ್ನುವುದನ್ನು ಲೆಕ್ಕ ಹಾಕಲಾಗುತ್ತದೆ. ಸೂರ್ಯನಿರುವ ನಕ್ಷತ್ರದಿಂದ ಪ್ರಾರಂಭಿಸಿ ಉಳಿದ ಎಲ್ಲಾ ನಕ್ಷತ್ರಗಳನ್ನು ನಿಯಮದ ಪ್ರಕಾರ ಲೆಕ್ಕ ಹಾಕುತ್ತಾ ದೇಹದ ವಿವಿಧ ಅಂಗಗಳಿಗೆ ಆ ನಕ್ಷತ್ರಗಳನ್ನು ವಿಂಗಡಿಸಲಾಗುತ್ತದೆ.

ಲೆಕ್ಕಾಚಾರದ ಕ್ರಮ

ತಲೆಯ ಮೇಲೆ ಪ್ರಭಾವ: ನೀವು ಹುಟ್ಟಿದ ಸಮಯದಲ್ಲಿ ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದಾನೆ ಎಂದು ತೆಗೆದುಕೊಳ್ಳೋಣ. ಆ ಸಮಯದಲ್ಲಿ ಅಶ್ವಿನಿ, ಭರಣಿ ಮತ್ತು ಕೃತಿಕಾ ನಕ್ಷತ್ರಗಳಲ್ಲಿ ಜನಿಸಿದವರಿಗೆ ಅಂದರೆ ಒಟ್ಟು ಸರಣಿಯಲ್ಲಿರುವ ಮೂರು ನಕ್ಷತ್ರಗಳಲ್ಲಿ ಜನಿಸಿದವರಿಗೆ ಸೂರ್ಯನ ಪ್ರಭಾವ ತಲೆಯ ಮೇಲಿರುತ್ತದೆ. ಅಥವಾ ಶ್ರವಣ ನಕ್ಷತ್ರದಲ್ಲಿ ಸೂರ್ಯನಿದ್ದಾನೆ ಎಂದುಕೊಳ್ಳೋಣ. ಆಗ ಶ್ರವಣ, ಧನಿಷ್ಠ ಮತ್ತು ಶತಭೀಷ ನಕ್ಷತ್ರದಲ್ಲಿ ಜನಿಸಿದವರಿಗೆ ಸೂರ್ಯನ ಪ್ರಭಾವ ತಲೆಯ ಮೇಲಿರುತ್ತದೆ.

ಸೂರ್ಯನ ಪ್ರಭಾವ ತಲೆಯ ಮೇಲಿದ್ದರೆ ಅಂತಹಾ ವ್ಯಕ್ತಿಯು ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳುತ್ತಾರೆ. ಸಂಸ್ಥೆಗಳಲ್ಲಿ, ಇಲಾಖೆಗಳಲ್ಲಿ ಒಳ್ಳೆಯ ಅಧಿಕಾರವನ್ನು ಪಡೆದುಕೊಳ್ಳುತ್ತಾರೆ. ಉತ್ತಮ ಮತ್ತು ಪ್ರಖರವಾದ ನಾಯಕನೆಂದು ಹೆಸರು ಗಳಿಸುತ್ತಾರೆ. ಅಷ್ಟೇ ಅಲ್ಲ ಜ್ಞಾನವಂತನೂ, ವಿಜ್ಞಾನಿಯೂ, ಬುಯಿಂದ ಕೆಲಸ ಮಾಡುವವರೂ, ತೀಕ್ಷ್ಣಮತಿಯೂ, ತಕ್ಷಣದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವವರೂ ಆಗುತ್ತಾರೆ. ಆದರೆ ಅಸೂಯೆ, ಕಾಮ ಮತ್ತು ಮದಗಳಿಂದ ಕೂಡಿದವರೂ ಆಗಿರುತ್ತಾರೆ. ಇದು ಹೆಚ್ಚಾದರೆ ಅಂತಹ ವ್ಯಕ್ತಿಯ ಅವನತಿಯೂ ಅದರಿಂದಲೇ ಆಗುತ್ತದೆ. ಅಸೂಯೆ ಹೆಚ್ಚಾದರೆ ಅದರಿಂದ ಅವರ ಗೌರವವು ಕ್ರಮೇಣ ಕ್ಷೀಣಿಸುತ್ತಾ ಹೋಗುತ್ತದೆ. ಕಾಮ ಹೆಚ್ಚಾದರೆ ಅಂತಹಾ ಹೆಣ್ಣು ಅಥವಾ ಗಂಡಿನಿಂದಲೇ ಆ ವ್ಯಕ್ತಿಯು ಅವನತಿಗೆ, ಅವಮಾನಕ್ಕೆ ಈಡಾಗುತ್ತಾರೆ. ಮದ ಹೆಚ್ಚಾದರೆ ಅವರ ಹಣ ನೀರಿನಂತೆ ಖರ್ಚಾಗುತ್ತದೆ.

ಮುಖದ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ರೋಹಿಣಿ, ಮೃಗಶಿರಾ ಮತ್ತು ಆರಿದ್ರಾಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಮುಖದ ಮೇಲೆ ಆಗುತ್ತದೆ. ಅಂತಹಾ ವ್ಯಕ್ತಿಯ ಮುಖ ತುಂಬಾ ಹೊಳಪಿನಿಂದ ತುಂಬಿರುತ್ತದೆ. ಸದಾ ಲವಲವಿಕೆ ಅವರಲ್ಲಿ ಕಾಣುತ್ತದೆ. ಸೂರ್ಯಚಂದ್ರರನ್ನು ಬಿಂಬಿಸುವ ಕಣ್ಣುಗಳು ಫಳಫಳ ಎಂದು ಮಿಂಚುತ್ತಿರುತ್ತವೆ. ವ್ಯಕ್ತಿಯು ಆಕರ್ಷಕವಾಗಿರುತ್ತಾರೆ. ಭೌತಿಕವಾದ ಎಲ್ಲಾ ಲಾಭಗಳೂ ಅವರಿಗೆ ಲಭ್ಯವಾಗುತ್ತದೆ. ಕೀರ್ತಿ ಅವರನ್ನು ಹುಡುಕಿಕೊಂಡು ಬರುತ್ತದೆ. ಅವರು ಉತ್ತಮ ವಾಗ್ಮಿಗಳಾಗುತ್ತಾರೆ. ಅಥವಾ ಸಂಗೀತಗಾರರು, ಗಮಕಿಗಳು ಹರಿಕತೆ ದಾಸರು, ಮಾತುಗಾರರು, ಭಾಷಣಕಾರರು, ಉಪನ್ಯಾಸಕರು, ಪ್ರವಚನಕಾರರು, ಯೋಗಿಗಳು, ಗುರುಗಳು ಮುಂತಾದ ಹೆಸರಾಂತ ಸ್ಥಾನಗಳನ್ನು ಪಡೆಯುತ್ತಾರೆ.

ಇವರನ್ನು ದುರಹಂಕಾರವು ಆವರಿಸಿಕೊಳ್ಳುತ್ತದೆ. ನಾನು ಎನ್ನುವ ಅಹಂಕಾರಕ್ಕಿಂತ ಮೇಲಿನದಾದ 'ನಾನೇ ಎಲ್ಲಾ' ಎನ್ನುವ ದುರಹಂಕಾರದಿಂದಾಗಿ ಅವರಿಗೆ ಸಿಕ್ಕ ಗೌರವವು ನಿಧಾನವಾಗಿ ಕಡಿಮೆಯಾಗುತ್ತಾ ಬರುತ್ತದೆ. ಅಷ್ಟರೊಳಗೆ ಇವರು ಸಮಾಜದ ಮೇಲೇ ತುಂಬಾ ಪರಿಣಾಮಗಳನ್ನು ಬೀರಿರುತ್ತಾರೆ. ತಮ್ಮದೇ ಗುಂಪನ್ನು, ಶಿಷ್ಯಂದಿರನ್ನು, ಅನುಯಾಯಿಗಳನ್ನು, ಹಿಂಬಾಲಕರನ್ನು, ಅಭಿಮಾನಿಗಳನ್ನು, ಪ್ರೀತಿಸುವವರನ್ನು, ಆರಾಧಕರನ್ನು ಹೊಂದಿರುತ್ತಾರೆ. ಹೀಗಾಗಿ ಅವರ ಪ್ರಭಾವ ಇಲ್ಲದಿದ್ದಾಗಲೂ ಅವರು ಮರಣ ಹೊಂದಿದ ಮೇಲೂ ಮೇಲಿನ ಜನ ಅವರ ಹೆಸರನ್ನು ಅಜರಾಮರ ಮಾಡುವ ಪ್ರಯತ್ನದಲ್ಲಿ ಇರುತ್ತಾರೆ.

ಹೊಟ್ಟೆಯ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಮುಂದಿನ ಐದು ನಕ್ಷತ್ರಗಳಾದ ಪುನರ್ವಸು, ಪುಷ್ಯ, ಆಶ್ಲೇಷಾ, ಮುಖಾ ಮತ್ತು ಪೂರ್ವಫಲ್ಗುಣಿ ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಹೊಟ್ಟೆಯ ಮೇಲೆ ಆಗುತ್ತದೆ. ಹೊಟ್ಟೆ ಎಂದರೆ ಆ ವ್ಯಕ್ತಿಯು ಆರ್ಥಿಕವಾಗಿ ಅಪಾರ ಸಂಪತ್ತನ್ನು ಹೊಂದಿರುತ್ತಾರೆ ಅಥವಾ ಸಂಪಾದನೆ ಮಾಡುತ್ತಾರೆ. ಏನೇ ಆದರೂ ಸುಖವಾದ ಜೀವನ ನಡೆಸುತ್ತಿರುತ್ತಾರೆ. ಯಾವುದನ್ನೂ ಹೆಚ್ಚು ಹಚ್ಚಿ ಕೊಳ್ಳುವುದಿಲ್ಲ. ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಅವರಾಯಿತು ಅವರ ಪಾಡಾಯಿತು ಎನ್ನುವಂತೆ ಇರುತ್ತಾರೆ. ಅವರ ಸಂಸಾರ ಸಹಾ ಚೆನ್ನಾಗಿಯೇ ನಡೆಯುತ್ತದೆ. ಪರಿಶ್ರಮ ಪಡುವಷ್ಟು ಕಾಲ ಇವರು ಶ್ರೀಮಂತರಾಗಿಯೇ ಇರುತ್ತಾರೆ.

ಇವರು ಪ್ರೀತಿಯ ಅಮಲಿನಲ್ಲಿ ಬಿದ್ದು, ಕುಡುಕರಾಗುತ್ತಾರೆ. ಸೋಮಾರಿಗಳಾಗುತ್ತಾರೆ. ಹೀಗೆ ತಮ್ಮ ಬದುಕನ್ನು ಗಂಭೀರವಾಗಿ ಪರಿಗಣಿಸದೇ ಇದ್ದಾಗ ಇರುವ ಶ್ರೀಮಂತಿಕೆ ಹೊರಟು ಹೋಗುತ್ತದೆ. ಯಾವುದೇ ನಿರ್ದಿಷ್ಟವಾದ ಕೆಲಸವನ್ನೂ ಮಾಡದ ಕಾರಣ ಗಳಿಸಿದ್ದನ್ನು ಕಳೆದುಕೊಳ್ಳತೊಡಗುತ್ತಾರೆ. ಯಾವುದೇ ನೌಕರಿಗೂ ಹೋಗದೇ, ವ್ಯಾಪಾರ -ವ್ಯವಹಾರಗಳನ್ನೂ ಮಾಡದೇ ಸೋಮಾರಿಗಳಾಗಿ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಅದಕ್ಕಿಂತಲೂ ಪ್ರೀತಿಯ ಹುಚ್ಚು ಹೆಚ್ಚಾದರೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡುತ್ತಾರೆ. ಬಳಿಕ ಕುಡಿತ ಇವರನ್ನು ಆವರಿಸಿಕೊಳ್ಳುತ್ತದೆ.

ಕೈಗಳ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಉತ್ತರ ಫಲ್ಗುಣಿ, ಹಸ್ತ, ಚಿತ್ತೆ, ಸ್ವಾತಿ, ವಿಶಾಖ, ಅನುರಾಧ, ಜೇಷ್ಠ, ಮೂಲ ಈ ಎಂಟು ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಕೈಗಳ ಮೇಲೆ ಆಗುತ್ತದೆ. ಇವರು ತುಂಬಾ ಶ್ರಮಜೀವಿಗಳಾಗಿರುತ್ತಾರೆ. ಹಣ ಇವರ ಕೈಯಲ್ಲಿ ಸದಾ ಹರಿದಾಡುತ್ತಿರುತ್ತದೆ. ಆದರೆ ಸ್ವಲ್ಪವೂ ಉಳಿಯುವುದಿಲ್ಲ. ಕಾರಣ ಇವರು ತಮಗೆ ಅಥವಾ ತಾವು ಇಷ್ಟಪಡುವವರಿಗೆ ಸಂತೋಷವಾದರೂ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾರೆ. ದುಃಖವಾದರೂ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾರೆ. ಇವರ ಈ ಗುಣವೇ ಇವರಿಗೆ ಶತ್ರು.

ಇವರು ಯಾವಾಗಲೂ ಐಶಾರಾಮದ ಜೀವನವನ್ನು ಆಸ್ವಾದಿಸಬೇಕು ಎನ್ನುವ ಮನೋಭಾವದವರು. ಸಾಲ ಇವರಿಗೆ ತೀರಾ ಸಾಮಾನ್ಯ. ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು ಎನ್ನುವ ಸ್ವಭಾವ ಇವರದ್ದು. ಆದರೆ ಇವರಿಗೆ ಸಾಲ ಕೊಟ್ಟವ ಮಾತ್ರ ಕೋಡಂಗಿಯಾಗುತ್ತಾನೆ. ಕಾರಣ ಇವರಿಗೆ ಸಾಲ ಮಾಡಿದ ನೆನಪೇ ಇರುವುದಿಲ್ಲ, ಕೊಡುವ ಮಾತು ದೂರದ್ದು. ಹೀಗೆ ಮತ್ತೆ ಮತ್ತೆ ಹೊಸಬರನ್ನು ಹುಡುಕಿ ಸಾಲ ಮಾಡುವುದು ಇವರ ಜಾಣ್ಮೆ. ಲಕ್ಷಾಂತರ ಸಾಲ ಮಾಡಿ ಪರಿತಪಿಸುತ್ತ, ದುಡಿದಿದ್ದನ್ನೆಲ್ಲಾ ಅದಕ್ಕೆ ಕಟ್ಟುತ್ತಾ ಇರುತ್ತಾರೆ. ಇದಕ್ಕಾಗಿ ಇವರು ಎಂದಿಗೂ ಪಶ್ಚಾತ್ತಾಪ ಪಡುವುದಿಲ್ಲ.

ಪಾದಗಳ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠಾ, ಶತಭೀಷಾ, ಪೂರ್ವಾಭಾದ್ರ, ಉತ್ತರಾಭಾದ್ರ, ರೇವತಿ ಈ ಎಂಟು ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಪಾದಗಳ ಮೇಲೆ ಆಗುತ್ತದೆ. ಇಂತಹಾ ವ್ಯಕ್ತಿಗಳ ಜೀವನದಲ್ಲಿ ನಿರಂತರ ಬದಲಾವಣೆಗಳು ಆಗುತ್ತಿರುತ್ತವೆ. ಸದಾ ಕಾಲ ಪ್ರಯಾಣ ಮಾಡುವುದನ್ನು ಇವರು ಇಷ್ಟ ಪಡುತ್ತಾರೆ. ಅಥವಾ ಇವರದು ಅಲೆದಾಟದ ಸ್ವಭಾವ ಆಗಿರುತ್ತದೆ. ಇವರ ಪ್ರಯಾಣ ಅಥವಾ ಅಲೆದಾಟಕ್ಕೆ ವಿವಿಧ ಮುಖಗಳಿವೆ; ಇವರು ಯಾವುದಾದರೂ ಖಾಸಗಿ ಕಂಪನಿಗಳಲ್ಲಿ ಇದ್ದರೆ ಒಂದೋ ವಿವಿಧ ಬ್ರಾಂಚುಗಳಿಗೆ ಅಲೆದಾಡುತ್ತಾರೆ. ಅಥವಾ ಕಂಪನಿಯಿಂದ ಕಂಪನಿಗೆ ಅಲೆದಾಡುತ್ತಾರೆ. ಸರ್ಕಾರಿ ಇಲಾಖೆಗಳಲ್ಲಿ ಇದ್ದರೆ ಇವರನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಮತ್ತೆಲ್ಲಿಗೋ ಎತ್ತಿ ಹಾಕುತ್ತಾ ಇರುತ್ತಾರೆ. ಅದೇ ಇವರು ಯಾವುದರಲ್ಲಿಯೂ ಇಲ್ಲದಿದ್ದರೆ ತಾವೇ ಚಾರಣ, ಪ್ರವಾಸ, ತೀರ್ಥಯಾತ್ರೆ, ಸೈಕಲ್-ಬೈಕ್‌ಯಾತ್ರೆ ಹೀಗೆ ಒಂದಲ್ಲಾ ಒಂದು ಕಡೆಗೆ ಹೋಗುತ್ತಲೇ ಇರುತ್ತಾರೆ. ಕೊನೆಗೆ ಸ್ನೇಹಿತರ ಮನೆ, ನೆಂಟರ ಮನೆ, ಮದುವೆ, ಮುಂಜಿ, ಮುಂತಾದ ಸಮಾರಂಭಗಳಾದರೂ ಇವರಿಗೆ ಹೋಗಲೇಬೇಕು. ಇವೂ ಇಲ್ಲದಿದ್ದಾಗ ದಿನಾ ಸಂಜೆ ಹತ್ತಿರದ ಪೇಟೆಗಾದರೂ ಹೋಗುತ್ತಾರೆ. ಇದು ಇವರ ಬದುಕಿನ ಬದಲಾವಣೆಗೂ ಕಾರಣವಾಗುತ್ತದೆ, ಇವರ ದೌರ್ಬಲ್ಯವೂ ಆಗಿರುತ್ತದೆ.

ದುರ್ಜನರ ಗುಣಸ್ವಭಾವ

ಸಜ್ಜನೈಃ ವರ್ಷಕಾಲೀನ ಸಾಧಿತಂ ದುರ್ಜನಾಃ ಕ್ಷಣಾತ್ ।
ನಾಶಯಂತಿ ಯಥಾ ವೃಕ್ಷಂ ವಹ್ನಿಜ್ವಾಲಾಃ ಸಮಂತತಃ ॥ -ಸುವಚನ ಶತಕಮ್

ಸಜ್ಜನರು ವರ್ಷದಲ್ಲಿ ಸಾಧಿಸಿದುದನ್ನು ದುರ್ಜನರು ಕ್ಷಣ ಮಾತ್ರದಲ್ಲಿ ನಾಶ ಮಾಡುತ್ತಾರೆ. ಎಷ್ಟೋ ವರ್ಷ ಕಾಲ ಬೆಳೆದ ಮರವನ್ನು ಬೆಂಕಿಯ ಜ್ವಾಲೆಗಳು ಬೇಗನೇ ಸುಟ್ಟ ಹಾಗೆ -ಎಂಬುದು ಶ್ಲೋಕಾರ್ಥ.

ಲೋಕದಲ್ಲಿರುವ ಜನರ ನಡೆ-ನುಡಿಗಳನ್ನು ಅನುಲಕ್ಷಿಸಿ ಸಜ್ಜನರು, ದುರ್ಜನರು ಎಂದು ಗುರುತಿಸಲಾಗುತ್ತದೆ. ಎಲ್ಲರೂ ಒಳ್ಳೆಯವರಾಗಲಿ 'ದುರ್ಜನೋ ಸಜ್ಜನೋ ಭೂಯಾತ್' ಎಂಬುದು ಸುಸಂಸ್ಕೃತ ಮನಸ್ಸುಗಳ ಚಿಂತನೆ. ಆದರೆ ಅದು ಸುಲಭದ ಮಾತಲ್ಲ. ಲೋಕದ ಒಳಿತನ್ನು ಹಾರೈಸುವುದು, ಜನರಿಗೆ ಒಳ್ಳೆಯದು ಮಾಡುವುದು... ಇವು ಸಜ್ಜನರ ಕಾಯಕವಾದರೆ ಇದಕ್ಕೆ ವಿರುದ್ಧವಾದ ಸ್ವಭಾವ ದುರ್ಜನರದ್ದು.



ಸಜ್ಜನರು ಒಳ್ಳೆಯ ಕಾರ್ಯವನ್ನು ಮಾಡುತ್ತಾ ಸಾಗಿದರೆ ಅದನ್ನು ಹಾಳು ಮಾಡುವುದೇ ದುರ್ಜನರ ಸ್ವಭಾವ. ಯಾವಾಗಲೂ ಒಳ್ಳೆಯ ಕರ್ಮದ ಫಲ ಸಿಗುವುದಕ್ಕೆ ಸಮಯ ಬೇಕು. ವರ್ಷಾನುಗಟ್ಟಲೆ ಕಾಯಬೇಕು. ಆದರೆ ಅದನ್ನು ಹಾಳು ಮಾಡುವುದಕ್ಕೆ ದುಷ್ಟರಿಗೆ ಹೆಚ್ಚು ಸಮಯ ಬೇಡ. ಕ್ಷಣಾರ್ಧದಲ್ಲಿ ನಾಶ ಮಾಡುತ್ತಾರೆ. ಆ ಬಗ್ಗೆ ಅವರಿಗೆ ಬೇಸರವೂ ಇಲ್ಲ.

ಇದಕ್ಕೆ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧವೇ ಸಾಕ್ಷಿ. ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಈ ದೇಶಗಳ ನಡುವೆ ಯುದ್ಧ ಜೋರಾಗಿ ನಡೆಯುತ್ತಿದೆ. ತಮ್ಮ ತಮ್ಮ ಸ್ವಾರ್ಥಕ್ಕಾಗಿ ಈ ಯುದ್ಧ. ಆದರೆ ಅದರ ದುಷ್ಪರಿಣಾಮ ಇಡೀ ಜಗತ್ತಿಗೇ ಆಗುತ್ತಿದೆ. ಜಗತ್ತು ಭಯದಿಂದ ಕಂಪಿಸುತ್ತಿದೆ. ದಿನನಿತ್ಯದ ಜೀವನ ದುರ್ಭರವಾಗಿ ಜನರು ಕಂಗಾಲಾಗಿದ್ದಾರೆ. ಇದು ಹೀಗೇ ಮುಂದುವರಿದರೆ ಭವಿಷ್ಯ ಭಯಾನಕವಾಗಲಿದೆ.

ಈಗಾಗಲೇ ಸಾವಿರಾರು ಜನ ಪ್ರಾಣ ಕಳಕೊಂಡಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳು, ಆಯಕಟ್ಟಿನ ಸ್ಥಳಗಳು ಬಾಂಬ್ ದಾಳಿಗೆ ತುತ್ತಾಗಿವೆ. ತೈಲ ಸ್ಥಾನಗಳು ಹೊತ್ತಿ ಉರಿಯುತ್ತಿವೆ. ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರುತ್ತಿವೆ.

ಇಷ್ಟು ವರ್ಷಗಳ ಕಾಲ ಮಾಡಿದ ಸಾಧನೆ ದುಷ್ಟ ಜನರ ಪರಮ ಸ್ವಾರ್ಥದಿಂದಾಗಿ ನಾಶವಾಗುತ್ತಿದೆ. ಎಷ್ಟೋ ವರ್ಷಗಳ ಕಾಲ ಬೆಳೆದ ಮರ ಬೆಂಕಿಗೆ ಆಹುತಿಯಾದಂತಾಯಿತು. ಹುಲುಸಾಗಿ ಬೆಳೆದ ಹುಲ್ಲುಗಾವಲು ಬೆಂಕಿಯ ಕೆನ್ನಾಲಿಗೆಗೆ ಬಲಿಯಾದಂತಾಯಿತು. ಚೆನ್ನಾಗಿ ಬೆಳೆದು ನಿಂತ ಪೈರನ್ನು ಪ್ರವಾಹ ಕೊಚ್ಚಿಕೊಂಡು ಹೋದಂತಾಯಿತು. 'ಕುಂಬಾರಗೆ ವರುಷ ದೊಣ್ಣೆಗೆ ನಿಮಿಷ' ಎಂಬಂತೆ ಬಹುವರ್ಷದ ಸಾಧನೆ ಯುದ್ಧ ಪಿಪಾಸುಗಳಿಂದಾಗಿ ಧರಾಶಾಯಿಯಾಯಿತು. ಒಳ್ಳೆಯದನ್ನು ಮಾಡಲು ತುಂಬಾ ಪರಿಶ್ರಮ ಬೇಕು. ಸಾಕಷ್ಟು ವೆಚ್ಚ ಮಾಡಬೇಕು. ಹಾಳು ಮಾಡುವುದಕ್ಕೆ ಒಂದೇ ಒಂದು ಕ್ಷಣ ಸಾಕು. ಮನುಕುಲ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಾವೆಲ್ಲರೂ ಈ ಜಗತ್ತಿಗೆ ಅತಿಥಿಯಾಗಿ ಬಂದವರು. ಸಾಧ್ಯವಾದರೆ ಒಳಿತನ್ನು ಮಾಡಬೇಕು. ಇಲ್ಲವಾದರೆ ಸುಮ್ಮನಿರಬೇಕು. ವ್ಯವಸ್ಥೆಯನ್ನು ಹಾಳು ಮಾಡಲು ಮುಂದಾಗಬಾರದು. ಭಗವಂತನ ಸೃಷ್ಟಿ ಈ ಪ್ರಪಂಚ. ಇದನ್ನು ಹಾಳು ಮಾಡುವ ಅಧಿಕಾರ ಯಾರಿಗೂ ಇಲ್ಲ. ನಮ್ಮಿಂದೇನು ಒಳ್ಳೆಯದನ್ನು ಮಾಡಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ. ದ್ರೋಹ, ನಾಶದಂತಹ ಮಹಾಪಾತಕಕ್ಕೆ ಮುಂದಾಗಬಾರದು.

ಆತ್ಮಪ್ರಶಂಸೆ-ಇನ್ನೊಬ್ಬರ ದೋಷಗಳತ್ತ ದೃಷ್ಟಿ

ಆತ್ಮರತಿ ಅಪಾಯಕಾರಿಯಾಗುವುದು ಇತರರ ಜಾತಿ, ಮತ, ಪಂಥ, ನಂಬಿಕೆಗಳಲ್ಲಿ ದೋಷಗಳನ್ನು ಹುಡುಕಿದಾಗ.

ಒಳನೋಟ
• ಹೆ.ಬಾ. ಮಲ್ಯ



ಮನುಷ್ಯ ಜೀವಿಯಲ್ಲಿ ದೇವರು ಅನೇಕ ವಿಧದ ಗುಣಸ್ವಭಾವಗಳನ್ನು ತುಂಬಿದ್ದಾನೆ. ಸಂದರ್ಭಕ್ಕನುಸಾರವಾಗಿ, ಮಾನವನ ಪ್ರತಿಸ್ಪಂದನೆಗನುಗುಣವಾಗಿ ಕೆಲವು ಒಳ್ಳೆಯವು, ಕೆಲವು ಕೆಟ್ಟವು ಎಂದು ಮಾನವ ನಿರ್ಧರಿಸಿಬಿಡುತ್ತಾನೆ. ಉದಾಹರಣೆಗೆ ಅರಿಷಡ್ವರ್ಗಗಳನ್ನೇ ತೆಗೆದುಕೊಳ್ಳುವ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇತ್ಯಾದಿ. ವಾಸ್ತವದಲ್ಲಿ ಇವುಗಳಲ್ಲಿ ಯಾವುದೂ ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ. ಮಾನವ ಜೀವನದಲ್ಲಿ ಈ ಎಲ್ಲ ಗುಣಗಳೂ ಸಂದರ್ಭಕ್ಕನುಗುಣವಾಗಿ ಉಪಯೋಗಕ್ಕೂ ಬರುತ್ತವೆ. ಮಿತಿ ಮೀರಿದರೆ ಕೆಡುಕೂ ಸಂಭವಿಸುತ್ತದೆ. ಊಟದಲ್ಲಿ ಷಡ್ರಸಗಳಿರಬೇಕು. ಉಪ್ಪು, ಹುಳಿ, ಖಾರ, ಆಮ್ಲ, ಕಹಿ, ಸಿಹಿ ಇತ್ಯಾದಿ. ಆದರೆ ಯಾವುದನ್ನು ಯಾವ ಖಾದ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕು ಎಂಬುದಕ್ಕೆ ಲೆಕ್ಕಾಚಾರ ಇದೆ. ಸಮ ಪ್ರಮಾಣ ಅಥವಾ ಅಗತ್ಯಕ್ಕೆ ಹಾಗೂ ರುಚಿ ಮತ್ತು ಆರೋಗ್ಯಕ್ಕೆ ಪೂರಕವಾಗುವಂತೆ ಉಪಯೋಗಿಸಿದಾಗ ಅದು ಹಿತ ಹಾಗೂ ತೃಪ್ತಿಯನ್ನು ನೀಡುತ್ತದೆ, ಅದು ಮೃಷ್ಟಾನ್ನವಾಗುತ್ತದೆ. ಮಾನವ ಗುಣ ಸ್ವಭಾವಗಳ ಬಗ್ಗೆಯೂ ಇದೇ ಮಾತು ಸತ್ಯ.

ಹೆಚ್ಚು ಕಮ್ಮಿ, ಪ್ರತಿಯೋರ್ವ ಮಾನವನಲ್ಲೂ ಆತ್ಮಪ್ರಶಂಸೆ ಎಂಬ ಗುಣ ಅಥವಾ ದೋಷ ಇದ್ದೇ ಇರುತ್ತದೆ. ಕೆಲವರು ಪರೋಕ್ಷವಾಗಿ ತನ್ನನ್ನು ಹೊಗಳಿಕೊಂಡರೆ, ಕೆಲವರು ನೇರವಾಗಿ ಹೊಗಳಿಕೊಳ್ಳುತ್ತಾರೆ. ತಾನು, ತನ್ನ ಹೆಂಡತಿ, ಮಗು, ತನ್ನ ಹಿರಿಯರು ಎಲ್ಲರೂ ಒಳ್ಳೆಯವರು, ಸಾಹಸಿಗಳು, ಆದರ್ಶಪ್ರಾಯರು ಎಂದು ಹೇಳಿಕೊಳ್ಳುವುದುಂಟು. ವಾಸ್ತವ ಬೇರೆಯೇ ಇರುತ್ತದೆ. ಮಿತ್ರರು, ಸಂಬಂಧಿಗಳ ಮನೆಗೆ ಹೋದಾಗ, ಬಂದವರ ಬಗೆಗಿಂತ ತನ್ನ ವಿಷಯಗಳನ್ನೇ ಹೇಳುತ್ತಾ ಹೋಗುತ್ತಾರೆ. ತಮ್ಮ ಮಗು, ಅದರ ಗುಣ, ಪ್ರತಿಭೆಗಳ ಬಗ್ಗೆ ಇನ್ನಿಲ್ಲದಂತೆ ಹೊಗಳುತ್ತಾರೆ. ಮುಂದೆ ಅದು ಬೆಳೆದು ಅಹಂಕಾರದ ಸ್ವಭಾವ ಬೆಳೆಸಿಕೊಳ್ಳುವುದೇ ಹೆಚ್ಚು. ತಮ್ಮ ವಂಶ ಹಾಗೂ ಕುಟುಂಬದ ಹಿರಿಮೆಯನ್ನು ಬಣ್ಣಿಸುವುದುಂಟು. ವ್ಯಕ್ತಿ ಮಾತ್ರವಲ್ಲ ಜಾತಿ ಬಗ್ಗೆ ಹೊಗಳಿಕೊಳ್ಳುವುದು ಉಂಟು. 84 ಲಕ್ಷ ಯೋನಿಗಳಲ್ಲಿ ಮಾನವ ಜೀವಿಯೇ ಶ್ರೇಷ್ಠ, ಅದರಲ್ಲೂ ತಮ್ಮ ಜಾತಿಯೇ ಶ್ರೇಷ್ಠ- ಹೀಗೆ ಸಾಗುತ್ತದೆ ಪ್ರಶಂಸೆಯ ಧಾಟಿ.

ಇದರಲ್ಲಿ ಬಹಳ ಅಪಾಯವಿದೆ ಎಂದೇನೂ ಅಲ್ಲ. ತೊಂದರೆ ಉಂಟಾಗುವುದು ಈ ಆತ್ಮರತಿ ಮಿತಿಮೀರಿದಾಗ. ಆಗಲೂ ಅದನ್ನು ಕ್ಷಮಿಸಿ ಬಿಡಬಹುದು. ಆದರೆ ಬಹಳ ಅಪಾಯ ಎರಗುವುದು ಇತರರ ಜಾತಿ, ಮತ, ಪಂಥ, ನಂಬಿಕೆಗಳಲ್ಲಿ ದೋಷಗಳನ್ನು ಹುಡುಕುವ ಸ್ವಭಾವ ಬೆಳೆಸಿಕೊಂಡಾಗ. ಆಗ ಪರಸ್ಪರ ಅಪನಂಬಿಕೆ, ದ್ವೇಷ, ತಿರಸ್ಕಾರ ಬೆಳೆಯಲು ಕಾರಣವಾಗುತ್ತದೆ. ಸಾಮಾಜಿಕ ಸಾಮರಸ್ಯ ಕೆಡುತ್ತದೆ. ಇಂದು ಹಿಂದು ಸಮಾಜವನ್ನು ಕಾಡುತ್ತಿರುವ ಸಮಸ್ಯೆ ಇದೇ. ಘೋಂಗೀ ಬುದ್ಧಿಜೀವಿಗಳಿಗಂತೂ ಸದಾ ಇತರರ, ಇತರ ಸಂಘಟನೆ, ಪಕ್ಷದೊಳಗೆ ದೋಷ ಹುಡುಕುವುದೇ ಕೆಲಸ. ಇದನ್ನು ಪೂರ್ವಗ್ರಹ ಎನ್ನುತ್ತಾರೆ. ಇಂದು ದೇಶದಲ್ಲಿ ಪರಸ್ಪರ ದ್ವೇಷ, ಈರ್ಷ್ಯೆ, ಸಂಘರ್ಷ, ಅಸಹಿಷ್ಣುತೆ ಉಂಟಾಗಲು ಈ ಸ್ವಭಾವವೇ ಕಾರಣ. ತಮಗೆ ಒಪ್ಪಿಗೆ ಇಲ್ಲದ ಸಿದ್ಧಾಂತ, ಸಂಗತಿಗಳು, ನಂಬಿಕೆ, ಆಚರಣೆಗಳ ಬಗ್ಗೆ ಗುಣಾತ್ಮಕವಾಗಿ ವಿರೋಧಿಸುವುದರಲ್ಲಿ, ಟೀಕಿಸುವುದರಲ್ಲಿ ತಪ್ಪೇನಿಲ್ಲ. ಅದು ಅವರ ಸಂವಿಧಾನಾತ್ಮಕ ಹಕ್ಕು. ಆದರೆ ತೀರಾ ಕೆಳಮಟ್ಟದ, ವೈಯಕ್ತಿಕ, ಅವಮಾನಕರ ಟೀಕೆ, ಆರೋಪಗಳನ್ನು ಮಾಡುವುದು ಅಭಿಪ್ರಾಯ ಸ್ವಾತಂತ್ರ್ಯ ನೀಡಿದ ಸಂವಿಧಾನಾತ್ಮಕ ಹಕ್ಕಿನ ದುರುಪಯೋಗವಾಗುತ್ತದೆ. ಮೂಲಭೂತ ಹಕ್ಕಿನೊಂದಿಗೆ ಮೂಲಭೂತ ಕರ್ತವ್ಯಗಳೂ ಇವೆ ಎಂಬುದನ್ನು ಮರೆಯಬಾರದು. ಇಂಥ ನಡತೆಯಿಂದ ಸಾಮಾಜಿಕ ಸಾಮರಸ್ಯ ಕೆಡುವಂತಾಗಬಾರದು. ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯಬಾರದು. ಆದರೆ ಇಂದು ಕೆಲವು ಪಕ್ಷಗಳ ನಾಯಕರು, ಶಾಸಕರು, ಸಾಂಸದರು ಈ ಸಾಂವಿಧಾನಿಕ ಕಟ್ಟುಪಾಡುಗಳನ್ನು ಹರಿದೊಗೆದು ಬಾಯಿಗೆ ಬಂದಂತೆ ಮಾತನಾಡುವ, ನಿಂದಿಸುವ ಪ್ರವೃತ್ತಿ ಬೆಳೆದಿರುವುದರಿಂದಲೇ ರಾಜಕೀಯ, ಸಾಮಾಜಿಕ ಸ್ವಾಸ್ಥ್ಯ ಹದಗೆಟ್ಟಿದೆ. ಸಾಮಾಜಿಕ ಹಿತಕ್ಕಿಂತಲೂ ತಮ್ಮ ಸ್ವಂತ ಸ್ವಾರ್ಥಕ್ಕಾಗಿ ಹೀಗೆ ನಡೆದುಕೊಳ್ಳುವುದು ಕಂಡುಬರುತ್ತದೆ. ಸಂಸತ್ ಭವನದಲ್ಲಿ ಇವರು ನಡಕೊಂಡ ರೀತಿ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಶೋಭೆ ತರುವಂಥದ್ದಲ್ಲ.

ಈ ವರ್ಗದ ಜನರ ಮೊದಲ ಮೆಟ್ಟಿಲು ಆತ್ಮಪ್ರಶಂಸೆ, ಸ್ವಪ್ರತಿಷ್ಠೆ, ಪ್ರಸಿದ್ಧಿಗಳಿಸಲು ಮಾಡುವ ಪ್ರಯತ್ನ. ಇವರು ಇತರರ ಭಾವನೆಗಳಿಗೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ಬೆಲೆ ಕೊಡುವುದಿಲ್ಲ. ಕುತರ್ಕ ಮಾಡುವುದು, ಕಿರಿಚಾಡುವುದು, ಇದಿರಾಳಿಯು ತನ್ನ ಅಭಿಪ್ರಾಯ ವ್ಯಕ್ತಪಡಿಸಲು ಅಡ್ಡಿ ಪಡಿಸುವುದು, ಪಲಾಯನ ಮಾಡುವುದು (hit & run policy) ಇವರ ಸ್ವಭಾವ. ಆತ್ಮಪ್ರಶಂಸೆಯಿಂದ ಕೆಲವರಿಗೆ ಆತ್ಮತೃಪ್ತಿಯಾದಂತೆ ಅನಿಸುತ್ತದೆ. ಆದರೆ ಇದು ಶಾಶ್ವತ ತೃಪ್ತಿ ಅಲ್ಲ. ಆತ್ಮಪ್ರಶಂಸೆ ಜಂಕ್ ಫುಡ್ ಇದ್ದಂತೆ. ತಿನ್ನುವಾಗ ರುಚಿ ಎನ್ನಿಸುತ್ತದೆ. ಆದರೆ ಆರೋಗ್ಯ ಹದಗೆಡುತ್ತದೆ. ಇನ್ನು ಇತರರಲ್ಲಿನ ಹುಳುಕುಗಳನ್ನು ಹುಡುಕಿ ತಿನ್ನುವುದರಿಂದ ಕೆಲವರಿಗೆ ತೃಪ್ತಿ ಎನಿಸುತ್ತದೆ. ಹೊಲಗಳಲ್ಲಿ ಜಾನುವಾರುಗಳು ಮೇಯುತ್ತಿರುವಾಗ ಕೊಕ್ಕರೆಯೊಂದು ಹಸುವಿನ ಮೈಯಲ್ಲಿನ ಉಣುಗು, ಹುಳಗಳನ್ನು ಹುಡುಕಿ, ತಿಂದು ಹೊಟ್ಟೆ ಹೊರೆದುಕೊಳ್ಳುತ್ತದೆ. ಇತರರ ಹುಳುಕುಗಳನ್ನು ಹುಡುಕಿ ಅದನ್ನು ಹೇಳಿಕೊಂಡು ಚಪ್ಪರಿಸುವವರು ಈ ಕೊಕ್ಕರೆಯ ಜಾತಿಗೆ ಸೇರಿದವರು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಆತ್ಮಪ್ರಶಂಸೆ ಅಥವಾ ಸ್ವಪ್ರತಿಷ್ಠೆ, ಸ್ವಂತದ ಪ್ರಸಿದ್ಧಿ, ಪ್ರಚಾರ, ಇತರರಲ್ಲಿ ದೋಷಗಳನ್ನು ಹುಡುಕಿ ಆಡಿಕೊಳ್ಳುವ ಸಂಸ್ಕೃತಿ ಇಲ್ಲ. ಮಾತು ಮಾಣಿಕ್ಯ ಎನ್ನಲಾಗಿದೆ. ಮಾತಿಗೆ ಬಹಳ ಮಹತ್ವ ಇದೆ. ಸಭ್ಯ, ಅನ್ಯರಿಗೆ ನೋವಾಗದ ಮೃದು ಮಾತು ಇತರರನ್ನು ಹತ್ತಿರ ಸೆಳೆದುಕೊಳ್ಳುತ್ತದೆ. ಇತರರಲ್ಲಿನ ದೋಷಗಳ ಬಗ್ಗೆ ಅರಿವಿದ್ದರೂ ಅವುಗಳ ಬಗ್ಗೆ ಅನಾಸಕ್ತಿಯಿಂದಿರುವುದು, ಅವರಲ್ಲಿನ ಸದ್ಗುಣಗಳನ್ನು ಎತ್ತಿ ಹೇಳುವುದು ಈ ಮಣ್ಣಿನ ಸಂಸ್ಕೃತಿ. ಇತರರ ದೋಷಗಳ ಬಗ್ಗೆ ಸಾರ್ವಜನಿಕವಾಗಿ ಆಡಿಕೊಳ್ಳುವ ಸ್ವಭಾವ ಈ ನೆಲದ ಸಂಸ್ಕೃತಿಯಲ್ಲ. ಹೇಳಲೇಬೇಕೆಂದೆನಿಸಿದಾಗ ವೈಯಕ್ತಿಕವಾಗಿ ಸಂಬಂಧಪಟ್ಟವರ ಬಳಿ ನೇರವಾಗಿ ಒಳ್ಳೆ ಮಾತುಗಳಿಂದ ತಿಳಿಸಿ ಹೇಳುವುದು ತಪ್ಪಲ್ಲ. ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗಲೂ ಇದೇ ಸೂತ್ರ ಅನ್ವಯವಾಗುತ್ತದೆ. ಕೀಳು ಭಾಷೆಯ ಉಪಯೋಗ, ಇತರ ವ್ಯಕ್ತಿಗಳ ಜಾತಿ, ವರ್ಗ, ಸಮುದಾಯಗಳನ್ನು ಅವಮಾನಿಸುವುದು ಉತ್ತಮ ಸಂಸ್ಕೃತಿಯಂತೂ ಅಲ್ಲ. ಮಾತು ಹಾಗೂ ಭಾವನೆಗಳ ಮೇಲೆ ಹಿಡಿತವಿದ್ದರೆ ಉತ್ತಮ. ತಮ್ಮನ್ನು ತಾವೇ ಹೊಗಳಿಕೊಳ್ಳುವುದು ಪಕ್ವತೆಯ ಲಕ್ಷಣವಲ್ಲ. ಇತರರು ನಮ್ಮ ಬಗ್ಗೆ ಹೊಗಳುವಂತಾಗಬೇಕು. ಆಗಲೂ ಹೊಗಳಿಕೆಯಿಂದ ಉಬ್ಬಿ ಹೋಗಬಾರದು. ಆ ಮಟ್ಟಕ್ಕೆ ಬೆಳೆದು ತಾನು ಇನ್ನೂ ಹೆಚ್ಚಿನ ಯೋಗ್ಯತೆ ಗಳಿಸಬೇಕು ಎಂಬ ವಿನಮ್ರ ಭಾವ ಇರಬೇಕು. ಇಂಥವರು ಬೆಳೆಯುತ್ತಾರೆ.

ಡಾಕ್ಟರ್ ಹೆಡಗೇವಾರರಲ್ಲಿ ಇಂತಹ ಅನೇಕ ಸದ್ಗುಣಗಳಿದ್ದುದರಿಂದ, ಅನುಭವದಿಂದ ಅವರು ಅವುಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದರಿಂದ ಅವರು ಯುಗಪುರುಷರಾದರು. ತಾನು ಸಂಘಟನೆಯ ಗುರುವಾಗದೆ ಭಗವಾಧ್ವಜವನ್ನು ಗುರುವಾಗಿಟ್ಟದ್ದು ಅವರ ವಿನಮ್ರತೆ ಹಾಗೂ ದೂರ ದೃಷ್ಟಿಗೆ ಸಾಕ್ಷಿ. ಇಂಥ ಗುಣಗಳಿದ್ದುದರಿಂದಲೇ ಅವರು ಅನೇಕ ಯುವಕರ, ಬಾಲಕರ, ಹಿರಿಯರ ಮನಸ್ಸನ್ನಾಕರ್ಷಿಸಿ, ಸಂಪರ್ಕದ ಮೂಲಕ ಸಂಘಟನೆಗೆ ಜೋಡಿಸಲು ಸಾಧ್ಯವಾಯಿತು. ಶುದ್ಧ ಚರಿತ್ರೆ ಅವರದು. ಪ್ರಾಮಾಣಿಕ ವ್ಯಕ್ತಿತ್ವ. ರಾಜಕೀಯವಾಗಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ತನ್ನ ಪ್ರಾಮಾಣಿಕತೆಯಿಂದ, ನೈತಿಕತೆ, ಚಾರಿತ್ರ್ಯದಿಂದ ಅವರ ಮನಗೆದ್ದು ಮಿತ್ರತ್ವ ಬೆಳೆಸಿಕೊಳ್ಳುತ್ತಿದ್ದರು. ಅವರು ಹಿಂದು ಮಹಾಸಭೆಯ ನಾಯಕ ಡಾ. ಮೂಂಜೆಯವರ ಅನುಯಾಯಿ. ಸ್ವಾಭಾವಿಕವಾಗಿ ಅಂದಿನ ಕಾಂಗ್ರೆಸ್ ನಾಯಕರು ಇವರುಗಳನ್ನು ಸಾರ್ವಜನಿಕ ಸಭೆಗಳಲ್ಲಿ ಹೀನಾಯವಾಗಿ ಟೀಕಿಸುವುದು ಸಾಮಾನ್ಯವಾಗಿತ್ತು. ಡಾಕ್ಟರ್‌ಜೀಯವರ ಮಿತ್ರರಾಗಿದ್ದ ಓರ್ವ ಕಟ್ಟರ್ ಕಾಂಗ್ರೆಸ್ ನಾಯಕರು ನಾಗಪುರದ ಒಂದು ಸಾರ್ವಜನಿಕ ಸಭೆಯಲ್ಲಿ ಡಾ. ಮೂಂಜೆಯವರ ಬಗ್ಗೆ ಇನ್ನಿಲ್ಲದ ಟೀಕೆ ಮಾಡಿದರು. ಡಾಕ್ಟರ್‌ಜೀ ಹೆಸರು ಉಲ್ಲೇಖ ಮಾಡಿ ಟೀಕಿಸಬೇಕೆಂದು ಅಂದುಕೊಂಡರೂ ಡಾಕ್ಟರ್‌ಜೀ ಬಗ್ಗೆ ಒಂದೇ ಒಂದು ದೋಷ ಹುಡುಕಲಾಗದೆ ಅವರ ನಾಲಿಗೆ ಕಟ್ಟಿ ಹೋಯಿತು. ಅಂತ ಚಾರಿತ್ರ್ಯ ಡಾಕ್ಟರ್‌ಜೀಯವರದು. ಒಮ್ಮೆ ಡಾಕ್ಟರ್‌ಜೀಗೆ ಹಣದ ಅವಶ್ಯಕತೆ ಬಿದ್ದಾಗ ಅವರು ಅದೇ ಕಾಂಗ್ರೆಸ್ ನಾಯಕರ ಬಳಿ ಹೋದರು. ವೈಯಕ್ತಿಕವಾಗಿ ಡಾಕ್ಟರ್‌ಜೀ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದ ಆ ಕಾಂಗ್ರೆಸ್ ನಾಯಕರು ತಕ್ಷಣ ಅವಶ್ಯವಿದ್ದ ಹಣ ನೀಡಿದರು. ಆಗ ಡಾಕ್ಟರ್‌ಜೀ "ಒಂದು ಖಾಲಿ ಕಾಗದ ನೀಡಿ, ಸಾಲ ಪತ್ರ ಬರೆದು ಸಹಿ ಮಾಡಿಕೊಡುತ್ತೇನೆ" ಎಂದರು. ಆಗ ಆ ಕಾಂಗ್ರೆಸ್ ನಾಯಕರು "ಡಾಕ್ಟರ್‌ಜೀ, ನನಗೆ ತಲೆಕೆಟ್ಟಿದೆ ಎಂದುಕೊಂಡಿರಾ... ನಿಮ್ಮಂಥ ಪ್ರಾಮಾಣಿಕ ಚಾರಿತ್ರ್ಯದ ವ್ಯಕ್ತಿಯಿಂದ ಸಾಲಕ್ಕೆ ಪಾವತಿ ಪತ್ರ ಬರೆಸಿಕೊಳ್ಳಲು? ಏನೂ ಬೇಡ. ನಿಮ್ಮ ಮಾತೇ ಪಾವತಿ" ಎಂದು ಬಿಟ್ಟರು. ಅಂತ ಧವಳ, ಪರಿಶುದ್ಧ, ನಿಷ್ಕಳಂಕ ಚಾರಿತ್ರ್ಯ ಡಾಕ್ಟರ್‌ಜೀಯವರದು. ವಿರೋಧಿಗಳೂ ಗೌರವಿಸುವಂಥ ಗುಣನಡತೆ. ಅವರೊಬ್ಬ ಅಜಾತಶತ್ರುವಾಗಿದ್ದರು. ಎಲ್ಲಾ ಕಾರ್ಯಕರ್ತರು ಅವರ ಆದರ್ಶಗಳನ್ನು ಪಾಲಿಸುವುದು ಸಂಘಟನೆಗೆ ಶಕ್ತಿ ನೀಡುತ್ತದೆ. ಆತ್ಮಪ್ರಶಂಸೆ, ಪ್ರಸಿದ್ಧಿ, ಸ್ವ ಪ್ರತಿಷ್ಠೆ , ಸ್ವಪ್ರಚಾರಗಳಿಗೆ ಸಂಘಟನೆಯಲ್ಲಿ ಸ್ಥಾನವಿಲ್ಲ.

ನಮ್ಮ ಡಿಜಿಟಲ್ ಜಗತ್ತಿನ ಕರುಳಬಳ್ಳಿ ಈ ಸಾಗರದಾಳದ ಬೆಳ್ಳಿರೇಖೆ

▸ ಹರ್ಷ ಹೆಗಡೆ ಕೊಂಡದಕುಳಿ


ಈ ಕಥೆ ಶುರುವಾಗುವುದು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ. ಅದು ತಂತ್ರಜ್ಞಾನದೆಡೆಗಿನ ಮನುಷ್ಯನ ಕುತೂಹಲ ಆಗತಾನೇ ಹೆಪ್ಪುಗಟ್ಟುತ್ತಿದ್ದ ಕಾಲ. ಆಗಷ್ಟೇ ವಿದ್ಯುತ್ತಿನ ಆವಿಷ್ಕಾರವಾಗಿ, ಅದು ಸೃಷ್ಟಿಸಿದ ವಿಸ್ಮಯಕ್ಕೆ ಮಾನವ ಜಗತ್ತು ಬೆರಗಾಗಿತ್ತು. ವಿದ್ಯುತ್ತಿನ ಮೂಲಕ ನಡೆಯಬಹುದಾದ ನಾನಾ ಸಾಧ್ಯತೆಗಳೆಡೆಗೆ ನಿರೀಕ್ಷೆಯ ಕಣ್ಣುಗಳಿಂದಲೇ ಜಗತ್ತು ನೋಡುತ್ತಿತ್ತು.

ಅಂತಹ ಒಂದು ಸಾಧ್ಯತೆಯಾಗಿ ಟೆಲಿಗ್ರಾಫ್‌ಗಳು ಮುನ್ನೆಲೆಗೆ ಬಂದಿದ್ದವು. ನೆಲದ ಮೇಲಿನ ಸಂದೇಶಗಳ ರವಾನೆಯಲ್ಲಿ ಇವು ಹೊಸ ಅಲೆಯನ್ನೇ ಸೃಷ್ಟಿಸಿದ್ದವು. ಆದರೆ ಅವತ್ತಿನ ಕಾಲಕ್ಕೆ ಅಟ್ಲಾಂಟಿಕ್ ಸಾಗರದ ಆಚೆಗಿನ ದೇಶಕ್ಕೆ ಒಂದು ಸಣ್ಣ ಸಂದೇಶ ಕಳುಹಿಸಬೇಕೆಂದರೂ ಹಡಗುಗಳು ವಾರಗಟ್ಟಲೆ ಸಮುದ್ರದ ಅಲೆಗಳ ಮೇಲೆ ಹೊಯ್ದಾಡಬೇಕಿತ್ತು. ಅಷ್ಟಾಗಿಯೂ ಮಾಹಿತಿ ಗಮ್ಯವನ್ನು ತಲುಪುತ್ತದೆ ಎಂಬ ಯಾವ ಖಾತ್ರಿಯೂ ಇರುತ್ತಿರಲಿಲ್ಲ. ಹವಾಮಾನ ವೈಪರೀತ್ಯ, ಕಡಲ್ಗಳ್ಳರ ಭಯ ಇವೆಲ್ಲಾ ಅನಿಶ್ಚಿತತೆಗಳ ನಡುವೆಯೆ ಈ ಸಂವಹನ ನಡೆಯಬೇಕಿತ್ತು. ಅಂತಹ ದಿನಗಳಲ್ಲಿ, ಮನುಷ್ಯನ ಹಠಕ್ಕೆ ಮೊದಲ ಬಾರಿಗೆ ರೂಪ ಸಿಕ್ಕಿದ್ದು ಸಾಗರದ ಆಳದಲ್ಲಿ. ತಾಮ್ರದ ತಂತಿಯನ್ನು 'ಗಟ್ಟಾ-ಪರ್ಚಾ' ಎಂಬ ಮರದ ಅಂಟಿನಿಂದ ಸವರಿ ಸಮುದ್ರಕ್ಕೆ ಇಳಿಸಿದ ಆ ಮೊದಲ ಪ್ರಯತ್ನವು ಆಧುನಿಕ ಸಂವಹನ ಇತಿಹಾಸದಲ್ಲಿ ಕ್ರಾಂತಿಯನ್ನೇ ಮಾಡಿತು. ಜಗತ್ತಿನ ಮಾಹಿತಿ ವಿನಿಮಯದ ಮೊದಲ ನಾಡಿಮಿಡಿತವೆಂದೇ ಅದನ್ನು ಗುರುತಿಸಬಹುದು. ಆರಂಭಿಕ ದಿನಗಳಲ್ಲಿ ವೈಫಲ್ಯಗಳನ್ನು ಪದೇ ಪದೇ ಕಂಡರೂ, ಅಲೆಗಳ ಅಬ್ಬರದ ಕೆಳಗೆ ಮೌನವಾಗಿ ಮಲಗುವ ಆ ತಂತಿಗಳು ಮುಂದೊಂದು ದಿನ ಇಡೀ ಭೂಮಿಯನ್ನೇ ಒಂದುಗೂಡಿಸಿ ಪುಟ್ಟ ಹಳ್ಳಿಯಂತೆ ಮಾಡಲಿವೆ ಎಂಬ ಸತ್ಯ ಅಂದು ಯಾರೂ ಊಹಿಸಿರಲಿಲ್ಲ.

ನಮ್ಮದಿವತ್ತು ಫಾಸ್ಟ್ ಫಾರ್ವರ್ಡ್ ಜಗತ್ತು. ಎಲ್ಲವೂ ಬೆರಳ ತುದಿಯಲ್ಲಿಯೇ ಲಭ್ಯ. ಕನಿಷ್ಠ ಅವಶ್ಯಕತೆಯಾದ ಆಹಾರದಿಂದ ಹಿಡಿದು, ಮನರಂಜನೆ, ಬ್ಯಾಂಕಿಂಗ್ ಕ್ಷೇತ್ರದವರೆಗೆ ಎಲ್ಲವೂ ಇಂದು ಅಂಗೈ ಗೆರೆಗಳ ನಡುವೆಯೇ ನಡೆಯುತ್ತದೆ. ಇದಕ್ಕೆ ಮುಖ್ಯ ಕಾರಣ ಅಂತರ್ಜಾಲದಲ್ಲಿ ಮನುಷ್ಯ ಸಾಧಿಸಿದ ಪ್ರಗತಿ. ಸಹಜವಾಗಿ ಇಂಟರ್ನೆಟ್ ಅಂದಾಕ್ಷಣ ನಮ್ಮ ತಲೆಗೆ ತಟ್ಟನೆ ಬರುವುದೇ ಉಪಗ್ರಹಗಳು ಅಥವಾ ಮೊಬೈಲ್ ಟವರ್‌ಗಳು. ಆದರೆ ಜಗತ್ತು ಇಷ್ಟು ಗಟ್ಟಿಯಾಗಿ ಬೆಸೆದುಕೊಂಡಿರುವುದು ಗಗನದಲ್ಲಿರುವ ಉಪಗ್ರಹಗಳಿಗಿಂತಲೂ ಹೆಚ್ಚಾಗಿ, ನೀರಿನ ಆಳದಲ್ಲಿ ಮುಳುಗಿರುವ ಕೇಬಲ್‌ಗಳಿಂದ ಎನ್ನುವುದು ಅಚ್ಚರಿಯಾದರೂ ನಿಜ.

ಹೌದು, ಇಂದಿನ ಇಂಟರ್ನೆಟ್ ಸಂಚಾರದ ಶೇಕಡಾ 98 ರಷ್ಟು ಭಾಗ ಈ ಸಮುದ್ರದಾಳದ ಕೇಬಲ್‌ಗಳ ಮೂಲಕವೇ ನಡೆಯುತ್ತದೆ. ಕೇವಲ ಶೇಕಡಾ 2 ರಷ್ಟನ್ನು ಮಾತ್ರ ಉಪಗ್ರಹಗಳು ನಿಭಾಯಿಸುತ್ತವೆ. ಜಗತ್ತಿನಲ್ಲಿರುವ ವಿವಿಧ ಸಾಗರದಂಚಿನ ನಗರಗಳೇ ಈ ಸಂವಹನ ವ್ಯವಸ್ಥೆಯ ಹೆಬ್ಬಾಗಿಲು. ಮುಂಬೈ, ಚೆನ್ನೈ ಮತ್ತು ಕೊಚ್ಚಿಯಂತಹ ಕರಾವಳಿ ತೀರಗಳಲ್ಲಿ ಭೂಮಿಯನ್ನು ಬಂದು ಸೇರುವ ಈ ಕೇಬಲ್‌ಗಳು ಭಾರತದ ಸಂವಹನ ವ್ಯವಸ್ಥೆಯ ಮುಖ್ಯ ದ್ವಾರಗಳು.

ಈ ವ್ಯವಸ್ಥೆ ಕೆಲಸ ಮಾಡುವ ರೀತಿ ಅರ್ಥ ಮಾಡಿಕೊಂಡರೆ ಮನುಷ್ಯ ಈ ದಿಕ್ಕಿನಲ್ಲಿ ಕ್ರಮಿಸಿದ ಅಗಾಧತೆಯ ಅರಿವಾಗುತ್ತದೆ. ಇವತ್ತಿಗೂ ಇದು ಯಾವುದೇ ಜಾದೂವಿಗಿಂತ ಕಡಿಮೆ ಎನಿಸುವುದೇ ಇಲ್ಲ. ನೀವು ಮುಂಬೈನಲ್ಲಿ ಕುಳಿತು ಲಂಡನ್‌ನಲ್ಲಿರುವ ಸಂಬಂಧಿಯೊಬ್ಬರಿಗೆ ಒಂದು ಮೆಸೇಜ್ ಕಳುಹಿಸಿದರೆ, ಆ ಮಾಹಿತಿ ಮೊದಲು ನಿಮ್ಮ ಮೊಬೈಲ್‌ನಿಂದ ಟವರ್‌ಗೆ ಹೋಗಿ, ಅಲ್ಲಿಂದ



ಭೂಮಿಯ ಮೇಲಣ ಬೇರೆ ಬೇರೆ ಟವರ್ ಗಳಲ್ಲಿ ವರ್ಗಾವಣೆಯಾಗಿ ಕೊನೆಗೆ ಭೂಮಿಯಡಿಯ ಕೇಬಲ್ ಮೂಲಕ ಸಮುದ್ರ ತೀರದ 'ಲ್ಯಾಂಡಿಂಗ್ ಸ್ಟೇಷನ್'ಗೆ ತಲುಪುತ್ತದೆ. ಅಲ್ಲಿಂದ ಅದು ಲೇಸರ್ ಬೆಳಕಿನ ಕಿರಣವಾಗಿ ಬದಲಾಗಿ, ಸಮುದ್ರದ ತಳದಲ್ಲಿರುವ ಕೂದಲಿನಷ್ಟು ತೆಳುವಾದ ಆಪ್ಟಿಕಲ್ ಫೈಬರ್ ಎಳೆಗಳ ಮೂಲಕ ಲಕ್ಷಾಂತರ ಕಿಲೋಮೀಟರ್‌ಗಟ್ಟಲೆ ಪ್ರಯಾಣಿಸುತ್ತದೆ. ಸಮುದ್ರದ ಅತಿ ಹೆಚ್ಚು ಒತ್ತಡ ಮತ್ತು ಉಪ್ಪುನೀರಿನಿಂದ ರಕ್ಷಿಸಲು ಇವುಗಳಿಗೆ ಸ್ಟೀಲ್ ಮತ್ತು ಪ್ಲಾಸ್ಟಿಕ್‌ನ ಏಳು ಪದರಗಳ ಕವಚವಿರುತ್ತದೆ. ಟಾಟಾ ಕಮ್ಯುನಿಕೇಶನ್ಸ್, ರಿಲಯನ್ಸ್ ಜಿಯೋ, ಭಾರತೀ ಏರ್ಟೆಲ್‌ದಂತಹ ಸಂಸ್ಥೆಗಳು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿ ಈ ಜಾಲವನ್ನು ನಿರ್ವಹಿಸುತ್ತವೆ. ಪ್ರತಿ 80 ಕಿ.ಮೀಟರ್‌ಗೆ ಇರುವ ರಿಪೀಟರ್‌ಗಳು ವೇಗವನ್ನು ಕಳೆದುಕೊಂಡು ಮಂಕಾಗುವ ಬೆಳಕನ್ನು ವರ್ಧಿಸಿ ಮತ್ತೆ ವೇಗ ನೀಡುತ್ತಾ ಗುರಿ ತಲುಪಿಸುತ್ತವೆ. ಇವೆಲ್ಲಾ ನಡೆಯುವುದು ಕ್ಷಣಾರ್ಧದಲ್ಲಿ. ಒಂದು ಸೆಕೆಂಡನ್ನು 100 ಭಾಗಗಳಾಗಿಸಿದರೆ ಅದರ ಒಂದು ಭಾಗದಷ್ಟು ಅತ್ಯಲ್ಪ ಸಮಯದಲ್ಲಿ.

ಇಷ್ಟೆಲ್ಲಾ ಆದಾಗ್ಯೂ, ಪ್ರಕೃತಿಯ ಅನಿಶ್ಚಿತತೆ ಅಥವಾ ಮನುಷ್ಯನ ಅಜಾಗರೂಕತೆ ಈ ವ್ಯವಸ್ಥೆಯನ್ನು ಕ್ಷಣಮಾತ್ರದಲ್ಲಿ ಅಸ್ತವ್ಯಸ್ತಗೊಳಿಸಬಲ್ಲದು. ಸಮುದ್ರದಾಳದ ಭೂಕಂಪದಿಂದಲೋ ಅಥವಾ ಹಡಗಿನ ಬೃಹತ್ ಲಂಗರುಗಳು ತಗುಲಿಯೋ ಈ ಕೇಬಲ್‌ಗಳು ಕತ್ತರಿಸಲ್ಪಟ್ಟರೆ, ಇಡೀ ಪ್ರಪಂಚದ ನಾಡಿಮಿಡಿತವೇ ಸ್ತಬ್ದವಾಗಿಬಿಡುತ್ತದೆ. ಅಂತಹ ಸಂದರ್ಭದಲ್ಲಿ ಇದೇ ಉದ್ದೇಶಕ್ಕಾಗಿಯೇ ಇರುವ 'ಕೇಬಲ್ ಶಿಪ್'ಗಳು ಸಮುದ್ರದ ಮಧ್ಯಕ್ಕೆ ಹೋಗಿ, ಸೋನಾರ್ ಬಳಸಿ ತುಂಡಾದ ಜಾಗವನ್ನು ಹುಡುಕುತ್ತವೆ. ಬಳಿಕ ರೋಬೋಟ್‌ಗಳು ಸಮುದ್ರದ ತಳದಿಂದ ಆ ತುದಿಗಳನ್ನು ಮೇಲೆತ್ತಿ ತಂದು, ಹಡಗಿನ ಮೇಲಿರುವ ಇಂಜಿನಿಯರ್‌ಗಳು ಮೈಕ್ರೋಸ್ಕೋಪ್ ಅಡಿಯಲ್ಲಿ ಆ ಕೇಬಲ್‌ಗಳನ್ನು ಮತ್ತೆ ಜೋಡಿಸುತ್ತಾರೆ. ಈ ನಿರಂತರ ಹೋರಾಟವಿಲ್ಲದಿದ್ದರೆ, ನಾವು ಇಂದು ಅನುಭವಿಸುತ್ತಿರುವ ಡಿಜಿಟಲ್ ಲೋಕ ಕೇವಲ ಒಂದು ಕನಸು ಅಷ್ಟೇ.

ಸಮುದ್ರದ ಕಗ್ಗತ್ತಲಲ್ಲಿ ಮಲಗಿರುವ ಈ ಮಾಹಿತಿ ಹೆದ್ದಾರಿಗಳು ಮನುಷ್ಯನ ಬುದ್ಧಿವಂತಿಕೆಗೆ ಸಾಕ್ಷಿಯಾಗಿವೆ ನಿಜ. ಆದರೆ, ಅವೇ ನಮ್ಮ ಸೌಕರ್ಯಗಳಾಗಿ, ದಾಳಿಯ ನೆರಳಿನಲ್ಲಿಯೂ ಬಂದಿರುವುದೂ ಕೂಡ ಒಪ್ಪಲೇಬೇಕಾದ ಸತ್ಯ. ಕೇಬಲಗಳನ್ನು ಧ್ವಂಸ ಮಾಡುತ್ತೇವೆ ಎಂಬಂತಹ ಇರಾನ್‌ನ ಹೇಳಿಕೆಗಳು – ಬೆದರಿಕೆಗಳು ಇಷ್ಟೆಲ್ಲಾ ಒದ್ದಾಟ ಗುದ್ದಾಟಗಳ ಅರ್ಥವೇನು ಎಂಬ ಪ್ರಶ್ನೆಯನ್ನೇ ಹುಟ್ಟುಹಾಕುತ್ತವೆ. ಒಟ್ಟಿನಲ್ಲಿ ಏನನ್ನೋ ಸಾಧಿಸಬೇಕೆನ್ನುವ ದಾವಂತದಲ್ಲಿ ಬಿದ್ದು, ಖಂಡಾಂತರಗಳನ್ನು ಬೆಸೆದು ಮನುಷ್ಯನ ಏಳಿಗೆಯನ್ನು ಬಯಸಬೇಕಾಗಿದ್ದ ನಾವುಗಳು, ಈ ಅಗೋಚರ ತಂತಿಗಳ ಮೇಲೆ ನಮ್ಮ ಇಡೀ ಅಸ್ತಿತ್ವವನ್ನೇ ಅವಲಂಬಿತವಾಗಿಸಿಕೊಂಡು ವಿಕಾಸದೆಡೆಗೆ ಮುಖ ಮಾಡಿದ್ದೇವೆಯೋ ಅಥವಾ ಅರಿವಿಲ್ಲದ ವಿನಾಶದೆಡೆಗೋ ಎಂಬುದು ಇಂದಿಗೂ ಬಿಡಿಸಲಾಗದ ಒಗಟು.

ಯುಎಇ ಪ್ರತಿದಾಳಿ ನಡೆಸುತ್ತಿಲ್ಲ ಯಾಕೆ?



• ಟೆಹ್ರಾನ್: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮೇಲೆ ಇರಾನ್ ಶುಕ್ರವಾರವೂ ದಾಳಿ ನಡೆಸಿದೆ. ತನ್ನ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ಮತ್ತು ಸುಮಾರು 5 ಲಕ್ಷ ಇರಾನಿಯನ್ನರಿಗೆ ಆಶ್ರಯದಾತ ರಾಷ್ಟ್ರವಾದ ಯುಎಇ ಮೇಲೆ ಇರಾನ್ ನಿರಂತರ ದಾಳಿ ನಡೆಸುತ್ತಿರುವುದು ಅಚ್ಚರಿ ಮೂಡಿಸಿದೆ. ಆದರೆ ಯುಎಇ ಪ್ರತಿದಾಳಿ ನಡೆಸದೆ ಸಂಯಮ ಕಾಯ್ದುಕೊಂಡಿದೆ. ಇರಾನ್ ಮೇಲೆ ದಾಳಿ ನಡೆಸಲು ಯುಎಇ ಯಾಕೆ ಹಿಂಜರಿಯುತ್ತಿದೆ ಎಂಬ ಪ್ರಶ್ನೆ ಮೂಡಿಸಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ಶಕ್ತಿಶಾಲಿಯಾದರೆ ಪ್ರಾದೇಶಿಕ ಭದ್ರತೆಗೆ ಸಮಸ್ಯೆ ಎಂಬ ಕಾರಣದಿಂದ ಯುಎಇ, ಸೌದಿ ಅರೇಬಿಯಾ ಸೇರಿದಂತೆ ಹೆಚ್ಚಿನ ಗಲ್ಫ್ ರಾಷ್ಟ್ರಗಳು ಇರಾನ್ ಅನ್ನು ಉದ್ದೇಶಪೂರ್ವಕ ದೂರವಿಟ್ಟು, ಅಮೆರಿಕ ಜತೆ ವ್ಯಾಪಾರ ಸಂಬಂಧ ಬೆಳೆಸಿಕೊಂಡಿವೆ. ಸುನ್ನಿ ಮತ್ತು ಶಿಯಾ ಎರಡೂ ಇಸ್ಲಾಮಿಕ್ ಮೂಲಭೂತವಾದಿ ಸಿದ್ಧಾಂತಗಳನ್ನು ಯುಎಇ ಮತ್ತು ಸೌದಿ ಅರೇಬಿಯಾ ವಿರೋಧಿಸುತ್ತವೆ. ಇರಾನ್ ಜತೆ ವ್ಯಾಪಾರ ಸಂಬಂಧ ಉಳಿಸಿಕೊಂಡಿದ್ದರೂ ಸೈದ್ಧಾಂತಿಕವಾಗಿ ಬಹಳ ವ್ಯತ್ಯಾಸ ಅಭಿಪ್ರಾಯಗಳನ್ನು ಹೊಂದಿವೆ.



ಆದರೆ ಇರಾನ್ ಸೇನಾ ಸಾಮರ್ಥ್ಯ ಗೊತ್ತಿರುವ ಗಲ್ಫ್ ರಾಷ್ಟ್ರಗಳು ಭಯದಿಂದ ಪ್ರತಿದಾಳಿ ನಡೆಸುತ್ತಿಲ್ಲ. ವಿಶೇಷವಾಗಿ ಯುಎಇ ಮತ್ತು ಸೌದಿ ಅರೇಬಿಯಾ ಶಾಂತಿ, ಮಾತುಕತೆ, ವ್ಯಾಪಾರ, ಪ್ರಾದೇಶಿಕ ಸ್ಥಿರತೆ ಮತ್ತು ಅಭಿವೃದ್ಧಿ ದೃಷ್ಟಿಕೋನದಲ್ಲಿ ಚಿಂತನೆ ನಡೆಸುತ್ತವೆ. ಇರಾನ್ ಮೇಲೆ ಪ್ರತಿದಾಳಿ ನಡೆಸುವ ಮೂಲಕ ಮಧ್ಯಪ್ರಾಚ್ಯ ಯುದ್ಧದಲ್ಲಿ ಭಾಗವಹಿಸಲು ಯುಎಇ ಬಯಸುತ್ತಿಲ್ಲ. ಇರಾನ್ ಮೇಲೆ ಪ್ರತಿದಾಳಿ ನಡೆಸಿದ ಹಲವು ವದಂತಿಗಳನ್ನು ಯುಎಇ ಅಲ್ಲಗಳೆದಿದೆ.

ಪಾಲುದಾರ ರಾಷ್ಟ್ರವೇ ಪ್ರಮುಖ ಟಾರ್ಗೆಟ್!: ಇತ್ತೀಚೆಗೆ ಇರಾನ್ 457 ಖಂಡಾಂತರ ಕ್ಷಿಪಣಿಗಳು, 19 ಕ್ರೂಸ್ ಕ್ಷಿಪಣಿಗಳು ಮತ್ತು 2,038 ಡ್ರೋನ್‌ಗಳಿಂದ ನಮ್ಮ ಮೇಲೆ ದಾಳಿ ನಡೆಸಿದೆಯೆಂದು ಯುಎಇ ರಕ್ಷಣಾ ಸಚಿವಾಲಯ ದಾಖಲೆ ಬಿಡುಗಡೆಗೊಳಿಸಿದೆ. ಗಲ್ಫ್ ರಾಷ್ಟ್ರಗಳು ಮತ್ತು ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸುತ್ತಿದ್ದು, ಇದರಲ್ಲಿ ಅತ್ಯಧಿಕ ದಾಳಿ ತನ್ನ ವ್ಯಾಪಾರ ಪಾಲುದಾರ ರಾಷ್ಟ್ರ ಯುಎಇ ಮೇಲೆ ನಡೆಸಿದೆ.

ಫೆ.28ರ ಬಳಿಕ ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ನಡೆಸಿದ ಅತಿ ದೊಡ್ಡ ದಾಳಿ ಇದಾಗಿದೆ. ದುಬೈ ವಿಮಾನ ನಿಲ್ದಾಣ, ಬುರ್ಜ್ ಅಲ್-ಅರಬ್ ಹೋಟೆಲ್, ಪಾಮ್ ಜುಮೈರಾ ಮತ್ತು ಜಬೇಲಿ ಅಲಿ ಬಂದರನ್ನು ಗುರಿಯಾಗಿಸಿ ಇರಾನ್ ಮೊದಲ ದಿನವೇ ದಾಳಿ ನಡೆಸಿತ್ತು. ಮಧ್ಯಪ್ರಾಚ್ಯ ಯುದ್ಧವು ಕೇವಲ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಮಧ್ಯೆ ನಡೆಯುತ್ತಿಲ್ಲ.

ಇರಾನ್-ಯುಎಇ ನಡುವಿನ ವಿವಾದ

ಇರಾನ್ ಮತ್ತು ಯುಎಇ ನಡುವೆ ಅಬು ಮೂಸ, ಗ್ರೇಟರ್ ಟುನಬ್ ಮತ್ತು ಲೆಸ್ಸರ್ ಟುನಬ್ ಎಂಬ ಮೂರು ಸಣ್ಣ ದ್ವೀಪಗಳಿಗಾಗಿ ಭೌಗೋಳಿಕ ಭಿನ್ನಾಭಿಪ್ರಾಯಗಳಿವೆ. ಅಂದಾಜು 2000 ಜನಸಂಖ್ಯೆ ಇರುವ ಅಬು ಮೂಸ, ಮೂರು ದ್ವೀಪಗಳಲ್ಲಿ ದೊಡ್ಡ ದ್ವೀಪವಾಗಿದೆ. ಭೌಗೋಳಿಕವಾಗಿ ಮೂರೂ ದ್ವೀಪಗಳು ಹಾರ್ಮುಜ್ ಜಲಸಂಧಿಯ ದ್ವಾರದಂತೆ ಕುಳಿತುಕೊಂಡಿವೆ. ಈ ಮೂರು ದ್ವೀಪಗಳನ್ನು 1908ರಲ್ಲಿ ಬ್ರಿಟಿಷರು ವಶಪಡಿಸಿದ್ದರು. ಆದರೆ 1971ರಲ್ಲಿ ಯುಎಇ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದಾಗ ಬ್ರಿಟಿಷರು ದ್ವೀಪಗಳನ್ನು ಬಿಟ್ಟುಹೋದರು. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಶಾಹ್ ರೇಜಾ ಪಹ್ಲವಿ ನೇತೃತ್ವದ ಇರಾನ್ ದ್ವೀಪಗಳನ್ನು ವಶಪಡಿಸಿತು. ಹಳೆಯ ನಕ್ಷೆ ಆಧಾರದಲ್ಲಿ ರೇಜಾ ಪಹ್ಲವಿ ವಶಪಡಿಸಿದ್ದನ್ನು ಸಮರ್ಥಿಸಿದ್ದು, ಯುಎಇ ತಾನು ಅಸಲಿ ಒಡೆಯನೆಂದು ಹೇಳುತ್ತದೆ.

- ಯುಎಇ ಮೇಲೆಯೇ ಅತ್ಯಧಿಕ ದಾಳಿ ನಡೆಸಿರುವ ಇರಾನ್
- ಅಂದಾಜು 5 ಲಕ್ಷ ಇರಾನಿಯನ್ನರಿಗೆ ಯುಎಇ ಆಶ್ರಯದಾತ
- ಇರಾನ್ ಕ್ಷಿಪಣಿ, ಡ್ರೋನ್ ಸಾಮರ್ಥ್ಯ ಅರಿತಿರುವ ಯುಎಇ
- ಇತ್ತೀಚೆಗೆ 457 ಖಂಡಾಂತರ, 19 ಕ್ರೂಸ್ ಕ್ಷಿಪಣಿಗಳು ಮತ್ತು 2,038 ಡ್ರೋನ್‌ಗಳಿಂದ ಯುಎಇ ಮೇಲೆ ಇರಾನ್ ದಾಳಿ

ಇರಾನ್ ದಾಳಿಗೆ ಕಾರಣವೇನು?

ಇಸ್ರೇಲ್ ಜತೆ ಯುಎಇ ರಾಜತಾಂತ್ರಿಕ ಸಂಬಂಧ ಹೊಂದಿದ್ದು, ಅಮೆರಿಕದ ಜತೆ ಭದ್ರತಾ ಒಪ್ಪಂದಗಳನ್ನು ಮಾಡಿಕೊಂಡಿದೆ. ಜಾಗತಿಕ ಮಟ್ಟದಲ್ಲಿ ಹಣಕಾಸಿನ ಕೇಂದ್ರ ಎನಿಸಿಕೊಂಡಿರುವ ಯುಎಇ ಮೇಲೆ ದಾಳಿ ನಡೆಸುವುದರಿಂದ ಜಾಗತಿಕ ವ್ಯಾಪಾರ ವ್ಯತ್ಯಯ ಉಂಟಾಗುತ್ತದೆ. ಅಲ್ಲದೆ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಯುಎಇ ಸ್ನೇಹ ಕಡಿಮೆಗೊಳಿಸಲು ಒತ್ತಡ ಹೇರುವ ತಂತ್ರವೂ ಆಗಿದೆ. ಮಧ್ಯಪ್ರಾಚ್ಯ ಯುದ್ಧವನ್ನು ನಿಲ್ಲಿಸಲು ಗಲ್ಫ್ ರಾಷ್ಟ್ರಗಳೆಲ್ಲವೂ ಅಮೆರಿಕ ಮತ್ತು ಇಸ್ರೇಲ್‌ಗೆ ಒತ್ತಡ ಹಾಕಬೇಕೆಂಬ ಪ್ರಯತ್ನವೂ ಇದಾಗಿದೆ.

ಯುಎಇ ವ್ಯಾಪಾರ ಮತ್ತು ಹಾರ್ಮುಜ್

ಯುಎಇ ತೈಲ ವ್ಯಾಪಾರವು ಸಂಪೂರ್ಣವಾಗಿ ಇರಾನ್ ನಿಯಂತ್ರಣದ ಹಾರ್ಮುಜ್ ಜಲಸಂಧಿಯ ಮೇಲೆ ಅವಲಂಬಿಸಿದೆ. ಯುಎಇಯ ಪ್ರಾಥಮಿಕ ರಫ್ತು ಮಾರ್ಗವು ಹಾರ್ಮುಜ್ ಅನ್ನು ಅವಲಂಬಿಸಿದ್ದು, ಏಷ್ಯಾ ಮಾರುಕಟ್ಟೆಗೆ ಶೇ.75ರಷ್ಟು ತೈಲ ರಫ್ತು ಇದೇ ಜಲಸಂಧಿಯ ಮೂಲಕ ನಡೆಸುತ್ತದೆ.

ಯುಎಸ್‌ಯುಎಚ್-60 ಬ್ಲ್ಯಾಕ್ ಹಾಕ್ ಕಾಪ್ಟರ್ ಪತನ

ಇರಾನಿನ ವಾಯು ರಕ್ಷಣಾ ವ್ಯವಸ್ಥೆಗಳು ಇರಾಕ್‌ನ ವಾಯುಪ್ರದೇಶದಲ್ಲಿ ಯುಎಸ್‌ಯುಎಚ್-60 ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಅನ್ನು ಹೊಡೆದುರುಳಿಸಿವೆ ಎಂದು ವರದಿಯಾಗಿದೆ.ಬ್ಲ್ಯಾಕ್ ಹಾಕ್ ಅನ್ನು ಸಾಮಾನ್ಯವಾಗಿ ವಿಶೇಷ ಕಾರ್ಯಾಚರಣೆಗಳು, ಪಡೆಗಳ ಸಾಗಣೆ ಮತ್ತು ಪ್ರತಿಕೂಲ ಪರಿಸರದಲ್ಲಿ ಶೋಧನೆ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.

ಟೆಲ್ ಅವೀವ್, ಹೈಫಾ ಮೇಲೆ ಇರಾನ್ ಕ್ಷಿಪಣಿ ದಾಳಿ

ಇಸ್ರೇಲ್‌ನ ಟೆಲ್ ಅವೀವ್ ಮತ್ತು ಹೈಫಾ ನಗರಗಳನ್ನು ಗುರಿಯಾಗಿಸಿ ಇರಾನ್ ಸೇನೆ, ಆಪರೇಷನ್ ಟ್ರೂ ಪ್ರಾಮಿಸ್-4ರ 91ನೇ ದಾಳಿಯನ್ನು ನಡೆಸಿತು. ಟೆಲ್ ಅವೀವ್ ಮತ್ತು ಹೈಫಾ ನಗರಗಳ ಹೃದಯ ಭಾಗದ ಮೇಲೆ ದಾಳಿ ನಡೆಸಿರುವುದಾಗಿ ಇರಾನ್ ಪತ್ರಿಕೆಗಳು ವರದಿ ಮಾಡಿವೆ. ದಾಳಿ ತೀವ್ರತೆ ಪರಿಗಣಿಸಿ 50 ಲಕ್ಷ ಇಸ್ರೇಲ್ ನಾಗರಿಕರನ್ನು ಬಂಕರ್‌ಗೆ ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ.

ಕುವೈತ್ ತೈಲಾಗಾರಕ್ಕೆ ಇರಾನ್ ಡ್ರೋನ್ ದಾಳಿ

ಕುವೈತ್‌ನ ಪ್ರಮುಖ ತೈಲ ಸಂಸ್ಕರಣಾಗಾರಗಳ ಮೇಲೆ ಇರಾನ್ ಶುಕ್ರವಾರ ಡ್ರೋನ್ ದಾಳಿ ನಡೆಸಿದೆ. ಕುವೈತ್‌ನ ಪ್ರಮುಖ ತೈಲ ಸಂಸ್ಕರಣಾಗಾರಗಳಲ್ಲಿ ಒಂದಾದ ಮಿನಾ ಅಲ್-ಅಹ್ಮದಿ ಮೇಲೆ ಡ್ರೋನ್ ದಾಳಿ ನಡೆದಿದೆ. ಸರ್ಕಾರಿ ಸ್ವಾಮ್ಯದ ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ ಮೇಲಿನ ದಾಳಿಯಿಂದ ಯಾರಿಗೂ ಗಾಯವಾಗಿಲ್ಲ ಎಂದು ವರದಿಯಾಗಿದೆ.

ನಾವಿಕರನ್ನು ಕಳೆದುಕೊಂಡ ಏಕೈಕ ರಾಷ್ಟ್ರ ಭಾರತ: ಮಿಸ್ರಿ

ಮಧ್ಯಪ್ರಾಚ್ಯ ಯುದ್ಧದ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ನಾವಿಕರನ್ನು ಕಳೆದುಕೊಂಡಿರುವ ಏಕೈಕ ರಾಷ್ಟ್ರ ಭಾರತವೆಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹೇಳಿದ್ದಾರೆ. ಹಾರ್ಮುಜ್ ಸೇವೆ ಪುನರಾರಂಭಕ್ಕಾಗಿ ಬ್ರಿಟನ್ ನೇತೃತ್ವದಲ್ಲಿ ನಡೆದ 60 ರಾಷ್ಟ್ರಗಳ ಸಭೆಯಲ್ಲಿ ಮಿಸ್ರಿ ಹೇಳಿಕೆ ನೀಡಿದ್ದಾರೆ. ವರ್ಚುವಲ್ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ಮಿಸ್ರಿ, ಮಧ್ಯಪ್ರಾಚ್ಯ ಯುದ್ಧದಲ್ಲಿ ಪಾಲ್ಗೊಂಡ ರಾಷ್ಟ್ರಗಳೆಲ್ಲವೂ ರಾಜತಾಂತ್ರಿಕ ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಈ ಬಿಕ್ಕಟ್ಟಿನಿಂದ ಹೊರಬರಲು ಕದನವಿರಾಮವೊಂದೇ ಪರಿಹಾರ ಎಂದು ಮಿಸ್ರಿ ಸಲಹೆ ನೀಡಿದ್ದಾರೆ. ಮಧ್ಯಪ್ರಾಚ್ಯ ಯುದ್ಧ ಭಾರತದ ಇಂಧನ ಭದ್ರತೆಯ ಮೇಲೆ ಹೇಗೆ ಪರಿಣಾಮವನ್ನು ಬೀರಿದೆಯೆಂಬ ವಿಚಾರವನ್ನು ಮಿಸ್ರಿ ಸಭೆಯಲ್ಲಿ ಮಂಡಿಸಿದ್ದಾರೆ. ಗಲ್ಫ್‌ನಲ್ಲಿ ವ್ಯಾಪಾರ ಹಡಗುಗಳ ಮೇಲಿನ ದಾಳಿಯಲ್ಲಿ ನಾವಿಕರನ್ನು ಕಳೆದುಕೊಂಡಿರುವ ಏಕೈಕ ರಾಷ್ಟ್ರವು ಭಾರತವೆಂಬ ವಾದವನ್ನು ಮಿಸ್ರಿ ಮುಂದಿಟ್ಟಿದ್ದಾರೆಂದು ವಿದೇಶಾಂಗ ಸಚಿವಾಲಯ (ಎಂಇಎ) ಶುಕ್ರವಾರ ತಿಳಿಸಿದೆ.

ಹೆಚ್ಚಿನ ತೈಲ, ಎಲ್‌ಎನ್‌ಜಿ ಪೂರೈಕೆಗೆ ರಷ್ಯಾ ಭರವಸೆ

ಪಶ್ಚಿಮ ಏಷ್ಯಾದಲ್ಲಿ ಜಾಗತಿಕ ಕಚ್ಚಾ ತೈಲ ಪೂರೈಕೆಯನ್ನು ಅಡ್ಡಿಪಡಿಸುವ ಸಂಘರ್ಷವು ಉಲ್ಬಣಗೊಳ್ಳುತ್ತಿದ್ದಂತೆ, ರಷ್ಯಾ ಭಾರತಕ್ಕೆ ತೈಲ ಮತ್ತು' ಎಲ್‌ಎನ್‌ಜಿ ಪೂರೈಕೆ ಹೆಚ್ಚಿಸಲು ಮುಂದಾಗಿದೆ. ದಿಲ್ಲಿಯಲ್ಲಿ ನಡೆದ ಸಭೆ ಕುರಿತು ರಷ್ಯಾದ ಅಧಿಕೃತ ಹೇಳಿಕೆಯು, ಭಾರತೀಯ ಮಾರುಕಟ್ಟೆಗೆ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಸರಬರಾಜನ್ನು ಸ್ಥಿರವಾಗಿ ಹೆಚ್ಚಿಸುವ ಸಾಮರ್ಥ್ಯವನ್ನು ರಷ್ಯಾದ ಕಂಪನಿಗಳು ಹೊಂದಿವೆ ಎಂದು ರಷ್ಯಾದ ಡೆನಿಸ್ ಮಾಂಟುರೊವ್ ದೃಢಪಡಿಸಿದೆ.

ಅಮೆರಿಕದ ಯುದ್ಧವಿಮಾನ ಪತನ

• ಟೆಹ್ರಾನ್/ವಾಷಿಂಗ್ಟನ್: ಇರಾನ್ ವಾಯು ರಕ್ಷಣಾ ದಳದ ದಾಳಿಯಿಂದ ಅಮೆರಿಕದ ಎಫ್-15 ಸ್ಟ್ರೈಕ್ ಈಗಲ್ ಯುದ್ಧ ವಿಮಾನ ಪತನವಾಗಿದ್ದು, ಇಬ್ಬರು ಪೈಲಟ್‌ಗಳು ಇದರಿಂದ ಆಚೆ ಜಿಗಿದಿದ್ದಾರೆ. ಅಮೆರಿಕವೂ ಈ ಯುದ್ಧ ವಿಮಾನದ ಮೇಲಿನ ದಾಳಿಯನ್ನು ದೃಢೀಕರಿಸಿದ್ದು, ಒಬ್ಬ ಪೈಲಟ್‌ನನ್ನು ರಕ್ಷಿಸಿರುವುದಾಗಿ ಹೇಳಿದೆ. ಹಾಗೆಯೇ, ಮತ್ತೊಬ್ಬನಿಗಾಗಿ ಶೋಧ ನಡೆಯುತ್ತಿದೆ ಎಂದು ಹೇಳಿಕೊಂಡಿದೆ. ಇದೇ ವೇಳೆ, ಇರಾನ್ ಅಧಿಕಾರಿಗಳು ಸಹ ತಮ್ಮ ಪ್ರದೇಶದಲ್ಲಿ ಪತನಗೊಂಡ ಸಿಬ್ಬಂದಿಯನ್ನು ಹುಡುಕಲು ನಾಗರಿಕರಿಗೆ ಕರೆ ನೀಡಿದ್ದು, ಈ ಘಟನೆಗೆ ಇನ್ನಷ್ಟು ರಾಜಕೀಯ ಹಾಗೂ ಸೈನಿಕ ಮಹತ್ವ ಸಿಕ್ಕಿದೆ. ಇದು ಸುಮಾರು ಐದು ವಾರಗಳಿಂದ ಮುಂದುವರಿಯುತ್ತಿರುವ ಅಮೆರಿಕ-ಇರಾನ್ ಸಂಘರ್ಷದಲ್ಲಿ ಮೊದಲ ಬಾರಿಗೆ ಅಮೆರಿಕದ ಯುದ್ಧವಿಮಾನವನ್ನು ನೇರವಾಗಿ ಹೊಡೆದು ಹಾಕಲಾಗಿದೆ.

ವಿಮಾನ ಪತನದ ನಂತರ ಅಮೆರಿಕ ಸೇನೆ ತುರ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದು, ಹೆಲಿಕಾಪ್ಟರ್‌ಗಳು ಮತ್ತು ವಿಶೇಷ ವಿಮಾನಗಳ ಮೂಲಕ ಹುಡುಕಾಟ ನಡೆಯುತ್ತಿದೆ ಎಂದು ವರದಿಯಾಗಿದೆ. ಈ ಘಟನೆಯಿಂದ ಈಗಾಗಲೇ ಉದ್ವಿಗ್ನಗೊಂಡಿರುವ ಮಧ್ಯಪೂರ್ವ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದ್ದು, ಎರಡೂ ದೇಶಗಳ ನಡುವಿನ ಘರ್ಷಣೆ ಹೆಚ್ಚುವ ಸಾಧ್ಯತೆ ಇದೆ. ಈಗಾಗಲೇ ಈ ಯುದ್ಧದಲ್ಲಿ ಅಮೆರಿಕದ ಹಲವು ಸೈನಿಕರು ಮೃತಪಟ್ಟಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಇರಾನ್ ಇನ್ನೂ ತನ್ನ ಕ್ಷಿಪಣಿ ಮತ್ತು ಡ್ರೋನ್ ಸಾಮರ್ಥ್ಯವನ್ನು ಉಳಿಸಿಕೊಂಡಿದೆ ಎಂದು ಅಮೆರಿಕ ಗುಪ್ತಚರ ಮಾಹಿತಿ ಸೂಚಿಸಿದೆ.

ಇರಾನ್ ನೆಲ ದಾಳಿಕೋರರ ಸ್ಮಶಾನ: ಕಮಾಂಡರ್ ಅಲಿ

ಇರಾನ್ ಅನ್ನು ಮತ್ತೆ ಶಿಲಾಯುಗಕ್ಕೆ ಕಳುಹಿಸುತ್ತೇವೆಂಬ ಅಮೆರಿಕದ ಬೆದರಿಕೆಗೆ ಇರಾನ್ ಸೇನಾ ಕಮಾಂಡರ್ ಅಲಿ ಜಹನ್‌ಶಾಹಿ, ಇರಾನ್ ನೆಲ ದಾಳಿಕೋರರ ಪಾಲಿಗೆ ಸ್ಮಶಾನ ಎಂದು ತಿರುಗೇಟು ನೀಡಿದ್ದಾರೆ. ಅಮೆರಿಕ ಸೈನ್ಯವನ್ನು ಶಿಲಾಯುಗ ಅಲ್ಲ, ಅದಕ್ಕಿಂತಲೂ ಹಿಂದಿನ ಕಾಲಕ್ಕೆ ಕಳುಹಿಸುತ್ತೇವೆ. ಇರಾನ್‌ನ ವಿಶೇಷ ಪಡೆಗಳು ಎಲ್ಲದಕ್ಕೂ ಸಿದ್ಧವಾಗಿವೆ ಎಂದು ಕಮಾಂಡರ್ ಜಹನ್‌ಶಾಹಿ ಹೇಳಿದ್ದಾರೆ.

ಕಿರುಸುದ್ದಿ

ಪಾಕ್‌ನಲ್ಲಿ ಇಂಧನ ದರ ಮತ್ತೆ ಭಾರೀ ಏರಿಕೆ

• ಇಸ್ಲಾಮಾಬಾದ್: ಜಾಗತಿಕವಾಗಿ ಇಂಧನ ಪೂರೈಕೆ ಮೇಲೆ ಗಂಭೀರ ಪರಿಣಾಮಗಳು ಬೀರುತ್ತಿರುವ ಬೆನ್ನಲ್ಲೇ ಪಾಕಿಸ್ತಾನ ಪೆಟ್ರೋಲ್,ಡೀಸೆಲ್ ಮತ್ತು ಸೀಮೆಎಣ್ಣೆ ದರಗಳನ್ನು ಭಾರೀ ಏರಿಕೆ ಮಾಡಿದೆ. ಈ ಹಿಂದೆ ಪಾಕಿಸ್ತಾನದಲ್ಲಿ ಇಂಧನ ದರ ದುಬಾರಿ ಮಾಡಲಾಗಿತ್ತು. ಮೂಲಗಳ ಪ್ರಕಾರ ಪ್ರತೀ ಲೀಟರ್ ಪೆಟ್ರೋಲ್ ದರದಲ್ಲಿ ಶೇ.42.7 ರಷ್ಟು ಅಂದರೆ 137.24 ರೂ. ಏರಿಕೆಯಾಗಿ 458.40 ರೂ.ಗೆ ಹೆಚ್ಚಳವಾಗಿದೆ. ಅಂತೆಯೇ ಡೀಸೆಲ್ ದರದಲ್ಲಿ ಕೂಡ ಶೇ.54.9ರಷ್ಟು ಅಂದರೆ 184.49 ರೂ. ಏರಿಕೆಯಾಗಿ 520.35 ಹೆಚ್ಚಳವಾಗಿದೆ. ನವೀಕೃತ ದರವೂ ಶುಕ್ರವಾರದಿಂದಲೇ ಜಾರಿಯಾಗಿದೆ.

ಪೇಟೆಂಟ್ ಔಷಧಗಳ ಮೇಲೆ ಶೇ.100 ಸುಂಕ

• ವಾಷಿಂಗ್ಟನ್: ತಮ್ಮ ಸರ್ಕಾರದೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳದ ಕಂಪನಿಗಳಿಂದ ಕೆಲವು ವಿದೇಶಿ ನಿರ್ಮಿತ ಪೇಟೆಂಟ್ ಪಡೆದ ಔಷಧೀಯ ಉತ್ಪನ್ನಗಳ ಮೇಲೆ ಅಮೆರಿಕ ಡೊನಾಲ್ಡ್ ಟ್ರಂಪ್ ಸರ್ಕಾರ ಶೇ.100ರಷ್ಟು ಸುಂಕ ವಿಧಿಸಿದೆ. ಯಾವ ಕಂಪನಿಗಳು ಮುಂದಿನ 4 ವರ್ಷಗಳಲ್ಲಿ ಅಮೆರಿಕದಲ್ಲಿ ಕಾರ್ಖಾನೆ ತೆರೆಯಲು ಒಪ್ಪುತ್ತವೋ ಅವುಗಳ ಮೇಲಿನ ಸುಂಕವನ್ನು ಶೇ.20ಕ್ಕೆ ಇಳಿಸಲು ಈ ಕಾರ್ಯಾದೇಶದಲ್ಲಿ ಅವಕಾಶ ನೀಡಲಾಗಿದೆ. ಇದು ಔಷಧ ಕಂಪನಿಗಳು ತಮ್ಮ ಉತ್ಪಾದನಾ ಸೌಲಭ್ಯಗಳನ್ನು ಅಮೆರಿಕಕ್ಕೆ ಸ್ಥಳಾಂತರಿಸಲು ಮತ್ತು ಅಮೆರಿಕದ ಗ್ರಾಹಕರಿಗೆ ಕಡಿಮೆ ಬೆಲೆಗಳಿಗೆ ಒದಗಿಸಲು ಒತ್ತಾಯಿಸುವ ಗುರಿ ಹೊಂದಿದೆ.



ಪಾಕ್ ಆತ್ಮಾಹುತಿ ಬಾಂಬ್ ಸ್ಫೋಟ: ಐವರ ಸಾವು

• ಇಸ್ಲಾಮಾಬಾದ್: ವಾಯುವ್ಯ ಪಾಕಿಸ್ತಾನದ ಪೊಲೀಸ್ ಠಾಣೆಯನ್ನು ಗುರಿಯಾಗಿಸಿಕೊಂಡು ಗುರುವಾರ ತಡರಾತ್ರಿ ನಡೆದ ಆತ್ಮಹತ್ಯಾ ಕಾರು ಬಾಂಬ್ ಸ್ಫೋಟದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿದಂತೆ ಐವರು ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ. ಖೈಬರ್ ಪಖ್ತುನ್ಖ್ವಾದ ಬನ್ನು ಜಿಲ್ಲೆ ಡೊಮೆಲ್ ತಹಸಿಲ್ ನಲ್ಲಿರುವ ಪೊಲೀಸ್ ಠಾಣೆ ಹಿಂಭಾಗಕ್ಕೆ ಆತ್ಮಾಹುತಿ ಬಾಂಬರ್ ತನ್ನ ಸ್ಫೋಟಕ ತುಂಬಿದ ವಾಹನವನ್ನು ಡಿಕ್ಕಿ ಹೊಡೆದಿದ್ದಾನೆ.ಇದು ಪ್ರಬಲ ಸ್ಫೋಟಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೇಷ್ಠ ಪುದುಚೇರಿಗಾಗಿ ಮತ್ತೆ ಅಧಿಕಾರ: ಮೋದಿ

• ಪುದುಚ್ಚೇರಿ: ಶ್ರೇಷ್ಠ ಪುದುಚೇರಿ ನಿರ್ಮಾಣಕ್ಕಾಗಿ ಜನತೆ ಎನ್‌ಡಿಎಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ನಿರ್ಧರಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ. ಪುದುಚೇರಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಬೃಹತ್ ರೋಡ್‌ಶೋದಲ್ಲಿ ಮೋದಿ ಮಾತನಾಡಿದರು. ಏ.9ರಂದು ಪುದುಚೇರಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಭಾರತೀಯ ಜನತಾ ಪಕ್ಷ, ಎಐಎನ್‌ಆರ್ ಕಾಂಗ್ರೆಸ್ ಮತ್ತು ಎಐಎಡಿಎಂಕೆ ಮತ್ತಿತರ ಪಕ್ಷಗಳ ಎನ್‌ಡಿಎ ಮೈತ್ರಿಕೂಟವನ್ನು ಪುನರಾಯ್ಕೆ ಮಾಡುವಂತೆ ಪ್ರಧಾನಿ ಮೋದಿ ಪುದುಚೇರಿ ಜನತೆಗೆ ಮನವಿ ಮಾಡಿದರು. ದಿಲ್ಲಿಯಿಂದ ಚೆನ್ನೈ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಅಲ್ಲಿಂದ ಪುದುಚೇರಿಗೆ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಿದ್ದರು. ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿಯನ್ನು ಮುಖ್ಯಮಂತ್ರಿ ಎನ್. ರಂಗಸ್ವಾಮಿ, ಗೃಹ ಸಚಿವ ಆರುಮುಗಂ ನಮಃಶಿವಾಯ ಮತ್ತು ಎನ್‌ಡಿಎ ನಾಯಕರು ಆತ್ಮೀಯವಾಗಿ ಸ್ವಾಗತಿಸಿದರು. ಪುದುಚ್ಚೇರಿಯಲ್ಲಿ ನಡೆದ ಬೃಹತ್ ರೋಡ್‌ಶೋನಲ್ಲಿ ರಾಷ್ಟ್ರಧ್ವಜ ಮತ್ತು ಬಿಜೆಪಿ ಸೇರಿ ಎನ್‌ಡಿಎ ಪಕ್ಷಗಳ ಧ್ವಜಗಳೊಂದಿಗೆ ಬೆಂಬಲಿಗರು ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ರಸ್ತೆಯ ಎರಡೂ ಬದಿಯಲ್ಲಿ ಸಾವಿರಾರು ಸ್ಥಳೀಯರು ಮತ್ತು ವಿದೇಶಿ ಪ್ರವಾಸಿಗರು ಪ್ರಧಾನಿ ಮೋದಿಯವರನ್ನು ಒಂದು ಕ್ಷಣ ನೋಡಿ ಕಣ್ತುಂಬಿಕೊಳ್ಳಲು ಭಾರೀ ಉತ್ಸಾಹದಲ್ಲಿ ಕಾದು ನಿಂತಿದ್ದರು.

ಅಸ್ಸಾಂ ಬುಡಕಟ್ಟು ಪ್ರಗತಿ ನಕ್ಷೆ ಸಿದ್ಧ: ಅಮಿತ್ ಶಾ

• ದುದ್ನೋಯಿ: ಅಸ್ಸಾಂನಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರಧಾನಿ ಮೋದಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಅಭಿವೃದ್ಧಿ ನಕ್ಷೆ ಸಿದ್ಧಪಡಿಸಿದ್ದಾರೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೇ ಈ ನಕ್ಷೆಯಲ್ಲಿರುವಂತೆ ಅಭಿವೃದ್ಧಿಯನ್ನು ಕಾರ್ಯರೂಪಕ್ಕೆ ತರಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ. ಗೋಲ್ಪಾರಾ ಜಿಲ್ಲೆಯ ದುದ್ನೋಯಿಯಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಶಾ, ಕಾಂಗ್ರೆಸ್ ಎಂದಿಗೂ ಆದಿವಾಸಿ ಮಹಿಳೆಯನ್ನು ದೇಶದ ರಾಷ್ಟ್ರಪತಿಯನ್ನಾಗಿ ಮಾಡಲಿಲ್ಲ, ಆದರೆ ಮೋದಿ ಅದನ್ನು ಬದಲಾಯಿಸಿದರು. ದ್ರೌಪದಿ ಮುರ್ಮು ರಾಷ್ಟ್ರದ ಮೊದಲ ಪ್ರಜೆಯಾದರು. ಕೇಂದ್ರದಲ್ಲಿ ಪ್ರಧಾನಿ ಇದ್ದಾರೆ, ಮತ್ತು ರಾಜ್ಯದಲ್ಲಿ ಮುಖ್ಯಮಂತ್ರಿ ಬಿಸ್ವ ಶರ್ಮಾ ಇದ್ದಾರೆ. ಇಬ್ಬರೂ ರಾಜ್ಯದ ಬುಡಕಟ್ಟು ಜನಾಂಗದವರ ಅಭಿವೃದ್ಧಿಗೆ ಮಾರ್ಗಸೂಚಿ ಸಿದ್ಧಪಡಿಸಿದ್ದಾರೆ. ಜನರು ಸತತ ಮೂರನೇ ಬಾರಿಗೆ ಬಿಜೆಪಿಗೆ ಜನಾದೇಶ ನೀಡಿದರೆ ಅದನ್ನು ಮುಂದಕ್ಕೆ ಕೊಂಡೊಯ್ಯಲಾಗುತ್ತದೆ ಎಂದು ಶಾ ಹೇಳಿದರು.

ಕಾಂಗ್ರೆಸ್ ಎಂದಿಗೂ ಬುಡಕಟ್ಟು ಕಲ್ಯಾಣದ ಬಗ್ಗೆ ಮಾತನಾಡಿಲ್ಲ. ಸ್ವಾತಂತ್ರ್ಯದ ನಂತರದ ಸರ್ಕಾರಗಳು ಬುಡಕಟ್ಟು ಅಭಿವೃದ್ಧಿಗಾಗಿ ಕೇವಲ 25,000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದವು ಆದರೆ ಕಳೆದ 11 ವರ್ಷಗಳಲ್ಲಿ ಪ್ರಧಾನಿ ಅವರಿಗೆ 1.38 ಲಕ್ಷ ಕೋಟಿ ರೂ.ಗಳನ್ನು ನೀಡಿದ್ದಾರೆ ಎಂದು ಅವರು ಆರೋಪಿಸಿದರು. ಅಂತೆಯೇ ಏಕರೂಪ ನಾಗರಿಕ ಸಂಹಿತ(ಏನಾಸಂ) ಬುಡಕಟ್ಟು ವ್ಯಾಪ್ತಿಗೆ ಬರುತ್ತದೆ. ಆದರೆ ಏನಾಸಂ ಜಾರಿಯಾದರೇ ಬುಡಕಟ್ಟು ಜನರಿಗೆ ಸಮಸ್ಯೆಯಾಗುತ್ತಿದೆ ಎಂದು ಕಾಂಗ್ರೆಸ್ ಈ ಇಲ್ಲಸಲ್ಲದ ವದಂತಿಗಳನ್ನು ಹಬ್ಬುತ್ತಿದೆ ಎಂದಿದ್ದಾರೆ.

ಪರಂಪರೆ, ಅಭಿವೃದ್ಧಿ ಜತೆ ಜತೆಯಾಗಿರಲು ಶ್ರಮ

• ಬರ್ಪೇಟ /ಬರ್ಖಲಾ : ಅಸ್ಸಾಂನ್ನು ಅಕ್ರಮ ನುಸುಳುಕೋರರ ಹಾವಳಿಯಿಂದ ಮುಕ್ತಗೊಳಿಸಿ, ರಾಜ್ಯದ ಜನಸಂಖ್ಯಾ ಸ್ವರೂಪದಲ್ಲಿ ಯಾವುದೇ ವ್ಯತ್ಯಯವಾಗದಂತೆ ತಡೆಯುವ ಸಾಮರ್ಥ್ಯವಿರುವುದು ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಾತ್ರ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭರವಸೆ ನೀಡಿದ್ದಾರೆ.

ಬಿಜೆಪಿ ಸರಕಾರಗಳು ಕೊಟ್ಟ ಆಶ್ವಾಸನೆಯನ್ನು ತಪ್ಪದೆ ಪಾಲಿಸುತ್ತವೆ, ಸಾಕಾರಗೊಳಿಸುತ್ತವೆ. ಅಸ್ಸಾಂನಲ್ಲಿ ಪರಂಪರೆ ಮತ್ತು ಅಭಿವೃದ್ಧಿ ಜತೆಜತೆಯಾಗಿರಲು ಬಿಜೆಪಿ ಶ್ರಮಿಸಲಿದೆ ಎಂದು ಭರವಸೆಯಿತ್ತ ಸಿಎಂ ಯೋಗಿ, ಬಿಜೆಪಿ ಆಳ್ವಿಕೆಯ ಇತರ ರಾಜ್ಯಗಳಲ್ಲಿ ಇದು ಸಾಕಾರಗೊಂಡಿದೆ. ಕಾಂಗ್ರೆಸ್ ಪಕ್ಷ ಸುದೀರ್ಘಾವಧಿ ಆಡಳಿತದಲ್ಲಿದ್ದರೂ ರಾಜ್ಯದ ಜನರು ಮತ್ತು ರಾಜ್ಯವನ್ನು ಸಂರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. 60ವರ್ಷಗಳ ಕಾಲ ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷ ಕೇವಲ ಹಣದುಬ್ಬರ, ಹಿಂಸೆ, ದೊಂಬಿಗಳಿಗೆ ಪ್ರಚೋದನೆ ನೀಡಿತ್ತು. ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಗಳನ್ನು ಆತಂಕಕ್ಕೊಡ್ಡಿತ್ತು. ಅಕ್ರಮ ನುಸುಳುಕೋರರ ಬೆಂಬಲದಿಂದ ಅಧಿಕಾರ ಸೂತ್ರ ಹಿಡಿಯುವ ಸ್ವಾರ್ಥಕ್ಕೆ ಬಲಿಬಿದ್ದಿರುವ ಎಐಯುಡಿಎಫ್, ಇದಕ್ಕಾಗೇ ಅಕ್ರಮ ನುಸುಳುಕೋರರಿಗೆ ಉತ್ತೇಜನವೀಯುತ್ತಿದೆ. ರಾಜ್ಯದ ಪರಂಪರೆ ಮತ್ತು ಸಂಸ್ಕೃತಿಗಳನ್ನು ಬಲಿಕೊಡುವ ನಿಟ್ಟಿನಲ್ಲಿ ಕಾಂಗ್ರೆಸ್, ಎಐಯುಡಿಎಫ್‌ಗಳು ಜತೆಯಾಗಿ ಕಾರ್ಯತತ್ಪರವಾಗಿವೆ ಎಂದು ಆರೋಪಿಸಿದರು. ಪ್ರತಿಯೋರ್ವ ಅಕ್ರಮ ನುಸುಳುಕೋರರನ್ನು ಹುಡುಕಿ ಹೊರದಬ್ಬಲಾಗುವುದು .ಲವ್ ಜಿಹಾದ್, ಭೂ ಜಿಹಾದ್‌ಗೆ ಹಾಗೂ ಜನಸಂಖ್ಯಾ ಸ್ವರೂಪ ಬದಲಿಸಲು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅವಕಾಶಗೊಡುವುದಿಲ್ಲ ಎಂದರು.

ಚುನಾವಣೆ ನಂತರವೂ 500 ಪಡೆಗಳ ನಿಯೋಜನೆ

• ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಆತಂಕದ ಮಧ್ಯೆ, ಮೇ 4ರಂದು ಮತ ಎಣಿಕೆ ಮುಗಿದ ನಂತರವೂ ರಾಜ್ಯದಲ್ಲಿ ಕೇಂದ್ರ ಪಡೆಗಳ 500 ಕಂಪನಿಗಳನ್ನು ನಿಯೋಜಿಸಲು ಚುನಾವಣಾ ಆಯೋಗ ಶುಕ್ರವಾರ ನಿರ್ಧರಿಸಿದೆ. ರಾಜ್ಯದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಕಳೆದ ವಿಧಾನಸಭಾ ಚುನಾವಣೆ ವೇಳೆ, ಮತದಾನದ ನಂತರದ ಹಿಂಸಾಚಾರ ನಡೆದಿತ್ತು. ಆದ್ದರಿಂದ ಈ ನಿರ್ಧಾರಕ್ಕೆಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಂದು ಕಂಪನಿಯಲ್ಲಿ 90ರಿಂದ 125 ಸಿಬ್ಬಂದಿ ಇರುತ್ತಾರೆ. ಹೆಚ್ಚುವರಿಯಾಗಿ, ವಿದ್ಯುನ್ಮಾನ ಮತದಾನ ಯಂತ್ರಗಳು (ಇವಿಎಂ), ಸ್ಟ್ರಾಂಗ್ ರೂಮ್ ಮತ್ತು ಎಣಿಕೆ ಕೇಂದ್ರಗಳ ಭದ್ರತಾ ವ್ಯವಸ್ಥೆಗಾಗಿ ರಾಜ್ಯದಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) 200 ಕಂಪನಿಗಳನ್ನು ಉಳಿಸಿಕೊಳ್ಳಲಾಗುವುದು. ರಾಜ್ಯದಲ್ಲಿ ಮತ ಎಣಿಕೆ ಪೂರ್ಣಗೊಳ್ಳುವವರೆಗೆ ಈ ಕಂಪನಿಗಳನ್ನು ನಿಯೋಜಿಸಲಾಗುವುದು ಎಂದು ಇಸಿ ತಿಳಿಸಿದೆ.

ಪರಮಾಣು ಶಕ್ತಿಯಾಧಾರಿತ ಹೊಸ ಖಂಡಾಂತರ ಕ್ಷಿಪಣಿ

ಐಎನ್‌ಎಸ್ ತಾರಾಗಿರಿ ನೌಕಾಪಡೆ ಸೇರ್ಪಡೆ

• ವಿಶಾಖಪಟ್ಟಣಂ: ಎದುರಾಗುತ್ತಿರುವ ಸಾಗರ ಬೆದರಿಕೆಗಳ ಹೊರತೂ, ವಾಣಿಜ್ಯಿಕ ತೈಲ ಟ್ಯಾಂಕರ್‌ಗಳು -ನೌಕಾಯಾನಕ್ಕೆ ಸೂಕ್ತ ಮಾರ್ಗಗಳ ಗುರುತಿಸುವಲ್ಲಿ ಭಾರತೀಯ ನೌಕಾಪಡೆಯ ಪಾತ್ರ ಅತಿ ನಿರ್ಣಾಯಕವೆಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಕೊಂಡಾಡಿದ್ದಾರೆ. ಇಂಧನ ಪೂರೈಕೆ ಸಹಿತ ದೇಶದ ಶೇ.95 ವ್ಯಾಪಾರ ವಹಿವಾಟುಗಳು ನಿರ್ವಹಣೆಯಾಗೋದು ಸಮುದ್ರ ಮಾರ್ಗ ಮುಖೇನ ಎಂದವರು ಗಮನ ಸೆಳೆದಿದ್ದಾರೆ. ಪರ್ಶಿಯನ್ ಗಲ್ಫ್ ಇರಲಿ, ಮಲಕ್ಕಾ ಜಲಸಂಧಿಯೇ ಆಗಿರಲಿ, ಭಾರತೀಯ ನೌಕಾಪಡೆಯು ಹಿಂದು ಮಹಾಸಾಗರದಲ್ಲಿ ನಿರಂತರ ನೆಲೆಯಲ್ಲಿ ತನ್ನ ಉಪಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ದೇಶೀ ನಿರ್ಮಿತ ಅತ್ಯಾಧುನಿಕ ಯುದ್ಧ ನೌಕೆ ಐಎನ್‌ಎಸ್ ತಾರಾಗಿರಿಯ ಲೋಕಾರ್ಪಣೆ ಸಮಾರಂಭದಲ್ಲಿ ಸಚಿವರು ಪಾಲ್ಗೊಂಡರು.

ಭಾರತ ಜವಾಬ್ದಾರಿಯುತ ಸಾಗರ ಶಕ್ತಿಯಾಗಿದೆ: ಸಮುದ್ರದಲ್ಲಿ ಹಲವು ಸೂಕ್ಷ್ಮ ಸಂವೇದಿ ಕೇಂದ್ರಗಳಿವೆ. ಈ ನಿಟ್ಟಿನಲ್ಲಿ ನಮ್ಮ ನೌಕಾಪಡೆ ಅಂತಹ ಕೇಂದ್ರಗಳಲ್ಲಿ ನಿರಂತರವಾಗಿದ್ದುಕೊಂಡು ವಸ್ತುಗಳ ಸುಗಮ ಸರಬರಾಜಿಗೆ ನೆರವಾಗುತ್ತಿದೆ. ಉದ್ವಿಗ್ನ ಸನ್ನಿವೇಶಗಳಲ್ಲಿ ಭಾರತೀಯ ನೌಕಾಪಡೆ ನಮ್ಮ ವಾಣಿಜ್ಯಿಕ ಹಡಗುಗಳು ಮತ್ತು ತೈಲ ಟ್ಯಾಂಕರ್‌ಗಳಿಗೆ ಸೂಕ್ತ ಭದ್ರತೆ ಒದಗಿಸಿದೆ. ಭಾರತೀಯ ನೌಕಾಪಡೆಯು ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ಸಮರ್ಥವಷ್ಟೇ ಅಲ್ಲ, ಅಗತ್ಯ ಬಿದ್ದಲ್ಲಿ ಜಗತ್ತಿನಾದ್ಯಂತದ ತನ್ನ ಪ್ರಜೆಗಳನ್ನು ಮತ್ತು ವ್ಯಾಪಾರ ಮಾರ್ಗಗಳನ್ನು



ಕಾಪಾಡಲು ದೌಡಾಯಿಸಬಲ್ಲುದು ಎಂದು ಸಚಿವ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

6,670ಟನ್ ಸಾಮರ್ಥ್ಯದ ಸಮರ ನೌಕೆ: ಮುಂಬೈಯ ಮಜಗಾನ್ ಡಾಕ್ ಶಿಪ್ ಬಿಲ್ಡರ್ಸ್ ನಿಯಮಿತದಿಂದ ನಿರ್ಮಿತ 6,670ಟನ್ ಸಾಮರ್ಥ್ಯದ ಸಮರ ನೌಕೆ ತಾರಾಗಿರಿ , ಅತ್ಯಾಧುನಿಕ ವಿನ್ಯಾಸ ಮತ್ತು ಇಂಜಿನಿಯರಿಂಗ್ ತಜ್ಞತೆಯನ್ನು ಒಳಗೊಂಡಿದೆ. ಬ್ರಹ್ಮೋಸ್ ಕ್ಷಿಪಣಿ ಸಮಾನ ಸಾಮರ್ಥ್ಯವನ್ನು ಹೊಂದಿದೆ. ತೀರಾ ಕುಗ್ಗಿದ ರಾಡಾರ್ ಕ್ರಾಸ್ ಸೆಕ್ಷನ್‌ನೊಂದಿಗೆ ನಯವಾದ ರಚನೆಯುಕ್ತ ಸಮರ ನೌಕೆ, ಅತ್ಯಂತ ಸಂಕ್ಲಿಷ್ಟ ಸಾಗರ ಸನ್ನಿವೇಶಗಳ ಹೊರತೂ, ರಹಸ್ಯ ಕಾರ್ಯಾಚರಣೆ ನಡೆಸಲು ಮತ್ತು ವಿಸ್ತೃತವಾಗಿ ಅಸ್ತಿತ್ವ ಉಳಿಸಿಕೊಳ್ಳಲು ಶಕ್ತವಿದೆ ಎಂದು ನೌಕಾಮೂಲಗಳು ತಿಳಿಸಿವೆ.

ಧಾರ್ಮಿಕ ಆಚರಣೆ ತೀರ್ಮಾನ ನ್ಯಾಯಾಲಯಕ್ಕೆ ಪರಿಣತಿ ಇಲ್ಲ

• ಹೊಸದಿಲ್ಲಿ: ಧಾರ್ಮಿಕ ಆಚರಣೆಗಳ ಮೂಲಭೂತ ಅಂಶಗಳನ್ನು ತೀರ್ಮಾನಿಸುವುದು ನ್ಯಾಯಾಲಯಗಳ ಕಾರ್ಯವಲ್ಲ; ಅವು ಭಕ್ತರ ನಂಬಿಕೆ ಮತ್ತು ಶ್ರದ್ಧೆಗೆ ಸೇರಿದ ವಿಚಾರಗಳು ಎಂದು ಅಖಿಲ ಭಾರತೀಯ ಸಂತ ಸಮಿತಿ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಶಬರಿಮಲೆ ಪ್ರಕರಣದ ಮರುಪರಿಶೀಲನಾ ವಿಚಾರಣೆಯಲ್ಲಿ ಹಸ್ತಕ್ಷೇಪಿಸಲು ಅನುಮತಿ ಕೋರಿ ಸಮಿತಿ ಅರ್ಜಿ ಸಲ್ಲಿಸಿದೆ.

ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಪೀಠವು ಏ.7ರಿಂದ ಶಬರಿಮಲೆ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶದ ಪ್ರಶ್ನೆ ಹಾಗೂ ವಿವಿಧ ಧರ್ಮಗಳ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ಅಂತಿಮ ವಿಚಾರಣೆ ಆರಂಭಿಸಲು ಸಜ್ಜಾಗಿದೆ. 2018ರ ಸೆಪ್ಟೆಂಬರ್‌ನಲ್ಲಿ ಐದು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 4:1 ಬಹುಮತದಿಂದ, 10ರಿಂದ 50 ವರ್ಷದ ಮಹಿಳೆಯರಿಗೆ ಶಬರಿಮಲೆ ಅಯ್ಯಪ್ಪ ದೇವಾಲಯ ಪ್ರವೇಶಕ್ಕೆ ವಿಧಿಸಿದ್ದ ನಿಷೇಧವನ್ನು ತೆರವುಗೊಳಿಸಿತ್ತು. ಶತಮಾನಗಳ ಹಿಂದಿನಿಂದಲೂ ನಡೆದುಬಂದಿದ್ದ ಈ ಆಚರಣೆ ಸಂವಿಧಾನ ವಿರೋಧಿಯಾಗಿದೆ ಎಂದು ನ್ಯಾಯಾಲಯ ಹೇಳಿತ್ತು. ಅಖಿಲ ಭಾರತೀಯ ಸಂತ ಸಮಿತಿ ತನ್ನ ಅರ್ಜಿಯನ್ನು ವಕೀಲ ಅತುಲೇಶ್ ಕುಮಾರ್ ಮೂಲಕ ಸಲ್ಲಿಸಿದ್ದು, ಶಬರಿಮಲೆ ಮರುಪರಿಶೀಲನೆ ವಿಚಾರಣೆಯಲ್ಲಿ ತನ್ನ ವಾದ ಮಂಡಿಸಲು ಅವಕಾಶ ನೀಡುವಂತೆ ಮನವಿ ಮಾಡಿದೆ. ಸುಮಾರು 127 ಸಂಪ್ರದಾಯಗಳನ್ನು ಪ್ರತಿನಿಧಿಸುವ ಈ ಸಮಿತಿಯಲ್ಲಿ 18.5 ಲಕ್ಷ ಪೂಜಾರಿಗಳು ಹಾಗೂ 12 ಲಕ್ಷ ಸಂತರು ಸೇರಿದ್ದಾರೆ ಎಂದು ಹೇಳಲಾಗಿದೆ.

ನಿರ್ಬಂಧಕ್ಕೆ ಸಮರ್ಥನೆ: ಶಬರಿಮಲೆ ದೇವಾಲಯದ ನಿರ್ಬಂಧಗಳನ್ನು ಸಮರ್ಥಿಸಿಕೊಂಡ ಸಮಿತಿ, ಕೆಲವು ದೇವಸ್ಥಾನಗಳು ವಿಶೇಷ ಶುದ್ಧತಾ ಆಚರಣೆಗಳನ್ನು ಅನುಸರಿಸುತ್ತವೆ ಎಂದು ತಿಳಿಸಿದೆ. ಈ ಅವಧಿಯಲ್ಲಿ ಮಹಿಳೆಯರಿಗೆ ಅಡ್ಡಿ ಉಂಟಾಗುತ್ತದೆ ಎಂಬ ಪರಂಪರೆಯ ನಂಬಿಕೆಯನ್ನು ಉಲ್ಲೇಖಿಸಿದೆ. ಇದು ಮಹಿಳೆಯರ ಮೇಲೆ ಸಂಪೂರ್ಣ ನಿಷೇಧವಲ್ಲ, ನಿರ್ದಿಷ್ಟ ವಯೋಮಿತಿಗೆ ಮಾತ್ರ ಅನ್ವಯಿಸುವ ಆಚರಣೆ. ಆದ್ದರಿಂದ ಇದು ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುವುದಿಲ್ಲ ಎಂದು ಸಮಿತಿ ವಾದಿಸಿದೆ.

ಧಾರ್ಮಿಕತೆಯಿಂದ ಸಾಮಾಜಿಕ ಪ್ರಗತಿ ಸಾಧಿಸಿದ ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮೀಜಿ


ದೇಶದ ಪರಂಪರೆ ಮತ್ತು ಪ್ರಗತಿಯಲ್ಲಿ ತನ್ನದೇ ಕೊಡುಗೆ ನೀಡಿರುವ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಧರ್ಮಗುರು ಶ್ರೀ ಕಾಶೀಮಠ ಸಂಸ್ಥಾನದ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿ (1926-2016) ಅವರ ಜನ್ಮ ಶತಮಾನೋತ್ಸವ ದಿನಾಂಕ ಪ್ರಕಾರ 31.03.2026 ಬಂದಿತ್ತು. ಅಂದು ಪ್ರಧಾನಿ ನರೇಂದ್ರ ಮೋದಿಯವರೂ ಶ್ರೀಗಳವರ ಸಾಧನೆ ಕುರಿತು ಟ್ವೀಟ್ ಮಾಡಿದ್ದರು. ಆದರೆ ಸಮಾಜ ಮತ್ತು ಶ್ರೀಮಠವು ತಿಥಿ ಪ್ರಕಾರ ಏ. 4ರಂದು ಸ್ವಾತಿ ನಕ್ಷತ್ರದ ಸುದಿನ ಶ್ರೀಗಳವರ ಜನ್ಮ ಶತಮಾನೋತ್ಸವವನ್ನು ಸಂಭ್ರಮಿಸುತ್ತಿದೆ. ತನ್ನಿಮಿತ್ತವಾಗಿ ಇದು ಸಾಂಧರ್ಭಿಕ ಲೇಖನ

ಭಾರತದ ಜನಸಂಖ್ಯೆಯ ಶೇಕಡಾ ಒಂದರಷ್ಟು ಜನ ಸಂಖ್ಯೆಯೂ ಇಲ್ಲದ ಸಣ್ಣ ಸಮುದಾಯ ಗೌಡ ಸಾರಸ್ವತ ಬ್ರಾಹ್ಮಣರದ್ದು. ಆದರೆ ತಮ್ಮ ಆಚಾರ, ವಿಚಾರ, ಸಂಸ್ಕೃತಿ ಪರಂಪರೆ, ಜೀವನ. ಶಿಕ್ಷಣ, ಸಾಧನೆಯಿಂದ ತಾವು ನೆಲೆಸಿದ್ದಲ್ಲೆಲ್ಲವೂ ಪ್ರಗತಿಯ ಹರಿಕಾರರು ಎನಿಸಿಕೊಂಡದ್ದು ಸಮಾಜದ ಹಿರಿಮೆ. ವೇದ ಕಾಲದ ಸರಸ್ವತಿ ನದೀ ತೀರದವರಾಗಿ ವಲಸೆಯ ಕಾರಣದಿಂದ ದೇಶದ ಹಲವೆಡೆ ನೆಲೆಸಿ ಮುಂದೆ ಗೋವಾದಲ್ಲಿ ಪೋರ್ಚುಗೀಸರ ಧಾರ್ಮಿಕ ದಬ್ಬಾಳಿಕೆಗೆ ನಲುಗಿ ಧರ್ಮ. ಸಂಸ್ಕೃತಿಯ ರಕ್ಷಣೆಗಾಗಿ ಕರಾವಳಿಯತ್ತ ಮುಖ ಮಾಡಿದವರು ಗೌಡ ಸಾರಸ್ವತರು. ಪಶ್ಚಿಮ ತೀರದ ಕರ್ನಾಟಕ ಮಾತ್ರವಲ್ಲ ಕೇರಳದವರೆಗೂ ವಿಸ್ತರಿಸಿ ಇವರು ಎಲ್ಲರೊಳಗೊಂದಾದರು. ಮುಂದೆ ಗುರಿ ಹಿಂದೆ ಗುರುವಿದ್ದಾಗ ಸಮಾಜವೊಂದು ಯಶಸ್ಸಿನ ಹಾದಿ ಹೇಗೆ ಕಂಡು ಕೊಳ್ಳುತ್ತದೆ ಎನ್ನುವುದಕ್ಕೆ ಉತ್ತಮ ನಿದರ್ಶನ. ಗೌಡ ಸಾರಸ್ವತ ಸಮಾಜದ ಬೆಳವಣಿಗೆಯಲ್ಲಿ ಸಮುದಾಯದ ಮಠ ಪೀಠಗಳು, ಗುರುಪರಂಪರೆಯ ಕೊಡುಗೆಯೂ ದೊಡ್ಡದು. ಈ ಪೈಕಿ ಸಮಾಜದ ಸ್ವರೂಪೋದ್ಧಾರಕರಾದ ಹಿರಿಮೆ ಶ್ರೀ ಕಾಶೀಮಠ ಸಂಸ್ಥಾನದ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿ (1926–2016) ಯವರದ್ದು.

ಎರ್ನಾಕುಲಂನ ರಾಮದಾಸ ಶೆಣೈ- ದ್ರೌಪದಿ ದಂಪತಿಯ ನಾಲ್ಕನೇ ಮಗನಾಗಿ ಕ್ಷಯ ಸಂವತ್ಸರದ ಚೈತ್ರ ಮಾಸದ ಸ್ವಾತಿ ನಕ್ಷತ್ರದಲ್ಲಿ 31.3.1926 ರಂದು ಸದಾಶಿವನ ಜನನ. ನಾಲ್ಕರ ಎಳೆಯ ವಯಸ್ಸಿನಲ್ಲೇ ಮಾತೃವಾತ್ಸಲ್ಯದಿಂದ ವಂಚಿತರಾದವರು. ಎಳವೆಯಲ್ಲೇ ಧಾರ್ಮಿಕ ಶ್ರದ್ಧೆಯಿಂದ ಬೆಳೆದ ಬಾಲಕ ಸದಾಶಿವ 11ರ ಹರೆಯದಲ್ಲಿ ತನ್ನ ಉಪನಯನದ ಬಳಿಕ ಮನೆಯ ನಿತ್ಯ ಪೂಜೆಯ ಜವಾಬ್ದಾರಿಯನ್ನು ಖುಷಿಯಿಂದಲೇ ತನ್ನದಾಗಿಸಿಕೊಂಡವರು. ಒಂದು ಹೊತ್ತು ಪೂಜೆಯನ್ನೂ ತಪ್ಪಿಸಿಕೊಳ್ಳಲಾರೆ ಎನ್ನುವ ದೃಢ ನಿರ್ಧಾರವನ್ನು ಆಗಲೇ ಪ್ರಕಟಿಸಿದ್ದ ಬಾಲಕನಿಗೆ ಮುಂದೆ ಕಾಲಗರ್ಭದಲ್ಲಿ ತನಗೇನು ಕಾದಿದೆ ಎನ್ನುವ ಅರಿವು ಇತ್ತೋ ಗೊತ್ತಿಲ್ಲ!

ತಾರಣ ಸಂವತ್ಸವರದ ಜೇಷ್ಠ ಶುದ್ಧ ದ್ವಿತೀಯ ಬುಧವಾರ 1944ರ ಮೇ 24ರಂದು ಗುರು ಸುಕೃತೀಂದ್ರ ತೀರ್ಥರು ಮೂಲ್ಕಿಯ ಶಾಂಭವಿ ನದಿಯ ತಟದಲ್ಲಿ ನೂತನ ಶಿಷ್ಯರಿಗೆ ಶ್ರೀಮತ್ ಸುಧೀಂದ್ರ ತೀರ್ಥರೆಂದು ಹೆಸರಿಸಿ ಸನ್ಯಾಸ ದೀಕ್ಷೆ ನೀಡಿದರು. ಹೀಗೆ ಹದಿನೆಂಟರ ಹರೆಯದಲ್ಲೇ ಸನ್ಯಾಸ ಸ್ವೀಕರಿಸಿ ಧರ್ಮ ಗುರುವಾಗಿ ಶ್ರೀ ಕಾಶೀಮಠ ಸಂಸ್ಥಾನದ ಗುರು ಪರಂಪರೆಯನ್ನು ಮುನ್ನಡೆಸಿದವರು ಗುರು ಸುಧೀಂದ್ರರು.

ಸನ್ಯಾಸದ ಹೊಸ ಜೀವನ, ಇನ್ನೊಂದೆಡೆ ಧಾರ್ಮಿಕ ಶಿಕ್ಷಣದ ಹೊಸ ಬದುಕಿನಲ್ಲಿ 5 ವರ್ಷಗಳೊಳಗೆ ಗುರು ಸುಕೃತೀಂದ್ರರೂ ಹರಿಪಾದ ಸೇರಿದರು. ಜಾಗತಿಕವಾಗಿ ದ್ವಿತೀಯ ಮಹಾಯದ್ಧದ ಕಾರ್ಮೋಡ, ದೇಶದಲ್ಲಿ ಸ್ವಾತಂತ್ರ್ಯದ ರಣ ಕಹಳೆಯ ವಾತಾವರಣದಲ್ಲಿ ಏಕಾಂಗಿಯಾಗಿ ಸಮಾಜವನ್ನು ಮುನ್ನಡೆಸುವ ಸ್ಥಾನದ ಜವಾಬ್ದಾರಿ ಗುರು ಸುಧೀಂದ್ರರದ್ದಾಯಿತು. ಬಾಲ್ಯದಿಂದಲೇ ಸಂಸ್ಕೃತ ವಿದ್ಯಾರ್ಥಿಯಾಗಿ ಪಡೆದ ಜ್ಞಾನ, ಧಾರ್ಮಿಕತೆಯ ಒಲವು, ಪರಂಪರೆಯ ಸಾಂಗತ್ಯ, ಜತೆಗಿದ್ದ ಅದ್ಭುತ ಸ್ಮರಣ ಶಕ್ತಿ, ಹಿರಿಯರ ಕುರಿತಾದ ಗೌರವ, ಕಲಿಕೆಗೆ ಅದಮ್ಯ ಆಸಕ್ತಿ ಗುರು ಸುಧೀಂದ್ರರಿಗೆ ಶ್ರೀ ರಕ್ಷೆಯಾದವು. ದೇಶದ ಉದ್ದಗಲ



ಸಂಚರಿಸಿ ಸಮಾಜಮತ್ತು ಜವಾಬ್ದಾರಿಯ ಚೌಕಟ್ಟು ರೂಪಿಸಿಕೊಂಡ ಗುರು ಸುಧೀಂದ್ರರು ತಮ್ಮ ಗುರುಗಳ ಸನ್ಯಾಸ ದೀಕ್ಷೆಯ ಕಾವೇರಿ ತೀರದ ಬಾಗಮಂಡಲದಲ್ಲಿ ಹೊಸದಾಗಿ ಕಟ್ಟಿದ ಕಾಶೀ ಮಠ ಅವರ ಗುರುಭಕ್ತಿಯ ದ್ಯೋತಕ. ರಾಜನ ಅಧೀನವಿದ್ದ ಕೊಚ್ಚಿ ದೇವಳದ ಆಡಳಿತವೂ ಸಮಾಜದ ಜನತೆಯ ಕೈಸೇರಿದ್ದು(1949) ಕಾಶೀಮಠಾಧೀಶರ ಪ್ರಯತ್ನದಿಂದಲೇ. 1950ರಲ್ಲಿ ದೇಶದ ಸಂವಿಧಾನದಲ್ಲಿ ಧಾರ್ಮಿಕ ಹಕ್ಕು ಮಠಾಧೀಶರುಗಳ ಜತೆಗಿರಬೇಕು ಎನ್ನುವ ಅಭಿಪ್ರಾಯವನ್ನೂ ಅವರು ಬೆನಗಲ್ ನರಸಿಂಹ ರಾವ್ ಅವರೊಂದಿಗೆ ಬಲವಾಗಿ ಪ್ರತಿಪಾದಿಸಿದ್ದರು.

ಕೊನೆಗೆ ಸಮಾಜದ ಗುರುಪೀಠಗಳ ನಡುವೆ ಏಕತೆ ಇರಬೇಕು ಎನ್ನುವ ಕಾರಣಕ್ಕೆ 1963ರಲ್ಲಿ ಕಾರ್ಕಳದಲ್ಲಿ ಕಾಶೀ, ಗೋಕರ್ಣ, ಕೈವಲ್ಯ ಮಠದ ಯತಿತ್ರಯರ ಚಾತುರ್ಮಾಸ ಆಚರಣೆಯನ್ನು ಐತಿಹಾಸಿಕವಾಗಿ ಅವರು ನಡೆಸಿದರು.

ಬಸ್ರೂರಿನಲ್ಲಿ ಶ್ರೀ ಭುವನೇಂದ್ರ ಬಾಲಕಾಶ್ರಮ (1965) ಕೊಂಕಣಿಯ ಸಾಂವಿಧಾನಿಕ ಮಾನ್ಯತೆಗೂ ಕಾರಣವಾದ ಕೊಚ್ಚಿಯ ಕೊಂಕಣಿ ಭಾಷಾ ಪ್ರಚಾರ ಸಭಾ (1966) ಪಿಹೆಚ್‌ಡಿ ಶಿಕ್ಷಣಕ್ಕೂ ನೆರವಾದ ಸುಕೃತೀಂದ್ರ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಕೊಚ್ಚಿನ್ (1971) ಮಂಗಳೂರಿನಲ್ಲಿ ಶ್ರೀನಿವಾಸ ನಿಗಮಾಗಮ ಪಾಠಶಾಲೆ ಸಹಿತ ಹಲವು ಆಶ್ರಮಗಳು, ವೈದ್ಯಕೀಯ, ಶಿಕ್ಷಣ ಸಂಸ್ಥೆಗಳು, ದೇಶದ ಮೂಲೆ ಮೂಲೆಯಲ್ಲಿ ಶಾಖಾ ಮಠಗಳ ನವೀಕರಣ, ಹೊಸ ಮಠಗಳ ಸ್ಥಾಪನೆ, ಸೇವಾ ಕಾರ್ಯಗಳು, ನೂರಾರು ದೇವಾಲಯಗಳ ಜೀರ್ಣೋದ್ಧಾರ,ಪ್ರತಿಷ್ಠೆ, ಪುನಃ ಪ್ರತಿಷ್ಠಾದಿ ಮಹೋತ್ಸವಗಳಿಗೆ ಗುರು ಸುಧೀಂದ್ರರು ಕಾರಣರಾದರು. ಅನೇಕ ಸೇವಾ ಚುಟುವಟಿಕೆಗಳೂ ಆರಂಭಗೊಂಡವು.

ಸಮಾಜದ ಉನ್ನತಿ ಮತ್ತು ಅಭಿವೃದ್ಧಿಗಾಗಿ ಅದರಲ್ಲೂ ವಿಶೇಷವಾಗಿ ಬಡತನದಲ್ಲಿರುವವರಿಗೆ ಉನ್ನತ ಶಿಕ್ಷಣ, ಜೀವನದಲ್ಲಿ ಯಶಸ್ಸು, ಕ್ಷೇಮಾಭ್ಯುದಯ ಮತ್ತು ಸಮಾಜದಲ್ಲಿ ಅವರಿಗೆ ಸೂಕ್ತ ಸ್ಥಾನಮಾನ ಸಿಗುವಂತಾಗಬೇಕು ಎನ್ನುವುದೇ ಗುರುಗಳ ಪ್ರಾರ್ಥನೆಯಾಗಿತ್ತು. ಉತ್ತರ ಭಾರತದ ಗಂಗಾ ನದಿಯ ತಟದ ಹರಿದ್ವಾರದಲ್ಲಿ ವ್ಯಾಸ ಮಂದಿರ (1988) ಕಾಶಿಯಲ್ಲಿ ಬಾಲ ವ್ಯಾಸ ಮಂದಿರ (1998) ಬದರಿಯಲ್ಲಿ ಮಠ ಹೀಗೆ ದೇಶದಲ್ಲಿ ವೇದವ್ಯಾಸರಿಗೂ ಸನ್ನಿಧಿ, ಸ್ಮಾರಕ ಸೌಧ ದೇಗುಲ ನಿರ್ಮಿಸಿದ ಏಕೈಕ ಯತಿ ಗುರು ಸುಧೀಂಧ್ರರು. ದೇಶದ ಒಳಿತಿಗಾಗಿ ಸಾಮೂಹಿಕ ಪ್ರಾರ್ಥನೆಯನ್ನೂ ಸಮಾಜದ ಮೂಲಕ ನಿರಂತರ ನಡೆಸಿದವರು.

ತನ್ನ ತೇಜೋಮಯ ವ್ಯಕ್ತಿತ್ವ, ಸದಾ ತಾದಾತ್ಮ್ಯದ ಹರಿ ಗುರು ಸೇವೆ, ಶಿಷ್ಯವರ್ಗದ ಒಳಿತಿಗೆ ಸದಾ ತತ್ಪರತೆ ಇವೆಲ್ಲದಕ್ಕೂ ಮೀರಿದ ಅದಮ್ಯ ದೈವಿಕ ಶಕ್ತಿ ಅವರದ್ದಾಗಿತ್ತು. ಪವಾಡವೋ ಎಂಬಂತೆ ಹರಿ ಮುನಿದರೂ ಗುರು ಕಾಯ್ವ ಎನ್ನುವ ಮಾತಿಗೆ ಅವರು ನಿದರ್ಶನವಾದರು. ಶಿಷ್ಯವರ್ಗಕ್ಕೆ ನಡೆದಾಡುವ ಭಗವಂತನಾದರು. ಗಂಟೆಗಟ್ಟಲೆ ದೇವತಾಪೂಜೆ, ಪುಷ್ಪಾಲಂಕಾರದಲ್ಲಿ ತಲ್ಲೀನತೆ, ಅಚಲ ಧಾರ್ಮಿಕತೆಯಿಂದ ಅವರು ಆಪ್ತರಾದರು. ಅವರ ಮಾತು, ಸಾನಿಧ್ಯ ಫಲ ಮಂತ್ರಾಕ್ಷತೆ ಶಿಷ್ಯವರ್ಗದ ಉನ್ನತಿಗೆ ನಾಂದಿಯಾಯಿತು. ಸಮಾಜದ ಶಿಷ್ಯವರ್ಗವನ್ನು ಆಯಸ್ಕಾಂತದಂತೆ ಸೆಳೆದ ಅವರು ಸಾಧನೆಗೆ ಸ್ಫೂರ್ತಿಯಾದರು. ಗುರುಪೀಠಗಳ ನಡುವೆ ಏಕತೆಯ ಕೊಂಡಿಯಾದರು. ಸಮಾಜದ ಅಭಿವೃದ್ಧಿಯ ಹರಿಕಾರರಾದರು.

ಕರ್ತವ್ಯವನ್ನು ಪ್ರೀತಿಸಿ, ನಾನು ಎನ್ನುವದಕ್ಕಿಂತ ನಾವು ಎನ್ನುವ ಭಾವನೆ, ಜವಾಬ್ದಾರಿಗೆ ಆದ್ಯತೆ, ಜೀವನದಲ್ಲಿ ಸಕಾರಾತ್ಮಕತೆ ಹೀಗೆ ಸದಾ ಮಾನವೀಯತೆಯ ಪ್ರತೀಕವಾಗಿ ಅವರ ಉಪದೇಶಗಳಿದ್ದವು. ಸಮಾಜದ ಉತ್ತರೋತ್ತರ ಅಭಿವೃದ್ಧಿಯನ್ನೇ ಜೀವನದ ಧ್ಯೇಯವನ್ನಾಗಿಸಿಕೊಂಡಿದ್ದ ಅವರು ಸಮಾಜವನ್ನು ಉತ್ತರಾಭಿಮುಖಿಯನ್ನಾಗಿಸಿ ದರು. ಉತ್ತರ ಭಾರತದ ತಮ್ಮ ಮೂಲವನ್ನೂ ಮರೆಯದಂತೆ ಧಾರ್ಮಿಕತೆಯ ಚೌಕಟ್ಟು ರೂಪಿಸಿಕೊಟ್ಟರು. ಕೇರಳ ಮೂಲದವರಾಗಿದ್ದರೂ ತಮ್ಮ ಜೀವನದ ಬಹುಕಾಲದವನ್ನು ಕರ್ನಾಟಕದಲ್ಲಿ ಕಳೆದ ಅವರು ಕನ್ನಡ ಭಾಷೆಯನ್ನು ತಮ್ಮ ಬುದಕಿನ ಭಾಗವಾಗಿಸಿಕೊಂಡು ಬೆಳೆಸಿದ್ದು ಅನನ್ಯ ಮಾದರಿ. ಅವರೊಂದು ಮಾನವತೆಯ, ನೈತಿಕತೆಯ ಶ್ರೇಷ್ಠತೆಯನ್ನು ಸಾರುವ ಶ್ರೇಷ್ಠ ಸಂತನ ನಿರಂತರತೆಯ ಸಾಲಿನ ಸಂಕೇತ. ಅವರ ಜೀವಿತಾವಧಿಯಲ್ಲಿ ಸಮಾಜದಲ್ಲಿದ್ದ ನಾವೇ ಧನ್ಯರು.

ಶ್ರೀ ಕಾಶೀ ಮಠ ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾಗಿ, ಪೀಠಾಧಿಪತಿಯಾಗಿ ನಭೂತೋ ಎಂಬ ಸಾಧನೆಗಳಿಗೆ ಒಡೆಯರಾದ ಗುರು ಸುಧೀಂಧ್ರ ತೀರ್ಥರು ಇದೇ ಕಾರಣದಿಂದಾಗಿ ಸಂಸ್ಥಾನ ಮಾತ್ರವಲ್ಲ ಸಮಾಜದ ನವೋದಯದ ಸಂತರೆನಿಸಿಕೊಳ್ಳುತ್ತಾರೆ.

ನವೋದಯದ ಬೆಳವಣಿಗೆಗೆ ಕಾರಣವಾಗಿರುವುದ 'ಕ್ಕಾಗಿಯೇ ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮೀಜಿ ಯವರು ನವೋದಯದ ಸಂತರೆನಿಸಿಕೊಳ್ಳುತ್ತಾರೆ. ಅವರ ಅವಧಿ ಸಂಸ್ಥಾನಕ್ಕೆ ಮಾತ್ರವಲ್ಲ ಶಿಷ್ಯವರ್ಗದ ಪಾಲಿಗೂ ಸುವರ್ಣ ಯುಗ. ತಮ್ಮ 90ರ ಹರೆಯದಲ್ಲಿ (2016) ಮುಕ್ತಿ ಹೊಂದಿದ ಶ್ರೀಗಳವರ ಜೀವನ ಸಾಧನೆ ಅದೊಂದು ಮಹಾಯಾನ. ಮೂಲ್ಕಿಯ ಶಾಂಭವಿ ನದಿ ತಟದಲ್ಲಿ ಆರಂಭಗೊಂಡ ಅವರ ಧರ್ಮ ಯಾನ ಗಂಗೆಯ ತಟದಲ್ಲಿ ಕೊನೆಗೊಂಡಿದೆ.

ಭೌತಿಕವಾಗಿ ಗುರು ಸುಧೀಂದ್ರರು ನಮ್ಮೊಂದಿಗಿಲ್ಲ. ಆದರೆ ಜ್ಞಾನ ಸೂರ್ಯನಾಗಿ ಅವರು ಅಸ್ತಮಿಸಿದ ಪಶ್ಚಿಮದಲ್ಲಿನ ಹೊಳಪು ಇನ್ನೂ ಮಿಂಚುತ್ತಲೇ ಇದೆ.

• ಗಣೇಶ್ ಕಾಮತ್ ಮೂಡುಬಿದಿರೆ

ಬೊಂಡಂತಿಲ: ಗೋಪಿ ರಮಾನಾಥ್‌ಗೆ ವಾತ್ಸಲ್ಯ ಮನೆ ಹಸ್ತಾಂತರ

• ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಜಪೆ ಯೋಜನಾ ಕಚೇರಿ ವ್ಯಾಪ್ತಿಯ ನೀರುಮಾರ್ಗ ವಲಯದ ಬೊಂಡಂತಿಲ ಕಾರ್ಯಕ್ಷೇತ್ರದ ವಾತ್ಸಲ್ಯ ಸದಸ್ಯರು ಗೋಪಿ ರಮಾನಾಥ್ ಅವರಿಗೆ ವಾತ್ಸಲ್ಯ ಕಾರ್ಯಕ್ರಮದಡಿ ವಾತ್ಸಲ್ಯ ಮನೆ ಹಸ್ತಾಂತರವನ್ನು ಯೋಜನೆಯ ಉಡುಪಿ ಪ್ರಾದೇಶಿಕ ನಿರ್ದೇಶಕರಾದ ಆನಂದ ಸುವರ್ಣ ಹಸ್ತಾಂತರಿಸಿದರು.



ಈ ಸಂದರ್ಭ ಮಾತನಾಡಿದ ಅವರು, ಖಾವಂದರು ಯೋಜನೆಯ ಮೂಲಕ ಕೈಗೊಂಡಿರುವ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ವಿವರಿಸಿ, ಸಮುದಾಯದ ವಿಭಾಗದದಲ್ಲಿ 4700 ಸಮುದಾಯ ಭವನ 17 ಸಾವಿರ ದೇವಸ್ಥಾನಗಳ ಜೀರ್ಣೋದ್ಧಾರ 950 ಕೆರೆಗಳ ಪುನಶ್ಚೇತನ ಬಯಲು ಸೀಮೆಗೆ 560 ಶುದ್ಧಗಂಗ ಕುಡಿಯುವ ನೀರಿನ ಘಟಕ ಸುಮಾರು 2 1/2 ಲಕ್ಷ ಜನಕ್ಕೆ ಉಪಯೋಗವಾಗುವಂತೆ ಸಮಾಜದ ಕೊರತೆ ನೀಗಿಸಲು ರುದ್ರಭೂಮಿ ಸಿಲಿಕಾನ್ ಚೇಂಬರ್ ವಾತ್ಸಲ್ಯ ಕಾರ್ಯಕ್ರಮದ 20000 ನಿರ್ಗತಿಕರಿಗೆ ತಿಂಗಳ ಮಾಶಾಸನ ವಿತರಣೆ, ಜನ ಮಂಗಳ ಕಾರ್ಯಕ್ರಮದಡಿಯಲ್ಲಿ 35 ಸಾವಿರ ಅಗತ್ಯ ಸಲಕರಣೆಗಳ ವಿತರಣೆ, ಅಸಹಾಯಕರನ್ನು ಗುರುತಿಸಿ 300 ಮನೆ ರಿಪೇರಿಗಳನ್ನು ಮಾಡಿಕೊಡಲಾಗಿದ್ದು , 2000 ಜನಕ್ಕೆ ವಾತ್ಸಲ್ಯ ವಿದ್ಯಾನಿಧಿ ವಿತರಿಸಲಾಗಿದೆ ಎಂದರು.

ಹುಟ್ಟು ಹಬ್ಬದ ಶುಭ ಹಾರೈಕೆ

ಮಾತೃಶ್ರೀ ಡಾ. ಹೇಮಾವತಿ ಅಮ್ಮನವರ ಕನಸಿನ ಕೂಸಾದ ವಾತ್ಸಲ್ಯ ಮನೆಯನ್ನು ಅವರ ಹುಟ್ಟು ಹಬ್ಬದಂದು ಹಸ್ತಾಂತರಿಸುತ್ತಿರುವುದು ಸಂತೋಷದ ಕ್ಷಣವಾಗಿದ್ದು, ಅಮ್ಮನವರಿಗೆ ಹುಟ್ಟು ಹಬ್ಬದ ಶುಭ ಹಾರೈಕೆ ಮಾಡಿದರು. ಅಲ್ಲದೆ ಈ ಮೂಲಕ ಇನ್ನಷ್ಟು ಕಾರ್ಯಕ್ರಮ ಹಮ್ಮಿಕೊಳ್ಳುವಂತಾಗಲಿ ಎಂದರು.

ಪಂಚಾಯತ್ ಅಧ್ಯಕ್ಷ ಶ್ರೀಧರ್ ಕಾರ್ಯಕ್ರಮಕ್ಕೆ ಶುಭ ಹಾರೈಸಿ ಯೋಜನೆ ಕಾರ್ಯಕ್ರಮ ಶ್ಲಾಘಿಸಿದರು. ಜಿಲ್ಲಾ ನಿರ್ದೇಶಕ ದಿನೇಶ್ ಪೂಜಾರಿ ಉಪಸ್ಥಿತರಿದ್ದರು. ಸ್ಥಳೀಯ ಪಂಚಾಯತ್ ಸದಸ್ಯರು ಭಾಸ್ಕರ್ ಮಾಣೂರ್, ಗೋಕುಲ್ ದಾಸ್ ಶೆಟ್ಟಿ, ಹರೀಶ್ ಹೊಸಮನೆ ಯಶೋದಾ, ಕೃಷ್ಣಅಡ್ಯಾರ್, ಬದಿನಡಿ ಭಂಡಾರ ಮನೆಯ ಮನೋಹರ್ ಬದಿನಡಿ , ಶಶಿಕುಮಾರ್ ಕರಂದಾಡಿ ಒಕ್ಕೂಟದ ಅಧ್ಯಕ್ಷರು ಮತ್ತಿತರರು ಉಪಸ್ಥಿತರಿದ್ದರು.

ಯೋಜನಾಧಿಕಾರಿ ಗಿರೀಶ್ ಸ್ವಾಗತಿಸಿ, ಮೇಲ್ವಿಚಾರಕರಾದ ಸುಜಾತ ನಿರೂಪಿಸಿದರು. ಕೀರ್ತಿರಾಜ್ ಕರಂದಾಡಿ ವಂದಿಸಿದರು. ಜ್ಞಾನ ವಿಕಾಸಮಾನ್ವಯಾಧಿಕಾರಿ ಶೋಭಾ ಸೇವಾ ಪ್ರತಿನಿಧಿಗಳು ಉಪಸಿತರಿದ್ದರು.

ದೈವಜ್ಞ ಬ್ರಾಹ್ಮಣ ಶಿಷ್ಯ ವೃಂದ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ

ಏ. 7: ಸೋದೆ ಶ್ರೀಗಳಿಗೆ ಗುರುವಂದನೆ

• ಮಂಗಳೂರು: ಸೋದೆ ವಾದಿರಾಜ ಮಠದ ಪ್ರಮುಖ ಶಿಷ್ಯ ಸಮುದಾಯವಾದ ದೈವಜ್ಞ ಬ್ರಾಹ್ಮಣ ಶಿಷ್ಯ ವೃಂದ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ ಏ. 7ರಂದು ನಗರದ ಶರವು ಮಹಾಗಣಪತಿ ದೇವಸ್ಥಾನದ ಸಭಾ ಭವನದಲ್ಲಿ ದೈವಜ್ಞ ಗುರುವಂದನಾ ಮಹೋತ್ಸವ ಜರಗಲಿದ್ದು, ಸೋದೆ ಮಠಾಧೀಶರಾದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರಿಗೆ ಗುರುವಂದನಾ ಕಾರ್ಯಕ್ರಮ ನಡೆಯಲಿದೆ.



ಮಧ್ಯಾಹ್ನ 3 ಗಂಟೆಗೆ ಡೊಂಗರಕೇರಿ ಕೆನರಾ ಹೈಸ್ಕೂಲ್ ವೃತ್ತದಿಂದ ಶ್ರೀ ಶರವು ಮಹಾಗಣಪತಿ ದೇವಸ್ಥಾನದವರೆಗೆ ಶೋಭಾಯಾತ್ರೆ ನಡೆಯಲಿದೆ. ಡೊಂಗರಕೇರಿ ಕೆನರಾ ಹೈಸ್ಕೂಲ್‌ನಿಂದ ಶೋಭಾಯಾತ್ರೆ ಹೊರಟು ಡೊಂಗರಕೇರಿ ಶ್ರೀ ವೆಂಕಟರಮಣ ದೇವಸ್ಥಾನ, ನ್ಯೂಚಿತ್ರಾ ಟಾಕೀಸ್, ಕಾರ್‌ಸ್ಟ್ರೀಟ್ ರಸ್ತೆ, ಶ್ರೀ ಉಮಾಮಹೇಶ್ವರೀ ದೇವಸ್ಥಾನ ಮಾರ್ಗವಾಗಿ ಶರವು ಶ್ರೀ ಮಹಾಗಣಪತಿ ದೇವಸ್ಥಾನ ತಲುಪಲಿದೆ. ಬಳಿಕ ಸಂಜೆ 6ರಿಂದ ಭೂತರಾಜರ ಪೂಜೆ, ಶ್ರೀ ವಿಶ್ವವಲ್ಲಭ ಶ್ರೀಪಾದರಿಂದ ಆಶೀರ್ವಚನ ನಡೆಯಲಿದೆ. ಈ ಸಂದರ್ಭ ಅವರಿಗೆ ಪಾದಪೂಜೆ ಸಮರ್ಪಣೆ ನಡೆಯಲಿದೆ. ಸಮಾಜದ ಗಣ್ಯರು, ಶಿಷ್ಯರು, ನಾಗರಿಕರು ಪಾಲ್ಗೊಳ್ಳಲಿದ್ದಾರೆ. ರಾತ್ರಿ 8.30ರಿಂದ ಪ್ರಸಾದ, ಅನ್ನಸಂತರ್ಪಣೆ ಜರಗಲಿದೆ ಎಂದು ದೈವಜ್ಞ ಬ್ರಾಹ್ಮಣ ಶಿಷ್ಯ ವೃಂದದ ಅಧ್ಯಕ್ಷ ರವೀಂದ್ರ ಶೇಟ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾವಿ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮ ಅನುಗ್ರಹಿತ ದೈವಜ್ಞ ಬ್ರಾಹ್ಮಣರು ಸಂಪನ್ನ ವೈದಿಕಪರಂಪರೆಯಲ್ಲಿ ಬಂದಿರುವ ದೈವಜ್ಞ ಬ್ರಾಹ್ಮಣ ಸಮುದಾಯ ಸಾತ್ವಿಕ ಸದ್ಭಕ್ತ ಸಮುದಾಯವಾಗಿದೆ. ಋಗ್ವೇದ ಕಾಲದ ವೈದಿಕ ಬ್ರಾಹ್ಮಣರಾದ ಸಮುದಾಯದ ಮಂದಿ ಜ್ಯೋತಿಷ್ಯ ಶಾಸ್ತ್ರ, ಸ್ವರ್ಣರಹಿತ ಸಾಮಗ್ರಿಗಳನ್ನು ಶುದ್ಧೀಕರಿಸಿ ಯಜ್ಞಗಳಿಗೆ ಹವಿಸ್ ರೂಪದಲ್ಲಿ ಸಮರ್ಪಿಸುವ ಪರಿಣತರಾಗಿದ್ದಾರೆ.

ಈ ಸಮುದಾಯದವರನ್ನು ಉದ್ಧರಿಸುವುದಕ್ಕಾಗಿ ವಿದ್ಯೆಯ ಅಧಿದೇವತೆಯಾದ ಸ್ವತ: ಸಾಕ್ಷಾತ್ ಶ್ರೀ ಹಯಗ್ರೀವ ದೇವರು ಸಾತ್ವಿಕ ಬ್ರಾಹ್ಮಣ ಸ್ವರ್ಣಕಾರರೊಬ್ಬರಮನೆಯಲ್ಲಿ ವಿಗ್ರಹ ರೂಪದಲ್ಲಿ ಅವತರಿಸಿ ತಮ್ಮ ಪ್ರಿಯ ಉಪಾಸಕರಾದ ಭಾವಿಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರಿಗೆ ಸ್ವಪ್ನದಲ್ಲಿ ಒಲಿದು ಅವರು ಮುಖೇನ ಸಮಸ್ತ ದೈವಜ್ಞ ಬ್ರಾಹ್ಮಣ ಸಮಾಜಕ್ಕೆ ಮಾಧ್ವ ವೈಷ್ಣವ ದೀಕ್ಷೆಯನ್ನು ನೀಡಿ ಮಠದ ಮುಖ್ಯ ಶಿಷ್ಯರನ್ನಾಗಿ ಹರಸಿದರು. ಅಂದಿನಿಂದ ಸಮಾಜವು ಶ್ರೀ ಹಯಗ್ರೀವ ದೇವರ, ಶ್ರೀ ವಾದಿರಾಜರ, ಶ್ರೀ ಭೂತರಾಜರ ಆರಾಧನೆಯನ್ನು ಮಾಡುತ್ತಾ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಶ್ರೀ ವಾದಿರಾಜರ ಆರಾಧನೆ ಮತ್ತು ಸಂಸ್ಮರಣೆಯ ಸಲುವಾಗಿ ಪ್ರಸ್ತುತ ಪೀಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥರಿಗೆ ಮಂಗಳೂರು - ದಕ್ಷಿಣ ಕನ್ನಡ ಜಿಲ್ಲೆಯ ಸಮಸ್ತ ದೈವಜ್ಞ ಬಾಂಧವರಿಂದ ಕನಕಾಭಿಷೇಕ, ಪುಷ್ಪಾಭಿಷೇಕ ಮೂಲಕ ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರವೀಂದ್ರ ಶೇಟ್ ವಿವರಿಸಿದರು.

ಕಾರ್ಯದರ್ಶಿ ಎಸ್. ವಿನೋದ್ ಕುಮಾರ್ ಶೇಟ್, ಜತೆ ಕಾರ್ಯದರ್ಶಿ ಅನಿಲ್ ಸದಾನಂದ ಶೇಟ್, ಕಾರ್ಯ ನಿರ್ವಾಹಕ ಎಂ. ಪ್ರಶಾಂತ್ ಶೇಟ್, ಜತೆ ಕಾರ್ಯ ನಿರ್ವಾಹಕ ಎಂ. ನಿಶಾಂತ್ ಶೇಟ್, ಜತೆ ಕೋಶಾಧಿಕಾರಿ ಗಣೇಶ್ ಕೆ.ಕೆ. ಆರ್. ಶೇಟ್, ಮಾರ್ಗದರ್ಶಕ ಸುಧಾಕರ ರಾವ್ ವೇಜಾವರ ಉಪಸ್ಥಿತರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

03-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 500
ಚೋಲ್ ಅಡಿಕೆ	530 - 555
ಡಬಲ್ ಚೋಲ್	530 - 555
ಹೊಸ ಪಟೋರ	350 - 400
ಹಳೆ ಪಟೋರ	380 - 410
ಹೊಸ ಉಳ್ಳಿ	120 - 290
ಹಳೆ ಉಳ್ಳಿ	105 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	224.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	135.00
ಸ್ಕ್ರಾಪ್ 2	125.00

ಕಾಪು 'ರಂಗ ತರಂಗ'ದ ಸುಜಿತ್ ಶೆಟ್ಟಿ ಇನ್ನಿಲ್ಲ

• ಉಡುಪಿ: ತುಳು ರಂಗಭೂಮಿಯ ಖ್ಯಾತ ಕಲಾವಿದ, ಕಾಪು 'ರಂಗ ತರಂಗ' ಕಲಾವಿದರ ತಂಡದ ಸ್ಥಾಪಕ ಸದಸ್ಯ ಹಾಗೂ ಮಾಜಿ ಸಂಚಾಲಕ ಸುಜಿತ್ ಶೆಟ್ಟಿ ಪಾದೂರು (54) ಅವರು ಏ. 3ರಂದು ನಿಧನ ಹೊಂದಿದರು. ಕಳೆದ ಕೆಲವು ಸಮಯದಿಂದ ಅಸೌಖ್ಯದಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಇಹಲೋಕ ತ್ಯಜಿಸಿದ್ದಾರೆ.



ಅಪ್ಪಟ ರಂಗಪ್ರೇಮಿಯಾಗಿದ್ದ ಸುಜಿತ್ ಶೆಟ್ಟಿ ಅವರು ತುಳು ನಾಟಕ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಹಾಸ್ಯ ಪಾತ್ರಗಳಿರಲಿ ಅಥವಾ ಸಾಮಾಜಿಕ ಕಳಕಳಿಯ ಗಂಭೀರ ಪಾತ್ರಗಳಿರಲಿ, ಅವುಗಳಿಗೆ ಜೀವ ತುಂಬುವ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದರು. ಕೆ. ಲೀಲಾಧರ ಶೆಟ್ಟಿ ಅವರ ನೇತೃತ್ವದ ಪ್ರಸಿದ್ಧ 'ಕಾಪು ರಂಗ ತರಂಗ' ತಂಡದ ಆರಂಭದ ದಿನಗಳಿಂದಲೂ ಸಕ್ರಿಯರಾಗಿದ್ದ ಅವರು, ತಂಡದ ಸ್ಥಾಪಕ ಸದಸ್ಯರಾಗಿ ಮತ್ತು ಸಂಚಾಲಕರಾಗಿ ತಂಡದ ಯಶಸ್ಸಿನ ಹಿಂದೆ ಶಕ್ತಿಯಾಗಿ ನಿಂತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅನಾರೋಗ್ಯದ ಕಾರಣದಿಂದಾಗಿ ಅವರು ನಟನೆಯಿಂದ ದೂರ ಉಳಿದಿದ್ದರೂ, ರಂಗಭೂಮಿಯ ಮೇಲಿನ ಅವರ ಪ್ರೀತಿ ಮಾತ್ರ ಕುಂದಿರಲಿಲ್ಲ.

ಗಣ್ಯರ ಸಂತಾಪ

ಸುಜಿತ್ ಶೆಟ್ಟಿ ಅವರ ನಿಧನಕ್ಕೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಜೆಡಿಎಸ್ ಜಿಲ್ಲಾಧ್ಯಕ್ಷ ಯೋಗೀಶ್ ಶೆಟ್ಟಿ ಬಾಲಾಜಿ ತೀವ್ರ ಸಂತಾಪ ಸೂಚಿಸಿದ್ದಾರೆ. ಅಲ್ಲದೆ, ಗಣ್ಯರಾದ ಕೆ. ವಾಸುದೇವ ಶೆಟ್ಟಿ, ಮನೋಹರ ಎಸ್. ಶೆಟ್ಟಿ, ನಡಿಕೆರೆ ರತ್ನಾಕರ ಶೆಟ್ಟಿ ಹಾಗೂ ಕಾಪು ರಂಗ ತರಂಗದ ಒಡನಾಡಿಗಳು ಮತ್ತು ತುಳು ರಂಗಭೂಮಿಯ ಕಲಾವಿದರು ಅಗಲಿದ ಚೇತನಕ್ಕೆ ಕಂಬನಿ ಮಿಡಿದಿದ್ದಾರೆ.

ಮೃತರು ಪತ್ನಿ, ಕಾಪು ತಾಲೂಕು ಪಂಚಾಯತ್‌ನ ಮಾಜಿ ಅಧ್ಯಕ್ಷೆ ಶಶಿಪ್ರಭಾ ಶೆಟ್ಟಿ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-47) ಡ್ರಾ ಏಪ್ರಿಲ್ 3ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RH 857805 (NEYYATTINKARA)

Consolation Prize Rs.5,000/-
RA 857805 RB 857805 RC 857805 RD 857805
RE 857805 RF 857805 RG 857805 RJ 857805
RK 857805 RL 857805 RM 857805

2nd Prize Rs.30,00,000/- [30 Lakhs]
RG 825958 (MALAPPURAM)

3rd Prize Rs.5,00,000/- [5 Lakhs]
RH 637748 (KAYAMKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
2058 2270 2505 2733 2876 3305 3580 4265 4391 4598
4991 6851 7788 8299 8701 8752 9307 9643 9907

5th Prize Rs.2,000/-
0183 1553 2683 3288 7214 8269

6th Prize Rs.1,000/-
0371 0606 1067 1298 2978 3069 3115 3676 4256 4460
4503 4504 4798 5036 5456 6716 7327 7453 7622 7778
7793 7812 8905 9380 9414

7th Prize Rs.500/-
0019 0123 0125 0244 0518 0660 0950 0964 1003 1031
1047 1055 1120 1129 1150 1341 1426 1500 1513 1606
1852 2161 2179 2362 2459 2704 2731 2763 2766 2867
2966 3045 3234 3441 3489 3567 3927 3954 4375 4516
4590 4612 4719 4842 5093 5125 5260 5833 5839 5954
6037 6061 6068 6118 6202 6449 6689 6807 6831 7149
7233 7250 7316 7376 7523 7627 8067 8341 8570 8628
8668 8795 8865 8867 8876 8947

8th Prize Rs.200/-
0037 0046 0248 0277 0321 0346 0538 0739 0888 0909
1062 1241 1336 1453 1467 1620 1808 1828 2280 2471
3117 3175 3221 3542 3578 3581 3588 3589 3630 3644
3846 3869 3886 4203 4287 4301 4305 4437 4452 4521
4617 4795 4796 4808 4865 4876 5149 5172 5183 5466
5471 5482 5573 5574 5749 6000 6298 6459 6901 6908
7468 7520 7534 7583 7680 7835 7847 7868 7887 8039
8119 8140 8542 8554 8574 8583 8620 8691 8836 9031
9112 9208 9326 9336 9435 9533 9580 9712 9738 9790
9952 9971

9th Prize Rs.100/-
0022 0055 0093 0102 0109 0130 0141 0195 0344 0368
0385 0405 0525 0607 0637 0730 0826 0831 0925 1088
1179 1246 1447 1461 1470 1651 1756 1780 1807 1815
1882 1958 2009 2037 2106 2110 2167 2322 2350 2370
2523 2559 2637 2675 2707 2851 2897 2902 2930 2968
3039 3067 3083 3148 3181 3210 3317 3331 3347 3560
3566 3613 3634 3674 3727 3922 4043 4152 4262 4304
4321 4381 4394 4533 4588 4603 4888 4909 5203 5241
5282 5305 5320 5343 5457 5521 5580 5690 5698 5768
5793 5869 6045 6094 6197 6208 6248 6433 6465 6498
6760 6959 6994 7137 7140 7346 7358 7501 7535 7540
7797 7839 7926 7968 7990 8003 8142 8167 8212 8213
8304 8404 8429 8551 8577 8741 8761 8843 8929 8966
9018 9187 9242 9284 9410 9427 9446 9469 9478 9501
9716 9819 9837 9993

ಕಿರುಸುದ್ದಿ

ಇಂದು ಕರಂಗಲಪಾಡಿ ಶ್ರೀ ಮಹಾಸತಿ-ಶ್ರೀ ಭಗವತೀ ಅಮ್ಮನವರ ಸಾನಿಧ್ಯದಲ್ಲಿ ಧಾರ್ಮಿಕ ಕಾರ್ಯಕ್ರಮ

ಮಂಗಳೂರು: ನಗರದ ಕರಂಗಲಪಾಡಿ ಶ್ರೀ ಮಹಾಸತಿ ಹಾಗೂ ಶ್ರೀ ಭಗವತೀ ಅಮ್ಮನವರ ಸಾನಿಧ್ಯದಲ್ಲಿ ಏ.4ರಂದು ವಿವಿಧ ಧಾರ್ಮಿಕ ಕಾರ್ಯಕ್ರಮ ಹಾಗೂ ಕುದ್ರೋಳಿ ಶ್ರೀ ಭಗವತೀ ದೇವಸ್ಥಾನದ ನಡಾವಳಿ ಉತ್ಸವ ಭೇಟಿ ಹಿನ್ನೆಲೆಯಲ್ಲಿ ಬಪ್ಪನಾಡು ಕ್ಷೇತ್ರ ಮಹಾತ್ಮೆ ಯಕ್ಷಗಾನ ಬಯಲಾಟ ಆಯೋಜಿಸಲಾಗಿದೆ. ಕರಂಗಲಪಾಡಿ ಶ್ರೀ ಭಗವತೀ ಅಮ್ಮನವರ ಸಾನಿಧ್ಯದಲ್ಲಿ ಬೆಳಗ್ಗೆ 5ಕ್ಕೆ ಕೃಷ್ಣ ಅಡಿಗ ಅವರ ನೇತೃತ್ವದಲ್ಲಿ ಗಣಹೋಮ ನಂತರ ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 12.30ಕ್ಕೆ ಅಮ್ಮನವರಿಗೆ ಸಾಮೂಹಿಕ ಪೂಜೆ ಹಾಗೂ ಪ್ರಾರ್ಥನೆ ನಡೆಯಲಿದೆ. ಸಂಜೆ 4ಕ್ಕೆ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಿಂದ ನೂತನ ರಜತ ಕವಚ, ಪ್ರಭಾವಳಿ, ನಂದಾದೀಪ ಮೆರವಣಿಗೆ ಮೂಲಕ ಅಮ್ಮನ ಸಾನಿಧ್ಯಕ್ಕೆ ತಂದು ಒಪ್ಪಿಸಲಾಗುವುದು. ಸಂಜೆ 6.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಸಾನಿಧ್ಯದ ಅರ್ಚಕ ಸುದನ್ ವಿದ್ಯಾನಗರ ಪಂಜಿಮುಗೇರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾತ್ರಿ 8ಕ್ಕೆ ಶ್ರೀ ಕ್ಷೇತ್ರ ಬಪ್ಪನಾಡು ದುರ್ಗಾಪರಮೇಶ್ವರಿ ಅಮ್ಮನವರಿಗೆ ಚೌಕಿ ಪೂಜೆಯ ಬಳಿಕ ಅನ್ನಪ್ರಸಾದ ವಿತರಣೆ, ಸಾನಿಧ್ಯದ ಬಳಿ ಹಾಕಿರುವ ರಂಗಸ್ಥಳದಲ್ಲಿ ಶ್ರೀ ಬಪ್ಪನಾಡು ಕ್ಷೇತ್ರದ ಮಹಾತ್ಮೆ ಯಕ್ಷಗಾನ ಬಯಲಾಟ ನಡೆಯಲಿದೆ ಎಂದರು.ಕರಂಗಲಪಾಡಿ ಶ್ರೀ ಮಹಾಸತಿ ಹಾಗೂ ಶ್ರೀ ಭಗವತೀ ಅಮ್ಮನವರ ಭಕ್ತವೃಂದದ ಪ್ರಮುಖರಾದ ನವೀನ್ ಬಿಜೈ, ಸತ್ಯಪ್ರಸಾದ್ ಪೊಳಲಿ, ರಜನೀಶ್ ಬಿಜೈ, ರವಿಚಂದ್ರ ಶೆಟ್ಟಿ ಅಶೋಕನಗರ, ಕಿರಣ್ ಕುಮಾರ್, ಗಿರೀಶ್ ಕೊಟ್ಟಾರಿ ಉಪಸ್ಥಿತರಿದ್ದರು.

ಏ.7ರಂದು ರೆಡ್‌ಕ್ರಾಸ್‌ನಿಂದ ವಿಶ್ವ ಆರೋಗ್ಯ ದಿನಾಚರಣೆ

ಮಂಗಳೂರು: ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್‌ಕ್ರಾಸ್ ಮಂಗಳೂರು ವಿ.ವಿ. ಮತ್ತು ನಿಟ್ಟೆ ಪರಿಗಣಿತ ವಿ.ವಿ. ಸಹಯೋಗದಲ್ಲಿ ಏ.7ರಂದು ಬೆಳಗ್ಗೆ 11ಕ್ಕೆ ನಗರದ ರೆಡ್ ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ವಿಶ್ವ ಆರೋಗ್ಯ ದಿನಾಚರಣೆ ನಡೆಯಲಿದೆ.

ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಕೆಎಂಸಿ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗಶಾಸ್ತ್ರ ತಜ್ಞೆ ಡಾ.ಶ್ರದ್ಧಾ ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ರೆಡ್‌ಕ್ರಾಸ್ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ. ಬಿ.ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನಾ ಬಿ., ಮಂಗಳೂರು ವಿ.ವಿ. ನೋಡಲ್ ಅಧಿಕಾರಿ ಡಾ.ಗಾಯತ್ರಿ ಎನ್., ನಿಟ್ಟೆ ಪರಿಗಣಿತ ವಿ.ವಿ. ನೋಡಲ್ ಅಧಿಕಾರಿ ಡಾ.ಶಂತನು ಸಹ ಭಾಗವಹಿಸುವರು ಎಂದು ರೆಡ್‌ಕ್ರಾಸ್ ಜಿಲ್ಲಾ ಘಟಕದ ಕಾರ್ಯದರ್ಶಿ ಕಿಶೋರ್ ಚಂದ್ರ ಹೆಗ್ಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ವಿಠಲ ಪೂಂಜ ಮತ್ತು ಕುಟುಂಬಿಕರು, ಅಳಿಕೆ ಮನೆ, ಮೂಡುಪೆರಾರ ವಯಾ ಗಂಜಿಮಠ.
2. ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸಮಿತಿ, ಹತ್ತು ಸಮಸ್ತರು, ಹರೇಕಳ.
3. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ ಮತ್ತು ಹತ್ತು ಸಮಸ್ತರು, ಕಲ್ಲಿಮಾರು, ಕೋಣಾಜೆ.
4. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಅಸೈಗೋಳಿ, ಕೋಣಾಜೆ.
5. ದಾಮೋದರ ಮಡಿವಾಳ, 'ಶ್ರೀ ಧಾಮ', ತುಂಬೆದಲ್ಕೆ, ಗುಂಡೂರಿ, ಬೆಳ್ತಂಗಡಿ (ತಾ).
6. ವೆಂಕಟ್ರಮಣ ಹೆಗ್ಡೆ, 'ಶ್ರೀನಿವಾಸ', ಅಜಾರು, ಕಟೀಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಹತ್ತು ಸಮಸ್ತರು, ಮಂಜಲ್‌ಕಟ್ಟೆ, ಕಾವೂರು.

ಶ್ರೀ ಧರ್ಮಸ್ಥಳ ಮೇಳ
ಕೊಡಿಪ್ಪಾಡಿಯಲ್ಲಿ
ಮಹಾಬಲ ಗಾಣಿಗ, ಸಹೋದರರು ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ಶಾಂತಿನಿವಾಸ

ಶ್ರೀ ಸಾಲಿಗ್ರಾಮ ಮೇಳ
ಬೆಳ್ವೆ ಶಂಕರನಾರಾಯಣ ದೇವಸ್ಥಾನ

ಶ್ರೀ ಪೆರ್ಡೂರು ಮೇಳ
ಬಂಟಕಲ್ಲು - **ಸುದರ್ಶನ ವಿಜಯ**

ಶ್ರೀ ಹನುಮಗಿರಿ ಮೇಳ
ಕುಂಟ್ಯಾನದಲ್ಲಿ

ಶ್ರೀ ಪಾವಂಜೆ ಮೇಳ
ಬೊಗ್ರುಗುಡ್ಡೆ ಅಡ್ಯಾರಪದವು ಹೊಸಬೆಟ್ಟು
ಛಾಯಾನಂದನ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹುಣ್ಣಿಮೆಯ ಅಂಗವಾಗಿ ಜೀವ ನದಿ ಕಾವೇರಿ ಮಾತೆಗೆ ಆರತಿ ಬೆಳಗುವ ಮೂಲಕ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಯೋಜನಾಧಿಕಾರಿ ಪುರುಷೋತ್ತಮ, ಕೃಷಿ ಅಧಿಕಾರಿ ಅಶ್ವಥ್, ಮೇಲ್ವಿಚಾರಕ ಸುನಿಲ್, ನಾಪೋಕ್ಲು ಪಂಚಾಯತ್ ಅಧ್ಯಕ್ಷರಾದ ವನಜಾಕ್ಷಿ ರೇಣುಕೇಶ್, ಸುಭಾಷ್ ನಗರ ಕಾರ್ಯಕ್ಷೇತ್ರದ ಒಕ್ಕೂಟ ಅಧ್ಯಕ್ಷರಾದ ಮುತ್ತು ರಾಣಿ ಮೊದಲಾದವರು ಭಾಗವಹಿಸಿದ್ದರು.

ಏ.4-5: ಪಾಣಾಜೆ ವಿವೇಕ್ ಶಾಲೆಯ ಬೆಳ್ಳಿ ಹಬ್ಬ

ಪುತ್ತೂರು: ಪಾಣಾಜೆ ವಿವೇಕ್ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯ ಬೆಳ್ಳಿ ಹಬ್ಬ ಸಂಭ್ರಮ ಮತ್ತು ಹಿರಿಯ ವಿದ್ಯಾರ್ಥಿಗಳ ಸಮ್ಮಿಳನವು ಏ.4 ಹಾಗೂ 5ರಂದು ನಡೆಯಲಿದೆ ಎಂದು ವಿದ್ಯಾ ಸಂಸ್ಥೆಯ ಅಧ್ಯಕ್ಷ ಶಾಹುಲ್ ಹಮೀದ್ ಜಾಲಗಂಡಮ್ ತಿಳಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1999ರಲ್ಲಿ ಆರಂಭಗೊಂಡ ವಿದ್ಯಾ ಸಂಸ್ಥೆಯಲ್ಲಿ ಸಾವಿರಾರು ಮಂದಿ ವಿದ್ಯಾಭ್ಯಾಸ ಮಾಡಿದ್ದಾರೆ. ಈಗ ಎಲ್.ಕೆ.ಜಿ.ಯಿಂದ 7ನೇ ತರಗತಿ ತನಕ 200 ಮಂದಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.

ಏ.4ರಂದು ಬೆಳಗ್ಗೆ ಬೆಳ್ಳಿ ಹಬ್ಬ ಕಾರ್ಯಕ್ರಮವನ್ನು ಹಲವು ಮಂದಿ ಗಣ್ಯರ ಸಮ್ಮುಖದಲ್ಲಿ ರಣಮಂಗಲ ಶ್ರೀ ಸುಬ್ರಹ್ಮಣ್ಯ ದೇವಾಲಯದ ಆಡಳಿತ ನಿರ್ದೇಶಕ ಶ್ರೀಕೃಷ್ಣ ಬೋಳಿಲ್ಲಾಯ ಉದ್ಘಾಟಿಸಲಿದ್ದಾರೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, 7 ಗಂಟೆಗೆ ಸಭಾ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಐವನ್ ಡಿ'ಸೋಜ ಉದ್ಘಾಟಿಲಿದ್ದಾರೆ. ಶಾಸಕ ಅಶೋಕ್ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳ್ಳಿ ಹಬ್ಬ ನೆನಪಿನ ಆಡಿಟೋರಿಮನ್ನು ಸ್ಪೀಕರ್ ಯು.ಟಿ. ಖಾದರ್ ಉದ್ಘಾಟಿಸಲಿದ್ದಾರೆ. ಸ್ಮಾರ್ಟ್ ಕ್ಲಾಸನ್ನು ಕರ್ನಾಟಕ ಕಾರ್ಮಿಕ ಸಲಹಾ ಬೋರ್ಡ್ ಅಧ್ಯಕ್ಷ ಟಿ.ಎಂ. ಶಹೀದ್ ಉದ್ಘಾಟಿಸಲಿದ್ದಾರೆ. ವಿವೇಕಂ ಶಾಲಾ ಮ್ಯಾಗಜಿನ್ ಸುಳ್ಯ ಕೆ.ವಿ.ಜಿ. ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಲೀಲಾಧರ್ ಉದ್ಘಾಟಿಸಲಿದ್ದಾರೆ.

ಏ.5ರಂದು ಸಂಜೆ ಸಭಾ ಕಾರ್ಯಕ್ರಮವನ್ನು ಮಾಜಿ ಸಚಿವ ಬಿ. ರಮಾನಾಥ ರೈ ಉದ್ಘಾಟಿಸಲಿದ್ದು, ಮಾಜಿ ಶಾಸಕ ಸಂಜೀವ ಮಠಂದೂರು ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಲಿದ್ದಾರೆ. ಫ್ರೀ ಸ್ಕೂಲನ್ನು ಇನಾಯತ್ ಆಲಿ ಹಾಗೂ ಹಿರಿಯ ವಿದ್ಯಾರ್ಥಿ ಸಂಘವನ್ನು ಪದ್ಮರಾಜ್ ಆರ್. ಪೂಜಾರಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪದ್ಮಶ್ರೀ ಹರೇಕಳ ಹಾಜಬ್ಬ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖ್ಯಶಿಕ್ಷಕಿ ಸುನೀತಿ ಪಿ., ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷ ಅಬೂಬಕ್ಕರ್ ಕಲ್ಲಪದವು, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಹರ್ಷಿತ ಉನ್ನಿಕೃಷ್ಣನ್, ಟ್ರಸ್ಟಿ ರಿಜ್ವಾನ್ ಜಾಲಗಂಡಮ್, ಸಂಚಾಲಕ ಮೂಸಕುಂಞ ಜಾಲಗದ್ದೆ ಉಪಸ್ಥಿತರಿದ್ದರು.

ಬಸಳೆ, ಹರಿವೆ, ಪಾಲಕ್, ಬೆಂಡೆ, ಹೀರೆ, ಬದನೆ, ಚೌಳಿ, ಸೋರೆಕಾಯಿ, ಮೂಲಂಗಿ, ಹಸಿಮೆಣಸು

ಕಣ್ಮನ ಸೆಳೆದಿದೆ ಹಾಸ್ಟೆಲ್ ಮಕ್ಕಳ ಕೈತೋಟ!

ಕುಂದಾಪುರ: ತಾಲೂಕಿನಲ್ಲಿ ಕಾರ್ಯಾಚರಿಸುತ್ತಿರುವ ಈ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಹೋದರೆ ಎಲ್ಲೆಲ್ಲೂ ಹಸಿರು ಸುಂದರ ಪರಿಸರ ಕಣ್ಣಿಗೆ ಮುದ ನೀಡುತ್ತದೆ. ಬೆಳೆದ ತರಹೇವಾರಿ ತರಕಾರಿಗಳು ಕಾಣಸಿಗುತ್ತದೆ.

ಕುಂದಾಪುರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸೇರಿದ 7 ಮೆಟ್ರಿಕ್ ಪೂರ್ವ ಹಾಗೂ 8 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳೇ ನಿರ್ಮಿಸಿದ ಕೈತೋಟ ಅವರಲ್ಲಿ ಆತ್ಮವಿಶ್ವಾಸ, ಸಹಕಾರ ಮನೋಭಾವ ಹಾಗೂ ಸ್ವಾವಲಂಬನೆ ಬೆಳೆಸುವಲ್ಲಿ ಸಹಕಾರಿಯಾಗಿದೆ. ಅಲ್ಲದೆ ವಿದ್ಯಾರ್ಥಿಗಳಲ್ಲಿ ಮಣ್ಣಿನ ಕೆಲಸ, ಕೃಷಿಯ ಮೌಲ್ಯ, ಶ್ರಮ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ನೈಜ ಅನುಭವ ಸಿಗುತ್ತಿದೆ.

ಎಲ್ಲೆಲ್ಲಿ ಕೈತೋಟ

ಶ್ರೀ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಂಗಳೂರು, ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ಮೂಲ, ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ವಿಭಜಿತ, ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕೋಟೇಶ್ವರ, ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಶಂಕರನಾರಾಯಣ ಹಾಗೂ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ಟೌನ್, ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕೆದೂರು, ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಅಮಾಸೆಬೈಲು, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಬಸ್ರೂರು ಉತ್ತಮ ಕೈತೋಟ ನಿರ್ವಹಣೆಗೆ ಸಾಕ್ಷಿಯಾಗಿದೆ.

ಕೈ ತೋಟ ನಿರ್ವಹಣೆ

ವಸತಿ ನಿಲಯದಲ್ಲಿ ಕೈ ತೋಟ ನಿರ್ವಹಣೆಯ ಮೂಲಕ ಮಕ್ಕಳು ಸಣ್ಣ ಜಮೀನಿನಲ್ಲಿ ತರಕಾರಿ, ಹೂಗಿಡಗಳು ಮತ್ತು ಔಷಧೀಯ ಗಿಡಗಳನ್ನು ನೆಟ್ಟು ಪ್ರತಿದಿನ ನೀರಾವರಿ ಮತ್ತು ಆರೈಕೆ ಮಾಡಲಾಗುತ್ತಿದೆ. ಕೈ ತೋಟದಲ್ಲಿ ಬೆಳೆದ ತರಕಾರಿ ಮತ್ತು ಹಣ್ಣುಗಳನ್ನು ಸರ್ಕಾರಿ ಶಾಲೆಗಳ ಬಿಸಿಊಟ ಹಾಗೂ ಅಂಗನವಾಡಿಗಳಿಗೆ ಹಂಚಲಾಗುತ್ತದೆ.

ಸಂಘಟಿತ ಯತ್ನ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಡುಪಿಯ ಜಿಲ್ಲಾ ಅಧಿಕಾರಿ ಹಾಕಪ್ಪ ಆರ್. ಲಮಾಣಿಯವರ ಮಾರ್ಗದರ್ಶನದಲ್ಲಿ, ತಾಲೂಕು ಕಲ್ಯಾಣಾಧಿಕಾರಿ, ವಿವಿಧ ಹಾಸ್ಟೆಲ್‌ಗಳ ನಿಲಯ ಮೇಲ್ವಿಚಾರಕರು ಹಾಗೂ ಅಡುಗೆ ಸಿಬ್ಬಂದಿಗಳ ಸಮನ್ವಯತೆಯಲ್ಲಿ ಆಹಾರ ಸಮಿತಿ, ಶೈಕ್ಷಣಿಕ ಸಮಿತಿ, ಕೈತೋಟ ಸಮಿತಿ, ಸ್ವಚ್ಛತಾ ಸಮಿತಿ, ರಚಿಸಿ ಪ್ರತಿ ಸಮಿತಿಯ ಮೇಲುಸ್ತುವಾರಿಯನ್ನು ವಿದ್ಯಾರ್ಥಿಗಳೇ ವಹಿಸಿಕೊಂಡು ವಿದ್ಯಾರ್ಥಿ ನಿಲಯಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಸುವುದರ ಜೊತೆಗೆ 'ನಮ್ಮ ನಿಲಯ ಸ್ವಚ್ಛ ನಿಲಯ, ನಮ್ಮ ನಿಲಯ ಹಸಿರು ನಿಲಯ' ಧ್ಯೇಯದಲ್ಲಿ ಉತ್ತಮ ಆರೋಗ್ಯಕರ ವಾತಾವರಣ ಹಾಗೂ ಶೈಕ್ಷಣಿಕ ಪ್ರಗತಿ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ.



ಪೈಪ್ ಕಾಂಪೋಸ್ಟಿಂಗ್ ಅಳವಡಿಕೆ

ವಸತಿ ನಿಲಯದಲ್ಲಿ ಪೈಪ್ ಕಾಂಪೋಸ್ಟಿಂಗ್ ಅಳವಡಿಕೆಯ ಮೂಲಕ ಅಡುಗೆ ಗೃಹದಲ್ಲಿ ಬರುತ್ತಿರುವ ತರಕಾರಿ ತ್ಯಾಜ್ಯ, ಆಹಾರ ಅವಶೇಷಗಳನ್ನು ಪೈಪಿನೊಳಗೆ ತುಂಬಿ ಸಹಜವಾಗಿ ಗೊಬ್ಬರವನ್ನಾಗಿ ಮಾರ್ಪಡಿಸಲಾಗುತ್ತದೆ. ಇದರ ಮೂಲಕ ಕಸದ ಪ್ರಮಾಣ ಕಡಿಮೆಯಾಗುವುದು, ದುರ್ಗಂಧ ನಿಯಂತ್ರಣವಾಗುವುದು ಮತ್ತು ಪರಿಸರ ಸ್ನೇಹಿ ತ್ಯಾಜ್ಯ ನಿರ್ವಹಣೆ ಸಾಧ್ಯವಾಗುತ್ತದೆ. ಪೈಪ್ ಕಾಂಪೋಸ್ಟ್ ಮೂಲಕ ಸಿಗುವ ಸಾವಯವ ಗೊಬ್ಬರವನ್ನು ಕೈ ತೋಟದಲ್ಲಿ ಬಳಸುವುದರಿಂದ ಉತ್ತಮ ಬೆಳೆ, ಹಸಿರು ಪರಿಸರದ ಜೊತೆಗೆ ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸುವ ಸಾಮಾಜಿಕ ಹೊಣೆಗಾರಿಕೆಯ ಅರಿವು ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿದೆ.

ಪಠ್ಯೇತರ ಚಟುವಟಿಕೆ

'ವಿದ್ಯಾರ್ಥಿ ಸ್ನೇಹಿ ಹಾಸ್ಟೆಲ್' ನಮ್ಮ ಗುರಿಯಾಗಿದೆ. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯ ವಿಷಯದ ಜೊತೆಗೆ ಪಠ್ಯೇತರ ವಿಷಯಗಳಿಗೂ ಪ್ರಾಮುಖ್ಯತೆ ನೀಡಿ ವಿದ್ಯಾರ್ಥಿಗಳ ಉತ್ತಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಕೈತೋಟ ನಿರ್ವಹಣೆ ವಿದ್ಯಾರ್ಥಿಗಳಿಗೆ ಪೋಷಕಾಂಶಯುಕ್ತ ಆಹಾರ, ಪರಿಸರ ಜಾಗೃತೆ, ಕೌಶಲ್ಯ ಅಭಿವೃದ್ಧಿ, ಸ್ವಚ್ಛತೆ ಮತ್ತು ಶಿಸ್ತು ಮಾನಸಿಕ ಆರೋಗ್ಯ, ಒಗ್ಗಟ್ಟು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಈ ಕ್ರಿಯಾಶೀಲತೆ ಬೆಳೆಸುವಲ್ಲಿ ವಸತಿ ನಿಲಯ ಮೇಲ್ವಿಚಾರಕರ ಪಾತ್ರವೂ ಶ್ಲಾಘನೀಯ.

■ ಹಾಕಪ್ಪ ಆರ್. ಲಮಾಣಿ
(ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಡುಪಿಯ ಜಿಲ್ಲಾ ಅಧಿಕಾರಿ)

ತರಹೇವಾರಿ ತರಕಾರಿ ಬೆಳೆ!

ಕೈತೋಟ ನಿರ್ವಹಣೆಯ ಸಮಿತಿಯು ಪ್ರತಿ ನಿಲಯಗಳಲ್ಲಿ ಉತ್ತಮ ಪೌಷ್ಠಿಕ ಕೈತೋಟ ನಿರ್ಮಿಸಲಾಗಿದ್ದು, ಈ ಕೈತೋಟದಲ್ಲಿ ಬಸಳೆಸೊಪ್ಪು, ಹರಿವೆಸೊಪ್ಪು, ಪಾಲಕ್ ಸೊಪ್ಪು, ಬೆಂಡೆ ಕಾಯಿ, ಹೀರೆಕಾಯಿ, ಬದನೆ ಕಾಯಿ, ಚೌಳಿಕಾಯಿ, ಸೋರೆಕಾಯಿ, ಮೂಲಂಗಿ, ಹಸಿಮೆಣಸು ಸೇರಿದಂತೆ ವಿವಿಧ ತರಕಾರಿಗಳನ್ನು ಬೆಳೆಯುವುದರ ಮೂಲಕ ಪೋಷಕಾಂಶಯುಕ್ತ ಆಹಾರ ವಿದ್ಯಾರ್ಥಿಗಳಿಗೆ ದೊರೆಯುತ್ತಿದೆ. ಕೈತೋಟಕ್ಕೆ ಗೊಬ್ಬರವಾಗಿ ನಿಲಯದಲ್ಲಿ ಉತ್ಪತ್ತಿಯಾಗುವ ಹಸಿ ಹಾಗೂ ಒಣ ಕಸವನ್ನು ಬಳಸಿ ಪೈಪ್‌ಕಾಂಪೋಸ್ಟ್ ಸಹಾಯದಿಂದ ಗೊಬ್ಬರ ಉತ್ಪಾದಿಸಿ ಬಳಕೆ ಮಾಡಲಾಗುತ್ತಿದೆ. ಯಾವ ನರ್ಸರಿಗೂ ಕಡಿಮೆ ಇಲ್ಲದಂತೆ ಕೆಲವು ನಿಲಯಗಳ ಕೈತೋಟಗಳು ಗಮನಸೆಳೆಯುತ್ತಿದೆ.

ಮಹತೋಭಾರ ಶ್ರೀ ಸೇನೇಶ್ವರ ದೇವಸ್ಥಾನ ವಾರ್ಷಿಕ ಜಾತ್ರೆಯ ಆಮಂತ್ರಣ ಬಿಡುಗಡೆ



ಬೈಂದೂರು: ಕೊಲ್ಲೂರು ಮೂಕಾಂಬಿಕಾ ದೇವಾಲಯ ದೇಶದ ಹಲವೆಡೆಗಳಿಂದ ಭಕ್ತರನ್ನು ಸೆಳೆಯುವ ಮೂಲಕ ರಾಜ್ಯ, ಅಂತಾರಾಜ್ಯ ಶಕ್ತಿ ಕ್ಷೇತ್ರವಾಗಿ ಗುರುತಿಸಿ ಕೊಂಡಿದ್ದರೆ, ಇಂತಹ ಒಂದು ಐತಿಹಾಸಿಕ, ನಾಡಿನ ದೇವಾಲಯಗಳಲ್ಲಿ ಶಿಲ್ಪಕಲೆಯ ವಿಶಿಷ್ಟ ಸ್ಥಾನ ಹೊಂದಿರುವ ಬೈಂದೂರಿನ ಐತಿಹಾಸಿಕ ಸೇನೇಶ್ವರ ದೇವಸ್ಥಾನ ಈ ಸಾಲಿಗೆ ಸೇರುತ್ತದೆ. ಊರಿನ ಗ್ರಾಮ ದೇವರು ಎಂದು ಪರಿಗಣಿತವಾಗಿರುವ ಸೇನೇಶ್ವರ ದೇವಳದ ವಾರ್ಷಿಕ ಜಾತ್ರೆಯನ್ನು ಎಲ್ಲರೂ ಕೂಡಿ ಐಕ್ಯಮತದಿಂದ ವೈಭವದಿಂದ ಆಚರಿಸುವಂತಾಗಬೇಕು ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಇಲ್ಲಿನ ಮಹತೋಭಾರ ಶ್ರೀ ಸೇನೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರೆ ಏ. 16ರಿಂದ 24ರ ವರೆಗೆ ನಡೆಯಲಿದ್ದು, ಈ ಪ್ರಯುಕ್ತ ದೇವಸ್ಥಾನದಲ್ಲಿ ಬುಧವಾರ ಸಂಜೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ಇವರೊಂದಿಗೆ ಜಂಟಿಯಾಗಿ ಮನ್ಮಹಾರಥೋತ್ಸವದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

> ಮನ್ಮಹಾರಥೋತ್ಸವದ ಆಮಂತ್ರಣ ಪತ್ರಿಕೆಯನ್ನು ಶಾಸಕ ಗುರುರಾಜ ಗಂಟಿಹೊಳೆ ಬಿಡುಗಡೆಗೊಳಿಸಿದರು.

ನಮ್ಮಲ್ಲಿ ನಿಸರ್ಗ ರಮಣೀಯತೆ ದೇವಾಲಯಗಳ ವಿಶಿಷ್ಟತೆ ಸೇರಿದಂತೆ ಎಲ್ಲವೂ ಇದೆ. ಇಂತಹ ಹತ್ತಾರು ವಿಶೇಷತೆಗಳನ್ನು ಗುರುತಿಸಿ, ಉಳಿಸಿ ಬೆಳೆಸುವಲ್ಲಿ ಸರಿಯಾದ ಉಪಕ್ರಮಗಳನ್ನು ಕೈಗೊಳ್ಳದಿದ್ದರೆ, ಇರುವ ನೂರಾರು ವ್ಯವಸ್ಥೆಗಳು ಬೆಳೆಯುವುದಿರಲಿ, ಉಳಿಯುವುದೇ ಅನುಮಾನ ಎಂದರು.

ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ದೇವಸ್ಥಾನದ ಅರ್ಚಕ ರಾಜೇಶ್ ಐತಾಳ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಎಸ್. ಜಯರಾಮ ಯಡ್ತರೆ, ದೊಟ್ಟಯ್ಯ ಪೂಜಾರಿ ಬೆಳ್ಳಲ್‌ಕಟ್ಟೆ, ಇಂದಿರಾ ಕೊಠಾರಿ ಕಳವಾಡಿ, ಪರಮೇಶ್ವರ್ ಪಟವಾಲ್, ವಸಂತಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಶ್ರೀ ಸೇನೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಿರೀಶ್ ಬೈಂದೂರು ಕಾರ್ಯಕ್ರಮ ನಿರ್ವಹಿಸಿದರು.

ಮಹಿಳೆಯರು ಯಕ್ಷಗಾನ ಕಲಿತರೆ ಸಂಸ್ಕಾರದ ಮಾರ್ಗ ತೆರೆದಂತೆ: ಡಾ. ತಲ್ಲೂರು ಶಿವರಾಮ ಶೆಟ್ಟಿ



ಉಡುಪಿ : ಯಕ್ಷಗಾನ ಜ್ಞಾನ ಭಂಡಾರವಿದ್ದಂತೆ. ಇಂದಿನ ಆಧುನಿಕ ಸಮಾಜಕ್ಕೆ ಸಂಸ್ಕಾರ ಮಾರ್ಗವನ್ನು ಯಕ್ಷಗಾನದ ಮೂಲಕ ನೀಡಬಹುದು. ಮಹಿಳೆಯೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಮಾತಿನಂತೆ ಯಕ್ಷಗಾನ ಕಲಿತ ಮಹಿಳೆ ತನ್ನ ಕುಟುಂಬಕ್ಕೆ, ಸಮಾಜಕ್ಕೆ ಉತ್ತಮ ಸಂಸ್ಕಾರದ ದಾರಿಯನ್ನು ತೋರಬಲ್ಲಳು ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ.ತಲ್ಲೂರು ಶಿವರಾಮ ಶೆಟ್ಟಿ ಹೇಳಿದರು.

ಅವರು ಮಂಗಳವಾರ ಸಾಲಿಗ್ರಾಮ ಗುಂಡ್ಮಿ ಸದಾನಂದ ರಂಗ ಮಂಟಪದಲ್ಲಿ ಕಲಾಪೀಠ ಕೋಟ ಸಂಯೋಜನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಪ್ರಾಯೋಜಕತ್ವದಲ್ಲಿ ಕೆ.ನರಸಿಂಹ ತುಂಗ ಅವರ ನಿರ್ದೇಶನದಲ್ಲಿ ಮಹಿಳೆಯರಿಂದ ಯಕ್ಷಗಾನ 'ಶೂರ್ಪನಖಾ ಮಾನಭಂಗ' ಪ್ರದರ್ಶನದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಮಕ್ಕಳಿಗೆ ಸಂಸ್ಕಾರವನ್ನು ಬೆಳೆಸಬೇಕಾದರೆ ಯಕ್ಷಗಾನವನ್ನು ಕಲಿಸಿ. ಪುರಾಣಗಳ ಬಗ್ಗೆ ಜ್ಞಾನದ ಜೊತೆಗೆ ಉತ್ತಮ ಸಂಸ್ಕಾರ ಕೂಡಾ ನೀಡಿದಂತಾಗುತ್ತದೆ. ಇದರಿಂದ ವೃದ್ಧಾಪ್ಯದಲ್ಲಿ ತಂದೆ-ತಾಯಿ ವೃದ್ಧಾಶ್ರಮವನ್ನು ಸೇರುವ ಪ್ರಮೇಯ ತಪ್ಪುತ್ತದೆ. ಮಗ, ಮಗಳು, ಮೊಮ್ಮಕ್ಕಳು ದಾರಿ ತಪ್ಪಿದ್ದಾರೆ ಎಂಬ ನೋವನ್ನು ಅನುಭವಿಸುವ ಸಂಕಷ್ಟವೂ ತಪ್ಪುತ್ತದೆ. ಯಕ್ಷಗಾನ ಕಲೆಯ ಉಳಿವು ಬೆಳವಣಿಗೆಗೂ ಕಾರಣವಾಗುತ್ತದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಮಾತನಾಡಿ, ಇಂದಿನ ತಂತ್ರಜ್ಞಾನದ ಯುಗದಲ್ಲಿ ಸಂಬಂಧಗಳು ಸಡಿಲಗೊಳ್ಳುತ್ತಿವೆ. ಮಕ್ಕಳು, ಹಿರಿಯರ ಜೊತೆಗೆ ಮಾತನಾಡಲು, ಬೆರೆಯಲು ಸಮಯವೇ ಇಲ್ಲ ಎಂಬಂತಾಗಿದೆ. ಹೀಗಾಗಿ ಯಕ್ಷಗಾನದಂತಹ ಕಲೆಗಳನ್ನು ಮಕ್ಕಳಿಗೆ ಬಾಲ್ಯದಲ್ಲಿಯೇ ಕಲಿಸಿದರೆ ಅವರ ವ್ಯಕ್ತಿತ್ವ ವಿಕಸನದ ಜೊತೆಗೆ ಉತ್ತಮ ಮಾರ್ಗವನ್ನು ತೋರಿಸಿದಂತಾಗುತ್ತದೆ ಎಂದರು.

ಕಸಾಪ ಬ್ರಹ್ಮಾವರ ತಾಲೂಕು ಘಟಕದ ಅಧ್ಯಕ್ಷ ರಾಮಚಂದ್ರ ಐತಾಳ್ ಗುಂಡ್ಮಿ ಮಾತನಾಡಿ, ಯಾವುದೇ ಕಲಾ ಪ್ರಕಾರಗಳು ಮಕ್ಕಳಿಗೆ ತಲುಪಬೇಕು. ಯಕ್ಷಗಾನ ಪ್ರದರ್ಶನವಿದ್ದಾಗ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರಲ್ಲಿ ಕಲಿಕೆಯ ಆಸಕ್ತಿ ಬೆಳೆಸಬೇಕು. ಇಲ್ಲವಾದರೆ ಮಕ್ಕಳು ನಮ್ಮ ಕಲೆ ಸಂಸ್ಕೃತಿಯಿಂದ ವಿಮುಖರಾಗುವ ಸಂಭವವಿದೆ ಎಂದರು.

ಕಲಾ ನಿರ್ದೇಶಕ ಕೆ. ನರಸಿಂಹ ತುಂಗ ಸ್ವಾಗತಿಸಿದರು. ಮಹಿಳೆಯರಿಂದ ಪ್ರದರ್ಶನಗೊಂಡ 'ಶೂರ್ಪನಖಾ ಮಾನಭಂಗ' ಪ್ರಸಂಗದಲ್ಲಿ ಹಿಮ್ಮೇಳದಲ್ಲಿ ಬಿಲ್ಲಾಡಿ ಗಣೇಶ್ ಆಚಾರ್ಯ, ಗಣೇಶ ಶೆಣೈ, ವಾಗ್ವಿಲಾಸ ಭಟ್ಟ, ಮುಮ್ಮೇಳದಲ್ಲಿ ವೃಂದಾ, ಅನುಷಾ, ಮಾನ್ಯ, ನಮನ, ಜಾಹ್ನವಿ, ಸುಜಾತಾ, ಮೇಧಾ, ಧನುಶ್ರೀ, ಇಂಚರ, ಆರಭಿ, ಈಶಾನಿ, ತನಿಷಾ ಪ್ರದರ್ಶನ ನೀಡಿದರು.

ಮಣೂರು ಫ್ರೆಂಡ್ಸ್ ರಜತ ಸಂಭ್ರಮ | ಡಾ.ಹರೇಕಳ ಹಾಜಬ್ಬಗೆ ರಜತ ಸಂಭ್ರಮ ಪುರಸ್ಕಾರ

ಸಂಘಟನೆ ಮೂಲಕ ಸಮಾಜ ಕಟ್ಟುವ ಕಾಯಕ

ಕೋಟ: ಯುವ ಜನಾಂಗ ಸಂಘಟನೆಯ ಮೂಲಕ ಸಮಾಜ ಕಟ್ಟುವ ಕಾಯಕದಲ್ಲಿ ನಿರತರಾಗಿದ್ದಾರೆ. ಇದಕ್ಕೆ ಮಣೂರು ಫ್ರೆಂಡ್ಸ್ ಸಾಕ್ಷಿ ಎಂದು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಹೇಳಿದರು.

ಮಣೂರು ಮಹಾಲಿಂಗೇಶ್ವರ ಜಾತ್ರೋತ್ಸವದ ಅಂಗವಾಗಿ ಗೀತಾನಂದ ವೇದಿಕೆಯಲ್ಲಿ ಮಣೂರು ಫ್ರೆಂಡ್ಸ್ ಮಣೂರು ಇದರ ರಜತ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಕ್ಷರ ಸಂತ ಡಾ. ಹರೇಕಳ ಹಾಜಬ್ಬ ಅವರಿಗೆ ರಜತ ಸಂಭ್ರಮ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸ್ಥಳೀಯರಾದ ರವೀಂದ್ರ ಪೈ ಅವರಿಗೆ ಸಾಧಕ ಪುರಸ್ಕಾರ, ನಿಧಿ ಪೈಗೆ ಪ್ರತಿಭಾ ಪುರಸ್ಕಾರ, ಸ್ಥಳೀಯ ಸಾಧಕರಾದ ಕಂಬಳ ಕ್ಷೇತ್ರದ ರಘುರಾಮ ಶೆಟ್ಟಿ, ಶಿವರಾಮ ಶೆಟ್ಟಿ ನಡುಬೆಟ್ಟು, ಮೆಸ್ಕಾಂ ಉಮ್ಮರ್ ಸಾಹೇಬ್, ನಿರ್ಮಲ ಟೀಚರ್ ಅವರಿಗೆ ವಿಶೇಷ ಅಭಿನಂದನೆ, ಕೋಟದ ಪಂಚವರ್ಣ ಸಂಘಟನೆಗೆ ಸಂಘಟನಾ ಪುರಸ್ಕಾರ, ಮಣೂರು ಫ್ರೆಂಡ್ಸ್ ಹುಟ್ಟಿಗೆ ಕಾರಣೀಭೂತರಾದ ಗೌರವಾಧ್ಯಕ್ಷ ಸುರೇಶ್ ಆಚಾರ್ ಅವರಿಗೆ ಹುಟ್ಟೂರ ಸನ್ಮಾನ ನೀಡಿ ಗೌರವಿಸಲಾಯಿತು. ಅಶಕ್ತ ಹಾಗೂ ಅನಾರೋಗ್ಯ ಪೀಡಿತರಿಗೆ ನೆರವು, ಸಾಲಿಗ್ರಾಮದ ಹೊಸಬದುಕು ಆಶ್ರಮಕ್ಕೆ ನೆರವನ್ನು ಹಸ್ತಾಂತರಿಸಲಾಯಿತು. ಮಣೂರು ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸತೀಶ್ ಹೆಚ್. ಕುಂದರ್ ದೇಗುಲದ ಪರವಾಗಿ ಸಂಘಟಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಸಭಾಧ್ಯಕ್ಷತೆಯನ್ನು ಮಣೂರು ಫ್ರೆಂಡ್ಸ್‌ನ ಗೌರವ ಸಲಹೆಗಾರ ಸುಬ್ರಾಯ ಆಚಾರ್ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಸಮಾಜಸೇವಕ ಮಲ್ಯಾಡಿ ಶಿವರಾಮ ಶೆಟ್ಟಿ, ಉದ್ಯಮಿ ಗಣೇಶ್ ಸೀಲ್ಕ್, ಅನಂತ್ ನಾಯಕ್, ಮಣೂರು ಫ್ರೆಂಡ್ಸ್ ಅಧ್ಯಕ್ಷ ರಾಘವೇಂದ್ರ ಆಚಾರ್, ಉದ್ಯಮಿ ನವೀನ್ ಶೆಟ್ಟಿ ಪಟೇಲರ ಮನೆ, ಸಂತೋಷ್ ಸುವರ್ಣ ಉಪಸ್ಥಿತರಿದ್ದರು. ಮಣೂರು ಫ್ರೆಂಡ್ಸ್ ಸ್ಥಾಪಕ ಸದಸ್ಯರಾದ ಪ್ರಭಾಕರ್ ಆಚಾರ್ ಸ್ವಾಗತಿಸಿದರು.ಪ್ರಣುತ್ ಗಾಣಿಗ ಕಾರ್ಯಕ್ರಮವನ್ನು ನಿರೂಪಿಸಿದರು. ರವೀಂದ್ರ ಕೋಟ ವಂದಿಸಿದರು.



ನಮಸ್ತೆ ಕಲೆಕ್ಟರ್ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್

ಬಾರಾ ಜಿಎಚ್‌ಎಸ್ ಶಾಲಾ ವಿದ್ಯಾರ್ಥಿಗಳೊಂದಿಗೆ ಸಂವಾದ

ಕಾಸರಗೋಡು: ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನವನ್ನು ಬಲಪಡಿಸುವ ಪ್ರಧಾನ ಉದ್ದೇಶದೊಂದಿಗೆ ಪ್ರಾರಂಭಿಸಲಾದ ನಮಸ್ತೆ ಕಲೆಕ್ಟರ್ ಯೋಜನೆಯು ಗಮನಾರ್ಹವಾಗಿದೆ. ಯೋಜನೆಯ ಭಾಗವಾಗಿ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಬಾರಾ ಜಿಎಚ್‌ಎಸ್ ಶಾಲೆಯ 8 ಮತ್ತು 9ನೇ ತರಗತಿಗಳಲ್ಲಿ ಓದುತ್ತಿರುವ 20 ಮಂದಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಇಬ್ಬರು ಶಿಕ್ಷಕರು ಹಾಜರಿದ್ದರು.

ಮಳೆಗಾಲದಲ್ಲಿ ಶಾಲಾ ಆಟದ ಮೈದಾನ ಜಲಾವೃತಗೊಳ್ಳುವುದರಿಂದ ಅದನ್ನು ದುರಸ್ತಿಗೊಳಿಸುವಂತೆ ಮಕ್ಕಳು ಜಿಲ್ಲಾಧಿಕಾರಿಯವರನ್ನು ಕೋರಿದರು. ನಿರ್ಮಾಣ ಹಂತದಲ್ಲಿರುವ ಹೊಸ ಶಾಲಾ ಕಟ್ಟಡಕ್ಕೆ ವಿಜ್ಞಾನ ಪ್ರಯೋಗಾಲಯವನ್ನು ಸ್ಥಳಾಂತರಿಸಬೇಕು ಮತ್ತು ಶಾಲಾ ಬಸ್ ಒದಗಿಸಬೇಕು ಎಂದು ಮಕ್ಕಳು ವಿನಂತಿಸಿದರು.

ಶಾಲೆಯ ವ್ಯವಹಾರಗಳಿಗೆ ಸಂಪೂರ್ಣ ಗಮನ ನೀಡಲಾಗುವುದು. ಆಟದ ಮೈದಾನ ದುರಸ್ತಿ ಮಾಡುವ ಜವಾಬ್ದಾರಿಯನ್ನು ಕೇರಳ ಕ್ರೀಡಾ ಪ್ರತಿಷ್ಠಾನಕ್ಕೆ ವಹಿಸಲಾಗುವುದು ಮತ್ತು ಶಾಸಕರು ನಿಧಿಯೊಂದಿಗೆ ಶಾಲಾ ವಾಹನವನ್ನು ವ್ಯವಸ್ಥೆ ಮಾಡಲಾಗುವುದು. ಅಲ್ಲದೆ ನಿರ್ಮಾಣ ಪೂರ್ಣಗೊಂಡ ನಂತರ ವಿಜ್ಞಾನ ಪ್ರಯೋಗಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಮಕ್ಕಳಿಗೆ ಭರವಸೆ ನೀಡಿದರು.

ಕಾಸರಗೋಡು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಅರ್ಜುನ್ ಪಾಂಡ್ಯನ್ ಅವರು ಚೆಮ್ನಾಡು ಜಿಎಚ್‌ಎಸ್ ಶಾಲೆಯ ವಿದ್ಯಾರ್ಥಿಗಳೊಂದಿಗೆ ನಮಸ್ತೆ ಕೇರಳಂ ಕಾರ್ಯಕ್ರಮದ ಭಾಗವಾಗಿ ಸಂವಾದ ನಡೆಸಿದ್ದರು. ಈ ಕಾರ್ಯಕ್ರಮವನ್ನು ಪ್ರತಿ ಬುಧವಾರ ಬೆಳಗ್ಗೆ 9.30ಕ್ಕೆ ಕಲೆಕ್ಟರ್ ಕೊಠಡಿಯಲ್ಲಿ ಆಯೋಜಿಸಲಾಗುತ್ತಿದೆ. ವೇದಿಕೆಯಲ್ಲಿ ಮಕ್ಕಳ ಪ್ರಶ್ನೆಗಳಿಗೆ ಜಿಲ್ಲಾಧಿಕಾರಿಗಳು ತುಂಬಾ ಸ್ನೇಹಪರವಾಗಿ ಉತ್ತರಿಸುವುದು ಗಮನಾರ್ಹವಾಗಿದೆ.

ಈ ಜನಪ್ರಿಯ ಯೋಜನೆಯನ್ನು ಮುಂದಿನ ವಾರಗಳಲ್ಲಿ ಜಿಲ್ಲೆಯ ಇತರ ಸರಕಾರಿ ಶಾಲೆಗಳು ಮತ್ತು ಕಾಲೇಜುಗಳಿಗೆ ವಿಸ್ತರಿಸಲು ಜಿಲ್ಲಾಡಳಿತವು ನಿರ್ಧರಿಸಿದೆ. ಸರಕಾರಿ ಶಾಲೆಗಳು ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಕಾಸರಗೋಡು ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಯುವಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಮಾ.18 ರಂದು ನಮಸ್ತೆ ಕಲೆಕ್ಟರ್ ಯೋಜನೆಯನ್ನು ಪ್ರಾರಂಭಿಸಲಾಯಿತು.





ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಗುರುವಾರ ಮೀಂಜ ಪಂಚಾಯತ್‌ನ ವಿವಿಧೆಡೆ ಪರ್ಯಾಟನೆ ನಡೆಸಿ ಮತದಾರರನ್ನು ಭೇಟಿಯಾದರು. ಈ ಸಂದರ್ಭ ಪಕ್ಷದ ಮುಖಂಡರು, ಕಾರ್ಯಕರ್ತರು ಜೊತೆಗಿದ್ದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿಯವರ ಚುನಾವಣಾ ಪ್ರಚಾರಾರ್ಥ ವಿವಿಧೆಡೆ ಪರ್ಯಟನೆ ನಡೆಸುತ್ತಿರುವ ಕೇಂದ್ರ ಸಚಿವ ಸುರೇಶ್ ಗೋಪಿ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿ ಶ್ರೀ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಜೊತೆಗಿದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಡರಂಗ ಅಭ್ಯರ್ಥಿ ಕೆ.ಆರ್. ಜಯಾನಂದ ಅವರ ಚುನಾವಣಾ ಪ್ರಚಾರಾರ್ಥ ಗುರುವಾರ ಹೊಸಂಗಡಿ ಸಹಿತ ವಿವಿಧೆಡೆ ಪರ್ಯಾಟನೆ ನಡೆಸಿದರು. ಹೊಸಂಗಡಿ ಪೇಟೆ ಹಾಗೂ ಪರಿಸರ ಪ್ರದೇಶದಲ್ಲಿ ವ್ಯಾಪಾರ ಸಂಸ್ಥೆಗಳಿಗೆ ಭೇಟಿ ನೀಡಿ ಮತ ಯಾಚಿಸಿದರು. ವರ್ಕಾಡಿ, ಮೀಂಜಾ ಪಂಚಾಯತ್ ವ್ಯಾಪ್ತಿಯಲ್ಲಿ ಸಭೆಗಳಲ್ಲಿ ಪಾಲ್ಗೊಂಡರು.



ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಎ.ಕೆ. ಎಂ.ಅಶ್ರಫ್ ಅವರು ಚುನಾವಣಾ ಪ್ರಚಾರಾರ್ಥ ಮೊಗ್ರಾಲ್‌ನಲ್ಲಿ ಗುರುವಾರ ಪಕ್ಷದ ಕಾರ್ಯಕರ್ತರೊಂದಿಗೆ ರ್‍ಯಾಲಿ ನಡೆಸುವ ಮೂಲಕ ಪ್ರಚಾರ ನಡೆಸಿದರು. ಮೀಂಜ ಪಂಚಾಯತ್‌ನ ಗಾಂಧಿನಗರದಲ್ಲಿ ನಡೆದ ಕುಟುಂಬ ಸಭೆಯಲ್ಲಿ ನೇತಾರರು ಕಾರ್ಯಕರ್ತರು ಭಾಗವಹಿಸಿದ್ದರು.

ಕಿರು ಸುದ್ದಿ

ಮಂಜೇಶ್ವರದ ಎನ್‌ಡಿಎ ಅಭ್ಯರ್ಥಿಗೆ ಬೆಂಬಲ ಘೋಷಿಸಿದ ಆರ್‌ಟಿಐ ಕಾರ್ಯಕರ್ತ ಕೇಶವ ನಾಯಕ್

ಕುಂಬಳೆ: ವಿಧಾನಸಭಾ ಚುನಾವಣೆಯ ಅಂಗವಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಗೆಲುವಿಗಾಗಿ ಬೆಂಬಲಿಸಿ ಕೆಲಸ ಮಾಡುವುದಾಗಿ ಕುಂಬಳೆ ಮೂಲದ ಪರಿಸರ ಮತ್ತು ಆರ್‌ಟಿಐ ಕಾರ್ಯಕರ್ತ ಕೇಶವ ನಾಯಕ್ ಅವರು ಕುಂಬಳೆಯಲ್ಲಿ ಗುರುವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಘೋಷಿಸಿದ್ದಾರೆ.



ಈ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ತಾನು ಹೊಸ ಬದಲಾವಣೆಯ ನಿರೀಕ್ಷೆಯೊಂದಿಗೆ ಕೆ.ಸುರೇಂದ್ರನ್ ಪರವಾಗಿ ಅದನ್ನು ಹಿಂತೆಗೆದುಕೊಂಡಿರುವುದಾಗಿ ಅವರು ಹೇಳಿದರು. 1994 ರಿಂದ ಸತತ ಆಯ್ಕೆಯಾಗುವ ರಾಜ್ಯ ಸರಕಾರಗಳು ಮತ್ತು ಜನಪ್ರತಿನಿಧಿಗಳಿಗೆ ವಿವಿಧ ಪರಿಸರ ಸಮಸ್ಯೆಗಳನ್ನು ಎತ್ತುವ ಅರ್ಜಿಗಳು ಮತ್ತು ದೂರುಗಳನ್ನು ಸಲ್ಲಿಸುತ್ತಿದ್ದೇನೆ ಮತ್ತು ಸರಕಾರಗಳು ಅಥವಾ ಜನಪ್ರತಿನಿಧಿಗಳಿಂದ ತನಗೆ ಯಾವುದೇ ಸಹಾನುಭೂತಿಯ ಪರಿಹಾರದ ಉತ್ತರ ಲಭಿಸದ ಕಾರಣ ಪರ್ಯಾಯವಾಗಿ ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಲು ನಿರ್ಧರಿಸಿದ್ದೇನೆ ಎಂದು ಅವರು ನುಡಿದರು. ಮುಂದಿನ ಎಲ್ಲಾ ದಿನಗಳಲ್ಲಿ ಕೆ.ಸುರೇಂದ್ರನ್ ಪರವಾಗಿ ಚುನಾವಣಾ ಪ್ರಚಾರ ಪ್ರಕ್ರಿಯೆಯಲ್ಲಿ ಸಕ್ರಿಯನಾಗಿರುವೆ ಎಂದು ಅವರು ತಿಳಿಸಿದ್ದಾರೆ.

ಎನ್‌ಡಿಎ ಮಹಿಳಾ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಪರ ಕೇಂದ್ರ ಸಚಿವ ಸುರೇಶ್‌ಗೋಪಿ ಪ್ರಚಾರ

ಕೇರಳದ ಮುಕುಟ ಕಾಸರಗೋಡು

ಕಾಸರಗೋಡು: ಭಾರತಕ್ಕೆ ಕಾಶ್ಮೀರ ಮುಕುಟವಾದರೆ ಕೇರಳಕ್ಕೆ ಕಾಸರಗೋಡು ಮುಕುಟವಾಗಿದೆ. ಆದ್ದರಿಂದ ಇಲ್ಲಿ ಬಿಜೆಪಿ ಗೆಲ್ಲಬೇಕೆಂದು ಕೇಂದ್ರ ಸಚಿವ ಸುರೇಶ್‌ಗೋಪಿ ಹೇಳಿದ್ದಾರೆ.

ಮುಳ್ಳೇರಿಯ ಮತ್ತು ಕಾಸರಗೋಡು ಕಸಬಾ ಕಡಪ್ಪುರ ಮೊದಲಾದೆಡೆ ಗುರುವಾರ ಸಂಜೆ ನಡೆದ ಎನ್‌ಡಿಎ ಚುನಾವಣಾ ಪ್ರಚಾರ ಸಭೆಗಳಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮಹಿಳಾ ಅಭ್ಯರ್ಥಿಯಾದ ಎಂ.ಎಲ್. ಅಶ್ವಿನಿ ಗೆದ್ದು ಬರಬೇಕು. ಅದಕ್ಕೆ ತಮ್ಮ ಅಮೂಲ್ಯವಾದ ಮತಗಳನ್ನು ಅವರಿಗೆ ನೀಡಬೇಕೆಂದು ಸಚಿವರು ವಿನಂತಿಸಿದರು.

ಕುಂಬಳೆ ಆರಿಕ್ಕಾಡಿ ರಾಷ್ಟ್ರೀಯ ಹೆದ್ದಾರಿಯ ಟೋಲ್ ಪ್ಲಾಜಾವನ್ನು ನಿಲುಗಡೆಗೊಳಿಸಿದ್ದು ಇಲ್ಲಿನ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿಯವರು ನಡೆಸಿದ ನಿರಂತರ ಪ್ರಯತ್ನ ಹಾಗೂ ಅದಕ್ಕೆ ಪೂರಕವಾಗಿ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್‌ರ ಮಧ್ಯಸ್ಥಿಕೆಯ ಫಲವಾಗಿ ಅದಕ್ಕೆ ಹೊಂದಿಕೊಂಡು ಕೇಂದ್ರ ಸರಕಾರ ಟೋಲ್ ಪ್ಲಾಜಾದಲ್ಲಿ ಶುಲ್ಕ ವಸೂಲಿಯನ್ನು ರದ್ದುಪಡಿಸಿ ಅಧಿಸೂಚನೆ ಜಾರಿಗೊಳಿಸಿತ್ತು. ಅಲ್ಲದೆ ಕೆಲವರು ಈ ವಿಷಯದಲ್ಲಿ ನಡೆಸಿದ ನಾಟಕದಿಂದ ಇದೇನು ನಡೆದಿಲ್ಲ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದರು.



ಕೇರಳವನ್ನು ಅಭಿವೃದ್ಧಿಯತ್ತ ಸಾಗಿಸುವ ಕೇಂದ್ರ ಸರಕಾರದ ಯೋಜನೆಗಳನ್ನು ಕೇರಳದಲ್ಲಿ ಜಾರಿಗೊಳಿಸುವುದಿಲ್ಲವೆಂಬ ರಾಜ್ಯ ಸರಕಾರದ ಹಠಮಾರಿತನ ನಿಲುವೇ ಅಂತಹ ಹಲವು ಯೋಜನೆಗಳು ಕೇರಳದಲ್ಲಿ ಜಾರಿಗೊಳ್ಳದೇ ಇರುವುದಕ್ಕೆ ಕಾರಣವಾಗಿದೆ. ಭಾಷಣದ ವೇಳೆ ಸಚಿವರು ಆಗಾಗ ಕನ್ನಡದಲ್ಲಿ ಮಾತನಾಡಿರುವುದು ಅದು ಸಭಿಕರನ್ನು ಇನ್ನಷ್ಟು ಉತ್ಸಾಹಭರಿತರನ್ನಾಗಿಸಿತು.

ಗುರುವಾರ ಸಂಜೆ ಮುಳ್ಳೇರಿಯದಲ್ಲಿ ನಡೆದ ಕಾರ್ಯಕ್ರಮದ ಬಳಿಕ ಕಾಸರಗೋಡು ಕಡಪ್ಪುರದಲ್ಲಿ ನಡೆದ ಎನ್‌ಡಿಎ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

> **ಕೇಂದ್ರ ಸರಕಾರದ ಯೋಜನೆಗಳನ್ನು ಕೇರಳದಲ್ಲಿ ಜಾರಿಗೊಳಿಸದೆ ರಾಜ್ಯ ಸರಕಾರ ಇಲ್ಲಿನ ಜನರನ್ನು ವಂಚಿಸುತ್ತಿದೆ. ಆಯುಷ್ಮಾನ್ ಭಾರತ್, ಜಲ್‌ಜೀವನ್ ಮಿಷನ್ ಸೇರಿದಂತೆ ಕೇಂದ್ರದ ಹೆಚ್ಚಿನ ಎಲ್ಲಾ ಯೋಜನೆಗಳನ್ನು ಕೇರಳ ಸರಕಾರ ಇಲ್ಲಿ ಜಾರಿಗೊಳಿಸಿಲ್ಲ.**
> ■ **ಸುರೇಶ್‌ಗೋಪಿ,** ಕೇಂದ್ರ ಸಚಿವ

ಬಿಜೆಪಿ ಚುನಾವಣಾ ಸಮಿತಿ ಸಂಚಾಲಕ ರವೀಶ ತಂತ್ರಿ ಕುಂಟಾರು, ಬಿಜೆಪಿ ಕಲ್ಲಿಕೋಟೆ ವಲಯ ಪ್ರಧಾನ ಕಾರ್ಯದರ್ಶಿ ಸುಧಾಮ ಗೋಸಾಡ, ಕರುಣಾಕರನ್ ನಂಬ್ಯಾರ್, ಕಾಸರಗೋಡು ವಿಧಾನಸಭಾ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ, ಸಂತೋಷ್ ಶೆಟ್ಟಿ, ಎಂ.ಜನನಿ, ರವೀಂದ್ರ ರೈ ಗೋಸಾಡ, ಕರುಣಾಕರನ್ ಮಾಸ್ಟರ್, ಯಶೋಧಾ, ಗೋಪಾಲಕೃಷ್ಣನ್, ಪಿ.ರಮೇಶ್ ಮೊದಲಾದವರು ಉಪಸ್ಥಿತರಿದ್ದರು.

ಸುರೇಂದ್ರನ್ ಪರ ಶಾಸಕ ರಾಜೇಶ್ ನ್ಯಾಕ್ ಪ್ರಚಾರ



ಬಂಟ್ವಾಳ: ಮಂಜೇಶ್ವರ ವಿಧಾನ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುರೇಂದ್ರನ್ ಕೆ. ಪರವಾಗಿ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಅವರು ಮಂಜೇಶ್ವರ ಕ್ಷೇತ್ರದ ಪುತ್ತಿಗೆ ಗ್ರಾ.ಪಂ.ವ್ಯಾಪ್ತಿಯಲ್ಲಿ ಬಿರುಸಿನ ಮತಭೇಟಿ ನಡೆಸಿದರು.

ಅಂಗಡಿಮುಗೇರು, ದೇಲಂಪಾಡಿ ಸುತ್ತಮುತ್ತಲಿನ ಗ್ರಾಮದಲ್ಲಿ ಮನೆ ಮನೆಯನ್ನು ಸಂಪರ್ಕಿಸಿ ಅಭ್ಯರ್ಥಿ ಸುರೇಂದ್ರನ್ ಪರವಾಗಿ ಮತಯಾಚನೆ ಗೈದರು.

ಪ್ರಧಾನಿ ನರೇಂದ್ರ ಮೋದಿಯವರು ಜಾರಿಗೊಳಿಸಿರುವ ಜನಪರವಾದ ಯೋಜನೆಯನ್ನು ಸುರೇಂದ್ರನ್ ಅವರು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಮಾಡಲಿದ್ದಾರೆ. ಈ ಬಾರಿ ಮಂಜೇಶ್ವರದಲ್ಲಿ ಜನತೆಯ ಒಲವು ಬಿಜೆಪಿಯತ್ತ ಇದ್ದು, ಈ ಜಿಲ್ಲೆಯಲ್ಲಿ ಬಿಜೆಪಿಯ ಗೆಲುವು ನಿಶ್ಚಿತ ಎಂದು ಭರವಸೆಯಿತ್ತರು.

ಈ ಸಂದರ್ಭ ಶಾಸಕ ರಾಜೇಶ್ ನ್ಯಾಕ್ ಅವರು ಬಿಜೆಪಿ ಕಾರ್ಯಕರ್ತರೊಂದಿಗೆ ಚುನಾವಣಾ ಕಾರ್ಯತಂತ್ರದ ಬಗ್ಗೆ ಅವಲೋಕನ ನಡೆಸಿದರಲ್ಲದೆ ಬಿಜೆಪಿಯ ಗೆಲುವಿಗೆ ಶ್ರಮಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ದ.ಕ.ಜಿಲ್ಲಾ ಬಿಜೆಪಿ ವಕ್ತಾರ ಮಾಧವ ಮಾವೆ, ಬಂಟ್ವಾಳ ಬಿಜೆಪಿ ಪ್ರಮುಖರಾದ ಪುರುಷೋತ್ತಮ ಶೆಟ್ಟಿ ವಾಮದಪದವು, ಅಜಿತ್ ಶೆಟ್ಟಿ ಕಾವಳಮೂಡೂರು, ಕುಮಾರ್ ಅಳ್ವ, ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಬಿ.ಎಮ್.ಎಸ್. ಮೇಘನಾ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ, ಪುತ್ತಿಗೆ ಬಿಜೆಪಿ ಪಂಚಾಯತ್ ಸಮಿತಿ ಅಧ್ಯಕ್ಷ ಪುರುಷೋತ್ತಮ ದೇರಡ್ಕ, ಬೂತ್ ಅಧ್ಯಕ್ಷ ಕೇಶವ ಮುಗು ಮತ್ತಿತರರು ಉಪಸ್ಥಿತರಿದ್ದರು.

ನಿಧನ ಸುದ್ದಿ

ನಾರಾಯಣ ಆಯತ್ತಾರ್

ಕಾಸರಗೋಡು: ಪಾಲಕುನ್ನು ಕಳಗಂ ಶ್ರೀ ಭಗವತೀ ಕ್ಷೇತ್ರದ ಸ್ಥಾನಿಕ ನಾರಾಯಣ ಆಯತ್ತಾರ್ ಕರುವಕ್ಕೋಡ್ (73) ನಿಧನ ಹೊಂದಿದರು. ಅಸೌಖ್ಯ ಬಾಧಿಸಿ ಚಿಕಿತ್ಸೆಯಲ್ಲಿದ್ದರು. ಅವರು ಕರ್ನಾಟಕದ ಸುಬ್ರಹ್ಮಣ್ಯ ನಿವಾಸಿಯಾಗಿದ್ದಾರೆ. 1992ರಲ್ಲಿ ಪನೆಯಾಲ್ ಕರುವಕ್ಕೋಡ್ ಶ್ರೀ ವಯನಾಟ್ಟು ಕುಲವನ್ ತರವಾಡಿನಲ್ಲಿ ಖಾಯಂ ವಾಸ ಆರಂಭಿಸಿದ್ದರು. ನಂತರ ಪಾಲಕುನ್ನು ಕ್ಷೇತ್ರದ ಸ್ಥಾನಿಕರಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ ಶೋಭನಾ, ಮಕ್ಕಳಾದ ನಂದನಾ, ವಂದನಾ ಅವರನ್ನು ಅಗಲಿದ್ದಾರೆ.

ದಾಮೋದರನ್ ಸಿ.ಕೆ.

ಕಾಸರಗೋಡು: ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ನಿವೃತ್ತರಾಗಿದ್ದ ಉದಯಗಿರಿ ನಿವಾಸಿ ದಾಮೋದರನ್ ಸಿ.ಕೆ. (62) ಗುರುವಾರ ರಾತ್ರಿ ನಿಧನ ಹೊಂದಿದರು. ಮೃತರು ತಾಯಿ ಮಾಧವಿ ಚೆಂಬರಿಕ್ಕ, ಪತ್ನಿ ಉಮಾ ಕೆ.ಎನ್., ಮಕ್ಕಳಾದ ವರುಣ್, ವರ್ಷಾ ಅವರನ್ನು ಅಗಲಿದ್ದಾರೆ.

ಸುಂದರಿ ಕಾಮತ್

ಮಂಜೇಶ್ವರ: ಪೈವಳಿಕೆ ಪಂಚಾಯತ್‌ನ ಮಾಜಿ ಉಪಾಧ್ಯಕ್ಷ, ಚೇವಾರು ನಿವಾಸಿ ದಿ.ಜನಾರ್ದನ ಕಾಮತ್‌ರ ಪತ್ನಿ ಸುಂದರಿ ಕಾಮತ್ (90) ಶುಕ್ರವಾರ ಮುಂಜಾನೆ ನಿಧನ ಹೊಂದಿದರು. ಮೃತರು ಮಕ್ಕಳಾದ ದಯಾನಂದ ಕಾಮತ್ ಬೆಂಗಳೂರು, ವಿಮಲಾ ಕಾಮತ್, ಸರಳ ಕಾಮತ್, ಚಂದ್ರಪ್ರಭ ಕಾಮತ್, ಮಲ್ಲಿಕಾ ಕಾಮತ್ ಅವರನ್ನು ಅಗಲಿದ್ದಾರೆ.



ವೋಟಾಯನಂ – 2026 ಅಭಿಯಾನ | ಮತದಾನದ ಜಾಗೃತಿಗಾಗಿ ವಿವಿಧ ಕಾರ್ಯಕ್ರಮ

ಪಳ್ಳಿಕೆರೆ ಬೀಚ್‌ನಲ್ಲಿ ಮರಳು ಶಿಲ್ಪ ರಚನೆ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಬೆರಳಿನ ಮೇಲಿನ ಶಾಯಿ ಗುರುತು ಪ್ರಜಾಪ್ರಭುತ್ವದ ರಕ್ಷಕ ಎಂಬ ಸಂದೇಶದೊಂದಿಗೆ ಪಳ್ಳಿಕೆರೆ ಬೀಚ್‌ನಲ್ಲಿ ಶುಕ್ರವಾರ ಬೃಹತ್ ಗಾತ್ರದ ಮರಳು ಶಿಲ್ಪವನ್ನು ಸಿದ್ಧಪಡಿಸಲಾಯಿತು.

ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ 100ರಷ್ಟು ಮತದಾನವನ್ನು ಖಚಿತಪಡಿಸಿಕೊಳ್ಳಲು ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ಸ್ವೀಪ್ ಜಂಟಿಯಾಗಿ ಆಯೋಜಿಸಿದ್ದ ವೋಟಾಯನಂ – 2026 ಎಂಬ ಅಭಿಯಾನದ ಭಾಗವಾಗಿ ಈ ಶಿಲ್ಪವನ್ನು ತಯಾರಿಸಲಾಗಿದೆ. ಮತದಾನದ ಜಾಗೃತಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮರಳು ಶಿಲ್ಪವನ್ನು ಉದ್ಘಾಟಿಸಿ, ಜಿಲ್ಲೆಯ ಪ್ರತಿ ಯೋರ್ವ ಮತದಾರನೂ ಮತದಾನದಲ್ಲಿ ಪಾಲ್ಗೊಳ್ಳ ಬೇಕೆಂದು ಕರೆ ನೀಡಿದರು. ಈ ಮೂಲಕ ಪ್ರಜಾಪ್ರಭುತ್ವದ ರಕ್ಷಕರಾಗಬೇಕು. ಮತದಾನ ನಡೆಸಲು ಯಾವುದೇ ರೀತಿಯ ನಿರ್ಲಕ್ಷ್ಯ ಹಾಗೂ ಉದಾಸೀನತೆ ತೋರಬಾರದೆಂದು ಅವರು ತಿಳಿಸಿದರು.

ನಮ್ಮ ಪ್ರಜಾಪ್ರಭುತ್ವದ ಶಕ್ತಿ ಪ್ರತಿಯೊಂದು ಮತದಲ್ಲೂ ಅಡಗಿದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಶೇಕಡಾ 100 ರಷ್ಟು ಮತದಾನ ಸಾಧಿಸುವ ಗುರಿಯೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಅವರು ಹೇಳಿದರು. ಯುವಜನರಲ್ಲಿ ಮತದಾನದ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಲಾಗು ವುದು ಎಂದು ಜಿಲ್ಲಾಧಿಕಾರಿ ನುಡಿದರು.



ಪ್ರಸಿದ್ಧ ಶಿಲ್ಪಿ ಚಿತ್ರನ್ ಕುಂಞಮಂಗಲಂ ಅವರು ಐದು ಗಂಟೆಗಳ ಅವಧಿಯಲ್ಲಿ ಮತ ಚಲಾಯಿಸಿದ ಎಡಗೈಯ ಸುಂದರ ಶಿಲ್ಪವನ್ನು ಪೂರ್ಣಗೊಳಿಸಿದರು. ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ , ಬ್ಲಾಕ್ ಸಂಯೋಜಕರಾದ ಕೆ.ಜಿಜ, ಕೆ.ನಿಮಿಷಾ, ಕೆ.ಪಿ.ರಮ್ಯಾ ಮೋಳ್, ಕೆ.ರಜನಿ, ಕೆ.ಜ್ಯೋತಿಷ್ ಮತ್ತು ಅನಸ್ ಸಮಾರಂಭದಲ್ಲಿ ಮಾತನಾಡಿದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ.ಕಿಶೋರ್ ಸ್ವಾಗತಿಸಿ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಟಿ.ಪಿ.ಆದಿರಾ ಧನ್ಯವಾದವಿತ್ತರು. ಮತದಾನದ ಹಕ್ಕುಗಳ ಮಹತ್ವವನ್ನು ಒತ್ತಿಹೇಳುವ ಶಿಲ್ಪವನ್ನು ವೀಕ್ಷಿಸಲು ಅನೇಕ ಮಂದಿ ಪ್ರವಾಸಿಗರು ಪಳ್ಳಿಕೆರೆ ಕಡಲತೀರದಲ್ಲಿ ಸೇರಿದ್ದರು.

ಮಂಜೇಶ್ವರದಲ್ಲಿ ಬಿಜೆಪಿ ಜಯ ಗಳಿಸಿದರೆ ಮಿನಿ ಸಿವಿಲ್ ಸ್ಟೇಷನ್

ಮಂಜೇಶ್ವರ: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿಕೂಟ ಜಯ ಸಾಧಿಸಿದರೆ ಮಿನಿ ಸಿವಿಲ್ ಸ್ಟೇಷನ್ ನಿರ್ಮಿಸಲು ಪ್ರಧಾನ ಆದ್ಯತೆ ನೀಡಲಾಗುವುದು ಎಂದು ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಭರವಸೆ ನೀಡಿದ್ದಾರೆ.

ಮಂಜೇಶ್ವರ ಮಂಡಲದ ವಿವಿಧೆಡೆಗೆ ತೆರಳಿ ಮತಯಾಚಿಸಿದ ಅವರು ಈ ಘೋಷಣೆ ಮಾಡಿದರು. ಮಿನಿ ಸಿವಿಲ್ ಸ್ಟೇಷನ್‌ನಲ್ಲಿ ಸರಕಾರಿ ವಲಯದ ಎಲ್ಲಾ ಕಚೇರಿಗಳನ್ನು ಒಂದೇ ಕಡೆ ವ್ಯವಸ್ಥೆಗೊಳಿಸಲಾಗುವುದು. ಈ ಮೂಲಕ ಜನಸಾಮಾನ್ಯರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ವಿಶೇಷ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮಂಜೇಶ್ವರ ಮಂಡಲದ ಕನ್ನಡಿಗರ ಹಕ್ಕು, ಸ್ವಾತಂತ್ರ್ಯ, ಸವಲತ್ತುಗಳನ್ನು ಸಂರಕ್ಷಿಸಲು ಯೋಜನಾಬದ್ಧವಾದ ಪ್ರಕ್ರಿಯೆ ಜಾರಿಗೊಳಿಸಲಾಗುವುದು. ಈ ವಿಚಾರದಲ್ಲಿ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡು ಗಡಿನಾಡಿನ ಕನ್ನಡಿಗರ ಸಂರಕ್ಷಣೆ, ಕನ್ನಡ ಭಾಷೆಯ ರಕ್ಷಣೆ ಹಾಗೂ ಪೋಷಣೆ ನಿಟ್ಟಿನಲ್ಲಿ ಶಾಶ್ವತ ಯೋಜನೆಗಳನ್ನು ರೂಪಿಸಲಾಗುವುದು ಎಂದು ಕೆ.ಸುರೇಂದ್ರನ್ ಹೇಳಿದ್ದಾರೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸಮರ್ಪಕ ಕುಡಿಯುವ ನೀರು ವಿತರಣೆ, ರಸ್ತೆ, ಆರೋಗ್ಯ, ಶಿಕ್ಷಣ, ಉದ್ಯೋಗ, ವ್ಯಾಪಾರ ಮೊದಲಾದ ವಲಯಗಳ ಅಭಿವೃದ್ಧಿಗೆ ಗಮನಹರಿಸಲಾಗುವುದು. ವಸತಿ ರಹಿತರಿಗೆ ಮನೆ ನಿರ್ಮಿಸಿ ನೀಡುವ ಹಿನ್ನೆಲೆಯಲ್ಲಿ ಕೆಲವೇ ತಿಂಗಳುಗಳಲ್ಲಿ ಕಾರ್ಯಯೋಜನೆ ಸಿದ್ಧಪಡಿಸಲಾಗುವುದು ಎಂದು ಅವರು ನುಡಿದರು. ಮಂಜೇಶ್ವರದ ಜನರಿಗೆ ಆರೋಗ್ಯ ರಂಗದಲ್ಲಿ ಸುಸಜ್ಜಿತ ಆಸ್ಪತ್ರೆ ಒದಗಿಸುವ ಹಿನ್ನೆಲೆಯಲ್ಲಿ ಸಕಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.



ಮದುವೆಯಾಗುವುದಾಗಿ ಯುವತಿಗೆ ವಂಚನೆ ಪ್ರಕರಣ | ಸಂತ್ರಸ್ಥೆಯ ತಾಯಿ ಎಚ್ಚರಿಕೆ

ಪುತ್ತೂರು ದೇವಸ್ಥಾನದಲ್ಲಿ ನ್ಯಾಯ ಕೇಳುವೆ

ಪುತ್ತೂರು: ನನ್ನ ಮಗಳ ವಿಚಾರದಲ್ಲಿ ನ್ಯಾಯ ಕೊಡಿಸದ ಪಿ.ಜಿ. ಜಗನ್ನಿವಾಸ್ ರಾವ್ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಾರ್ಯಕ್ರಮಗಳಲ್ಲಿ ಯಾವುದೇ ಪಶ್ಚಾತಾಪವಿಲ್ಲದೆ ಭಾಗವಹಿಸುತ್ತಿದ್ದಾರೆ. ಜಾತ್ರೆಯ ಧ್ವಜಾರೋಹಣದ ಸಂದರ್ಭದಲ್ಲಿ ಧ್ವಜಸ್ತಂಭದ ಮುಂದೆ ಕುಳಿತು ತಂತ್ರಿಗಳ ಸಹಿತ ಎಲ್ಲರ ಮುಂದೆ ನ್ಯಾಯ ಕೇಳುತ್ತೇನೆ ಎಂದು ಪುತ್ತೂರಿನ ಮದುವೆಯಾಗುವುದಾಗಿ ನಂಬಿಸಿ ವಂಚನೆ ಪ್ರಕರಣ ಸಂತ್ರಸ್ತೆಯ ತಾಯಿ ನಮಿತಾ ಎಚ್ಚರಿಕೆ ನೀಡಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣ ನಡೆದು ಒಂದು ವರ್ಷ ಕಳೆದಿದೆ. ಆದರೂ ಪಿ.ಜಿ.ಜಗನ್ನಿವಾಸ್ ರಾವ್ ಈಗಲೂ ಧಾರ್ಮಿಕ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ಇಲ್ಲಿವರೆಗೂ ತನ್ನ ಮಗನಿಂದ ಓರ್ವ ಹೆಣ್ಣು ಮಗಳಿಗೆ ಆದ ಅನ್ಯಾಯದ ಬಗ್ಗೆ ಗಮನಹರಿಸುತ್ತಿಲ್ಲ. ಈ ಹಿಂದೆ ಕೃಷ್ಣ ಜೆ. ರಾವ್ ಹಾಗೂ ಸಂತ್ರಸ್ತೆಗೆ ಮದುವೆ ಮಾಡಿಸುವುದಾಗಿ ಪಿ.ಜಿ.ಜಗನ್ನಿವಾಸ್ ರಾವ್ ಅವರು ಹೇಳಿದ್ದರು. ಮುಚ್ಚಳಿಕೆ ಪತ್ರ ಬರೆದುಕೊಟ್ಟಾಗ ಕೂಡ ಮದುವೆ ಮಾಡಿಸುವ ಜವಾಬ್ದಾರಿ ನನ್ನದು, ಮನೆಯಲ್ಲಿ ನನ್ನ ತೀರ್ಮಾನವೇ ಅಂತಿಮ ಎಂದು ಹೇಳಿದ್ದರು. ಸಂತ್ರಸ್ತೆಗೆ 9 ತಿಂಗಳು ಆಗುವವರೆಗೂ ಹಾಗೆಯೇ ಹೇಳಿ ನಮ್ಮ ದಾರಿ ತಪ್ಪಿಸುತ್ತಿದ್ದರು. ಈಗ ಮಗುವಿಗೆ 10 ತಿಂಗಳು ಆಗುತ್ತಾ ಬಂದಿದೆ. ಆದರೆ, ಕೃಷ್ಣ ಹಾಗೂ ಸಂತ್ರಸ್ತೆಗೆ ಮದುವೆ ಮಾಡಲು ಪಿ.ಜಿ. ಜಗನ್ನಿವಾಸ ರಾವ್ ಅವರು ಮುಂದೆ ಬಂದಿಲ್ಲ ಎಂದರು.




ಇಷ್ಟೆಲ್ಲ ಆದರೂ ನಾನು ಇಲ್ಲಿವರೆಗೂ ಅವರು ಧಾರ್ಮಿಕ ಕ್ಷೇತ್ರಗಳಲ್ಲಿ ಮಾಡುವ ಕೆಲಸಕ್ಕೆ ಮಾತನಾಡಿಲ್ಲ. ಆದರೆ ಇನ್ನು ಮುಂದೆ ಪಿ.ಜಿ.ಜಗನ್ನಿವಾಸ ರಾವ್ ಅವರನ್ನ ಧಾರ್ಮಿಕ ಕ್ಷೇತ್ರದ ಯಾವ ಚಟುವಟಿಕೆಗಳಲ್ಲೂ ಸೇರಿಸಿಕೊಳ್ಳಬೇಡಿ ಎಂದು ಕೇಳಿಕೊಳ್ಳುತ್ತೇನೆ. ತನ್ನ ಮಗನ ತಪ್ಪಿನ ಅರಿವಿದ್ದರೂ ಕೂಡ ದೇವರ ಕಾರ್ಯಗಳಲ್ಲಿ ಭಾಗಹಿಸುತ್ತಾರೆ. ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಚೆಂಡೆ ವಾದನ ವಾಸ್ತುಶಾಸ್ತ್ರ, ಚಾಕರಿ ಕೆಲಸಗಳಲ್ಲಿ ಮುಂಚೂಣಿಯಲ್ಲಿರುತ್ತಾರೆ. ಜಾತ್ರೋತ್ಸವದ ಗೊನೆ ಮುಹೂರ್ತದ ಸಂದರ್ಭದಲ್ಲೂ ಮುಂಚೂಣಿಯಲ್ಲಿದ್ದರು. ಹಾಗಾಗಿ ನಾನು ಏ. 10ರಂದು ಪುತ್ತೂರು ಜಾತ್ರೋತ್ಸವದ ಧ್ವಜಾರೋಹಣ ಆಗುವ ಸಂದರ್ಭದಲ್ಲಿ ಧ್ವಜಸ್ತಂಭದ ಮುಂದೆಯೇ ಕುಳಿತುಕೊಳ್ಳುತ್ತೇನೆ. ನ್ಯಾಯಕ್ಕಾಗಿ ತಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ದೇವರಲ್ಲದೇ ಬೇರೆ ಯಾರೂ ನ್ಯಾಯ ಕೊಡಿಸಲು ಸಾಧ್ಯವಿಲ್ಲ. ಇಷ್ಟರವರೆಗೆ ಎಲ್ಲರ ಕೈಕಾಲು ಹಿಡಿದು ಮದುವೆ ಮಾಡಿಸಿಕೊಡಿ ಎಂದು ಕೇಳಿಕೊಂಡಾಗಿದೆ. ಆದ್ರೆ ಯಾರ ಮನಸ್ಸು ಕೂಡ ಕರಗಿಲ್ಲ. ಜಗನ್ನಿಸವಾಸ ರಾವ್ ಅವರು ಮದುವೆ ಮಾಡಿಸಿಕೊಡುತ್ತೇನೆ ಹೇಳಿ ಈಗ ಅವರೇ ತಪ್ಪು ಮಾಡಿದ ಮಗನನ್ನು ರಕ್ಷಿಸುತ್ತಿದ್ದಾರೆ. ಹಾಗಾಗಿ ಧಾರ್ಮಿಕ ಕ್ಷೇತ್ರದ ಯಾವ ಕೆಲಸಕ್ಕೂ ಜಗನ್ನಿವಾಸ ರಾವ್ ಅವರು ಮುಂದೆ ಹೋಗಬಾರದು. ಹೆಣ್ಣು ಮಗಳಿಗೆ ಮೊದಲು ನ್ಯಾಯ ಕೊಡಿಸಲಿ. ಅವರ ಮಗ ಮಾಡಿದ ತಪ್ಪಿಗೆ ದೇವಸ್ಥಾನದ ಧ್ವಜಸ್ತಂಭದ ಮುಂದೆ ಎಲ್ಲರಲ್ಲೂ ನ್ಯಾಯಕೊಡಿಸುವಂತೆ ಕೇಳುತ್ತೇನೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ವಿಶ್ವಕರ್ಮ ಯುವ ಮಿಲನ್ ಸ್ಥಾಪಕಾಧ್ಯಕ್ಷ ವಿಕ್ರಂ ಆಚಾರ್ಯ, ವಿಶ್ವಕರ್ಮ ಯುವ ಮಿಲನ್ ಪುತ್ತೂರು ತಾಲೂಕು ಅಧ್ಯಕ್ಷ ಹರೀಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ದಿವಾಕರ ಆಚಾರ್ಯ ಪಾಲ್ತಾಡಿ, ಜಗದೀಶ್ ಆಚಾರ್ಯ, ಕೋಶಾಧಿಕಾರಿ ಜಗದೀಶ್ ಆಚಾರ್ಯ ಉಪಸ್ಥಿತರಿದ್ದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಸ್ಪಷ್ಟನೆ

ಇದು ದೇವಸ್ಥಾನಕ್ಕೆ ಸಂಬಂಧಿಸಿದ ವಿಷಯ ಅಲ್ಲ

ಪುತ್ತೂರು: ನಗರದ ಶ್ರೀ ಮಹಾಲಿಂಗೇಶ್ವರ ದೇವಾಲಯದ ಕೊಡಿಮರದ ಅಡಿಯಲ್ಲಿ ಕುಳಿತು ನ್ಯಾಯ ಕೇಳುವುದಕ್ಕೆ ಇದು ದೇವಸ್ಥಾನಕ್ಕೆ ಸಂಬಂಧಿಸಿದ ವಿಷಯ ಅಲ್ಲ. ಇದು ಎರಡು ಮನೆಗೆ ಸಂಬಂಧಪಟ್ಟ ವಿಷಯ. ದೇವಸ್ಥಾನದ ಪೂರ್ವಶಿಷ್ಟ ಸಾಂಪ್ರದಾಯದಂತೆ ನಾವು ಈ ಹಿಂದೆ ಹೇಗಿತ್ತೋ ಹಾಗೆ ಮುಂದುವರಿಯುತ್ತೇವೆ ಎಂದು ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಪ್ರತಿಕ್ರಿಯಿಸಿದ್ದಾರೆ.



ಮಹಾಲಿಂಗೇಶ್ವರ ದೇವಾಲಯದ ಧಾರ್ಮಿಕ ಕಾರ್ಯಗಳಿಂದ ವಾಸ್ತು ಇಂಜಿನಿಯರ್ ಪಿ.ಜಿ. ಜಗನ್ನಿವಾಸ್ ರಾವ್ ಅವರನ್ನು ಹೊರಗಿಡಬೇಕು. ಇಲ್ಲವಾದಲ್ಲಿ ನಾನು ಕೊಡಿಮರದ ಅಡಿಯಲ್ಲಿ ಕುಳಿತು ನ್ಯಾಯ ಕೇಳುವ ದೃಢ ನಿರ್ಧಾರವನ್ನು ಮಾಡಿರುವುದಾಗಿ ಸಂತ್ರಸ್ಥೆಯ ತಾಯಿ ಸುದ್ದಿಗೋಷ್ಠಿ ನಡೆಸಿ ಎಚ್ಚರಿಕೆ ನೀಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಕರಣ ನ್ಯಾಯಾಲಯದಲ್ಲಿದೆ. ಕೋರ್ಟ್ ತೀರ್ಪು ಯಾರು ಪರ ನೀಡುತ್ತದೆ ಗೊತ್ತಿಲ್ಲ. ನಾವು ದೇವಸ್ಥಾನದ ಪೂರ್ವಶಿಷ್ಟ ಸಾಂಪ್ರದಾಯ ದಂತೆ ನಾವು ಈ ಹಿಂದೆ ಹೇಗಿತ್ತೋ ಹಾಗೆ ಮುಂದುವರಿಯುತ್ತೇವೆ. ದೇವಸ್ಥಾನದ ಸಮಿತಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ನಾವು ಇದರ ಜವಾಬ್ದಾರರೂ ಅಲ್ಲ. ನಮ್ಮ ಹಿಂದೂ ಸಾಂಪ್ರದಾಯದಲ್ಲಿ ದೇವಸ್ಥಾನಕ್ಕೆ ಅರ್ಚಕರು ಮತ್ತು ತಂತ್ರಿಗಳು ಇದ್ದಾರೆ. ಇಲ್ಲಿಯವರೆಗೆ ರವೀಶ್ ತಂತ್ರಿಗಳ ಮಾರ್ಗದರ್ಶನದಂತೆ ನಾವು ದೇವಸ್ಥಾನದ ಕೆಲಸ ಕಾರ್ಯ ಮಾಡಿಕೊಂಡು ಬಂದಿದ್ದೇವೆ. ಈ ವಿಚಾರವನ್ನೂ ತಂತ್ರಿಗಳ ಗಮನಕ್ಕೆ ತಂದು ಅವರ ತೀರ್ಮಾನಕ್ಕೆ ನಾವು ಬದ್ಧರಾಗಬೇಕು. ಸಮಿತಿಯೂ ಬದ್ಧರಾಗುತ್ತದೆ. ಜಗನ್ನಿವಾಸ್ ರಾವ್ ಅವರಿಗೆ ದೇವಾಲಯದ ವ್ಯವಸ್ಥೆಯಲ್ಲಿ ಅವಕಾಶ ನೀಡಬಾರದು ಎಂದು ಈ ಹಿಂದೆ ಅರ್ಜಿ ಬಂದಿದೆ. ಅರ್ಜಿ ಪರಿಶೀಲನೆ ಮಾಡಿದ್ದೇನೆ. ರವೀಶ್ ತಂತ್ರಿಯವರ ಗಮನಕ್ಕೆ ತಂದು ಚರ್ಚಿಸಿ ತಂತ್ರಿಗಳ ಮಾರ್ಗದರ್ಶನ ಪಡೆದು ನಿರ್ಣಯ ತೆಗೆದುಕೊಳ್ಳುತ್ತೇವೆ. ಜಗನ್ನಿವಾಸ್ ರಾವ್‌ರನ್ನು ದೇವಸ್ಥಾನಕ್ಕೆ ಬರುವಂತೆ ಸಮಿತಿ ಮಾಡಿದ್ದಲ್ಲ. ಅವರನ್ನು ದೇವಸ್ಥಾನದಿಂದ ಬಿಡುವ ರೈಟ್ ಕೂಡ ನಮಗೆ ಇಲ್ಲ, ಸೇರಿಸುವ ರೈಟ್ ಕೂಡ ನಮಗೆ ಇಲ್ಲ. ತಂತ್ರಿಗಳ ಮಾರ್ಗದರ್ಶನದಲ್ಲಿ ಕೆಲಸ ಕಾರ್ಯಗಳು ನಡೆಯುತ್ತದೆ ಎಂದು ಹೇಳಿದ್ದಾರೆ.

ಇದರ ಬಗ್ಗೆ ಮಾತುಕತೆ ಮಾಡಲು ಜಗನ್ನಿವಾಸ್ ರಾವ್ ಕೂಡ ನಮ್ಮ ಬಳಿಗೆ ಬರಲಿಲ್ಲ. ಹುಡುಗಿಯ ಕಡೆಯವರು ನಮ್ಮ ಬಳಿಗೆ ಬಂದಿಲ್ಲ. ದಯವಿಟ್ಟು ರಾಜಕೀಯ, ವೈಯಕ್ತಿಕ ವಿಚಾರವನ್ನು ದೇವಸ್ಥಾನದ ಒಳಗೆ ತರಬೇಡಿ. ದೇವಸ್ಥಾನಕ್ಕೆ ಅದರದ್ದೆ ಆದ ಗೌರವ ಇದೆ. ಕೊಡಿ ಮರದ ಅಡಿಯಲ್ಲಿ, ದೇವಸ್ಥಾನದ ಒಳಗೆ ಯಾವುದೇ ವೈಯಕ್ತಿಕ ವಿಚಾರಗಳನ್ನು ನಡೆಸುವಂತಿಲ್ಲ. ಯಾವುದೇ ಗೊಂದಲಕ್ಕೆ ಅವಕಾಶವಿಲ್ಲ ಎಂದು ಈಶ್ವರ ಭಟ್ ಹೇಳಿದ್ದಾರೆ.



ಕಿರುಸುದ್ದಿ

ಅಭಿಷೇಕ್ ಶರ್ಮಗೆ ದಂಡ

ಕೋಲ್ಕತ್ತಾ: ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮ ಅವರಿಗೆ ಬಿಸಿಸಿಐ ಭಾರೀ ದಂಡ ವಿಧಿಸಿದೆ. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಪಂದ್ಯದ ವೇಳೆ ಭರ್ಜರಿ ಬ್ಯಾಟಿಂಗ್ ಮಾಡಿ ಪಂದ್ಯ ಗೆಲುವಿನ ರೂವಾರಿ ಎನ್ನಿಸಿಕೊಂಡಿರುವ ಅವರು, ಐಪಿಎಲ್ ಮಾನದಂಡಗಳನ್ನು ಉಲ್ಲಂಘಿಸಿರುವ ನಿಟ್ಟಿನಲ್ಲಿ ಪಂದ್ಯ ಗಳಿಕೆಯ ಶೇ. 20ರಷ್ಟು ಹಣವನ್ನು ದಂಡವಾಗಿ ವಿಧಿಸಿದೆ. ಅಭಿಷೇಕ್ ಶರ್ಮ ಪಂದ್ಯದ ವೇಳೆ ಅನುಚಿತ ಭಾಷೆ ಪ್ರಯೋಗಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈಡನ್ ಗಾರ್ಡನ್ಸ್ ಪಂದ್ಯದ ವೇಳೆ ಅವರು ಅನುಚಿತ ಭಾಷೆ ಪ್ರಯೋಗಿಸಿದ್ದು, ಇದು ಐಪಿಎಲ್ ಮಾನದಂಡಗಳ 2.3ನೇ ವಿಧಿಯ ಪ್ರಕಾರ ಪ್ರಥಮ ದರ್ಜೆ ತಪ್ಪಾಗಿದೆ ಎಂದು ಬಣ್ಣಿಸಲಾಗಿದೆ. 48 ರನ್ ಗಳಿಸಿದ್ದ ಅವರು ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದ್ದರು.

ಬಾಕ್ಸಿಂಗ್: ಸೆಮಿಫೈನಲ್‌ಗೆ ಲಿನ್ ಯು-ಟಿಂಗ್

ಹೊಸದಿಲ್ಲಿ: ಒಲಿಂಪಿಕ್ ಚಿನ್ನದ ಪದಕ ವಿಜೇತೆ ಲಿನ್ ಯು-ಟಿಂಗ್ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ನಲ್ಲಿ ಕ್ವಾರ್ಟರ್‌ಫೈನಲ್ ಪಂದ್ಯವನ್ನು ಗೆದ್ದು ಉತ್ತಮ ಆರಂಭ ಮಾಡಿದ್ದಾರೆ. ಲಿಂಗ ದೃಢೀಕರಣಕ್ಕಾಗಿ ಜೀನ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರ ಮೊದಲ ಸ್ಪರ್ಧೆಯಾಗಿದ್ದು, ಲಿನ್ ಭರ್ಜರಿ ಪ್ರದರ್ಶನ ನೀಡಿದ್ದಾರೆ. ತೈವಾನ್‌ನ ಈ ಆಟಗಾರ್ತಿ ಮಹಿಳೆಯರ 60 ಕೆಜಿ ವಿಭಾಗದಲ್ಲಿ ಥೈಲ್ಯಾಂಡ್‌ನ ತನನ್ಯ ಸೋಮ್ನುಕ್ ವಿರುದ್ಧ ಮೊದಲ ಪಂದ್ಯದಲ್ಲೇ 5-0 ಅಂತರದಲ್ಲಿ ಸುಲಭ ಜಯ ಸಾಧಿಸಿದರು. ಅದರ ಮುಂದುವರಿದಂತೆ, ಕ್ವಾರ್ಟರ್‌ಫೈನಲ್‌ನಲ್ಲಿ ಜಪಾನ್‌ನ ಟಾಪ್ ಸೀಡ್ ಆಯಾಕಾ ಟಗುಚಿ ವಿರುದ್ಧವೂ 5-0 ಅಂತರದಲ್ಲಿ ಗೆದ್ದು ಪ್ರಾಬಲ್ಯ ಮೆರೆದರು. ಪ್ರತಿ ರೌಂಡ್‌ನಲ್ಲೂ ಐದು ನ್ಯಾಯಾಧೀಶರಿಂದಲೂ ಪೂರ್ಣ 10 ಅಂಕಗಳನ್ನು ಪಡೆದು ಪರಿಪೂರ್ಣ ಪ್ರದರ್ಶನ ನೀಡಿದರು. 30 ವರ್ಷದ ಲಿನ್, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 57 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದ ನಂತರ ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ.

ಭಾರತ ಮೂಲದ ಬೋಧನಾ ಇಂಗ್ಲೆಂಡಿನ ನಂ.1 ಚೆಸ್ ಆಟಗಾರ್ತಿ



ಲಂಡನ್: ಇಂಗ್ಲೆಂಡ್‌ನಲ್ಲಿ ಭಾರತೀಯ ಮೂಲದ ಚೆಸ್ ಪ್ರತಿಭೆ ಬೋಧನಾ ಶಿವನಂದನ್ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇತ್ತೀಚಿನ ಫಿಡೆ ರೇಟಿಂಗ್ ಪಟ್ಟಿಯ ಪ್ರಕಾರ, ಅವರು ಇಂಗ್ಲೆಂಡ್‌ನ ಅಗ್ರ ಮಹಿಳಾ ಚೆಸ್ ಆಟಗಾರ್ತಿಯಾಗಿದ್ದಾರೆ. ಕೇವಲ 11 ವರ್ಷದ ಬೋಧನಾ 2366 ರೇಟಿಂಗ್ ಅಂಕಗಳನ್ನು ಹೊಂದಿದ್ದು, ನಾಲ್ಕು ಬಾರಿ ಬ್ರಿಟಿಷ್ ಮಹಿಳಾ ಚಾಂಪಿಯನ್ ಲಾನ್ ಯಾವೋ ಅವರನ್ನು ಮೀರಿಸಿದ್ದಾರೆ. ಈ ಸಾಧನೆಯೊಂದಿಗೆ ಅವರು ಮೊದಲ ಬಾರಿಗೆ ವಿಶ್ವದ ಟಾಪ್ 100 ಮಹಿಳಾ ಆಟಗಾರ್ತಿಯರ ಪಟ್ಟಿಗೆ ಪ್ರವೇಶಿಸಿ, ಪ್ರಸ್ತುತ 72ನೇ ಸ್ಥಾನದಲ್ಲಿದ್ದಾರೆ. ತಮಿಳುನಾಡಿನ ತಿರುಚಿರಾಪಳ್ಳಿಯಿಂದ ಇಂಗ್ಲೆಂಡ್‌ಗೆ ವಲಸೆ ಹೋದ ಕುಟುಂಬದ ಮಗಳು ಬೋಧನಾ, 2020ರ ಲಾಕ್‌ಡೌನ್ ಸಮಯದಲ್ಲಿ ಚೆಸ್ ಆಟ ಆರಂಭಿಸಿದ್ದರು. ಈಗ ಅವರು ವೇಗವಾಗಿ ಬೆಳೆಯುತ್ತಿರುವ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದಾರೆ. ಕಳೆದ ವರ್ಷವೇ ಅವರು ವುಮನ್ ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟವನ್ನು ಪಡೆದಿದ್ದರು. ಈ ಸಾಧನೆಗೆ ಬ್ರಿಟನ್ನ ಮಾಜಿ ಪ್ರಧಾನಿ ರಿಷಿ ಸುನಕ್ ಕೂಡ ಅಭಿನಂದನೆ ಸಲ್ಲಿಸಿದ್ದು, ತಮ್ಮ ನಿವಾಸದಲ್ಲಿ ಅವರೊಂದಿಗೆ ಆಡಿದ ಅನುಭವವನ್ನು ನೆನಪಿಸಿಕೊಂಡಿದ್ದಾರೆ. ಒಟ್ಟಿನಲ್ಲಿ, ಅತಿ ಚಿಕ್ಕ ವಯಸ್ಸಿನಲ್ಲಿ ಬೋಧನಾ ಸಾಧಿಸಿರುವ ಈ ಯಶಸ್ಸು ಜಾಗತಿಕ ಚೆಸ್ ವಲಯದ ಗಮನ ಸೆಳೆದಿದೆ.

ಮಿಂಚಿದ ಸಿಎಸ್‌ಕೆ ಬ್ಯಾಟರ್ಸ್ | ಸರ್ಫರಾಜ್ ಖಾನ್ ಮೋಡಿ

ಆಯುಷ್ ಮಾಥ್ರೆ ಅಬ್ಬರ: ಚೆನ್ನೈ 209

ಚೆನ್ನೈ: ಆಯುಷ್ ಮಾಥ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ದುಬೆ ಹಾಗೂ ಸರ್ಫರಾಜ್ ಖಾನ್ ಅವರ ಅಬ್ಬರದ ಫಿನಿಶಿಂಗ್ ಸಿಕ್ಕ ನಂತರ ಚೆನ್ನೈ ಸೂಪರ್ ಕಿಂಗ್ಸ್, ಪಂಜಾಬ್ ತಂಡದ ವಿರುದ್ಧ ದೊಡ್ಡ ಸ್ಕೋರ್ ನಿರ್ಮಿಸಿತು.

ಮೊದಲ ಪಂದ್ಯದಲ್ಲಿ ಹೀನಾಯ ಸೋಲು ಕಂಡ ನಂತರ ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್ ಪಡೆ ಚೇತರಿಸಿಕೊಂಡಿತು. 19ವರ್ಷದ ಆಯುಷ್ ಮಾಥ್ರೆ ಬಿರುಸಿನ ಅರ್ಧ ಶತಕ ಬಾರಿಸಿದರೆ, ಸರ್ಫರಾಜ್ ಖಾನ್ ಮಧ್ಯಮ ಕ್ರಮಾಂಕದಲ್ಲಿ ಆಕ್ರಮಣಕಾರಿ ಬ್ಯಾಟಿಂಗ್ ನೊಂದಿಗೆ ಬೌಲರ್‌ಗಳನ್ನು ದಂಡಿಸಿದರು. ದುಬೆ ಅಂತಿಮ ಓವರ್ ಗಳಲ್ಲಿ ಕಮಾಲ್ ಮಾಡಿದರು. ಇದರೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 209 ರನ್ ಗಳಿಸಿದೆ. ಪಂಜಾಬ್ ಕಿಂಗ್ಸ್ 5 ವಿಕೆಟ್‌ಗಳನ್ನು ಪಡೆಯಿತು.

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಚೆನ್ನೈ ಸೂಪರ್ ಕಿಂಗ್ಸ್ ಕಳಪೆ ಆರಂಭದಲ್ಲಿ ಸಂಜು ಸ್ಯಾಮ್ಸನ್ ವಿಕೆಟ್ ಕಳೆದುಕೊಂಡಿತು. ರುತುರಾಜ್ ಸೆಟ್ ಆಗುವುದಕ್ಕೆ ಸಮಯ ತೆಗೆದುಕೊಂಡರು. ಈ ನಡುವೆ ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾಥ್ರೆ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಚಾಹಲ್ ಮತ್ತು ವೈಶಾಕ್ ತಡೆಯಲು ಪ್ರಯತ್ನಿಸಿದರೂ ಮಾಥ್ರೆ ಮಾತ್ರ ಅಬ್ಬರದ ಬ್ಯಾಟಿಂಗ್ ಅನ್ನೇ ಮುಂದುವರಿಸಿದರು. ಗಾಯಕ್ವಾಡ್ ಸಿಂಗಲ್‌ಗಳ ಮೂಲಕ ಜವಾಬ್ದಾರಿ ನಿಭಾಯಿಸಿ 28 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಕಾರ್ತಿಕ್ ಶರ್ಮ ಬೇಗನೆ ವಿಕೆಟ್ ಒಪ್ಪಿಸಿದರು.

ಮಾಥ್ರೆ ಆರ್ಭಟ: ಒಂದು ಹಂತದಲ್ಲಿ ಮತ್ತೊಮ್ಮೆ ಕುಸಿತದ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 19 ವರ್ಷದ ಯುವಕ ಆಯುಷ್ ಮಾಥ್ರೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೊದಲಿನ ಮೂರು-ನಾಲ್ಕು ಬಾಲ್‌ಗಳನ್ನು ಗೌರವಿಸಿದ ಆಯುಷ್ ಮುಂದೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸೆಟ್ ಆಗುವ ಮುಲಾಜಿಗೆ ಹೋಗದೆ ಬಿರುಸಿನ ಸಿಕ್ಸರ್‌ಗಳನ್ನು ಬಾರಿಸುತ್ತಾ, ಚೆನ್ನೈ ತಂಡವನ್ನು ಕುಸಿತದಿಂದ ಪಾರು ಮಾಡಿದರು. ವೇಗಿಗಳನ್ನು ದಂಡಿಸುತ್ತಾ ಬಂದ ಅವರಿಗೆ ಇತ್ತ ನಾಯಕ ರುತುರಾಜ್ ಗಾಯಕ್ವಾಡ್ ಸಾಥ್ ನೀಡಿದರು. ಆರಂಭಿಕರಾಗಿ ಬಂದರೂ ಗಾಯಕ್ವಾಡ್ ಹೆಚ್ಚಿನ ಬಾಲ್ ಎದುರಿಸಲೇ ಇಲ್ಲ. ಆಯುಷ್ ಮಾಥ್ರೆ 5 ಗಗನದೆತ್ತರದ ಸಿಕ್ಸರ್ ಗಳನ್ನು ಬಾರಿಸಿದರು. 6 ಆಕರ್ಷಕ ಬೌಂಡರಿಗಳನ್ನು ಬಾರಿಸಿದರು. 29 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ಅವರು, ಒಟ್ಟು 43 ಬಾಲ್ ಎದುರಿಸಿ 73 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು.



ಸರ್ಫರಾಜ್ ಮಿಂಚಿನಾಟ: ಉತ್ತಮ ಆರಂಭ ಪಡೆದರೂ ಮಧ್ಯಮ ಓವರ್‌ಗಳಲ್ಲಿ ದಿಢೀರ್ ಎರಡು ವಿಕೆಟ್ ಕಳೆದುಕೊಂಡ ಚೆನ್ನೈ ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕಿಕೊಂಡಿತ್ತು. ದುಬೆ ಸೆಟ್ ಆಗುವುದಕ್ಕೆ ಸಮಯ ತೆಗೆದುಕೊಂಡರು. ದಿಢೀರ್ 2 ವಿಕೆಟ್ ಬಿದ್ದವು. ಈ ಹಂತದಲ್ಲಿ ಬ್ಯಾಟಿಂಗ್‌ಗೆ ಬಂದ ಸರ್ಫರಾಜ್ ಖಾನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 12 ಬಾಲ್ ಮಾತ್ರ ಎದುರಿಸಿದ ಅವರು, 6 ಬೌಂಡರಿ 1 ಸಿಕ್ಸರ್ ಬಾರಿಸಿದರು. ಆರು ಬೌಂಡರಿಗಳಲ್ಲಿ 5 ಬೌಂಡರಿಗಳು ವಿಕೆಟಿನ ಹಿಂದುಗಡೆ ಇದ್ದವು. ಬೌಲರ್‌ನ ವೇಗ ಬಳಸಿಕೊಂಡು ಅತ್ಯುತ್ತಮ ಆಟವಾಡಿ ತಂಡದ ಮೊತ್ತವನ್ನು ಹಿಗ್ಗಿಸಿದ್ದಲ್ಲದೆ, ಒತ್ತಡವನ್ನು ಪಂಜಾಬ್‌ನತ್ತ ನೂಕಿದರು. 32 ರನ್ ಬಾರಿಸಿ ಅವರು ವಿಕೆಟ್ ಕಳೆದುಕೊಂಡಂತೆ ಇತ್ತ ಸೆಟ್ ಆಗಿ ಸ್ಲಾಗ್ ಓವರ್‌ಗಳಿಗಾಗಿ ಕಾಯುತ್ತಿದ್ದ ದುಬೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಂದು ಹಂತದಲ್ಲಿ 14 ಬಾಲ್‌ಗಳಲ್ಲಿ 14 ರನ್ ಗಳಿಸಿದ್ದ ದುಬೆ ಕೊನೆಯ ಓವರ್‌ಗಳಲ್ಲಿ ಸಿಕ್ಸರ್ ಹಾಗೂ ಬೌಂಡರಿಗಳ ಮೂಲಕ ಮುಂದಿನ 13 ಬಾಲ್‌ಗಳಲ್ಲಿ ಬರೋಬ್ಬರಿ 31 ರನ್ ಬಾರಿಸಿದರು. ಇದರೊಂದಿಗೆ ತಂಡದ ಮೊತ್ತ 209ಕ್ಕೆ ಹಿಗ್ಗಿತು. ದುಬೆ 45 ರನ್‌ಗಳಿಸಿದರು.

ಎರಡನೇ ಪಂದ್ಯದಲ್ಲಿ ಗುಜರಾತ್-ರಾಜಸ್ಥಾನ ಫೈಟ್

ದಿಲ್ಲಿ-ಮುಂಬೈ ಸೆಣಸು ಇಂದು

ಹೊಸದಿಲ್ಲಿ: ಶನಿವಾರದ ಸೂಪರ್ ವಿಕೆಂಡ್ ಪಂದ್ಯಗಳಲ್ಲಿ ದಿಲ್ಲಿ-ಮುಂಬೈ, ಗುಜರಾತ್-ರಾಜಸ್ಥಾನ ಪಂದ್ಯಗಳು ನಡೆಯಲಿವೆ. ಇಂಡಿಯನ್ ಪ್ರೀಮಿಯರ್ ಲೀಗ್‌ನ ಬ್ಲಾಕ್‌ಬಾಸ್ಟರ್ ಪಂದ್ಯಗಳು ಶುರುವಾಗಿವೆ. ಚುಟುಕು ಕ್ರಿಕೆಟ್ ಹಬ್ಬಕ್ಕೆ ಇನ್ನಷ್ಟು ಕಿಕ್ ನೀಡುವ ನಿಟ್ಟಿನಲ್ಲಿ ಎಂಟು ವಾರಾಂತ್ಯ ದಿನಕ್ಕೆ ಎರಡು ಪಂದ್ಯಗಳು ನಡೆಯುತ್ತವೆ.

ಮೊದಲ ಪಂದ್ಯದಲ್ಲಿ ಗೆಲುವಿನೊಂದಿಗೆ ಶುರು ಮಾಡಿರುವ ಮುಂಬೈ ಇಂಡಿಯನ್ಸ್ ಹಾಗೂ ದಿಲ್ಲಿ ಕ್ಯಾಪಿಟಲ್ಸ್ ತಂಡಗಳು ಸೆಣಸಾಟ ನಡೆಸಲಿವೆ. ಕಳೆದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ಕೊನೆಯಲ್ಲಿ ಎಡವಿ ಹೊರಬಿದ್ದಿತ್ತು ಮುಂಬೈ. ಇತ್ತ ದಿಲ್ಲಿ ಕೂಡ ಅಂಥದ್ದೇ ಪ್ರದರ್ಶನದಿಂದ ಗಮನ ಸೆಳೆದಿತ್ತು. ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಗೆಲ್ಲಲೇಬೇಕಾದ ಕೊನೆ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿತ್ತು. ಹೊಸ ಪಂದ್ಯಾವಳಿಯಲ್ಲಿ ನಿರೀಕ್ಷಿತ ಆರಂಭ ಪಡೆದಿರುವ ಉಭಯ ತಂಡಗಳು ಗೆಲುವಿನ ನಾಗಾಲೋಟ ಮುಂದುವರಿಸುವ ಭರವಸೆಯಲ್ಲಿವೆ.

ಎರಡನೇ ಪಂದ್ಯದಲ್ಲಿ ಗೆದ್ದಿರುವ ರಾಜಸ್ಥಾನ ಮತ್ತು ಪರಭಾವ ಕಂಡಿರುವ ಗುಜರಾತ್ ತಂಡಗಳು ಮುಖಾಮುಖಿಯಾಗಲಿವೆ. ಗುಜರಾತ್ ತನ್ನ ನಿರೀಕ್ಷಿತ ಪ್ರದರ್ಶನ ನೀಡದೆ ಹಿನ್ನಡೆ ಅನುಭವಿಸಿತ್ತು. ಇತ್ತ ರಾಜಸ್ಥಾನ ತಂಡ ಚೆನ್ನೈ ವಿರುದ್ಧ ಗೆದ್ದು ಬೀಗಿತ್ತು. ಎರಡನೇ ಪಂದ್ಯದಲ್ಲಿ ಅದೇ ಗೆಲುವಿನ ಆಟ ಆಡುವುದಕ್ಕೆ ಆರ್‌ಆರ್ ಸಿದ್ಧವಾದರೆ ಪುಟಿದೇಳಲು ಅಣಿಯಾಗಿದೆ.

ರಾಜಸ್ಥಾನಕ್ಕೆ ಭರವಸೆ



ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸಮಸ್ತ ರಾಜಸ್ಥಾನ ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿ ಹೆಚ್ಚಿಸಿದ್ದಾರೆ. ಜೈಸ್ವಾಲ್ ಕೂಡ ಅದೇ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ತಂಡದಲ್ಲಿ ಆರ್ಚರ್, ಜಡೇಜಾ, ನಾಂದ್ರೆ ಅಂತಹ ಬೌಲರ್‌ಗಳಿದ್ದಾರೆ. ಅದೇ ರೀತಿ, ರಿಯಾನ್ ಪರಾಗ್, ಜುರೇಲ್, ಫೆರಾರಿಯಾ ಅಂತಹ ಬ್ಯಾಟರ್‌ಗಳೂ ಇದ್ದಾರೆ.

ಪುಟಿದೇಳುವುದೇ ಗುಜರಾತ್?



ನಾಲ್ಕು ಪ್ರಮುಖ ಬ್ಯಾಟರ್ ಗಳೊಂದಿಗೆ ಕಣಕ್ಕಿಳಿಯುವ ಗುಜರಾತ್ ಪುಟಿದೇಳುವ ಭರವಸೆಯಲ್ಲಿದೆ. ಗಿಲ್, ಸುದರ್ಶನ್, ಬಟ್ಲರ್ ಮತ್ತು ಫಿಲಿಪ್ಸ್ ಅವರು ತಂಡದ ಬ್ಯಾಟಿಂಗ್ ಜವಾಬ್ದಾರಿ ತೆಗೆದುಕೊಂಡರೆ, ಬೌಲಿಂಗ್‌ನಲ್ಲಿ ಸುಂದರ್, ಅರ್ಶದ್ ಖಾನ್, ಪ್ರಸಿದ್ಧ ಕೃಷ್ಣ, ರಬಾಡ ಅಂಥವರಿದ್ದಾರೆ. ಕಳೆದ ಪಂದ್ಯದಲ್ಲಿ ಸೋತರು ಕಂಬ್ಯಾಕ್ ಮಾಡಿ ಒತ್ತಡ ಹೇರಿದ ವಿಶ್ವಾಸವೂ ತಂಡಕ್ಕಿದೆ.

- ಯಾವಾಗ: ಶನಿವಾರ
- ಎಲ್ಲಿ: ಅಮದಾಬಾದ್
- ಸಮಯ: 7:30

ಮುಂಬೈಗೆ ಗೆಲುವಿನ ವಿಶ್ವಾಸ



ಮೊದಲ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದ ಮುಂಬೈ ಇಂಡಿಯನ್ಸ್ ಭಾರೀ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಮುಖ್ಯವಾಗಿ ತಂಡದ ಆನೆ ಬಲ ರೋಹಿತ್ ಶರ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದರು. ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಹಾರ್ದಿಕ್ ಪಂಡ್ಯ ಹೀಗೆ ಬ್ಯಾಟಿಗರ ಪಡೆಯನ್ನೇ ಹೊತ್ತಿಕೊಂಡಿರುವ ಮುಂಬೈ ಸವಾಲಿಗೆ ಸಿದ್ಧ ಎಂದಿದೆ. ಬೌಲಿಂಗ್‌ನಲ್ಲೂ ಬೂಮ್ರಾ, ಬೋಲ್ಟ್ ಅಂಥವರು ಭರವಸೆ ಹೆಚ್ಚಿಸಿದ್ದಾರೆ.

ದಿಲ್ಲಿಯಲ್ಲಿ ಯುವಕರ ಆಟ



ಇತ್ತ ಹೋದ ಪಂದ್ಯವನ್ನು ಗೆದ್ದು ಬೀಗಿದ ದಿಲ್ಲಿ ಕೂಡ ವಿಶ್ವಾಸದಲ್ಲಿದೆ. ಮುಖ್ಯವಾಗಿ ಸಮೀರ್ ರಿಜ್ವಿ ಕಳೆದ ಪಂದ್ಯದಲ್ಲಿ ಆಡಿದ ಬ್ಯಾಟಿಂಗ್ ತಂಡದ ಬಲವನ್ನು ತೋರಿಸಿದೆ. ರಾಹುಲ್, ಅಕ್ಷರ್ ಅಂತಹ ಅನುಭವಿ ಬ್ಯಾಟರ್‌ಗಳು ತಂಡದಲ್ಲಿದ್ದಾರೆ. ಮುಖ್ಯವಾಗಿ ಯುವಕರು ತಂಡದಲ್ಲಿದ್ದು, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ತಂಡದ ಭರವಸೆ ಹೆಚ್ಚಿಸಿದ್ದಾರೆ.

- ಯಾವಾಗ: ಶನಿವಾರ
- ಎಲ್ಲಿ: ದಿಲ್ಲಿ
- ಸಮಯ: 3:30

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಬಿಸಿಬಿಯಿಂದ ಬಿಸಿಸಿಐಗೆ ಪತ್ರ

- ಗೊಂದಲಗಳ ತೆರೆಗೆ - ವಿವಾದ ಬಗೆಹರಿಸಿಕೊಳ್ಳಲು ಮನವಿ
- ಬಾಂಗ್ಲಾ ಸರಣಿ ಮರುಪರಿಶೀಲನೆಗೆ ಕಳಕಳಿ

ಮುಂಬೈ: ಹಿಂದೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಿರುದ್ಧ ಹತಾಶೆ ಹೊರಹಾಕಿ ನಾಟಕ ಮಾಡಿದ್ದ ಬಾಂಗ್ಲಾ ಕ್ರಿಕೆಟ್ ಸಂಸ್ಥೆ ವಿಶ್ವಕಪ್ ಪಂದ್ಯಾವಳಿ ನಂತರ ಮತ್ತೊಮ್ಮೆ ಮಂಡಿಯೂರಿದ್ದು, ವಿವಾದಗಳನ್ನು ಬಗೆಹರಿಸಿಕೊಳ್ಳಲು ಬಿಸಿಸಿಐ ಮುಂದೆ ಕೈಚಾಚಿದೆ.

ಬಾಂಗ್ಲಾದೇಶ ಹಾಗೂ ಭಾರತದ ರಾಜಕೀಯ ಬಿಕ್ಕಟ್ಟಿನ ನಂತರ ಬಿಸಿಸಿಐ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಕೆಕೆಆರ್ ತಂಡಕ್ಕೆ ಖರೀದಿಯಾಗಿದ್ದ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಪಂದ್ಯಾವಳಿಯಿಂದಲೇ ಹೊರಹಾಕಿತ್ತು. ಬದಲಾಗಿ ಬಿಸಿಸಿಐ ವಿರುದ್ಧ ಹತಾಶೆ ಹೊರಹಾಕಿದ್ದ ಬಿಸಿಬಿ ವಿಶ್ವಕಪ್ ಅನ್ನು ಬಹಿಷ್ಕರಿಸುವ ನಾಟಕ ಮಾಡಿ ಭಾರೀ ನಷ್ಟ ಎದುರಿಸಿತ್ತು. ಇದಲ್ಲದೆ ದೇಶದಲ್ಲಿ ಐಪಿಎಲ್ ಪ್ರಸಾರಕ್ಕೆ ನಿಷೇಧ ಹೇರಿತ್ತು.

ಇದೆಲ್ಲಾ ಚಟುವಟಿಕೆಗಳ ನಂತರ ಭಾರತ ಕ್ರಿಕೆಟ್ ಸಂಸ್ಥೆ ಮುಂದೆ ಕೈಚಾಚಿರುವ ಬಾಂಗ್ಲಾದೇಶ ಕ್ರಿಕೆಟ್ ಎಲ್ಲ ಗೊಂದಲಗಳನ್ನು ಸರಿಪಡಿಸಿಕೊಳ್ಳೋಣ ಎಂಬ ಮನವಿ ಪತ್ರ ಸಲ್ಲಿಸಿದೆ. ದೈನಿಕ್ ಜಾಗರಣ್ ವರದಿಯ ಬಾಂಗ್ಲಾದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಸಿಬಿ ಈ ಕ್ರಮ ಕೈಗೊಂಡಿದೆ. ಮುಖ್ಯವಾಗಿ ಬಾಂಗ್ಲಾದೇಶ ವಿರುದ್ಧದ ಮುಂದೂಡಲಾಗಿದ್ದ ಸರಣಿಯ ಬಗ್ಗೆ ಮರುಪರಿಶೀಲನೆ ಮಾಡಿ, ಆಗಸ್ಟ್‌ನಲ್ಲಿ ಬಾಂಗ್ಲಾ ಪ್ರವಾಸ ಮಾಡಲು ಮನವಿ ಮಾಡಿಕೊಂಡಿದೆ. ಇದಲ್ಲದೆ, ಬಾಂಗ್ಲಾ ಸರ್ಕಾರ ಈ ಹಿಂದೆ ಐಪಿಎಲ್ ಪ್ರಸಾರಕ್ಕೆ ಅನುಮತಿ ನೀಡಿತ್ತು. ಆದಾಗ್ಯೂ ಯಾವುದೇ ಚಾನಲ್‌ಗಳು ಮುಂದೆಬರಲಿಲ್ಲ.

ಭಾರತೀಯರಿಗೆ ಜಯದ ಹುಡುಕಾಟ

ಹೊಸದಿಲ್ಲಿ: ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಭಾರತದ ಆರ್. ಪ್ರಜ್ಞಾನಂದ, ಆರ್. ವೈಶಾಲಿ ಮತ್ತು ದಿವ್ಯ ದೇಶಮುಖ್ ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ನಾಲ್ಕನೇ ಸುತ್ತಿನ ಅಂತ್ಯದ ವೇಳೆಗೆ, ಈ ಮೂವರಲ್ಲಿ ಗೆಲುವು ಸಾಧಿಸಿದ ಏಕೈಕ ಆಟಗಾರ ಪ್ರಜ್ಞಾನಂದ. ಆರಂಭಿಕ ಪಂದ್ಯದಲ್ಲಿ ನೆದರ್ಲೆಂಡ್ಸ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ ವಿರುದ್ಧ ಜಯ ಸಾಧಿಸಿದ್ದರು. ಆದರೆ ಈಗ ಅವರು ಒಟ್ಟಾರೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಮುನ್ನಡೆ ಸಾಧಿಸಿರುವ ಉಜ್ಬೆಕಿಸ್ತಾನದ ಜವೋಖಿರ್ ಸಿಂದಾರೋವ್‌ಗಿಂತ 1.5 ಅಂಕ ಹಿಂದುಳಿದಿದ್ದಾರೆ.

ಮಹಿಳಾ ವಿಭಾಗದಲ್ಲಿ ವೈಶಾಲಿ ನಾಲ್ಕು ಪಂದ್ಯಗಳನ್ನು ಡ್ರಾಗೆ ಮುಕ್ತಾಯಗೊಳಿಸಿದ್ದು, ಸಂಯುಕ್ತ ಮೂರನೇ ಸ್ಥಾನದಲ್ಲಿದ್ದಾರೆ. ಅವರು ಮುನ್ನಡೆಯಲ್ಲಿರುವ ಅನ್ನಾ ಮುಜಿಚುಕ್ ಮತ್ತು ಬಿಬಿಸಾರಾ ಅಸ್ಸೌಬಯೇವಾ ಗಿಂತ ಕೇವಲ 0.5 ಅಂಕ ಹಿಂದಿದ್ದಾರೆ. ಇನ್ನೊಂದೆಡೆ, ಕ್ಯಾಂಡಿಡೇಟ್ಸ್ ಟೂರ್ನಿಗೆ ಮೊದಲ ಬಾರಿಗೆ ಕಾಲಿಟ್ಟ ದಿವ್ಯ ದೇಶಮುಖ್ ಕಠಿಣ ಆರಂಭ ಅನುಭವಿಸಿದ್ದಾರೆ. ಮೊದಲ ಮೂರು ಪಂದ್ಯಗಳಲ್ಲಿ ಡ್ರಾ ಸಾಧಿಸಿದ ಬಳಿಕ ನಾಲ್ಕನೇ ಸುತ್ತಿನಲ್ಲಿ ಝು ಜಿನರ್ ವಿರುದ್ಧ ಸೋಲು ಕಂಡು ಅಂಕಪಟ್ಟಿಯ ತಳಗೆ ಇಳಿದಿದ್ದಾರೆ. ಪ್ರಜ್ಞಾನಂದಗೆ ಉಳಿದ 10 ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳು ಪ್ರಮುಖ ಆಟಗಾರರಾದ ಫ್ಯಾಬಿಯಾನೊ ಕಾರುವಾನಾ ಮತ್ತು ಹಿಕಾರು ನಕಮುರಾ ವಿರುದ್ಧ ಇರುವುದರಿಂದ ಸವಾಲು ಹೆಚ್ಚಿದೆ. ವೈಶಾಲಿಗೆ ಚೀನಾದ ಉನ್ನತ ರ್‍ಯಾಂಕ್ ಆಟಗಾರರಾದ ತಾನ್ ಝೋಂಗ್‌ಇ ಮತ್ತು ಝು ವಿರುದ್ಧ ನಾಲ್ಕು ಪಂದ್ಯಗಳು ಎದುರಿವೆ. ಜೊತೆಗೆ ಒಂಬತ್ತನೇ ಸುತ್ತಿನಲ್ಲಿ ದಿವ್ಯ ದೇಶಮುಖ್ ವಿರುದ್ಧ ಆಡಬೇಕಿರುವುದರಿಂದ ಭಾರತೀಯರ ನಡುವೆಯೇ ಅಂಕ ಹಂಚಿಕೆ ಆಗುವ ಸಾಧ್ಯತೆ ಇದೆ.



ಅಭಿಷೇಕ್‌ಗೆ ನಾಯಕತ್ವ ಸಿಗಬೇಕಿತ್ತು: ಯುವರಾಜ್

ಹೊಸದಿಲ್ಲಿ: ಅಭಿಷೇಕ್ ಶರ್ಮ ತಂಡದಲ್ಲಿದ್ದರೂ ಇಶಾನ್ ಕಿಶನ್ ಅವರನ್ನು ನಾಯಕರನ್ನಾಗಿ ಮಾಡಿರುವ ವಿಚಾರದಲ್ಲಿ ಅಭಿಷೇಕ್ ಶರ್ಮ ಪರ ಬ್ಯಾಟ್ ಬೀಸಿರುವ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ವೈಯಕ್ತಿಕವಾಗಿ ಅವರಿಗೆ ನಿರಾಶೆಯಾಗಿರಬಹುದು ಎಂದಿದ್ದಾರೆ.

ಯುವರಾಜ್, ಇಶಾನ್ ಕಿಶನ್ ಮೇಲೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರೂ, ಒಂದು ಆಟಗಾರನ ದೃಷ್ಟಿಯಿಂದ ಅಭಿಷೇಕ್‌ಗೆ ಇದು ನಿರಾಶೆ ತಂದಿರಬಹುದು ಎಂದರು. ಹಲವು ವರ್ಷಗಳಿಂದ ಫ್ರಾಂಚೈಸಿಗೆ ಸೇವೆ ಸಲ್ಲಿಸಿ, ರಾಜ್ಯ ತಂಡಕ್ಕೂ ನಾಯಕತ್ವ ವಹಿಸಿರುವ ಅಭಿಷೇಕ್‌ಗೆ ಈ ಅವಕಾಶ ಸಿಗದಿದ್ದರೆ ಅದು ಮನೋಭಾವದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು. ಆದರೆ, ಇಶಾನ್ ಮತ್ತು ಅಭಿಷೇಕ್ ನಡುವೆ ಉತ್ತಮ ಸಂಬಂಧವಿರುವುದು ಒಳ್ಳೆಯ ಸಂಗತಿ ಎಂದು ಅವರು ಹೇಳಿದ್ದಾರೆ. ತಮ್ಮದೇ ಅನುಭವವನ್ನು ಉದಾಹರಣೆಯಾಗಿ ನೀಡಿದ ಯುವರಾಜ್, 2007ರಲ್ಲಿ ತಾವು ಉಪನಾಯಕನಾಗಿದ್ದಾಗ ಮಹೇಂದ್ರ ಸಿಂಗ್ ಧೋನಿ ಅಚ್ಚರಿಯಾಗಿ ನಾಯಕನಾಗಿದ್ದನ್ನು ನೆನಪಿಸಿಕೊಂಡರು. ತಮ್ಮ ಜೊತೆಗೆ ಹರ್ಭಜನ್ ಸಿಂಗ್ ಮತ್ತು ವಿರೇಂದ್ರ ಸೇಹ್ವಾಗ್ ಅಂಥವರು ತಂಡದಲ್ಲಿ ಇದ್ದರೂ ಧೋನಿ ಆಯ್ಕೆ ಆಗಿದ್ದು ಅಚ್ಚರಿಯಾಯಿತಾದರೂ, ನಂತರ ಅದು ಭಾರತದ ಪರ ಮಹತ್ವದ ನಿರ್ಧಾರವಾಯಿತು ಎಂದು ಹೇಳಿದರು.

ಹೈದರಾಬಾದ್‌ಗೆ ಮೊದಲ ಗೆಲುವು

ಕೋಲ್ಕತ್ತಾ: ಭರ್ಜರಿ ಬ್ಯಾಟಿಂಗ್ ನಂತರ ಮಾರಕ ಬೌಲಿಂಗ್ ದಾಳಿ ಸಂಘಟಿಸಿದ ಸನ್‌ರೈಸರ್ಸ್ ಹೈದರಾಬಾದ್, ಇಂಡಿಯನ್ ಪ್ರೀಮಿಯರ್ ಲೀಗ್ 19ನೇ ಆವೃತ್ತಿಯಲ್ಲಿ ಮೊದಲನೇ ಗೆಲುವು ಸಾಧಿಸಿದೆ. ಗೆಲುವಿನ ಪ್ರಯತ್ನಗಳನ್ನು ಮಾಡುತ್ತಾ ಆತುರ ಪಟ್ಟು ಕೊನೆಯಲ್ಲಿ ಪರಭವಗೊಂಡಿರುವ ಕೆಕೆಆರ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸತತ ಎರಡನೇ ಸೋಲು ಕಂಡಿದೆ. ಗುರುವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 226 ರನ್ ಗಳಿಸಿತ್ತು. ಅಭಿಷೇಕ್ 48, ಹೆಡ್ 46, ರೆಡ್ಡಿ 39 ಮತ್ತು ಕ್ಲಾಸೆನ್ 52 ರನ್ ಗಳಿಸಿದ್ದರು. ಕೆಕೆಆರ್ ಪರ ಬ್ಲೆಸ್ಸಿಂಗ್ 4 ವಿಕೆಟ್ ಕಿತ್ತರು. ದೊಡ್ಡ ಗುರಿ ಬೆನ್ನತ್ತಿದ ಕೆಕೆಆರ್ ಸ್ಫೋಟಕ ಆರಂಭ ಪಡೆದರೂ ಕೊನೆಯಲ್ಲಿ ಆತುರಕ್ಕೆ ತುತ್ತಾಯಿತು. 16 ಓವರ್ ಬ್ಯಾಟಿಂಗ್ ಮಾಡಿ 161 ರನ್ ಗಳಿಗೆ ಸರ್ವಪತನಗೊಂಡಿತು. ಅಂಗ್ರಿಶ್ 52, ರಿಂಕು 35 ರನ್ ಗಳಿಸಿದರು. ಹೈದರಾಬಾದ್ ಪರ ಉನಾಡ್‌ಕಟ್ 3, ರೆಡ್ಡಿ ಹಾಗೂ ಇಶಾನ್ ಮಾಲಿಂಗ್ ತಲಾ 2 ವಿಕೆಟ್ ಕಿತ್ತರು.

ಸಾಂಘಿಕ ದಾಳಿ: ಹೈದರಾಬಾದ್ ಪಂದ್ಯ ಪೂರ್ತಿ ಸಾಂಘಿಕ ಪ್ರದರ್ಶನವನ್ನೇ ನೀಡಿತು. ಬ್ಯಾಟಿಂಗ್‌ನಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲೂ ಹಾಗೇ ಪ್ರದರ್ಶನ ನೀಡಿತು. ಮೊದಲನೇ ಇನ್ನಿಂಗ್ಸ್‌ನಲ್ಲಿ ಇಶಾನ್ ಕಿಶನ್ ಪಡೆದಿದ್ದ ಆರೆಂಜ್ ಕ್ಯಾಪ್ ಎರಡನೇ ಇನ್ನಿಂಗ್ಸ್ ಮುಕ್ತಾಯಕ್ಕೆ ಅಂಗ್ರಿಶ್ ಪಡೆದುಕೊಂಡರು. ಮೊದಲ ಇನ್ನಿಂಗ್ಸ್‌ನಲ್ಲಿ ಬ್ಲೆಸ್ಸಿಂಗ್ ಪಡೆದಿದ್ದ ಪರ್ಪಲ್ ಕ್ಯಾಪ್ ಅನ್ನು ಜಯದೇವ್ ಉನಾಡ್‌ಕಟ್ ಪಡೆದುಕೊಂಡರು. ಪಂದ್ಯದಲ್ಲಿ 39 ರನ್, 2 ವಿಕೆಟ್ ಕಿತ್ತ ನಿತಿಶ್‌ಕುಮಾರ್ ರೆಡ್ಡಿ ಪಂದ್ಯಶ್ರೇಷ್ಠ ಆಟಗಾರ ಅನ್ನಿಸಿಕೊಂಡರು. ಮುಂದಿನ ಪಂದ್ಯದಲ್ಲಿ ಹೈದರಾಬಾದ್, ಲಖನೌ ತಂಡವನ್ನು ಮತ್ತು ಕೆಕೆಆರ್ ಪಂಜಾಬ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್
- ಹೈದರಾಬಾದ್ 20 ಓವರ್‌ಗಳಲ್ಲಿ 226/8: ಕ್ಲಾಸೆನ್ 52, ಅಭಿಷೇಕ್ 48, ರೆಡ್ಡಿ 39; ಬ್ಲೆಸ್ಸಿಂಗ್ 41/4
- ಕೆಕೆಆರ್ 16 ಓವರ್‌ಗಳಲ್ಲಿ 161/10: ಅಂಗ್ರಿಶ್ 52, ರಿಂಕು 35, ಉನಾಡ್‌ಕಟ್ 21/3, ರೆಡ್ಡಿ 17/2

ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯರ ದರ್ಬಾರ್

ಬಾಕ್ಸಿಂಗ್: ಭಾರತಕ್ಕೆ 3 ಪದಕ ಖಚಿತ






ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ 2026ರಲ್ಲಿ ಭಾರತ ಮೂರು ಪದಕಗಳನ್ನು ಖಚಿತಪಡಿಸಿಕೊಂಡಿದೆ. ನಿಖತ್ ಜರೀನ್, ಪ್ರಿಯಾ ಮತ್ತು ಪ್ರೀತಿ ಪವಾರ್ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಮಹಿಳೆಯರ 51 ಕೆಜಿ ವಿಭಾಗದಲ್ಲಿ ನಿಖತ್ ಜರೀನ್ ಸಂಪೂರ್ಣ ಪ್ರಾಬಲ್ಯ ತೋರಿಸಿ ಫಿಲಿಪೈನ್ಸ್‌ನ ಝಿಯಾನ್ ಬಾಗುಹಿನ್ ವಿರುದ್ಧ ಮೊದಲ ರೌಂಡ್‌ನಲ್ಲೇ ಆರ್‌ಎಸ್‌ಸಿ ಮೂಲಕ ಜಯ ಸಾಧಿಸಿದರು. ಈಗ ಅವರು ಸೆಮಿಫೈನಲ್‌ನಲ್ಲಿ ಪ್ಯಾರಿಸ್ 2024 ಒಲಿಂಪಿಕ್ ಚಿನ್ನದ ಪದಕ ವಿಜೇತೆ ಚೀನಾದ ವು ಯು ವಿರುದ್ಧ ಕಠಿಣ ಸವಾಲನ್ನು ಎದುರಿಸಲಿದ್ದಾರೆ.

ಮಹಿಳೆಯರ 60 ಕೆಜಿ ವಿಭಾಗದಲ್ಲಿ ಪ್ರಿಯಾ ಚೀನಾದ ಚೆಂಗ್ಯು ಯಾಂಗ್ ವಿರುದ್ಧ 4-1 ಅಂತರದಲ್ಲಿ ಗೆದ್ದು ತಮ್ಮ ಉತ್ತಮ ಪ್ರದರ್ಶನ ಮುಂದುವರಿಸಿದರು. ಅವರು ಫೈನಲ್ ಪ್ರವೇಶಕ್ಕಾಗಿ ಮುಂದಿನ ಪಂದ್ಯದಲ್ಲಿ ಮಂಗೋಲಿಯಾದ ನಮೂನ್ ಮೋನ್ಖೋರ್ ವಿರುದ್ಧ ಸೆಣಸಲಿದ್ದಾರೆ. ಮಹಿಳೆಯರ 54 ಕೆಜಿ ವಿಭಾಗದಲ್ಲಿ ಪ್ರೀತಿ ಪವಾರ್ ಅತ್ಯುತ್ತಮ ಆಟ ಪ್ರದರ್ಶಿಸಿ ಮಂಗೋಲಿಯಾದ ಮುಂಗುಂಟ್ಸೆಟ್ಸೆಗ್ ವಿರುದ್ಧ 5-0 ಅಂತರದಲ್ಲಿ ಏಕಪಕ್ಷೀಯ ಜಯ ಸಾಧಿಸಿದರು. ಸೆಮಿಫೈನಲ್‌ನಲ್ಲಿ ಅವರು ಕೊರಿಯಾದ ಇಮ್ ಏಜಿ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಇನ್ನೊಂದೆಡೆ, ಪುರುಷರ 70 ಕೆಜಿ ವಿಭಾಗದಲ್ಲಿ ದೀಪಕ್ ಕ್ವಾರ್ಟರ್ ಫೈನಲ್‌ನಲ್ಲಿ ಜೋರ್ಡನ್‌ನ ಜೆಯಾದ್ ಈಶಾಶ್ ವಿರುದ್ಧ 1-4 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಂದರು. ಒಟ್ಟಿನಲ್ಲಿ, ಭಾರತೀಯ ಬಾಕ್ಸರ್‌ಗಳು ಉತ್ತಮ ಪ್ರದರ್ಶನ ನೀಡಿದ್ದು, ಪದಕಗಳ ಭರವಸೆ ಮೂಡಿಸಿದ್ದಾರೆ.

ಪದಬಂಧ 5943

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಚಿತ್ತಾರವಿರುವ ಚಿನ್ನದ ಗುಂಡಿಗಳಿರುವ ಸರ (5)
5.ಪ್ರೀತಿಪಾತ್ರರ ಅಗಲಿಕೆಯ ನೋವು (3)
6.ವಸ್ತು-ಸೇವೆಯನ್ನು ಕ್ರಯಕ್ಕೆ ತೆಗೆದುಕೊಳ್ಳುವುದು (3)
7.ಮನದಾಳದಲ್ಲಿರುವ ವಿಚಾರ (4)
8.ಅನುಭವವನ್ನು ಪಡೆ ಎಂಬರ್ಥದ ನುಡಿಗಟ್ಟು (4)
10.ವೇದ ನಡುವೆ ಇರುವ ಆರಿಕೆ (4)
12.ಮನೆಯ ಜನ ಕುಳಿತದ್ದು ಈ ನೂಲುಗಂಬಳಿಯ ಮೇಲೆ (4)
14. ಜಾಳು ಜಾಳಾದ ಬಟ್ಟೆಯಿಲ್ಲಿ ತಿರುಗಿದೆ (3)
15. ತವಕದಿಂದ ಹೊರಟದ್ದು ಈ ಕೆರೆಯಡೆಗೆ (3)
17. ಇದು ಶತ್ರುಗಳ ಕಾದಾಟ (5)

ಮೇಲಿನಿಂದ ಕೆಳಕ್ಕೆ
1.ಕೂವ ಸರಳಭಾಷೆಯಲ್ಲಿ (2)
2.ಮನೋಹರವಾದ ರೂಪವುಳ್ಳವನು (4)
3.ಬೆಟ್ಟದ ಹುಡುಗಿ ತಲೆಕೆಳಗಾಗಿದ್ದಾಳೆ (4)
4.ಕಾವು-ತಳಮಳ ಎಂಬರ್ಥದ ಶಬ್ದ (2)
7.ವಿಶ್ರಾಂತಿ-ಸ್ವಸ್ಥತೆಯಿಲ್ಲಿ ತಲೆಕೆಳಗಾಗಿದೆ (3)
9.ಏನೇನೂ ಕಾರಣವಿಲ್ಲದೆ ಎಂಬರ್ಥದ ಶಬ್ದ (3)
11.ರಾಕ್ಷಸರ ವೈರಿ ಈ ವಿಷ್ಣು (4)
13.ನೆನಪಿಟ್ಟು ಮತ ಹಾಕಿದವರ ವಂಶವಿದು (4)
14.ಹೆಜ್ಜೆ ಇಟ್ಟರೆ ಘಲ್ಲೆನ್ನುವ ಕಿರುಗಂಟೆ (2)
16.ಸಹನೆಯುಳ್ಳ ಶ್ರಮಜೀವಿಯಾದ ಸಾಕುಪ್ರಾಣಿ (2)

5942 ಉತ್ತರ

ಎಡದಿಂದ ಬಲಕ್ಕೆ:
2.ಸಮೂಹ
5.ಮೋಟುವಾದ
6.ದಿನಮಣಿ 7.ಸಡಿಲ
8.ಪರದೆ 10.ತಪನೀಯ
12.ನಾಮಾಂಕಿತ
14.ಗಣೇಶ 15.ಕಿಲ್ಲೆದಾರ
16.ಸಹಕಾರ

ಮೇಲಿನಿಂದ ಕೆಳಕ್ಕೆ :
1.ಆಮೋದ 2.ಸದಮಲ
3.ಹದಿಬದೆ 4.ಕಾಣಸು
7.ಸಮೀಪ 9.ಪಟಾಕಿ
10.ತಪರಾಕಿ 11.ಯಶಸ್ಕರ
12.ನಾಗವಾಸ
13.ತರ್ಗದೇರ

ಕಿರುಸುದ್ದಿ

ಅಕ್ರಮ ಮರಳು ಸಾಗಾಟ: ಪರಾರಿಯಾದ ಲಾರಿ ಚಾಲಕ ಸಹಿತ 7 ಮಂದಿ ವಿರುದ್ಧ ಕೇಸು

ಕುಂಬಳೆ: ಇಚ್ಲಂಗೋಡು ಹೊಳೆಯಿಂದ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ವೇಳೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, ಈ ವೇಳೆ ಲಾರಿಯನ್ನು ಬಿಟ್ಟು ಚಾಲಕ ಸಹಿತ ಹಲವರು ಪರಾರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸರು ಲಾರಿ ಚಾಲಕ, ಮರಳು ಸಂಗ್ರಹಿಸಿಟ್ಟಿದ್ದ ಸ್ಥಳದ ಮಾಲಕ, ಮರಳು ಸಂಗ್ರಹಿಸಿಟ್ಟಿದ್ದ ಸ್ಥಳದ ಮಾಲಕ ಹಾಗೂ ಮರಳು ಸಂಗ್ರಹಗಾರರ ಸಹಿತ 7 ಮಂದಿ ವಿರುದ್ಧ ಕೇಸು ದಾಖಲಿಸಿಕೊಂಡಿದ್ದಾರೆ. ಲಾರಿ ಹಾಗೂ ಮರಳು ಸೋಸುವ ಯಂತ್ರವನ್ನು ವಶಕ್ಕೆ ತೆಗೆಯಲಾಗಿದೆ. ಆರೋಪಿಗಳ ವಿರುದ್ಧ ಕಳವು ಪ್ರಕರಣ ದಾಖಲಿಸಿಕೊಂಡಿರುವುದಾಗಿ ಎಸ್‌ಐ ಅನಂತಕೃಷ್ಣನ್ ಆರ್.ಮೆನೋನ್ ತಿಳಿಸಿದ್ದಾರೆ.

ಇಚ್ಲಂಗೋಡು ಹೊಳೆಯಿಂದ ಮರಳು ಸಾಗಾಟ ವ್ಯಾಪಕಗೊಂಡಿರುವುದಾಗಿ ಲಭಿಸಿದ ಮಾಹಿತಿಯಂತೆ ಪೊಲೀಸರು ಅಲ್ಲಿಗೆ ತಲುಪಿದ್ದರು. ಪೊಲೀಸರನ್ನು ಕಂಡು ಲಾರಿ ಚಾಲಕ ಸಹಿತ ಇತರರು ಓಡಿ ಪರಾರಿಯಾಗಿದ್ದಾರೆ

ಕಾಸರಗೋಡು ಜಿಲ್ಲೆಯಲ್ಲಿ ಕಾಳಧನ ಬೇಟೆ ಬಿಗುಗೊಳಿಸಿದ ಪೊಲೀಸರು

ಕಾಸರಗೋಡು: ವಿಧಾನಸಭೆಗೆ ಚುನಾವಣೆ ದಿನಾಂಕ ಘೋಷಿಸಿದ ದಿನದಿಂದಲೇ ಕೇರಳಕ್ಕೆ ಭಾರೀ ಪ್ರಮಾಣದಲ್ಲಿ ಕಾಳಧನ ಹರಿದು ಬರುವ ಸಾಧ್ಯತೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಗಡಿ ಪ್ರದೇಶಗಳಲ್ಲೂ ಕಾಳಧನ ಭೇಟೆ ಕಾರ್ಯಾಚರಣೆಯನ್ನು ಪೊಲೀಸರು ಇನ್ನಷ್ಟು ಬಿಗಿಗೊಳಿಸಿದ್ದಾರೆ. ವಿಶೇಷವಾಗಿ ಕರ್ನಾಟಕ ಮತ್ತು ತಮಿಳುನಾಡು ಅಂತಾರಾಜ್ಯ ಗಡಿ ಪ್ರದೇಶಗಳ ತಪಾಸಣೆ ಕೇಂದ್ರಗಳಲ್ಲಿ ಪೊಲೀಸರು ಅತೀ ಹೆಚ್ಚಿನ ನಿಗಾ ಇರಿಸಿದ್ದಾರೆ. ಇಂತಹ ತಪಾಸಣಾ ಕೇಂದ್ರಗಳ ಮೂಲಕ ಕೇರಳಕ್ಕೆ ಪ್ರವೇಶಿಸುವ ಎಲ್ಲಾ ವಾಹನಗಳನ್ನು ಬಿಗು ತಪಾಸಣೆಗೊಳಪಡಿಸಲಾಗುತ್ತಿದೆ. ರಾಜ್ಯದಲ್ಲಿ 69 ಅಂತಾರಾಜ್ಯ ತಪಾಸಣಾ ಕೇಂದ್ರಗಳಿದ್ದು ಇವುಗಳಲ್ಲಿ ದೈನಂದಿನ 24 ತಾಸುಗಳ ತನಕವೂ ಎಲ್ಲಾ ವಾಹನಗಳನ್ನು ತೀವ್ರ ತಪಾಸಣೆಗೊಳಪಡಿಸಲಾಗುತ್ತಿದೆ. ಮಾತ್ರವಲ್ಲದೆ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಕಾಳಧನ ವ್ಯವಹಾರವನ್ನು ಪತ್ತೆಹಚ್ಚುವ ಕಾರ್ಯಾಚರಣೆಗಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ತಲಾ ಆರು ಮಂದಿ ಒಳಗೊಂಡಿರುವ ತಲಾ ಮೂರರಂತೆ ಫ್ಲೈಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿದೆ. ಮಾತ್ರವಲ್ಲ ಸ್ಟಾಟಿಸ್ಟಿಕ್ ಸ್ಕಾಡ್‌ಗಳನ್ನು ನಿಯೋಜಿಸಲಾಗಿದೆ. ಈ ಸ್ಕ್ಯಾಡ್‌ಗಳ ಹೊರತಾಗಿ ಪೊಲೀಸರ ತಂಡಗಳೂ ಕಾರ್ಯವೆಸಗುತ್ತಿದೆ. ಇದರ ಹೊರತಾಗಿ ಕೇಂದ್ರೀಯ ತಂಡಗಳೂ ಇನ್ನೊಂದೆಡೆ ಕಾರ್ಯವೆಸಗುತ್ತಿವೆ.

ಜಪ್ಪಿನಮೊಗರು, ಉಳ್ಳಾಲ, ತೊಕ್ಕೊಟ್ಟು, ದೇರಳಕಟ್ಟೆ, ಪಡೀಲ್...

ಶ್ಶೀಶ್ಶೀ ಎಲ್ಲೆಡೆ ತ್ಯಾಜ್ಯ ರಾಶಿ

ಮಂಗಳೂರು: ಮಂಗಳೂರು, ಜಪ್ಪಿನಮೊಗರು, ಉಳ್ಳಾಲ, ತೊಕ್ಕೊಟ್ಟು, ದೇರಳಕಟ್ಟೆ, ಪಡೀಲ್, ಫರಂಗಿಪೇಟೆ, ಸುರತ್ಕಲ್, ಮುಕ್ಕ... ಹೀಗೆ ನೀವು ಯಾವ ರಸ್ತೆಯಲ್ಲಿ ಬೇಕಾದರೂ ಹೋಗಿ, ರಸ್ತೆಯ ಇಕ್ಕೆಲಗಳಲ್ಲಿ ನಿಮ್ಮನ್ನು ಸ್ವಾಗತಿಸುವುದು ರಾಶಿ ರಾಶಿ ತ್ಯಾಜ್ಯ ರಾಶಿ!.

ಸ್ವಚ್ಛತೆಯ ಬಗೆಗಿನ ಸಾರ್ವಜನಿಕರ ನಿರ್ಲಕ್ಷ್ಯ, ಪಾಲಿಕೆ, ಪುರಸಭೆ, ನಗರ ಸಭೆ, ಪಂಚಾಯತ್ ಅಧಿಕಾರಿಗಳ ದಿವ್ಯ ಮೌನದಿಂದಾಗಿ ಇದು ದಿನೇ ದಿನೇ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ವಿದ್ಯಾವಂತರೇ ಹೆಚ್ಚಾಗಿ ಸ್ವಚ್ಛತೆಯ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದು ಕಂಡುಬರುತ್ತಿದೆ.

ನಗರಕ್ಕೆ ಬರುವವರಿಗೆ ತ್ಯಾಜ್ಯದ ಸ್ವಾಗತ

ಮಂಗಳೂರಿಗೆ ಬರುವವರನ್ನು ಸ್ವಾಗತಿಸಲೆಂಬಂತೆ ಎಲ್ಲೆಂದರಲ್ಲಿ ತ್ಯಾಜ್ಯ ರಾಶಿ ಕಂಡುಬರುತ್ತಿದೆ. ರೈಲ್ವೇ ನಿಲ್ದಾಣ, ಬಸ್ ನಿಲ್ದಾಣ ಎಲ್ಲೆಡೆ ತ್ಯಾಜ್ಯದ್ದೇ ಸಮಸ್ಯೆ. ಮಂಗಳೂರು ನಗರದ ಉರ್ವ, ಮಣ್ಣಗುಡ್ಡೆ ಸೇರಿದಂತೆ ಕೆಲವೆಡೆ ವರ್ಷದ ಹಿಂದೆ ಸಿಸಿ ಕ್ಯಾಮೆರಾ ಅಳವಡಿಸಿ ಪಾಲಿಕೆ ಕಸ ಸುರಿಯುವವರ ವಿರುದ್ಧ ಕ್ರಮಕ್ಕೆ ಮುಂದಾಗಿತ್ತು. ಆದರೆ ಜನತೆ ಮಾತ್ರ ಸಿಸಿ ಕ್ಯಾಮೆರಾಗಳಿಗೂ ಬಗ್ಗಿಲ್ಲ. ಅಧಿಕಾರಿಗಳೂ ಕ್ರಮ ಕೈಗೊಳ್ಳುವ ಗೋಜಿಗೆ ಹೋಗಿರಲಿಲ್ಲ. ಕ್ಯಾಮೆರಾದ ಅಡಿಯಲ್ಲೇ ರಾಶಿ ರಾಶಿ ತ್ಯಾಜ್ಯ ಸುರಿದು ಹೋಗುವುದು ಮುಂದುವರಿದಿತ್ತು. ಇದೀಗ ನಗರವನ್ನು ತ್ಯಾಜ್ಯ ಆವರಿಸಿದ್ದು, ಹೋಟೆಲ್, ಅಂಗಡಿಮುಂಗಟ್ಟುಗಳ ಮುಂಭಾಗದಲ್ಲೂ ತ್ಯಾಜ್ಯ ಸುರಿಯಲಾಗುತ್ತಿದೆ.

ಪಾಲಿಕೆಯಿಂದಲೂ ಕ್ರಮವಿಲ್ಲ

ಮೊದಲೇ ಪಾಲಿಕೆಯಲ್ಲಿ ಯಾವೊಂದು ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಅಧಿಕಾರಿಗಳಿದ್ದರೂ ಹೆಸರಿಗಷ್ಟೇ ಎಂಬ ಮಾತುಗಳು ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿವೆ. ಇದು ನಿಜವೂ ಹೌದು, ಏಕೆಂದರೆ ಸಾರಾ ಸಗಟಾಗಿ ನಿಯಮಗಳನ್ನು ಉಲ್ಲಂಘಿಸುತ್ತಿದ್ದರೂ ಪಾಲಿಕೆ ಅಧಿಕಾರಿಗಳು ಮಾತ್ರ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ.

ವಿವಿ ರಸ್ತೆಯ ಇಕ್ಕೆಲಗಳಲ್ಲೂ ತ್ಯಾಜ್ಯ

ಇನ್ನು, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ತೆರಳುವ ರಸ್ತೆಯುದ್ದಕ್ಕೂ ಅಲ್ಲಲ್ಲಿ ತಾಜ್ಯ ರಾಶಿ ಮುಂದುವರಿದಿದೆ. ತೊಕ್ಕೊಟ್ಟಿನಿಂದ ಕೊಣಾಜೆವರೆಗೂ ರಸ್ತೆಯ ಎರಡೂ ಕಡೆಗಳಲ್ಲಿ ಕಸವನ್ನು ತಂದು ಸುರಿಯಲಾಗುತ್ತಿದೆ. ಬೆಳಗ್ಗಿನ ವೇಳೆ ವಾಹನಗಳಲ್ಲಿ ಬರುವಾಗಲೇ ಮನೆಯಿಂದ ಕಸ ಹೊತ್ತು ತರುವ ಮಂದಿ ರಸ್ತೆ ಬದಿ ಎಸೆದು ಹೋಗುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಆಡಳಿತಕೂಡ ದಿವ್ಯ ನಿರ್ಲಕ್ಷ್ಯ ವಹಿಸಿರುವುದರಿಂದ ಇದು ಮುಂದುವರಿಯುತ್ತಲೇ ಇದೆ.



ಎಫ್‌ಐಆರ್ ದಾಖಲಿಸ್ತಾರಂತೆ



ಎಲ್ಲೆಡೆ ತ್ಯಾಜ್ಯ ರಾಶಿ ಕಂಡು ಬರುತ್ತಿರುವುದರಿಂದ ಜಿಲ್ಲಾ ಪಂಚಾಯತ್ ನಿದ್ದೆಯಿಂದ ಎಚ್ಚೆತ್ತುಕೊಂಡಂತೆ ಕಾಣುತ್ತಿದೆ. ಸದ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಅವರು ಕಸ ಎಸೆಯುವವರ ವಿರುದ್ಧ ದಂಡ ವಿಧಿಸುವುದು ಮತ್ತು ಕೇಸು ದಾಖಲಿಸುವ ಮೂಲಕ ಎಚ್ಚರಿಕೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ರಸ್ತೆ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ತ್ಯಾಜ್ಯ ಎಸೆಯುವ ಮತ್ತು ಸುಡುವ ಪ್ರಕರಣಗಳನ್ನು ಗುರುತಿಸಿ ದಂಡ ವಿಧಿಸಬೇಕು. ದಂಡ ಪಾವತಿಸದೇ ಇದ್ದಲ್ಲಿ ಸ್ಥಳೀಯ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲು ಅವರು ಅಧಿಕಾರಿಗಳಿಗಾಗಿ ನಡೆದ ವೀಡಿಯೋ ಕಾನ್ಫರೆನ್ಸ್‌ನಲ್ಲಿ ಸೂಚನೆ ನೀಡಿದ್ದಾರೆ. ಆದರೆ ಇದು ಯಾವಾಗ ಜಾರಿಯಾಗುವುದೋ ಕಾದು ನೋಡಬೇಕು.

ಸ್ವಚ್ಛ ಶನಿವಾರ ಕಾರ್ಯಕ್ರಮ

ಪ್ರತೀ ತಿಂಗಳು 1 ನೇ ಮತ್ತು 3ನೇ ಶನಿವಾರದಂದು ಆಯೋಜಿಸುವ 'ಸ್ವಚ್ಛ ಶನಿವಾರ' ಸ್ವಚ್ಛತಾ ಕಾರ್ಯದಂದು ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯ ಎಲ್ಲಾ ರಸ್ತೆ ಇಕ್ಕೆಲಗಳನ್ನು ಸ್ವಚ್ಛಗೊಳಿಸಬೇಕು. ಸ್ವಚ್ಛ ಸಂಕೀರ್ಣ ಹೊಂದಿರದ 63 ಗ್ರಾಮ ಪಂಚಾಯತ್‌ಗಳಲ್ಲಿ ಘಟಕ ನಿರ್ಮಾಣದ ಬಗ್ಗೆ ತಾಲೂಕು ಪಂಚಾಯತ್ ಅನಿರ್ಬಂಧಿತ ನಿಧಿ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿ ಕನಿಷ್ಠ 1000 ಚದರ ಅಡಿ ವಿಸ್ತೀರ್ಣದ ಘಟಕ ನಿರ್ಮಾಣಕ್ಕೆ ಕ್ರಿಯಾಯೋಜನೆ ತಯಾರಿಸುವಂತೆ ಸಿಇಒ ಸೂಚನೆ ನೀಡಿದ್ದಾರೆ.

ರಸ್ತೆಗೇ ನೇರ ನೀರು

ನಗರದ ಕೆಎಸ್‌ಆರ್‌ಟಿಸಿ ಕಡೆಯಿಂದ ಬಿಜೈ ಕಡೆಗೆ ಸಾಗುವ ರಸ್ತೆಯಲ್ಲಿ ಕಟ್ಟಡವೊಂದರ ನೀರನ್ನು ನೇರವಾಗಿ ಪೈಪ್ ಮೂಲಕ ರಸ್ತೆಗೆ ಬಿಡಲಾಗುತ್ತದೆ. ಪಾದಚಾರಿಗಳಿಗೆ ನೀರೆರಚಿಕೊಂಡು ವಾಹನಗಳು ಇದರ ನಡುವೆಯೇ ಸಾಗುತ್ತವೆ. ಪಾಲಿಕೆ ಅಧಿಕಾರಿಗಳು ನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಾರೆ. ಆದರೆ ಕ್ರಮ ಕೈಗೊಳ್ಳುವ ಗೋಜಿಗೆ ಮಾತ್ರ ಅವರು ಹೋಗುವುದಿಲ್ಲ.

ಎಡರಂಗ ಫ್ಲೆಕ್ಸ್ ನಾಶ ಪ್ರಕರಣ: ಐದು ಮಂದಿ ಆರೋಪಿಗಳ ಸೆರೆ

ಕಾಸರಗೋಡು: ಪೊಯಿನಾಚಿ ಮೈಲಾಟಿಯ ರಾಷ್ಟ್ರೀಯ ಹೆದ್ದಾರಿ ಬದಿ ಖಾಸಗಿ ಹಿತ್ತಿಲಲ್ಲಿ ಎಡರಂಗದ ರಾಜ್ಯ ಸಮಿತಿ ಸ್ಥಾಪಿಸಿದ ಬೃಹತ್ ಫ್ಲೆಕ್ಸ್ ಬೋರ್ಡ್‌ನ್ನು ನಾಶಪಡಿಸಿದ ಪ್ರಕರಣದಲ್ಲಿ ಅಪ್ರಾಪ್ತ ಸೇರಿ ಐದು ಮಂದಿಯನ್ನು ಬೇಕಲ ಪೊಲೀಸರು ಬಂಧಿಸಿದ್ದಾರೆ. ಪನೆಯಾಲ್ ಚೌಕಿ ಪೊನ್ನಂಬಾರ ನಿವಾಸಿ ಗುರುಪ್ರಸಾದ್ (28), ಚೌಕಿಯ ಹರ್ಷಿತ್ (24), ಮಿಥುನ್‌ರಾಜ್ (25), ಗುರುವಯ್ಯ (25), ಪೃಥ್ವಿರಾಜ್ (22) ಹಾಗೂ ಹದಿನೇಳರ ಹರೆಯದ ಅಪ್ರಾಪ್ತ ಬಂಧಿತರು.

ಒಂದು ವಾರದ ಹಿಂದೆ ಘಟನೆ ನಡೆದಿದೆ. ಸಿಪಿಎಂ ಪನೆಯಾಲ್ ಲೋಕಲ್ ಕಾರ್ಯದರ್ಶಿ ಒ.ನಾರಾಯಣನ್ ನೀಡಿದ ದೂರಿನಂತೆ ಕೇಸು ದಾಖಲಿಸಲಾಗಿದೆ. ಒಮ್ಮೆ ಸ್ಥಾಪಿಸಿದ ಫ್ಲೆಕ್ಸ್ ನಾಶಪಡಿಸಿದ ಹಿನ್ನೆಲೆಯಲ್ಲಿ ಮತ್ತೊಂದು ಫ್ಲೆಕ್ಸ್ ಬೋರ್ಡ್ ಸ್ಥಾಪಿಸಲಾಯಿತ್ತಾದರೂ ಅದನ್ನು ಕೂಡಾ ನಾಶಪಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

ಜೀಪು ಹಿಂದಕ್ಕೆ ಚಲಿಸಿ ಓರ್ವ ಕಾರ್ಮಿಕ ಮೃತ್ಯು

ಕಾಸರಗೋಡು: ಕೊಳವೆ ಬಾವಿ ತೋಡಲು ಪೈಪ್ ಇಳಿಸುತ್ತಿದ್ದ ಜೀಪು ಹಿಂದಕ್ಕೆ ಸಾಗಿ ಓರ್ವ ಕಾರ್ಮಿಕ ಮೃತಪಟ್ಟ ಘಟನೆ ನಡೆದಿದೆ. ತಮಿಳುನಾಡಿನ ನಾಮಕ್ಕಲ್ ಸೀತಾರಾಮ ಪಾಳಯಂ ಮಾಂಕುಟ್ಟಿ ಪಾಳಯದ ರಾಜಗೋಪಾಲನ್ ಎಂಬವರ ಪುತ್ರ ಮುರಳಿ ರಾಜಗೋಪಾಲ್ (40) ಮೃತಪಟ್ಟವರು. ಗುರುವಾರ ರಾತ್ರಿ 11 ಗಂಟೆಯ ವೇಳೆ ಚಿತ್ತಾರಿಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಮಣಾಟಿಕಲವಲ ಎಂಬಲ್ಲಿ ದುರ್ಘಟನೆ ಸಂಭವಿಸಿದೆ. ಕೊಳವೆ ಬಾವಿ ತೋಡಲಿರುವ ಪೈಪ್‌ಗಳನ್ನು ಜೀಪಿನಲ್ಲಿ ಸ್ಥಳಕ್ಕೆ ತಲುಪಿಸಲಾಗಿತ್ತು. ಇಳಿಜಾರು ಸ್ಥಳದಲ್ಲಿ ಜೀಪು ನಿಲ್ಲಿಸಿ ಪೈಪ್‌ಗಳನ್ನು ಇಳಿಸುತ್ತಿದ್ದ ವೇಳೆ ಹಿಂದಕ್ಕೆ ಚಲಿಸಿದ ಜೀಪು ಮುರಳಿ ರಾಜಗೋಪಾಲ್‌ರ ದೇಹದ ಮೇಲೆ ಚಲಿಸಿದೆ. ಇದರಿಂದ ಗಂಭೀರ ಗಾಯಗೊಂಡ ಅವರನ್ನು ಕಾಸರಗೋಡಿನ ಖಾಸಗಿ ಆಸ್ಪತ್ರೆಗೆ ತಲುಪಿಸಿದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಚಿತ್ತಾರಿಕಲ್ ಪೊಲೀಸರು ಕೇಸು ದಾಖಲಿಸಿದ್ದಾರೆ.

ಕುಸಿದು ಬಿದ್ದು ಸಾವು

ಕುಂದಾಪುರ: ಬಸ್ರೂರು ಮಹಾಲಿಂಗೇಶ್ವರ ಜಾತ್ರೆಗೆ ಹೋಗಲು ಮನೆಯಿಂದ ನಡೆದುಕೊಂಡು ಬರುತ್ತಿದ್ದ ಬಸ್ರೂರು ಮಾರ್ಗೋಳಿ ನಿವಾಸಿ ವಿನಯ ಶೆಟ್ಟಿ (55) ಎಂಬವರು ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಮನೆಯಿಂದ ನಡೆದುಕೊಂಡು ಬರುತ್ತಿರುವಾಗ ಕುಸಿದು ಬಿದ್ದ ವಿನಯ ಶೆಟ್ಟಿ ಅವರನ್ನು ತಂಗಿ ಸಾಕು ಶೆಟ್ಟಿ ಉಪಚರಿಸಿ ಚಿಕಿತ್ಸೆಗಾಗಿ ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಪರೀಕ್ಷಿಸಿದ ವೈದ್ಯರು ವಿನಯ ಅವರು ಅದಾಗಲೇ ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಕೇರಳ ವಿಧಾನಸಭಾ ಚುನಾವಣಾ ಅಖಾಡ ರಂಗೇರುತ್ತಿದ್ದು, ಕಾಸರಗೋಡಿಗೆ ಶುಕ್ರವಾರ ಕೇಂದ್ರ ಸಚಿವ ಸುರೇಶ್‌ಗೋಪಿ ಭೇಟಿ ಕಾರ್ಯಕರ್ತರ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ದಿನಪೂರ್ತಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡ ಅವರು ಮುಳ್ಳೇರಿಯ ಮತ್ತು ಕಾಸರಗೋಡು ಕಸಬಾ ಕಡಪ್ಪುರ ಮೊದಲಾದೆಡೆ ಎನ್‌ಡಿಎ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಿ, ಅಭ್ಯರ್ಥಿ ಎಂ.ಎಲ್. ಅಶ್ವಿನಿ ಪರ ಮತಯಾಚನೆ ನಡೆಸಿದರು.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
33⁰ 25⁰	32⁰ 26⁰

ಸುತ್ತಮುತ್ತ

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಅಧಿಕ ಸಂಖ್ಯೆಯ ಭಕ್ತರು

ಸುಬ್ರಹ್ಮಣ್ಯ: ಶುಕ್ರವಾರ ಸರಕಾರಿ ರಜಾ ಹಿನ್ನೆಲೆಯಲ್ಲಿ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿವಿಧ ಊರುಗಳಿಂದ ಮತ್ತು ಹೊರ ರಾಜ್ಯಗಳಿಂದ ಅಧಿಕ ಸಂಖ್ಯೆಯ ಭಕ್ತರು ಭೇಟಿ ನೀಡಿ ಶ್ರೀ ದೇವರ ದರುಶನ ಮಾಡಿ ಸೇವಾಧಿಗಳನ್ನು ನೆರವೇರಿಸಿದರು. ಭಕ್ತರು ಆಶ್ಲೇಷ ಬಲಿ, ನಾಗ ಪ್ರತಿಷ್ಠೆ, ಮಹಾಪೂಜೆ ಮತ್ತು ಇನ್ನಿತರ ಸೇವೆಗಳನ್ನು ನೆರವೇರಿಸಿದರು.

ದ.ಕ.ದಲ್ಲಿ ಮುಂದುವರಿದ ಆಟೋ ಎಲ್ಪಿಜಿ ಅಭಾವ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಟೋ ಎಲ್‌ಪಿಜಿ ಪೂರೈಕೆ ವ್ಯತ್ಯಯ ಶುಕ್ರವಾರವೂ ಮುಂದುವರಿದಿದ್ದು, ಆಟೋ ಚಾಲಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಇದೀಗ ಪೆಟ್ರೋಲ್ ಬಳಸಿ ಆಟೋ ಓಡಿಸಬೇಕಾದ ಅನಿವಾರ್ಯ ಎದುರಾಗಿದೆ.

ಕರಾವಳಿ ಮೇಲೆ ಉರಿ ಸರ್ಜಿಕಲ್ ಸ್ಟ್ರೈಕ್
ನೆತ್ತಿಗೆ ಕೆಂಡದ ಮಳೆ!
ಬತ್ತುತ್ತಿದೆ ಜೀವಜಲ | ಆತಂಕದಲ್ಲಿದೆ ನೆಲ

- 40 ಡಿಗ್ರಿ ಸೆಲ್ಸಿಯೆಸ್ ಕಡೆಗೆ ದಾಪುಗಾಲು
- ಅಸಾಧ್ಯ ಸೆಕೆಗೆ ಹೈರಾಣಾದ ಜನತೆ
- ಈಗ ಆರೋಗ್ಯದ ಮೇಲೂ ಪರಿಣಾಮ
- ಭರ್ಜರಿ ಮಳೆಯ ನಿರೀಕ್ಷೆಯಲ್ಲಿ ಜನ

ಮಂಗಳೂರು: ಕರಾವಳಿಯಲ್ಲೀಗ ನೆತ್ತಿ ಸುಡುವ ಬಿಸಿಲು ಜೀವ ಸಂಕುಲವನ್ನು ಅಕ್ಷರಶಃ ಹೈರಾಣಾಗಿಸುತ್ತಿದೆ.

ಕಳೆದ ಒಂದು ವಾರದಿಂದ ಸತತವಾಗಿ ಉಷ್ಣಾಂಶದಲ್ಲಿ ಏರಿಕೆ ಕಾಣುತ್ತಿದ್ದು, ನದಿ, ತೊರೆ ಬಾವಿಗಳ ಜೀವಜಲ ಮಟ್ಟ ಪಾತಾಳದತ್ತ ಇಳಿಕೆ ಕಾಣುತ್ತಿದೆ. ಜೊತೆಗೆ ಇದು ಆರೋಗ್ಯದ ಮೇಲೂ ಪರಿಣಾಮ ಉಂಟುಮಾಡುತ್ತಿದೆ.



ಬೆಳಗ್ಗಿನಿಂದ ಸಂಜೆಯವರೆಗೂ...

ಜಿಲ್ಲೆಯಲ್ಲಿ ಬೆಳಗ್ಗೆ 8– 9 ಗಂಟೆಯ ಸುಮಾರಿಗೆಆರಂಭವಾಗುವ'ಉರಿ'ಸಂಜೆ ಮೂರು ಗಂಟೆಯ ತನಕವೂ ಕಾಡುತ್ತಿದೆ. ಉರಿ ಬಿಸಿಲಿನಿಂದ ಬಚಾವಾಗಲು ಜನತೆ ತಂಪು ಪಾನೀಯಗಳ ಮೊರೆ ಹೋಗುತ್ತಿರುವುದು ಸಾಮಾನ್ಯವಾಗಿದೆ. ಅತಿಯಾದ ಉಷ್ಣಾಂಶ ಆರೋಗ್ಯದ ಮೇಲೂ ಪರಿಣಾಮ ಬೀರುವುದರಿಂದ ಜನತೆ ಮುಂಜಾಗೃತಾ ಕ್ರಮಗಳನ್ನು ತೆಗೆದುಕೊಳ್ಳುವುದು ಉತ್ತಮ ಎಂದು ಜಿಲ್ಲಾ ಆರೋಗ್ಯ ಇಲಾಖೆ ತಿಳಿಸಿದೆ.

ಉಡುಪಿನ ಮೇಲೆ ನಿಗಾ ಇರಲಿ

ಬಿಸಿಲ ಬೇಗೆ ಹೆಚ್ಚು ಇದೆ. ಹೀಗಾಗಿ ಜನತೆ ಸಡಿಲ ಉಡುಪಿಗೆ ಆದ್ಯತೆ ನೀಡಬೇಕು. ಸಾಕಷ್ಟು ನೀರು ಕುಡಿ ಯಬೇಕು. ಕಾರ್ಬೋನೇಟೆಡ್ ಪಾನೀಯ ಗಳಿಂದ ದೂರವಿರಬೇಕು ಇದರಿಂದ ಆರೋಗ್ಯ ಸಹಜ ಸ್ಥಿತಿಯಲ್ಲಿ ಕಾಯ್ದುಕೊಳ್ಳಲು ಸಾಧ್ಯ ಎನ್ನುತ್ತಾರೆ ವೈದ್ಯರು.

ಶರಬತ್ತು , ಎಳನೀರು, ಜ್ಯೂಸ್

ಈ ಹವೆಗೆ ಆದಷ್ಟು ದೇಹ ತಂಪಾಗಿ ಇರಿಸಲು ಪ್ರಯತ್ನಿಸಬೇಕು.

ಲಿಂಬೆ ಶರಬತ್ತು, ಎಳನೀರು, ಕಲ್ಲಂಗಡಿ ಹಣ್ಣು ಸೇರಿದಂತೆ ತಾಜಾ ಹಣ್ಣುಗಳ ಸೇವನೆ, ಪುನರ್ಪುಳಿ ಶರಬತ್ತು ಇತ್ಯಾದಿ ಗಳನ್ನು ಸೇವಿಸುವುದರಿಂದ ಆರೋಗ್ಯ ಸಹಜ ಸ್ಥಿತಿಯಲ್ಲಿರುತ್ತದೆ ಎಂದು ವೈದ್ಯರು ನಾಗರಿಕರಿಗೆ ಸಲಹೆ ನೀಡಿದ್ದಾರೆ.

ಎಳನೀರಿಗೆ ಈಗ ಎಲ್ಲಿಲ್ಲದ ಡಿಮ್ಯಾಂಡ್!

ಎಳನೀರಿಗೆ ಭಾರೀ ಬೇಡಿಕೆ ಕಂಡುಬರುತ್ತಿದೆ. ನಗರದ ರಸ್ತೆಯುದ್ದಕ್ಕೂ ಅಲ್ಲಲ್ಲಿ ಎಳನೀರಿನ ರಾಶಿ ಕಂಡುಬರುತ್ತಿದ್ದು, ದಾಹ ತಣಿಸಲು ಎಳನೀರ ಮೊರೆ ಹೋಗುತ್ತಿರುವುದು ಸಾಮಾನ್ಯವಾಗಿದೆ.

ಕೇರಳ ವಿಧಾನಸಭಾ ಚುನಾವಣೆ
ಎಲೆಕ್ಷನ್ ಖರ್ಚಿಗೆ ಹಣವೇ ಬಂದಿಲ್ಲ!
ಸಂಕಷ್ಟದಲ್ಲಿ ಅಧಿಕಾರಿಗಳು

ಪ್ರಾತಿನಿಧಿಕ ಚಿತ್ರ



ಕಾಸರಗೋಡು: ವಿಧಾನಸಭಾ ಚುನಾವಣಾ ಕೆಲಸಗಳಿಗೆ ಮುಂಗಡ ಹಣ, ಅಗತ್ಯದ ವಾಹನ ಪೂರೈಸದೇ ಇರುವ ಹಿನ್ನೆಲೆಯಲ್ಲಿ ಸೆಕ್ಟರ್ ಅಧಿಕಾರಿಗಳು ಸಂಕಷ್ಟ ಎದುರಿಸಬೇಕಾಗಿದೆ.

ಕೆಲವೆಡೆಗಳಲ್ಲಿ ಮಂಜೂರಾಗಿದ್ದರೂ, ಇಲ್ಲಿನ ಕಾಸರಗೋಡು, ಕಣ್ಣೂರು, ಮಲಪ್ಪುರಂ ಸಹಿತ ಹೆಚ್ಚಿನ ಕಡೆ ಮಂಜೂರು ಮಾಡಲಾಗಿಲ್ಲ.

ಕೆಲವೇ ದಿನ ಮಾತ್ರ ಬಾಕಿ

ಚುನಾವಣೆಗೆ ಕೆಲವೇ ದಿನಗಳು ಮಾತ್ರವೇ ಬಾಕಿ ಉಳಿದಿದೆ. ಮತಗಟ್ಟೆಗಳಲ್ಲಿ ರ‍್ಯಾಂಪ್ ಅಳವಡಿಕೆ, ಚಪ್ಪರ ನಿರ್ಮಾಣ, ವಿದ್ಯುತ್, ಬೆಳಕು, ಕುಡಿಯುವ ನೀರಿನ ವ್ಯವಸ್ಥೆ, ಪೊಲೀಸರೊಂದಿಗೆ ಸೇರಿ ಮ್ಯಾಪಿಂಗ್ ತಯಾರಿಸುವ ಹೊಣೆಗಾರಿಕೆ ಈ ಸೆಕ್ಟರ್ ಅಧಿಕಾರಿಗಳಿಗಿದೆ. ಇದಲ್ಲದೆ ಚುನಾವಣೆಯ ಮೊದಲ 7 ದಿನಗಳ ತನಕ ಸ್ಪೆಷಲ್ ಎಕ್ಸಿಕ್ಯೂಟಿವ್ ಮೆಜಿಸ್ಟ್ರೇಟ್ ಹೊಣೆಗಾರಿಕೆಯನ್ನು ಕೂಡಾ ಇವರು ವಹಿಸಬೇಕಾಗಿ ಬರುತ್ತಿದೆ. ಇಂತಹ ಸಂದರ್ಭದಲ್ಲೇ ವಿಧಾನಸಭಾ ಚುನಾವಣಾ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವ ಹಣ ಮುಂಗಡವಾಗಿ ಇನ್ನೂ ಮಂಜೂರು ಮಾಡದೇ ಇರುವುದು ಸೆಕ್ಟರ್ ಅಧಿಕಾರಿಗಳನ್ನು ಇನ್ನಷ್ಟು ತೀವ್ರ ಸಂಕಷ್ಟದಲ್ಲಿ ಸಿಲುಕಿಸುವಂತಾಗಿದೆ.

ಗಂಟೆಗೆ 40 ಕಿಮೀ ವೇಗದಲ್ಲಿ ಗಾಳಿ



ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಗಳ ಕಾಲ ಗುಡುಗು ಮಿಂಚು ಸಹಿತ ಗಾಳಿ ಮಳೆ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಈ ಸಂದರ್ಭ ಗಂಟೆಗೆ 30ರಿಂದ 40 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದ್ದು, ಮಳೆ ಜೊತೆಗೆ ಮಿಂಚು ಗುಡುಗು ಕಾಣಿಸಿಕೊಳ್ಳ ಬಹುದು. ಕಡಲ ತೀರದ ನಿವಾಸಿಗಳು, ಪ್ರವಾಸಿಗರು ಎಚ್ಚರ ವಹಿಸುವಂತೆ ಇಲಾಖೆ ಕಿವಿಮಾತು ಹೇಳಿದೆ.

ಸುತ್ತಮುತ್ತ

ಹನುಮ ಜಯಂತಿ



ಕಿನ್ನಿಗೋಳಿ: ಶ್ರೀ ರಾಮ ಮಂದಿರದಲ್ಲಿ ಹನುಮ ಜಯಂತಿ ಅಂಗವಾಗಿ ಶ್ರೀ ರಾಮ ಸಹಿತ ಹನುಮಂತ ದೇವರಿಗೆ ಪಂಚಾಮೃತ ಕಲಶಾಭಿಷೇಕ, ಸಾನಿಧ್ಯ ಹವನ , ದೇವರಿಗೆ ವಿವಿಧ ಅಭಿಷೇಕ , ಭಜನಾ ಸಮಾರಾಧನೆ ನಡಯಿತು. ಮಂದಿರದ ಪ್ರಧಾನ ಅರ್ಚಕ ವೇದಮೂರ್ತಿ ಗಿರೀಶ್ ಭಟ್, ಅಧ್ಯಕ್ಷ ರಾಜೇಶ್ ನಾಯಕ್, ಉಪಾಧ್ಯಕ್ಷ ಆದಿತ್ಯ ಕಾಮತ್, ಕಾರ್ಯದರ್ಶಿ ರಾಘವೇಂದ್ರ ಪ್ರಭು, ಕೋಶಾಧಿಕಾರಿ ಸುಧೀರ್ ಶೆಣೈ, ಆಡಳಿತ ಮಂಡಳಿಯ ವಿನಾಯಕ ಮಲ್ಯ, ಅಚ್ಯುತ ಪ್ರಭು, ಪ್ರಜ್ವಲ್ ನಾಯಕ್, ಗಣನಾಥ ಮಲ್ಯ, ನರೇಂದ್ರ ಪ್ರಭು, ರಾಧಾಕೃಷ್ಣ ನಾಯಕ್ , ಅನಂತ ಕಾಮತ್ ಇದ್ದರು.


ಏ.5: ಕಸಿಹಿತ್ಲುವಿನಲ್ಲಿ ವೈದ್ಯಕೀಯ, ನೇತ್ರ, ದಂತ ಚಿಕಿತ್ಸಾ ಶಿಬಿರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಬೆಂದೂರ್‌ವೆಲ್ ಶಾಖೆಯ ವತಿಯಿಂದ ಕೆಎಂಸಿ ಸೇವಾ ಸಮಿತಿ ಕಸಿಹಿತ್ಲು ಜಪ್ಪಿನಮೊಗರು, ಲಯನ್ಸ್ ಕ್ಲಬ್ ಮಂಗಳೂರು, ಪಂಪ್‌ವೆಲ್, ಕಲ್ಪವೃಕ್ಷ ಹಾಗೂ ಎಸ್. ಜಿ. ವೆಲ್ಫ್ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ಉಚಿತ ವೈದ್ಯಕೀಯ, ನೇತ್ರ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವನ್ನು ಏ.5ರಂದು ಬೆಳಗ್ಗೆ 9.30ರಿಂದ ಅಪರಾಹ್ನ 12.30 ರವರೆಗೆ ಕೆ.ಪಿ.ಕೆ. ಮೈದಾನ, ಕಸಿಹಿತ್ಲು ಜಪ್ಪಿನಮೊಗರಿನಲ್ಲಿ ಆಯೋಜಿಸಲಾಗಿದೆ. ಧರ್ಮಸ್ಥಳ ಯೋಜನೆ ವತಿಯಿಂದ ಆಯುಷ್ಮಾನ್ ಕಾರ್ಡ್, ಇಶ್ರಮ್ ಕಾರ್ಡ್, ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್, ರಾಷ್ಟ್ರೀಯ ಪಿಂಚಣಿ ಯೋಜನೆ, ಪಾನ್ ಕಾರ್ಡ್ ಮತ್ತು ಪಾಸ್‌ಪೋರ್ಟ್ ನೋಂದಣಿ ಶಿಬಿರ ಹಾಗೂ ಆನ್‌ಲೈನ್ ಸೇವಾ ಕಾರ್ಯಕ್ರಮ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ಜರುಗಲಿದೆ ಎಂದು ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಯುವ ಸಮಾವೇಶಕ್ಕೆ ಶ್ರೀಕಾಂತ್ ಪೂಜಾರಿ ಬಿರಾವು ಆಯ್ಕೆ

ಪುತ್ತೂರು: ಕೆಐಐಟಿ ವಿಶ್ವವಿದ್ಯಾನಿಲಯ ಭುವನೇಶ್ವರ, ಆರ್ಟ್ ಆಫ್ ಲಿವಿಂಗ್ ಮತ್ತು ವಿಶ್ವ ಸಂಸ್ಥೆ ಸ್ವಯಂಸೇವಕ ವತಿಯಿಂದ ಒಡಿಸ್ಸಾದ ಭುವನೇಶ್ವರ್ ಕೆಐಐಟಿ ವಿವಿಯಲ್ಲಿ ಏ.18ರಿಂದ 20ರವರೆಗೆ ನಡೆಯುವ ರಾಷ್ಟ್ರೀಯ ಯುವ ಸಮಾವೇಶದಲ್ಲಿ ಕರ್ನಾಟಕದಿಂದ ಶ್ರೀಕಾಂತ್ ಪೂಜಾರಿ ಬಿರಾವು ಭಾಗವಹಿಸಲಿದ್ದಾರೆ.

ದೇಶದ ವಿವಿಧ ರಾಜ್ಯಗಳಿಂದ ಯುವಜನರಿಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುತ್ತಿರುವ ಯುವಜನರನ್ನು ಈ ಸಮಾವೇಶಕ್ಕೆ ಆಹ್ವಾನ ನೀಡಿದ್ದು, ಯುವಜನರ ಸಂಬಂಧಿಸಿದ ಚರ್ಚೆಗಳು, ಗೋಷ್ಠಿಗಳು ನಡೆಯಲಿವೆ. ಶ್ರೀಕಾಂತ್ ಪೂಜಾರಿ



ಬಿರಾವು ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್, ಯುನಿಸೆಫ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಈಗಾಗಲೇ ಶಾಲಾ ಕಾಲೇಜ್, ಯುವಕ ಯುವತಿ ಮಂಡಲಗಳಲ್ಲಿ ಸುಮಾರು ಒಂದು ಲಕ್ಷಕ್ಕಿಂತಕ್ಕಿಂತ ಅಧಿಕ ಯುವಜನರಿಗೆ 700 ಜೀವನ ಕೌಶಲ್ಯ, ವೃತ್ತಿ ಮಾರ್ಗದರ್ಶನ, ಉದ್ಯೋಗ ಸಿದ್ಧತೆ, ಉದ್ಯಮಶೀಲತಾ ತರಬೇತಿ ಇನ್ನಿತರ ಕಾರ್ಯಕ್ರಮಗಳ ಮುಖಾಂತರ ತರಬೇತಿ ನೀಡಿದ್ದು ಅನೇಕ ಉದ್ಯೋಗ ಮೇಳವನ್ನು ಆಯೋಜಿಸಿ ಉದ್ಯೋಗಕ್ಕೆ ನೆರವಾಗಿದ್ದಾರೆ. 2025ನೇ ಸಾಲಿನಲ್ಲಿ ಭಾರತ ಸರಕಾರವು ಅವರ ಯುವಜನ ಸೇವೆ ಪರಿಗಣಿಸಿ ದಿಲ್ಲಿಯ ಕೆಂಪುಕೋಟೆಗೆ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ಅತಿಥಿಯಾಗಿ ಆಹ್ವಾನಿಸಿ ಗೌರವಿಸಿದೆ. ಕರ್ನಾಟಕ ಸರಕಾರದಿಂದ ಅತ್ಯುತ್ತಮ ಜೀವನ ಕೌಶಲ್ಯ ಸುಗಮಕಾರ ಪ್ರಶಸ್ತಿ ಮತ್ತು ರಾಜ್ಯ ಸ್ವಾಮಿ ವಿವೇಕಾನಂದ ಸದ್ಭಾವನ ಪ್ರಶಸ್ತಿ ಪುರಸ್ಕೃತರಾದ ಅವರ ಯುವಜನ ಸಂಬಂಧಿಸಿದ ಸೇವೆಯನ್ನು ಗುರುತಿಸಿ ಕರ್ನಾಟಕದಿಂದ ರಾಷ್ಟ್ರೀಯ ಯುವ ಸಮಾವೇಶಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಷ್ಟ್ರೀಯ ಯುವ ಸಮಾವೇಶದ ಆಯೋಜಕ ಮಯಾಂಕ್ ಸಿಂಗ್ ನೇಗಿ ತಿಳಿಸಿದ್ದಾರೆ.

ಶ್ರೀ ದುರ್ಗಾಂಬಿಕಾ ದೇಗುಲದಲ್ಲಿ 65ನೇ ವರ್ಷದ ಕಾರ್ಯಕ್ರಮ | ವಿವಿಧ ಭಜನಾ ಸಂಘಗಳಿಂದ ಸೇವೆ

ಕಡಬ ಏಕಾಹ ಭಜನಾ ಮಹೋತ್ಸವಕ್ಕೆ ಸಂಭ್ರಮದ ಚಾಲನೆ

ಕಡಬ: ಇಲ್ಲಿನ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ 65ನೇ ವರ್ಷದ ಏಕಾಹ ಭಜನಾ ಮಹೋತ್ಸವವು ಶುಕ್ರವಾರ ಮುಂಜಾನೆ ಆರಂಭಗೊಂಡಿತು.

ದೇವಳದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಕೆದಿಲಾಯ ಅವರು ದೀಪ ಪ್ರಜ್ವಲನೆ ಮಾಡುವ ಮೂಲಕ ಭಜನೆಗೆ ಚಾಲನೆ ನೀಡಿದರು. ದೈವಜ್ಞ ಸುಬ್ರಹ್ಮಣ್ಯ ಬೈಪಾಡಿತ್ತಾಯ ಕೆಂಚಭಟ್ರೆ, ದೇವಸ್ಥಾನದ ಅರ್ಚಕ ಪ್ರಶಾಂತ ಕೆದಿಲಾಯ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಕರ್ಕೇರ, ಮಾಜಿ ಅಧ್ಯಕ್ಷರಾದ ಜನಾರ್ದನ ಗೌಡ ಪಣೆಮಜಲು, ಸೀತಾರಾಮ ಗೌಡ ಪೊಸವಳಿಕೆ, ಏಕಾಹ ಭಜನಾ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ, ಕಾರ್ಯದರ್ಶಿ ಜಯಂತ ಕುತ್ಯಾಡಿ ಸಂಕೇಶ, ಕೋಶಾಧಿಕಾರಿ ಸೀತಾರಾಮ ಗೌಡ ಎ., ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಅಧ್ಯಕ್ಷ ಸೋಮಪ್ಪ ನ್ಯಾಕ್, ಕಾರ್ಯದರ್ಶಿ ಮನೋಹರ ರೈ ಬೆದ್ರಾಜೆ, ಶ್ರೀ ಶ್ರೀಕಂಠ ಸ್ವಾಮಿ ಮತ್ತು



ಶ್ರೀ ಮಹಾಗಣಪತಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಹರೀಶ್ ರೈ ಹಳ್ಳಿ, ಮಾಜಿ ಅಧ್ಯಕ್ಷ ಮುತ್ತುಕುಮಾರ್, ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಗೀತಾ ಲೋಕೇಶ, ರಾಮಚಂದ್ರ ಗೌಡ ಸನಿಲ, ಕಮಲ ಪಣೆಮಜಲು, ಶೀನ ನಾಯ್ಕ ಸದಾನಂದ ಗೌಡ ಸಾಂತ್ಯಡ್ಕ, ಸರಸ್ವತೀ ವಿದ್ಯಾಲಯದ ಅಧ್ಯಕ್ಷ ರವಿರಾಜ್ ಶೆಟ್ಟಿ, ಧಾರ್ಮಿಕ ಉತ್ಸವ ಸಮಿತಿಯ ಅಧ್ಯಕ್ಷ ಸುಂದರ ಗೌಡ ಮಂಡೆಕರ, ಪ್ರಮುಖರಾದ ಅಶೋಕ್‌ಕುಮಾರ್ ಪಿ., ಕಿಶನ್‌ಕುಮಾರ್ ರೈ ಪೆರಿಯಡ್ಕ ಗುತ್ತು, ಪ್ರಕಾಶ್ ಎನ್.ಕೆ., ಅಜಿತ್ ರೈ ಆರ್ತಿಲ, ವಿಶ್ವನಾಥ ರೈ ಪೆರ್ಲ, ಸತೀಶ್ ಶೆಟ್ಟಿ ಬೀರುಕ್ಕು, ದಯಾನಂದ ಪ್ರಭು, ರಾಮಚಂದ್ರ ಭಟ್ ಪಾದೆ, ಅಶೋಕ್ ಆಳ್ವ ಬೆದ್ರಾಜೆ, ಸತೀಶ ಕೆ. ಐತ್ತೂರು, ಪ್ರಮೋದ್ ರೈ ನಂದುಗುರಿ, ಸತೀಶ್ ನ್ಯಾಕ್ ಮೇಲಿನಮನೆ, ಶಿವಪ್ರಸಾದ್ ರೈ ಮೈಲೇರಿ, ಯಶೋದರ ಪೂವಳ, ರಾಧಾಕೃಷ್ಣ ಕೋಲ್ಪೆ, ಪುಲಸ್ತ್ಯಾ ರೈ, ಗೀತಾ ಗೋಪಾಲಕೃಷ್ಣ ಕೇವಳ, ದಯಾನಂದ ಗೌಡ ಪೊಯ್ಯೆತಡ್ಕ, ಲಿಂಗಪ್ಪ ಜೆ., ದಿನೇಶ್ ಶೆಟ್ಟಿ ಕಳಾರ, ವೆಂಕಟೇಶ್ ಆರಿಗ, ರಾಕೇಶ್ ಪೆಲತ್ತೋಡಿ, ಹರಿಪ್ರಸಾದ್ ರೈ ಬೆದ್ರಾಜೆ, ರಂಜಿತ್ ರೈ ಬೆದ್ರಾಜೆ, ಸಾಯಿಪ್ರಸಾದ್ ಪೈ ಉಪಸ್ಥಿತರಿದ್ದರು.

ಭಜನೆ ಸೇವೆ, ದೇವರಿಗೆ ಉಲ್ಪೆ ಸಮರ್ಪಣೆ

ಆರಂಭದಲ್ಲಿ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಸದಸ್ಯರು ಭಜನಾ ಸೇವೆ ನೆರವೇರಿಸಿದರು. ಬಳಿಕ ವಿವಿಧ ಭಜನಾ ಸಂಘಗಳ ಸದಸ್ಯರಿಂದ ಭಜನ ಸೇವೆ ನಡೆಯಿತು. ಸಂಜೆ ದುರ್ಗಾಪೂಜೆ ನೆರವೇರಿತು. ರಾತ್ರಿ ಜರಗಿದ ಧಾರ್ಮಿಕ ಸಭೆಯಲ್ಲಿ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀಗಳನ್ನು ಗಣಪತಿ ದೇವಸ್ಥಾನದಿಂದ ಪೂರ್ಣಕುಂಭ ಸ್ವಾಗತದ ಮೂಲಕ ರಾಜಬೀದಿಯಲ್ಲಿ ಮೆರವಣಿಗೆಯಲ್ಲಿ ಕರೆತರಲಾಯಿತು. ಬಳಿಕ ಶ್ರೀ ದೇವರಿಗೆ ಉಲ್ಪೆ ಸಮರ್ಪಣೆ ನಡೆಯಿತು. ಜೇಸಿಐ ಕಡಬ ಕದಂಬ ಘಟಕದ ವತಿಯಿಂದ ನಡೆಸಲಾದ ಭಕ್ತಾದಿಗಳಿಗೆ ಉಚಿತವಾಗಿ ಮಜ್ಜಿಗೆ ವಿತರಣೆ ಕಾರ್ಯಕ್ರಮಕ್ಕೆ ಮಾಜಿ ಶಾಸಕಿ ಶಕುಂತಳಾ ಟಿ. ಶೆಟ್ಟಿ ಅವರು ಚಾಲನೆ ನೀಡಿದರು. ಉತ್ಸವದ ಅಂಗವಾಗಿ ದೇವಾಲಯವನ್ನು ಹಾಗೂ ಕಡಬ ಪೇಟೆಯನ್ನು ವಿದ್ಯುದ್ದೀಪಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು.

ಶ್ರೀ ಸೋಮನಾಥ ಕ್ಷೇತ್ರದಲ್ಲಿ ಯಜ್ಞಶಾಲೆ ಶಾಲೆ, ಆಡಳಿತ ಕಚೇರಿ ಉದ್ಘಾಟನೆ

ಧಾರ್ಮಿಕ ಕ್ಷೇತ್ರ ನಮ್ಮ ಶಕ್ತಿ ಕೇಂದ್ರ: ಪದ್ಮನಾಭ ತಂತ್ರಿ

ಉಳ್ಳಾಲ: ಊರಿನ ಧಾರ್ಮಿಕ ಕ್ಷೇತ್ರಗಳೇ ನಮಗೆ ಶಕ್ತಿ ಕೇಂದ್ರಗಳಾಗಿವೆ ಎಂದು ಸೋಮೇಶ್ವರ ಶ್ರೀ ಸೋಮನಾಥ ಕ್ಷೇತ್ರದ ತಂತ್ರಿವರ್ಯ ವೇದಮೂರ್ತಿ ಬ್ರಹ್ಮಶ್ರೀ ನೀಲೇಶ್ವರ ಉಚ್ಚಿಲತ್ತಾಯ ಪದ್ಮನಾಭ ತಂತ್ರಿಗಳು ಹೇಳಿದರು.

ಸೋಮೇಶ್ವರ ಶ್ರೀ ಸೋಮನಾಥ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ದಾನಿಗಳು ಕೊಡುಗೆಯಾಗಿ ನೀಡಿದ ಸೀಲಿಂಗ್ ಶೀಟ್ ಮೇಲ್ಛಾವಣಿ, ಅರ್ಜುನ ಯಜ್ಞಶಾಲೆ ಮತ್ತು ಆಡಳಿತ ಕಚೇರಿಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ ವರುಷ ನಡೆದಿದ್ದ ಸಾಮೂಹಿಕ ಕೋಟಿ ಪಂಚಾಕ್ಷರಿ ಜಪದ ಸಂದರ್ಭದಲ್ಲಿ ಕ್ಷೇತ್ರದ ಆವರಣಕ್ಕೆ ಖಾಲಿ ಪೆಂಡಾಲ್ ಹಾಕಿಸಲಿಕ್ಕೆ ಎಂಟು ಲಕ್ಷ ರೂಪಾಯಿ ಖರ್ಚು ತಗುಲಿತ್ತು.ಇಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಪದೇ ಪದೇ ಚಪ್ಪರ ಹಾಕುವುದು ದೊಡ್ಡ ಖರ್ಚಿನ ವಿಚಾರವಾಗಿತ್ತು.ಇದನ್ನು ಮನಗಂಡ ಕ್ಷೇತ್ರದ ಭಕ್ತರು, ದಾನಿಗಳು ಒಟ್ಟು ಸೇರಿ ಮೇಲ್ಛಾವಣಿ ನಿರ್ಮಿಸಿರುವುದು ಶ್ರೇಷ್ಠ ಕಾರ್ಯವಾಗಿದೆಯೆಂದರು.

ಸಹಕರಿಸಿದವರಿಗೆ ಸನ್ಮಾನ

ಮೇಲ್ಛಾವಣಿ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳಾದ ಕೊಳೂರು ಕನ್ಯಾನ ಸದಾಶಿವ ಶೆಟ್ಟಿ ಮಾಗಣತ್ತಡಿ ಜಗನ್ನಾಥ ಶೆಟ್ಟಿ ವಿಜಯಲಕ್ಷ್ಮೀ ಕೆ. ಉಚ್ಚಿಲ, ಕಿರಣ್ ಸುಳಾಯ ಸಾಂತ್ಯಗಡದಗುತ್ತು, ಯು. ಎಸ್. ಅರುಣ್ ಭಟ್, ಅರ್ಜುನ ಯಜ್ಞಶಾಲೆಯ ದಾನಿಗಳಾದ ಸಿಎ ಸುಧೀರ್ ಶೆಟ್ಟಿ ಮುಂಬೈ ಮತ್ತು ಕ್ಷೇತ್ರದ ಅಭಿವೃದ್ಧಿಗೆವಿಶೇಷರೀತಿಯಲ್ಲಿಸಹಕರಿಸಿದ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಿ. ರವೀಂದ್ರನಾಥ ರೈ, ಪ್ರಮುಖರಾದ ಶ್ರೀಧರ ಭಂಡಾರಿ ಮುಂಬೈ, ಜನಾರ್ದನ ಹೊಳ್ಳ ಸೋಮೇಶ್ವರ, ಜನಾರ್ದನ ಗಟ್ಟಿ ಕನ್ನಮನೆ ಮತ್ತು ದೇವಕಿ ಆರ್. ಉಳ್ಳಾಲ್, ಪದ್ಮನಾಭ ಶೆಟ್ಟಿ ವರ್ಕಾಡಿ, ರಾಮದಾಸ್ ಸೋಮೇಶ್ವರ, ಗುತ್ತಿಗೆದಾರರಾದ ಕೈಲಾಸ್ ಬಾಬು ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರದ ಕಾರ್ಯ ನಿರ್ವಹಣಾಧಿಕಾರಿ ಬೇಬಿ ಎಂ. ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸದಾನಂದ ಬಂಗೇರ, ಕಿಶೋರ್ ಉಚ್ಚಿಲ, ಭಾಸ್ಕರ ಗಟ್ಟಿ ಸೋಮೇಶ್ವರ, ಸುಂದರ ಅಂಬೇಡ್ಕರ್ ನಗರ, ಸುವಾಸಿನಿ ಬಬ್ಬುಕಟ್ಟೆ ಇದ್ದರು.ವ್ಯವಸ್ಥಾಪನಾ ಸಮಿತಿ ಸದಸ್ಯರಾದ ದೀಪಕ್ ಪಿಲಾರು ಸ್ವಾಗತಿಸಿ, ತಿಲಕ್ ನೆಹರೂನಗರ ನಿರೂಪಿಸಿದರು. ರಮಾನಾಥ ಬಂಗೇರ ವಂದಿಸಿದರು.



> **ದಾನಿಗಳ ಸ್ಪಂದನೆ**
>
> ಕ್ಷೇತ್ರದಲ್ಲಿ ಆವರಣದ ಚಪ್ಪಡಿ ಕಲ್ಲುಗಳ ಮೇಲೆ ಬರಿಕಾಲಲ್ಲಿ ನಡೆದಾಡಲು ಕಷ್ಟಪಡುತ್ತಿದ್ದರು. ನಮ್ಮ ಕೋರಿಕೆಯ ಮೇರೆಗೆ ದಾನಿಗಳು ಕ್ಷೇತ್ರದ ಆವರಣಕ್ಕೆ ಸೀಲಿಂಗ್ ಶೀಟ್ ಮೇಲ್ಛಾವಣಿ ಹಾಕಿಸಿ ಕೊಟ್ಟಿದ್ದಲ್ಲದೆ ಯಾಗ ಶಾಲೆ, ಆದಲಿತ ಕಚೇರಿಯ ಕೊರತೆಯನ್ನೂ ನೀಗಿಸಿದ್ದಾರೆ. ಎಲ್ಲರಿಗೂ ಸೋಮನಾಥನು ಒಲಿತನ್ನು ಮಾಡಲಿ.
>
> ● ಬಿ.ರವೀಂದ್ರನಾಥ ರೈ, ಅಧ್ಯಕ್ಷ, ವ್ಯವಸ್ಥಾಪನಾ ಸಮಿತಿ

ಕ್ಯೊಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನ ಜಾತ್ರೆ

ಸಂಭ್ರಮದಿಂದ ನೆರವೇರಿತು ಮಹಾರಥೋತ್ಸವ

ಕಡಬ: ಕ್ಯೊಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ಜಾತ್ರಾ ಮಹೋತ್ಸವ ಪ್ರಯುಕ್ತ ದೇವರ ಮಹಾರಥೋತ್ಸವ ಸಂಭ್ರಮ ಸಡಗರದಿಂದ ನಡೆಯಿತು.

ಬೆಳಗ್ಗೆ ಹಾಗೂ ರಾತ್ರಿ ಬಲಿ ಹೊರಟು ಉತ್ಸವ, ರಕ್ತೇಶ್ವರಿ ಮತ್ತು ಹುಲಿ ದೈವಗಳ ನುಡಿಕಟ್ಟುಗಳು ನಡೆದು ದೇವರ ಮಹಾರಥೋತ್ಸವ ನಡೆಯಿತು. ನಂತರ ಅಶ್ವತ್ಥ ಕಟ್ಟೆಪೂಜೆಗಳು ನಡೆಯಿತು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ವೈದಿಕ ಕಾರ್ಯಕ್ರಮ ನೆರವೇರಿತು. ದೇವಸ್ಥಾನದ ಪವಿತ್ರಪಾಣಿ ವೆಂಕಟ್ರಮಣ ಕುದ್ರೆತ್ತಾಯ, ಅರ್ಚಕ ವಿಷ್ಣುಮೂರ್ತಿ ಬಡೆಕ್ಕಿಲ್ಲಾಯ ಸಹಕರಿಸಿದರು.

ಮಾಜಿ ಶಾಸಕ ಸಂಜೀವ ಮಠಂದೂರು, ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯೆ ಡಾ. ರಮ್ಯಾ ರಾಜಾರಾಮ್, ಮಾಜಿ ಸದಸ್ಯ ಡಾ. ರಾಜಾರಾಮ್ ಕೆ.ಬಿ., ಸಾಮಾಜಿಕ ಮುಂದಾಳು ಕಾವು ಹೇಮನಾಥ ಶೆಟ್ಟಿ ಆತೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರಬಾಳಿಕೆ, ಸದಸ್ಯರಾದ ಸುನೀತ್ ರಾಜ್ ಶೆಟ್ಟಿ ಬಂತೆಜಾಲು, ಯತೀಶ್ ಗುಂಡಿಜೆ, ಶ್ರೀಧರ ಪೂಜಾರಿ ತುಂಬೆತ್ತಡ್ಕ, ಸಂಜೀವ ಸುದೆಂಗಳ, ಗೋಪಾಲ ನಾಯ್ಕ ಸಿಗೆತ್ತಡಿ, ಸುಜಾತ ಜೆ.ಶೆಟ್ಟಿ ಬಡಿಲ, ಮೀನಾಕ್ಷಿ ಕೆ.ಮುಂಡ್ಯೆಮಾರ್, ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ, ಅಭಿವೃದ್ಧಿ ಸಮಿತಿ ಅಧ್ಯಕ್ಷ ಶೀನಪ್ಪ ಗೌಡ ವಳಕಡಮ, ಉತ್ಸವ ಸಮಿತಿಯ ಅಧ್ಯಕ್ಷ ಧರ್ಣಪ್ಪ ಗೌಡ ಕೊರಿಕ್ಕಾರು, ಮಾಜಿ ಅಧ್ಯಕ್ಷ ಚಂದ್ರಹಾಸ ರೈ ಪಾಂಡೇಲುಗುತ್ತು, ಉಪಾಧ್ಯಕ್ಷರಾದ ಮೋಹನ್‌ದಾಸ ಶೆಟ್ಟಿ ಬಡಿಲ, ಸಂಜೀವ ಗೌಡ ಪರಂಗಾಜೆ, ಶ್ರೀನಿವಾಸ ಗೌಡ ಪಲ್ಲಡ್ಕಪಟ್ಟೆ, ರಾಜೀವ ಗೌಡ ಮೊಸಲಕ್ಕೆ, ಗಣೇಶ್ ಎರ್ಮಡ್ಕ,ಪ್ರಧಾನಕಾರ್ಯದರ್ಶಿ ಕೊರಗಪ್ಪ ಗೌಡ ಮುಂಡ್ಯೆಮಾರ್, ಜೊತೆ ಕಾರ್ಯದರ್ಶಿಗಳಾದ ಶಶಿಕುಮಾರ್ ಶೆಟ್ಟಿ ಅಂಬಾಬೀಡು, ಶಾಂತಾರಾಮ ಗೌಡ ಬೇಂಗದಪಡ್ಪು, ಜ್ಯೋತಿ ಕಲ್ಲಾಡಿ, ರಘುನಾಥ ಶೆಟ್ಟಿ ಕಲ್ಕಂಪಾಡಿ ಮತ್ತಿತರರು ಉಪಸ್ಥಿತರಿದ್ದರು.



> **ಸಾಂಸ್ಕೃತಿಕ ಕಾರ್ಯಕ್ರಮ**
>
> ಸಂಜೆ ದೇವಗಿರಿ ಬಾಲಗೋಕುಲದ (ಧಾರ್ಮಿಕ ಶಿಕ್ಷಣ) ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ದೀಕ್ಷಿತ್ ಸುವರ್ಣ ನೀಡೇಲು ಇವರ ಸಾರಥ್ಯದ ದೀಚು ಮೆಲೋಡಿಸ್ ಕ್ಯೊಲ ಅವರಿಂದ ಗಾನಸುರಭಿ, ರಾತ್ರಿ ಶ್ರೀ ಹನುಮಗಿರಿ ಮೇಳದವರಿಂದ ಸಾಕೇತ ಸಾಮ್ರಾಜ್ಞಿ ಯಕ್ಷಗಾನ ಬಯಲಾಟ ನಡೆಯಿತು.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಿಯ ಬ್ರಹ್ಮಕಲಶೋತ್ಸವ

ಪುಷ್ಪ ರಥದಲ್ಲಿ ಪ್ರಥಮ ರಥೋತ್ಸವ

ಆಲಂಕಾರು: ಸುಮಾರು ರೂ.10 ಕೋಟಿ ವೆಚ್ಚದಲ್ಲಿ ಸಂಪೂರ್ಣ ಶಿಲಾಮಯವಾಗಿ ಪುನರ್ ನಿರ್ಮಾಣ ಗೊಂಡ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಿಯ ಬ್ರಹ್ಮಕಲಶೋತ್ಸವವು ವೇದಮೂರ್ತಿ ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ವಿಜೃಂಭಣೆಯಿಂದ ನಡೆಯಿತು.

ರಾತ್ರಿ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯ ಹಾಗೂ ಸಮಸ್ತ ದೇವಾಡಿಗ ಬಂಧುಗಳು ಸುಮಾರು ರೂ. 30 ಲಕ್ಷ ವೆಚ್ಚದಲ್ಲಿ ದೇವಾಲಯಕ್ಕೆ ಕೊಡುಗೆಯಾಗಿ ನೀಡಿದ್ದ ಪುಷ್ಪರಥ ಹಾಗೂ ಪಲ್ಲಕ್ಕಿಯ ಸೇವೆಯು ಧಾರ್ಮಿಕ ವಿಧಿವಿಧಾನಗಳೊಂದಿಗೆ ನಡೆಯಿತು. ಪುಷ್ಪ ರಥದ ಪ್ರಥಮ ರಥೋತ್ಸವ ಅತ್ಯಂತ ವಿಶೇಷವಾಗಿ ಕ್ಷೇತ್ರದಲ್ಲಿ ನಡೆಯಿತು. ಸಂಜೆ 7ರಿಂದ ವೇದಮೂರ್ತಿ ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ಮಹಾಪೂಜೆ, ಭೂತ ಬಲಿ, ವಸಂತಕಟ್ಟೆ ಪೂಜೆ ನಡೆದು ನೂತನ ಬ್ರಹ್ಮರಥಕ್ಕೆ ಶುದ್ಧಿ ಪ್ರಕ್ರಿಯೆ ರಥಾವಾಸ ನಡೆಯಿತು. ಬಳಿಕ ಪುಷ್ಪ ರಥದ ಪ್ರಥಮ ರಥೋತ್ಸವ ನಡೆದು ಬಂತು.


ಈ ಸಂದರ್ಭ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ದಿಲ್ಲಾಯ, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು, ಪವಿತ್ರಪಾಣಿ ಹರೀಶ್ ಆಚಾರ್ಯ ನಗ್ರಿಗುತ್ತು, ಸ್ವಾಗತ ಸಮಿತಿಯ ಸಂಚಾಲಕ ರಾಧಾಕೃಷ್ಣ ರೈ ಪರಾರಿಗುತ್ತು, ಆರ್ಥಿಕ ಸಮಿತಿಯ ಸಂಚಾಲಕ ವಿಠಲ್ ರೈ ಕೊಣಾಲುಗುತ್ತು, ಪ್ರಧಾನ ಅರ್ಚಕ ಹರಿಪ್ರಸಾದ್ ಉಪಾಧ್ಯಾಯ,



ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯದ ಅಧ್ಯಕ್ಷ ರಾಮಚಂದ್ರ ದೇವಾಡಿಗ ಎನ್., ಕಾರ್ಯದರ್ಶಿ ಚಂದ್ರಶೇಖರ ದೇವಾಡಿಗ ಬಿ., ಕೋಶಾಧಿಕಾರಿ ಶಿವಾನಂದ ದೇವಾಡಿಗ, ಜೊತೆ ಕಾರ್ಯದರ್ಶಿ ಉಮೇಶ್ ದೇವಾಡಿಗ, ಉಪ ಕಾರ್ಯದರ್ಶಿ ಪ್ರೀತಮ್ ದೇವಾಡಿಗ, ಸಂಘಟನಾ ಕಾರ್ಯದರ್ಶಿ ಹರಿಶ್ಚಂದ್ರ ದೇವಾಡಿಗ, ಸಂಚಾಲಕ ಅಶೋಕ್ ಕುಮಾರ್ ಎನ್. ಸೇರಿದಂತೆ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯದ ಸಮಸ್ತ ದೇವಾಡಿಗ ಬಂಧುಗಳು ಉಪಸ್ಥಿತರಿದ್ದರು.

ಆದರ್ಶ ವಿವಿಧೋದ್ದೇಶ ಸಹಕಾರ ಸಂಘ: ರೂ.1078 ಕೋಟಿ ವ್ಯವಹಾರ, ರೂ.3.10 ಕೋಟಿ ನಿವ್ವಳ ಲಾಭ ಗಳಿಕೆ

ಪುತ್ತೂರು: ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಆದರ್ಶ ವಿವಿಧೋದ್ದೇಶ ಸಹಕಾರ ಸಂಘ 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ತನ್ನ ಸಂಘದ ಸದಸ್ಯರ ಸಹಕಾರದಿಂದ ಸಾರ್ವಕಾಲಿಕ ಸಾಧನೆಯೊಂದಿಗೆ ರೂ. 1,078 ಕೋಟಿ ವ್ಯವಹಾರವನ್ನು ನಡೆಸಿ ರೂ.3.10 ಕೋಟಿ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ 'ಸಹಕಾರ ರತ್ನ' ಸವಣೂರು ಕೆ. ಸೀತಾರಾಮ ರೈ ತಿಳಿಸಿದ್ದಾರೆ.



24 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ತನ್ನ ಸೇವೆಯನ್ನು ಪುತ್ತೂರು, ಸುಳ್ಯ, ಬೆಳ್ತಂಗಡಿ, ಬಂಟ್ವಾಳ, ಕಡಬ ಮತ್ತು ಮಂಗಳೂರು ತಾಲೂಕಿನಲ್ಲಿರುವ 17 ಶಾಖೆಗಳ ಮೂಲಕ ನೀಡಿಕೊಂಡು ಬರುತ್ತಿದೆ.

2025-26 ನೇ ಆರ್ಥಿಕ ಸಾಲಿನ ಅಂತ್ಯಕ್ಕೆ ಸಂಘದಲ್ಲಿ ಒಟ್ಟು 31,847 ಸದಸ್ಯರಿದ್ದು, ಒಟ್ಟು ರೂ.3.47 ಕೋಟಿಗಳಷ್ಟು ಪಾಲು ಬಂಡವಾಳವನ್ನು ಹೊಂದಿದೆ. ಸಂಘವು ರೂ.181.24 ಕೋಟಿ ಠೇವಣಿಯನ್ನು ಹೊಂದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.20.50ರಷ್ಟು ಹೆಚ್ಚಳವಾಗಿದೆ. ರೂ.149.59 ಕೋಟಿಗಳಷ್ಟು ಹೊರಬಾಕಿ ಸಾಲ ಇದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.12.30ರಷ್ಟು ಹೆಚ್ಚಳವಾಗಿದೆ. ಸಂಘವು ರೂ.1078 ಕೋಟಿ ಒಟ್ಟು ವ್ಯವಹಾರವನ್ನು ಹೊಂದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.32.60ರಷ್ಟು ಪ್ರಗತಿ ಹೊಂದಿದೆ. ಸಂಘವು ರೂ.3.35 ಕೋಟಿ ಕ್ಷೇಮ ನಿಧಿ ಮತ್ತು ರೂ.2.43 ಕೋಟಿ ಇತರ ನಿಧಿಗಳನ್ನು ಹೊಂದಿ, ರೂ.194 ಕೋಟಿಗಳಷ್ಟು ದುಡಿಯುವ ಬಂಡವಾಳವನ್ನು ಹೊಂದಿದೆ. ಸಂಘವು ಸ್ಥಾಪನೆಗೊಂಡ ವರ್ಷದಿಂದ ತನ್ನ ಸದಸ್ಯರಿಗೆ ಡಿವಿಡೆಂಡ್ ನೀಡಿಕೊಂಡು ಬರುತ್ತಿರುವ ಮತ್ತು ಆಡಿಟ್ ವರ್ಗದಲ್ಲಿ ಸತತವಾಗಿ 'ಎ' ತರಗತಿಯನ್ನು ಕಾಯ್ದುಕೊಂಡು ಬಂದಿರುವ ಏಕೈಕ ಸಂಘವಾಗಿದೆ.

ಶೀಘ್ರ ನೂತನ ಕೇಂದ್ರ ಕಚೇರಿ

ಸಂಘದ ಕೇಂದ್ರ ಕಚೇರಿಗೆ ಸ್ವಂತ ಕಟ್ಟಡವನ್ನು ಹೊಂದುವ ಉದ್ದೇಶದಿಂದ ಕಡಬ ತಾಲೂಕಿನ ಸವಣೂರು ಗ್ರಾಮದಲ್ಲಿ 0.75 ಸೆಂಟ್ಸ್ ನಿವೇಶನವನ್ನು ಸಂಘದ ಹೆಸರಿನಲ್ಲಿ ಖರೀದಿಸಿದ್ದು ಸದ್ರಿ ನಿವೇಶನದಲ್ಲಿ ರೂ.5 ಕೋಟಿ ವೆಚ್ಚದಲ್ಲಿ ನೂತನ ಕೇಂದ್ರ ಕಚೇರಿಯ ಕಾಮಗಾರಿ ಪ್ರಗತಿಯಲ್ಲಿದೆ. ಸಂಘದಲ್ಲಿ ಪ್ರಸ್ತುತ 78 ಸಿಬ್ಬಂದಿ ಮತ್ತು 19 ನಿತ್ಯ ನಿಧಿ ಸಂಗ್ರಾಹಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಂಘದ ಪ್ರಗತಿ ಮತ್ತು ಸೇವೆಯನ್ನು ಪರಿಗಣಿಸಿ ಮಂಗಳೂರಿನಲ್ಲಿ ನಡೆದ 64ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ 'ಅತ್ಯುತ್ತಮ ಸಹಕಾರ ಸಂಘ' ಪ್ರಶಸ್ತಿ ಪತ್ರ ಮತ್ತು 2023-24ನೇ ಸಾಲಿನಲ್ಲಿ ಮಂಗಳೂರಿನಲ್ಲಿ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭ 'ಉತ್ತಮ ಸಹಕಾರಿ ಸಂಘ' ಪ್ರಶಸ್ತಿ ಗಳಿಸಿದೆ. ತನ್ನ ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದ ಹಾಗೂ ಬ್ಯಾಂಕಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಕ್ಕೆ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ ಇವರಿಂದ 6 ಬಾರಿ 'ಸಾಧನಾ ಪ್ರಶಸ್ತಿ' ಪಡೆದುಕೊಂಡು ಸಹಕಾರಿ ಕ್ಷೇತ್ರದಲ್ಲಿ ತನ್ನ ಗರಿಮೆಯನ್ನು ಹೆಚ್ಚಿಸಿಕೊಂಡಿದೆ.

ವಿದ್ಯಾರ್ಥಿ ನಿಧಿ

ಸಂಘವು ತನ್ನ ಸಾಮಾಜಿಕ ಕಾರ್ಯದ ಮೂಲಕ ಶಾಖೆಗಳ ವ್ಯಾಪ್ತಿಯಲ್ಲಿ ಬರುವ ಸರಕಾರಿ ಶಾಲೆಗಳಲ್ಲಿ 5ರಿಂದ 10ನೇ ತರಗತಿಗಳಲ್ಲಿ ಕಲಿಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ತನ್ನ ಧರ್ಮಾರ್ಥ ಮತ್ತು ವಿದ್ಯಾ ಸಂಸ್ಥೆ ನಿಧಿಯಿಂದ ಸಹಾಯಧನವನ್ನು ಮಹಾಸಭೆಯ ದಿನದಂದು ನೀಡಿಕೊಂಡು ಬರುತ್ತಿದ್ದು ಈವರೆಗೆ ಒಟ್ಟು ರೂ.31,12,900 ಮೊತ್ತವನ್ನು ಒಟ್ಟು 1,545 ವಿದ್ಯಾರ್ಥಿಗಳಿಗೆ ಗಣ್ಯರ ಉಪಸ್ಥಿತಿಯಲ್ಲಿ ವಿತರಿಸಲಾಗಿದೆ. ಹಲವಾರು ಸಂಘ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡಲಾಗಿದೆ. ಸಂಘದಲ್ಲಿ ಗ್ರಾಹಕರಿಗೆ ತ್ವರಿತ ಮತ್ತು ಪಾರದರ್ಶಕ ಸೇವೆಯನ್ನು ನೀಡುವ ಸಲುವಾಗಿ ನೆಫ್ಟ್, ಆರ್.ಟಿ.ಜಿ.ಎಸ್. ಸೌಲಭ್ಯ, ಎಸ್.ಎಂ.ಎಸ್. ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ಸದಸ್ಯರಿಗೆ ಸೋಲಾರ್ ವಾಟರ್ ಹೀಟರ್ ಮತ್ತು ಸೋಲಾರ್ ಲೈಟ್ ಅಳವಡಿಸಲು ಶೂನ್ಯ ಬಡ್ಡಿದರದಲ್ಲಿ ರೂ.2 ಲಕ್ಷ ಸಾಲವನ್ನು ವಿತರಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು. ಈ ಸಂದರ್ಭ ಸಂಘದ ಈ ಸಾಧನೆಗೆ ಸಹಕರಿಸಿದ ಆಡಳಿತ ಮಂಡಳಿ ನಿರ್ದೇಶಕರಿಗೆ, ಸಿಬ್ಬಂದಿ, ಗ್ರಾಹಕರಿಗೆ ಅಧ್ಯಕ್ಷ ಸವಣೂರು ಕೆ. ಸೀತಾರಾಮ ರೈ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಜಾತ್ರೆ ಗದ್ದೆಯಲ್ಲಿ ವ್ಯಾಪಾರಸ್ಥರ ಬಳಿ ಗ್ರಾಹಕರು ಬರುವಂತೆ ವ್ಯವಸ್ಥಿತ ರೀತಿಯಲ್ಲಿ ಅಂಗಡಿಗೆ ಸ್ಥಳ ನಿಗದಿ | ಈ ಬಾರಿ ಹೆಚ್ಚಿನ ಅಂಗಡಿಗಳಿಗೆ ಸ್ಥಳಾವಕಾಶ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆಯ ತಾತ್ಕಾಲಿಕ ಸಂತೆ ಅಂಗಡಿಗಳ ಏಲಂ ಪ್ರಕ್ರಿಯೆ

ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೋತ್ಸವ ಏ.10ರಿಂದ ನಡೆಯಲಿದ್ದು, ಎರಡು ದಿನಗಳಲ್ಲಿ ತಾತ್ಕಾಲಿಕ ಸಂತೆ ಅಂಗಡಿಗಳ ಏಲಂ ಪ್ರಕ್ರಿಯೆ ನಡೆಸಲಾಯಿತು.



ದೇವಳದ ಸಭಾಭವನದಲ್ಲಿ ನಡೆದ ತಾತ್ಕಾಲಿಕ ಏಲಂ ಪ್ರಕ್ರಿಯೆಗಳಿಗೆ ಚಾಲನೆ ನೀಡಿದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ವ್ಯಾಪಾರಸ್ಥರಿದ್ದರೆ ಸಾಲದು ಗ್ರಾಹಕರು ಬೇಕು. ಹಾಗಾಗಿ ಜಾತ್ರೆ ಗದ್ದೆಯಲ್ಲಿ ವ್ಯಾಪಾರಸ್ಥರ ಬಳಿ ಗ್ರಾಹಕರು ಬರುವಂತೆ ವ್ಯವಸ್ಥಿತ ರೀತಿಯಲ್ಲಿ ಅಂಗಡಿಗೆ ಸ್ಥಳಗಳನ್ನು ಗುರುತಿಸಲಾಗಿದೆ. ಭೇದ ಭಾವ ಇಲ್ಲದೆ ಎಲ್ಲರೂ ಉತ್ತಮ ವ್ಯಾಪಾರ ನಡೆಸಬೇಕು. ಏನಾದರೂ ತೊಂದರೆ ಇದ್ದರೆ ನೇರ ನಮ್ಮ ಕಚೇರಿಯನ್ನು ಸಂಪರ್ಕಿಸಿ ಅಥವಾ ನನ್ನನ್ನು ಸಂಪರ್ಕಿಸಿ. ಅಂಗಡಿಗಳ ಏಲಂ ಪ್ರಕ್ರಿಯೆ ಆಗಬೇಕಾದರೆ ಅದರ ಹಿಂದೆ ಒಂದಷ್ಟು ದಿನಗಳ ಶ್ರಮವಿದೆ. ವ್ಯಾಪಾರಸ್ಥರಿಗೆ ಶೌಚಾಲಯದ ವ್ಯವಸ್ಥೆ ನೀರಿನ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಪ್ರತಿ ದಿನ ಕಸದ ವಾಹನ ಅಂಗಡಿಯ ಬಳಿ ಬಂದಾಗ ಕಸವನ್ನು ನೀಡಿ ಸಹಕರಿಸಿ. ಸ್ವಚ್ಛತೆ ಕಾಪಾಡುವ ಮೂಲಕ ಎಲ್ಲರೂ ಶಿಸ್ತು ಬದ್ಧವಾಗಿ ವ್ಯಾಪಾರ ಮಾಡಿ ಎಂದರು.

ಹೆಚ್ಚು ಅಂಗಡಿಗೆ ಸ್ಥಳ ಗುರುತು

ಶಾಸಕ ಅಶೋಕ್ ಕುಮಾರ್ ರೈ ಅವರ ಸೂಚನೆಯಂತೆ ವ್ಯಾಪಾರಸ್ಥರಿಗೆ ಪ್ರಯೋಜನ ಆಗಬೇಕೆಂದು ದೇವರಮಾರು ಗದ್ದೆಯನ್ನು ವಿಸ್ತಾರ ಮಾಡಿದ್ದೇವೆ. ಯಾರಿಗೂ ಇಕ್ಕಟ್ಟೂ ಆಗದ ರೀತಿಯಲ್ಲಿ ಎಲ್ಲಾ ವ್ಯಾಪಾರಸ್ಥರಿಗೂ ಉತ್ತಮ ವ್ಯಾಪಾರ ಆಗಲೆಂದು ಈ ಬಾರಿ ಕಳೆದ ಬಾರಿಗಿಂತಲೂ ಹೆಚ್ಚಿನ ಅಂಗಡಿಗಳಿಗೆ ಸ್ಥಳಾವಕಾಶ ಗುರುತಿಸಲಾಗಿದೆ ಎಂದು ಈಶ್ವರ ಭಟ್ ಪಂಜಿಗುಡ್ಡೆ ತಿಳಿಸಿದರು.

ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಮಹಾಬಲ ರೈ ವಳತ್ತಡ್ಕ, ನಳಿನಿ ಪಿ. ಶೆಟ್ಟಿ, ದಿನೇಶ್ ಪಿ.ವಿ., ಈಶ್ವರ ಬೇಡೆಕರ್, ಸುಭಾಷ್ ರೈ ಬೆಳ್ಳಿಪ್ಪಾಡಿ, ವಿನಯ ಸುವರ್ಣ, ಕೃಷ್ಣವೇಣಿ, ಕಾರ್ಯ ನಿರ್ವಹಣಾಧಿಕಾರಿ ಕೆ.ವಿ.ಶ್ರೀನಿವಾಸ್, ಪಿ.ಜಿ. ಜಗನ್ನಿವಾಸ ರಾವ್ ಏಲಂ ನಿಯಮಗಳನ್ನು ಸಭೆಗೆ ಮಂಡಿಸಿದರು. ಗಿರೀಶ್ ಕುಮಾರ್ ಏಲಂ ಕೂಗುವ ಪ್ರಕ್ರಿಯೆ ನಡೆಸಿದರು. ದೇವಳದ ಕಚೇರಿ ವ್ಯವಸ್ಥಾಪಕ ಹರೀಶ್ ಶೆಟ್ಟಿ ವೇದಿಕೆಯಲ್ಲಿದ್ದರು. ಇಎಂಡಿ ಮೊತ್ತ ಪಾವತಿಸಿದವರನ್ನು ಗುರುತಿಸಿ ಏಲಂ ನಡೆಯುವ ಸಭಾಭವನ ಪ್ರವೇಶಕ್ಕೆ ಅವಕಾಶ ನೀಡಲಾಯಿತು.

ಜಾತ್ರೆ ಗದ್ದೆಯ ತಾತ್ಕಾಲಿಕ ಅಂಗಡಿಗಳಿಗೆ ನಡೆದ ಏಲಂ ಪ್ರಕ್ರಿಯೆ ಬೆಳಗ್ಗೆ 10 ಗಂಟೆಗೆ ಆರಂಭಗೊಂಡಿತ್ತು. ಮಧ್ಯಾಹ್ನ ಊಟದ ವಿರಾಮದ ಬಳಿಕ ಮತ್ತೆ ಏಲಂ ಪ್ರಕ್ರಿಯೆ ನಡೆದಿದೆ. ರಾತ್ರಿ 8ರ ತನಕ ಸುದೀರ್ಘವಾಗಿ ನಡೆದ ಏಲಂ ಪ್ರಕ್ರಿಯೆ ಗೊಂದಲವಿಲ್ಲದೆ ನಡೆದಿರುವುದು ದಾಖಲೆಯಾಗಿದೆ. ಈ ಬಾರಿ ಹೆಚ್ಚಿನ ಅಂಗಡಿ, ಸ್ಥಳ ವಿಸ್ತರಣೆ ಮಾಡಿದ್ದರಿಂದ ಇನ್ನಷ್ಟು ಅಂಗಡಿ ಸ್ಥಳಗಳು ಖಾಲಿ ಇದೆ. ಶುಕ್ರವಾರ ಅಮ್ಯೂಸ್‌ಮೆಂಟ್ ಪಾರ್ಕ್ ಮೊದಲಾದ ದೊಡ್ಡ ಮಟ್ಟದ ಕಾರ್ಯಕ್ರಮಗಳಿಗೆ ಜಾಗದ ಹಂಚಿಕೆ ಏಲಂ ನಡೆಯಿತು.

> **ತುಪ್ಪದ ದೀಪ ಬೆಳಗಿಸಿ ವ್ಯಾಪಾರ ಆರಂಭಿಸಿ**
>
> ಏಲಂನಲ್ಲಿ ತಾತ್ಕಾಲಿಕ ಅಂಗಡಿ ಪಡೆದು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ದೇವರಿಗೆ ತುಪ್ಪದ ದೀಪ ಬೆಳಗಿಸಿ ವ್ಯಾಪಾರ ಆರಂಭಿಸಿ. ನಿಮ್ಮ ವ್ಯಾಪಾರ ದ್ವಿಗುಣಗೊಳ್ಳುತ್ತದೆ. ವ್ಯಾಪಾರಸ್ಥರೂ ದೇವರ ಭಕ್ತರೇ ಆಗಿದ್ದಾರೆ. ಏಲಂ ಪಡೆಯುವ ಮೂಲಕ ದೇವಳದ ಭಂಡಾರಕ್ಕೆ ಅವರ ಹಣ ಸಂದಾಯ ಆಗುತ್ತದೆ. ಅದು ಕೂಡಾ ದೇವರ ಸೇವೆಯೇ ಆಗಿದೆ.
>
> ● ಈಶ್ವರ ಭಟ್ ಪಂಜಿಗುಡ್ಡೆ

> **ಜಾಯಿಂಟ್ ವೀಲ್ ರೂ.66 ಲಕ್ಷಕ್ಕೆ ಏಲಂ**
>
> ಜಾತ್ರಾ ಗದ್ದೆಯ ಏಲಂ ಪ್ರಕ್ರಿಯೆ ಈ ಬಾರಿ ಭಾರೀ ಸಂಚಲನ ಮೂಡಿಸಿದೆ. ವಿಶೇಷವಾಗಿ ಜಾಯಿಂಟ್ ವೀಲ್ ಏಲಂ ದಾಖಲೆ ಮಟ್ಟ ತಲುಪಿದೆ. ಜಾತ್ರಾ ಗದ್ದೆಯಲ್ಲಿ ನಡೆದ ಹರಾಜಿನಲ್ಲಿ ಜಾಯಿಂಟ್ ವೀಲ್‌ಗಾಗಿ ನಡೆದ ತೀವ್ರ ಪೈಪೋಟಿಯಲ್ಲಿ ಬೆದ್ರಾಳದ ನವೀನ್ ಚಂದ್ರ ನ್ಯಾಕ್ ಅವರು ಬರೋಬ್ಬರಿ ರೂ.66 ಲಕ್ಷಕ್ಕೆ ಏಲಂ ಪಡೆದುಕೊಂಡಿದ್ದಾರೆ. ಕಳೆದ ವರ್ಷದ ಜಾತ್ರೆಯಲ್ಲಿ ಇದೇ ಜಾಯಿಂಟ್ ವೀಲ್ ಕೇವಲ ರೂ.18 ಲಕ್ಷಕ್ಕೆ ಏಲಂ ಆಗಿತ್ತು. ಈ ಬಾರಿ ಮೂರು ಪಟ್ಟು ಹೆಚ್ಚು ಮೊತ್ತ ತಲುಪಿದೆ. ಪ್ರತಿ ವರ್ಷ ಸಾವಿರಾರು ಭಕ್ತರು ಹಾಗೂ ಪ್ರವಾಸಿಗರನ್ನು ಆಕರ್ಷಿಸುವ ಪುತ್ತೂರು ಜಾತ್ರೆಯಲ್ಲಿ ಜಾಯಿಂಟ್ ವೀಲ್ ಪ್ರಮುಖ ಆಕರ್ಷಣೆಯಾಗಿದ್ದು, ಈ ಬಾರಿ ದಾಖಲೆ ಮೊತ್ತದಲ್ಲಿ ಏಲಂ ಆಗಿದೆ.

ಸುತ್ತ ಮುತ್ತ

ನಾಳೆ ಡಾ.ಬಾಬು ಜಗಜೀವನ ರಾಮ್ ಜನ್ಮದಿನಾಚರಣೆ

ಉಡುಪಿ: ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮದಿನಾಚರಣೆ ಕಾರ್ಯಕ್ರಮವು ಏ.5 ರಂದು ಬೆಳಿಗ್ಗೆ 10ಕ್ಕೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಉಡುಪಿ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕ ದಯಾನಂದ ಡಿ. ಕಿದಿಯೂರು ಉಪನ್ಯಾಸ ನೀಡಲಿದ್ದಾರೆ.

ನಾಳೆ ವಿಚಾರಗೋಷ್ಠಿ: ಮನವಿಪತ್ರ ಬಿಡುಗಡೆ

ಮುಲ್ಕಿ: ತುಳುವ ಮಹಾಸಭೆ ಇಂಟರ್‌ನ್ಯಾಷನಲ್ ಮುಲ್ಕಿ ತಾಲೂಕು ಆಶ್ರಯದಲ್ಲಿ ಬಂಟ್ಸ್ ಸಂಘ ಮುಲ್ಕಿ ಸಹಕಾರದೊಂದಿಗೆ ಮೇ 24 ರಂದು ಮುಲ್ಕಿಯಲ್ಲಿ ನಡೆಯಲಿರುವ ಅಪ್ಪೆಬೇರ್ ದ ತುಳುನಾಡ್ ರಾಷ್ಟ್ರೀಯ ತುಳು ವಿಚಾರಗೋಷ್ಠಿಯ ಮನವಿ ಪತ್ರ ಬಿಡುಗಡೆ ಸಮಾರಂಭ ಏ. 5ರಂದು ಬೆಳಿಗ್ಗೆ 10.30 ಕ್ಕೆ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ನಡೆಯಲಿದೆ.

ನಾಳೆ ಕ್ರಿಕೆಟ್ ಪಂದ್ಯಾಟ

ಕೈಕಂಬ: ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ಕುಪ್ಪೆಪದವಿನ ಆಟೋ ರಿಕ್ಷಾ ಚಾಲಕರ ಸಂಘದ ವತಿಯಿಂದ ಕಿಲೆಂಜಾರು, ಕೊಳವೂರು, ಮುತ್ತೂರು ಗ್ರಾಮಗಳ ವ್ಯಾಪ್ತಿಯ ಆಯ್ದ 8 ತಂಡಗಳ ಮತ್ತು ಇತರ 8 ಮುಕ್ತ ತಂಡಗಳ ನಾಕೌಟ್ ಮಾದರಿಯ ಕ್ರಿಕೆಟ್ ಪಂದ್ಯಾಟವು ಕಿಲೆಂಜಾರು ಅರಮನೆ ಮೈದಾನದಲ್ಲಿ ಏ.5ರಂದು ನಡೆಯಲಿದೆ.

ಬೆಳಿಗ್ಗೆ 8.30 ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮಂಗಳೂರು ನಗರ ಉತ್ತರ ವಿಧಾನ ಸಭಾ ಕ್ಷೇತ್ರದ ಶಾಸಕ ಡಾ. ಭರತ್ ಶೆಟ್ಟಿ, ಮೂಲ್ಕಿ ಐಎಎಂ ಫೌಂಡೇಶನ್‌ನ ಇನಾಯತ್ ಅಲಿ ಸಹಿತ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳ ವಿವಿಧ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಏ.10-16: ಸಸಿಹಿತ್ಲು ಶ್ರೀ ಭಗವತೀ ದೇವಳದಲ್ಲಿ ನಡಾವಳಿ ಉತ್ಸವ

ಮುಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಳದಲ್ಲಿ ಏ.10ರಿಂದ 16 ರವರೆಗೆ ನಡಾವಳಿ ಉತ್ಸವ , ಭರಣಿ ಮಹೋತ್ಸವ ನಡೆಯಲಿದೆ. ಏ.9 ರ ರಾತ್ರಿ 8 ಕ್ಕೆ ಕದಿಕೆ ಭಂಡಾರ ಮಂದಿರದಿಂದ ಸಸಿಹಿತ್ಲು ಕ್ಷೇತ್ರಕ್ಕೆ ಭಂಡಾರ ಆಗಮನ , 10 ರಂದು ಬೆಳಿಗ್ಗೆ ನಾಗದೇವರ ತಂಬಿಲ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ 7 ರಿಂದ ರಾತ್ರಿ 10.30ರ ವರೆಗೆ ಅನ್ನಸಂತರ್ಪಣೆ, ರಾತ್ರಿ 11ಕ್ಕೆ ಮಹಾಪೂಜೆ, ಬಲಿ ಪ್ರಾರಂಭ, ಮೂರ್ತಿಬಲಿ, ಕಂಚಿಲು ಸೇವೆ, ಉರುಳುಸೇವೆ, ಹರಕೆ, ತುಲಾಭಾರ ಸೇವೆ,11 ರ ಬೆಳಿಗ್ಗೆ ಧ್ವಜಾರೋಹಣ, ರಾತ್ರಿ ಮಹಾಪೂಜೆ, 12 ರ ರಾತ್ರಿ 10 ರಿಂದ ಪೂತಾಲಂಬಲಿ, ಮೂರ್ತಿದರ್ಶನ, ಪುಷ್ಪಕಲ ಹರಕೆ, ತುಲಾಭಾರ ಸೇವೆ, 13ರ ರಾತ್ರಿ ಪಡುನಡೆ, ಅಮೃತಕಲಶ, ಕಂಚೀಲು ಸೇವೆ, ಮೂರ್ತಿ ದರ್ಶನ, 14 ರ ರಾತ್ರಿ ತಾಲಪ್ಪೊಲಿ ಬಲಿ ಉತ್ಸವ, ಮೂರ್ತಿದರ್ಶನ, ಚತುರ್ಕಳ, 15 ರ ರಾತ್ರಿ ಮೂಡುನಡೆ ಬಲಿ, ಮೂರ್ತಿದರ್ಶನ, ಕಂಚೀಲು ಸೇವೆ, ಉರುಳುಸೇವೆ. ಸರ್ಪಕಳ, ಅಮೃತಕಲಶ, ತೂಟೆದಾರ, ಹರಕೆ, ತುಲಾಭಾರ ಸೇವೆ, 16 ರ ಬೆಳಿಗ್ಗೆ ಧ್ವಜಾವರೋಹಣ, ಭಂಡಾರ ನಿರ್ಗಮನ ನಡೆಯಲಿದೆ. ಏ.19ರಂದು 'ಓಂ ನಮೋ ಭಗವತೇ ವಾಸುದೇವಾಯ' ದ್ವಾದಶಾಕ್ಷರ ಮಂತ್ರೋಚ್ಚಾರ ನಡೆಯಲಿದ್ದು, ಬೆಳಿಗ್ಗೆ 6.17ಕ್ಕೆ ದೀಪ ಪ್ರಜ್ವಲನೆ , ಮಧ್ಯಾಹ್ನ ಅನ್ನಸಂತರ್ಪಣೆ, ಏ.20 ರಂದು ಬೆಳಿಗ್ಗೆ 6.16 ಕ್ಕೆ ಮಹಾಮಂಗಳಾರತಿ, ಪ್ರಸಾದ ವಿತರಣೆ, 22ರಂದು ರಾತ್ರಿ ಕದಿಕೆ ಭಂಡಾರ ಮಂದಿರದಲ್ಲಿ ದೀಪಾರಾಧನೆ, ಪೊರ್ಕಣ್ಣ ದೈವ ಮತ್ತು ಇತರ ದೈವಗಳ ತಂಬಿಲ ಸೇವೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ

ಏ.11ರಿಂದ ಕೊಳಚಿಕಂಬಳ ಶ್ರೀ ಜಾರಂದಾಯ ದೈವಸ್ಥಾನ ನೇಮ

ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿಕ್ಕೊಳಪಟ್ಟ ಕೊಳಚಿಕಂಬಳ ಶ್ರೀ ಜಾರಂದಾಯ, ಧೂಮಾವತಿ ದೈವಸ್ಥಾನದಲ್ಲಿ ಶ್ರೀ ಜಾರಂದಾಯ, ಧೂಮಾವತಿ ಮತ್ತು ಪರಿವಾರ ದೈವಗಳ ವರ್ಷಾವಧಿ ನೇಮ ಏ.11ರಿಂದ 13ರವರೆಗೆ ಜರಗಲಿದೆ. ಏ.11ರಂದು ಮಧ್ಯಾಹ್ನ 4 ಕ್ಕೆ ಭಂಡಾರ ಇಳಿದು ಧ್ವಜಾರೋಹಣ, 12 ರಂದು ಬೆಳಿಗ್ಗೆ 10ಕ್ಕೆ ದೈವಸ್ಥಾನದ ನಾಗ ಸನ್ನಿಧಿಯಲ್ಲಿ ಅಂಚನ್ ಮೂಲದವರ ನಾಗತಂಬಿಲ,ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ 9.30ಕ್ಕೆ ಶ್ರೀ ಜಾರಂದಾಯ, ಶ್ರೀ ಧೂಮಾವತಿ ಮತ್ತು ಪರಿವಾರ ದೈವಗಳ ನೇಮ, 13ರಂದು ಮಧ್ಯಾಹ್ನ 3.30ಕ್ಕೆ ಮಾಯಂದಾಳ ದೈವದ ನೇಮ ನಡೆಯಲಿದೆ

ಕೆಎಸ್‌ಆರ್‌ಟಿಸಿ ಬಸ್ ತಂಗುದಾಣ ತಳಭಾಗದ ಖಾಲಿ ಜಾಗದಲ್ಲಿ ನೀಡಲಾಗಿದೆ ಅವಕಾಶ

ಬಿ.ಸಿ.ರೋಡಿನಲ್ಲಿ ಆರಂಭಗೊಂಡಿದೆ ಪೇ ಪಾರ್ಕಿಂಗ್ ವ್ಯವಸ್ಥೆ!

ಬಂಟ್ವಾಳ: ಬೆಳೆಯುತ್ತಿರುವ ಬಿ.ಸಿ.ರೋಡಿನಲ್ಲಿ ಇದೇ ಮೊದಲಿಗೆ ಪೇ ಪಾರ್ಕಿಂಗ್ ವ್ಯವಸ್ಥೆಯೊಂದು ಜಾರಿಗೆ ಬಂದಿದೆ. ಪ್ರತಿನಿತ್ಯ ನೂರಾರು ಮಂದಿ ದ್ವಿಚಕ್ರವಾಹನ, ಕಾರುಗಳನ್ನು ಬೆಳಿಗ್ಗೆ ಬಿ.ಸಿ.ರೋಡಿನ ಎಲ್ಲೆಂದರಲ್ಲಿ ನಿಲುಗಡೆಗೊಳಿಸಿ ತಮ್ಮ ಅಗತ್ಯದ ಕರ್ತವ್ಯಕ್ಕಾಗಿ ತೆರಳಿ ಸಂಜೆಯ ಹೊತ್ತಿಗೆ ತಮ್ಮ ವಾಹನವನ್ನು ತೆಗೆದುಕೊಂಡು ಹೋಗುತ್ತಾರೆ.

ಬಿ.ಸಿ.ರೋಡಿನ ಮೇಲ್ಸುತುವೆಯ ಅಡಿಭಾಗ, ನಗರ ಪೊಲೀಸ್ ಠಾಣೆಗೆ ತೆರಳುವ ರಸ್ತೆ, ತಾ.ಪಂ.ಕಟ್ಟಡ ತೆರವಾದ ಖಾಲಿ ಸ್ಥಳ, ಮಿನಿವಿಧಾನಸೌಧದ ಒಳಗೆ, ರಕ್ತೇಶ್ವರೀ ದೇವಸ್ಥಾನ ಪಕ್ಕ ಸಹಿತ ಖಾಲಿ ಜಾಗ ಕಾಣಿಸಿಕೊಂಡಲ್ಲೆಲ್ಲ ವಾಹನಗಳ ತಂಗುದಾಣವಾಗಿ ಬಿಟ್ಟಿದೆ.

ಬಂಟ್ವಾಳ ಪುರಸಭೆಯಿಂದ ಪೇ ಪಾರ್ಕ್ ವ್ಯವಸ್ಥೆ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸುತ್ತಾ ಬರುತ್ತಿದ್ದರೂ ಇಂತಹ ವ್ಯವಸ್ಥೆಗೆ ಪುರಸಭೆ ಮುಂದಾಗಿಲ್ಲ, ಒಂದೊಮ್ಮೆ ಚುನಾಯಿತ ಪ್ರತಿನಿಧಿಗಳ ಆಡಳಿತ ಖಾಲಿ ಜಮೀನು ಗುರುತಿಸಿದರೂ ಇನ್ನು ಪೇಪಾರ್ಕ್ ಜಾರಿಗೆ ಬಂದಿಲ್ಲ.



ವಾಹನ ಸವಾರರಲ್ಲಿ ಸಂತಸ

ಇದೀಗ ನಿಗಮ ಬಿ.ಸಿ.ರೋಡಿನ ಕೆಎಸ್‌ಆರ್‌ಟಿಸಿ ಬಸ್ ತಂಗುದಾಣದ ತಳಭಾಗದ ಖಾಲಿ ಜಾಗದಲ್ಲಿ ಪೇ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂಡಿದೆ. ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ಮುಗಿಸಿ, ಇದೀಗ ಪೇ ಪಾರ್ಕ್ ವ್ಯವಸ್ಥೆಯು ಆರಂಭಗೊಂಡಿದ್ದು, ಎಲ್ಲೆಂದರಲ್ಲಿ ದಾರಿ ಮಧ್ಯೆ ವಾಹನ ನಿಲುಗಡೆಗೊಳಿಸಿ ತೆರಳುವ ವಾಹನ ಸವಾರರಲ್ಲಿ ಒಂದಷ್ಟು ಸಂತಸ ಮೂಡಿದೆ.

9 ವರ್ಷಗಳ ಹಿಂದೆ ಬಿ.ಸಿ.ರೋಡಿನ ಹೆದ್ದಾರಿಗೆ ತಾಗಿಕೊಂಡೆ ಸುಸಜ್ಜಿತವಾದ ಕೆಎಸ್ಆರ್ಟಿಸಿ ಬಸ್ ನಿಲ್ದಾಣ ಅನುಷ್ಠಾನಕ್ಕೆ ಬಂದಿದೆ. ಆದರೆ ಕಾರಣಾಂತರಗಳಿಂದ ಅಂಗಡಿ ಮುಂಗಟ್ಟುಗಳು ಇದುವರೆಗೂ ಮುಚ್ಚಿದ ಸ್ಥಿತಿಯಲ್ಲೇ ಇದೆ. ಹಾಗಾಗಿ ಪ್ರಯಾಣಿಕರ ಓಡಾಟವು ಕಡಿಮೆಯೇ ಪುತ್ತೂರು, ಧರ್ಮಸ್ಥಳ ಮೊದಲಾದೆಡೆಯಿಂದ ಬರುವ ಬಸ್‌ಗಳು ನಿಲ್ದಾಣದೊಳಗೆ ಪ್ರವೇಶಿಸಿದರೆ, ಮಂಗಳೂರಿನಿಂದ ಬರುವಂತ ಬಸ್‌ಗಳು ಈ ಬಸ್ ನಿಲ್ದಾಣದೊಳಗೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ, ಆಗಂತ ಇದರ ಮುಂಭಾಗ ಬಸ್ ತಂಗುದಾಣ ವಿದ್ದರೂ ಬಸ್ ನಿಲುಗಡೆಯಾಗುತ್ತಿಲ್ಲ, ನೇರ ಮುಂದಕ್ಕೆ ಚಲಿಸಿ ಖಾಸಗಿ ಬಸ್ ನಿಲ್ದಾಣದ ಎದುರು ರಾಜಾರಸ್ತೆಯಲ್ಲೇ ಪ್ರಯಾಣಿಕರನ್ನು ಇಳಿಸಿ , ಹತ್ತಿಸಲಾಗುತ್ತಿದೆ. ಪ್ರಯಾಣಿಕರು ಈ ವ್ಯವಸ್ಥೆಗೆ ಒಗ್ಗಿಕೊಂಡಿದ್ದಾರೆ. ಇದೀಗ ತಳಭಾಗದಲ್ಲಿ ಖಾಲಿಯಿದ್ದ ಪೇ ಪಾರ್ಕ್ ವ್ಯವಸ್ಥೆ ಮಾಡಲಾಗಿದೆ.

ಶುಲ್ಕ ವಿಧಿಸಲಾಗಿದೆ

ಬೆಳಿಗ್ಗೆ 6 ರಿಂದ ರಾತ್ರಿ 10ರ ವರೆಗೆ ಪಾರ್ಕಿಂಗ್ ವ್ಯವಸ್ಥೆ ತೆರೆದಿದ್ದು, ದ್ವಿಚಕ್ರ ವಾಹನಗಳಿಗೆ 4 ಗಂಟೆಗೆ 5 ರೂ. , ಅದಕ್ಕಿಂತ ಹೆಚ್ಚು ಒಂದು ದಿನಕ್ಕೆ 10 ರೂ.ಶುಲ್ಕ ವಿಧಿಸಲಾಗಿದೆ. ಕಾರುಗಳಿಗೆ 4 ಗಂಟೆಗೆ 10 ರೂ., ಅದಕ್ಕಿಂತ ಹೆಚ್ಚು ಒಂದು ದಿನಕ್ಕೆ 20 ರೂ. ಶುಲ್ಕ ವಿಧಿಸಲಾಗುತ್ತದೆ. ಒಳಭಾಗದಲ್ಲಿ ವಿಶಾಲ ಸ್ಥಳಾವಕಾಶವಿದ್ದು, ಸಾಕಷ್ಟು ನಾಲ್ಕು ಚಕ್ರ, ದ್ವಿಚಕ್ರ ವಾಹನ ನಿಲ್ಲಿಸಲು ಅವಕಾಶವಿದೆ.

ಕಳವಿನ ಪ್ರಮೇಯವಿಲ್ಲ

ಬಿ.ಸಿ.ರೋಡಿನ ಮೇಲ್ಸ್ತುವೆಯ ತಳಭಾಗ ಸಹಿತ ವಿವಿಧೆಡೆಯಲ್ಲಿ ವಾಹನಗಳನ್ನು ಪಾರ್ಕ್ ಮಾಡುವುದರಿಂದ ಸವಾರ ಸಂಜೆ ಬರುವಷ್ಟರ ಹೊತ್ತಿಗೆ ತನ್ನ ವಾಹನ ಇದೆಯಾ,ಇಲ್ಲವೇ ಎಂಬ ಆತಂಕದಲ್ಲಿ ಬರುತ್ತಾನೆ. ಈಗಾಗಲೇ ಸಾಕಷ್ಟು ದ್ವಿಚಕ್ರ ವಾಹನಗಳು ಮೇಲ್ಸ್ತುವೆಯ ತಳಭಾಗ, ಪೊಲೀಸರ ಠಾಣೆಯ ಪಕ್ಕದ ಖಾಲಿ ಸ್ಥಳದಿಂದ ದ್ವಿಚಕ್ರವಾಹನ ಕಳವಾ ಗಿರುವ ಸಾಕಷ್ಟು ಪ್ರಕರಣ ಬಂಟ್ವಾಳ ನಗರ ಠಾಣೆ ಯಲ್ಲಿ ದಾಖಲಾಗಿವೆ. ಈ ಪೈಕಿ ಹೆಚ್ಚಿನ ವಾಹನ ಕಳವು ಪ್ರಕರಣ ಪತ್ತೆಯಾಗಲಿಲ್ಲ, ಕೆಎಸ್ಆರ್ಟಿಸಿ ತಂಗುದಾಣದ ತಳಭಾಗದಲ್ಲಿ ಪೇ ಪಾರ್ಕ್ ವ್ಯವಸ್ಥೆ ಒಂದಷ್ಟು ಸೇಫ್ಟಿಯಾಗಿ ವಾಹನಗಳು ಇರಲಿವೆ.

'ಸೆನ್ನಿಯಾ - 2026' ಸ್ಪರ್ಧೆ: ಬಂಟಕಲ್ ಇಂಜಿನಿಯರಿಂಗ್ ಕಾಲೇಜ್ ರನ್ನರ್ ಆಫ್



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೂಡುಬಿದಿರೆಯಲ್ಲಿ ನಡೆದ 'ಸೆನ್ನಿಯಾ - 2026'ರಲ್ಲಿ ರನ್ನರ್ ಆಫ್ ಟ್ರೋಫಿ ಪಡೆದಿದ್ದಾರೆ.

ಹಲವು ಬಹುಮಾನ

ಲೆನ್ಸ್ ಕ್ರಾಫ್ಟ್ (ಫೋಟೋಗ್ರಫಿ) ಸ್ಪರ್ಧೆಯಲ್ಲಿ ಗಣಕಯಂತ್ರ ವಿಭಾಗದ ವಿದ್ಯಾರ್ಥಿಗಳಾದ ದೀಪಕ್ ಅವರು ಪ್ರಥಮ ಬಹುಮಾನ ಹಾಗೂ ಸಿ. ವಿಘ್ನೇಶ್ ಕುಮಾರ್ ಅವರು ದ್ವಿತೀಯ ಬಹುಮಾನ, ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ ವಿಭಾಗದ ನಿಶಾಂತ್ ಜತ್ತನ್ ಮತ್ತು ಚೇತನ್ ವಿ. ಕೋಟ್ಯಾನ್ ಇವರು ದೃಶ್ಯಂ (ವಿಡಿಯೋಗ್ರಫಿ) ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಗಣಕ ಯಂತ್ರ ವಿಭಾಗದ ನಿಖಿತ್ ಪೆರೇರಾ ಮತ್ತು ಪ್ರಿಯಾಂಕಾ ಅವರು ಲಿವಿಂಗ್ ಕ್ಯಾನ್ವಾಸ್ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗಳಿಸಿದ್ದಾರೆ.

ಗಣಕಯಂತ್ರ ವಿಭಾಗದ ಶರಣ್ಯ ತಂತ್ರಿ ಅವರು ಕ್ರೋಮಾಫೇಟ್ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಗಣಕಯಂತ್ರ ವಿಭಾಗದ ಧನುಷ್ ಎಸ್. ಅವರು ಸ್ಪೆಲ್ ಬಿ. ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಗಣಕಯಂತ್ರ ವಿಭಾಗದ ಆರೋನ್ ಓವನ್ ಡಿಸೋಜಾ ಮತ್ತು ತಂಡದವರು ಬ್ಯಾಟಲ್ ಆಫ್ ಬ್ಯಾಂಡ್ ಸ್ಪರ್ಧೆಯಲ್ಲಿ ರನ್ನರ್ ಆಫ್ ಬಹುಮಾನ ಗಳಿಸಿದ್ದಾರೆ.

ಸಾಧನೆಗೆ ಶ್ಲಾಘನೆ

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಸೋದೆ ಶಿಕ್ಷಣ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಂಸ್ಥೆಯ ಪ್ರಾಂಶುಪಾಲರು ಹರ್ಷ ವ್ಯಕ್ತಪಡಿಸಿದ್ದಾರೆ.

ಏ.19ರಿಂದ 23ರವರೆಗೆ ಅತ್ತಾವರ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಬ್ರಹ್ಮಕಲಶ

ಮಂಗಳೂರು: ನಗರದ ಅತ್ತಾವರ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಏ. 19ರಿಂದ 23ರವರೆಗೆ ಅಯ್ಯಪ್ಪಸ್ವಾಮಿ ಹಾಗೂ ಶ್ರೀ ಮಹಾಗಣಪತಿ, ಶ್ರೀ ಸುಬ್ರಹ್ಮಣ್ಯ, ಶ್ರೀ ದುರ್ಗಾದೇವಿಯರಿಗೆ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ನಡೆಯಲಿದೆ.

ಏ. 19ರಂದು ಮಂಗಳಾದೇವಿ ದೇವಸ್ಥಾನದಿಂದ ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದೆ. ಏ.23ರಂದು ನೂತನವಾಗಿ ನಿರ್ಮಿಸಲಾಗಿರುವ ಗರ್ಭಗೃಹದಲ್ಲಿ ವೇ.ಮೂ. ಕುಡುಪು ಕೃಷ್ಣರಾಜ ತಂತ್ರಿ ಅವರ ನೇತೃತ್ವದಲ್ಲಿ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಏ.21ರಂದು ಪಂದಳ ರಾಜ ವಂಶಸ್ಥರಾದ ನಾರಾಯಣ ವರ್ಮ ತಂಬೂರನ್ ತಿರುವನಂತಪುರಂ ಅವರು ಭಾಗವಹಿಸಲಿದ್ದಾರೆ ಎಂದು ಅಯ್ಯಪ್ಪ ಭಕ್ತ ಸಮಿತಿಯ ಅಧ್ಯಕ್ಷ ಸೂರಜ್ ರಾಘವನ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ.20ರಂದು ಬೆಳಗ್ಗೆ 8.30ಕ್ಕೆ ದೇವತಾ ಪ್ರಾರ್ಥನೆಯೊಂದಿಗೆ ತೋರಣ ಮುಹೂರ್ತ, ಉಗ್ರಾಣ ಮುಹೂರ್ತ ನಡೆದು ವೈದಿಕ ಕಾರ್ಯಕ್ರಮಗಳ ಆರಂಭಗೊಳ್ಳಲಿವೆ. ಪ್ರತಿದಿನ ಮಧ್ಯಾಹ್ನ 12ಕ್ಕೆ ದೀಪ ಪ್ರಜ್ವಲನೆ, ಸಂಜೆ 7ಕ್ಕೆ ಸಭಾ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸ್ವಾಮೀಜಿಗಳು, ಗಣ್ಯರು ಪಾಲ್ಗೊಳ್ಳುವರು. ಏ.20ರಂದು ಮಧ್ಯಾಹ್ನ 12.15ರಿಂದ ಭಜನೆ, ಮಧ್ಯಾಹ್ನ 12.30ರಿಂದ ಅನ್ನಪ್ರಸಾದ, ಸಂಜೆ 6.15ರಿಂದ ನೃತ್ಯ ಕಾರ್ಯಕ್ರಮ, 8.15ರಿಂದ ಮಲೆತ ಬೊಲ್ಪು ಯಕ್ಷಗಾನ, ಏ.21ರಂದು ಬೆಳಗ್ಗೆ 8.30ರಿಂದ ವೈದಿಕ ಕಾರ್ಯಕ್ರಮ, ಮಧ್ಯಾಹ್ನ 12.15ರಿಂದ ಭಜನೆ, 12.30ಕ್ಕೆ ಅನ್ನಪ್ರಸಾದ, ಸಂಜೆ 6.15ರಿಂದ ನೃತ್ಯ ಕಾರ್ಯಕ್ರಮ, ರಾತ್ರಿ 8.15ರಿಂದ ಎನ್ನನೇ ಕಥೆ ನಾಟಕ, ಏ.22ರಂದು ಬೆಳಗ್ಗೆ 8ರಿಂದ ವೈದಿಕ ಕಾರ್ಯಕ್ರಮ, ಮಧ್ಯಾಹ್ನ 12.15ರಿಂದ ಭಜನೆ, 12.30ರಿಂದ ಅನ್ನಪ್ರಸಾದ, ಸಂಜೆ 6.15ರಿಂದ ವೇಣುವಾದನ, ರಾತ್ರಿ 8.15ರಿಂದ ರಮೇಶ್ಚಂದ್ರ ಬೆಂಗಳೂರು ಅವರಿಂದ ಸಂಗೀತ ರಸಮಂಜರಿ ನಡೆಯಲಿದೆ ಎಂದರು.

ಬ್ರಹ್ಮಕಲಶ ಸಮಿತಿಯ ಕಾರ್ಯಾಧ್ಯಕ್ಷರಾದ ಮುರಳೀಧರ್, ಗೋಕುಲ್ ದಾಸ್, ಸ್ವಾಗತ ಸಮಿತಿಯ ಅಧ್ಯಕ್ಷ ರಾಜರತ್ನ ಸನಿಲ್, ಗೌರವ ಕಾರ್ಯದರ್ಶಿ ಜನಾರ್ದನ ಅತ್ತಾವರ, ಉಪಾಧ್ಯಕ್ಷೆ ಮಾಲತಿ ಶೆಟ್ಟಿ ಮಾಣೂರು, ಅಭಿವೃದ್ಧಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಕ್ಷಿತಿ ಮಮ್ಮಲ್ಲೂರು, ಸೂರ್ಯಕಾಂತ್ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಏ.23: ಶ್ರೀ ಅಯ್ಯಪ್ಪ ಸ್ವಾಮಿಗೆ ಬ್ರಹ್ಮ ಕುಂಭಾಭಿಷೇಕ

ಏ.23ರಂದು ಬೆಳಗ್ಗೆ 6ರಿಂದ ವೈದಿಕ ಕಾರ್ಯಕ್ರಮ, 7.30ರಿಂದ 9.30ರ ಸಮಯ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿಯ ಪ್ರತಿಷ್ಠಾಪನೆ, ಅಷ್ಟಬಂಧ ಸ್ಥಾಪನೆ, ಜೀವ ಕುಂಭಾಭಿಷೇಕ, ಪ್ರಾಣ ಪ್ರತಿಷ್ಠಾಪನೆ, ಶ್ರೀ ಗಣಪತಿ, ಶ್ರೀ ಸುಬ್ರಹ್ಮಣ್ಯ, ಶ್ರೀ ದುರ್ಗಾದೇವಿ ಪ್ರತಿಷ್ಠೆ 9.30ರಿಂದ 10.30ರ ವೇಳೆಗೆ ಶ್ರೀ ಅಯ್ಯಪ್ಪ ಸ್ವಾಮಿಗೆ ಬ್ರಹ್ಮ ಕುಂಭಾಭಿಷೇಕ, ಪರಿಕಲಶಾಭಿಷೇಕ, ಪ್ರಸನ್ನ ಪೂಜೆ, 11.45ರಿಂದ ಭಜನೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಪಲ್ಲಪೂಜೆ, ಅನ್ನಸಂತರ್ಪಣೆ, ಮಧ್ಯಾಹ್ನ 1ಕ್ಕೆ ಕವಿ ಕಾವ್ಯ ಗಾಯನ, ಸಂಜೆ 6.15ರಿಂದ ಭಕ್ತಿಗೀತೆ ಮತ್ತು ರಸಮಂಜರಿ, ರಾತ್ರಿ 9ರಿಂದ ಮಣಿಕಂಠ ಜನನ ನೃತ್ಯರೂಪಕ ನಡೆಯಲಿದೆ ಎಂದುಬ ಸೂರಜ್ ರಾಘವನ್ ತಿಳಿಸಿದರು.

ಎಯುಪಿ ಶಾಲೆ: ಮವ್ವಾರು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಭೆ



ಮುಳ್ಳೇರಿಯ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾಸರಗೋಡು ತಾಲೂಕು ಮವ್ವಾರು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಭೆ ಮವ್ವಾರು ಎಯುಪಿ ಶಾಲೆಯಲ್ಲಿ ಜರಗಿತು.

ಈ ಸಂದರ್ಭ ಘಟಕದ ಸ್ವಯಂ ಸೇವಕರಿಗೆ ಬ್ಯಾಗ್ ವಿತರಿಸಲಾಯಿತು. ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕು ಯೋಜನಾ ಧಿಕಾರಿ ದಿನೇಶ್ ಮಾತನಾಡಿ, ಕಳೆದ 3 ವರ್ಷಗಳಿಂದ ಕಾಸರಗೋಡು ತಾಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಶೌರ್ಯ ವಿಪತ್ತು ನಾಲ್ಕು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಈ 4 ಘಟಕಗಳಲ್ಲಿ 84 ಜನ ಸ್ವಯಂ ಸೇವಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸ್ವಚ್ಛತೆ, ಬಡ ಕುಟುಂಬದವರಿಗೆ ಮನೆ ನಿರ್ಮಾಣ ಮತ್ತು ದುರಸ್ತಿ ಕೆಲಸ, ಊರಿನ ದೇವಸ್ಥಾನದಲ್ಲಿ ಶ್ರಮದಾನ ಇನ್ನಿತರ ಸಾಮಾಜಿಕ ಚಟುವಟಿಕೆಯಲ್ಲಿ ಘಟಕದ ಸ್ವಯಂ ಸೇವಕರು ಭಾಗಿಯಾಗುತ್ತಾರೆ ಎಂದರು.

ಘಟಕದ ಸದಸ್ಯೆ ದಾಕ್ಷಾಯಿಣಿ ದೀಪ ಬೆಳಗಿಸಿ ಉದ್ಘಾಟಿಸಿದರು. ಜನಜಾಗೃತಿ ವೇದಿಕೆ ಅಧ್ಯಕ್ಷ ಅಖಿಲೇಶ್ ನಗುಮುಗಂ, ಶೌರ್ಯ ಘಟಕದ ಮಾಸ್ಟರ್ ಜಗನ್ನಾಥ, ಘಟಕ ಸಂಯೋಜಕಿ ರಾಜೇಶ್ವರಿ ಬಲ್ಲಾಳ್, ಘಟಕ ಪ್ರತಿನಿಧಿ ಪದ್ಮನಾಭ ಹಾಗೂ ಸ್ವಯಂಸೇವಕರಾದ ಕೊರಗಪ್ಪ ಬೆಳ್ಳಿಗೆ, ಅಶೋಕ ಆಚಾರ್ಯ, ಶಶಿಧರ, ಸುರೇಶ, ನಾಗೇಶ, ಪ್ರಕಾಶ, ರಾಜೇಂದ್ರ, ಅಜಯ್, ವಿಶ್ವನಾಥ ಮತ್ತಿತರರಿದ್ದರು.

ಏ.12ರಂದು ಗುಳಿಗ ಕೋಲ ಉತ್ಸವ

ಕುಂಬಳೆ: ಕಾರಿಪ್ಪಾಡಿ ಚೌಕಾರು ಶ್ರೀ ಗುಳಿಗಜ್ಜ ಸೇವಾ ಸಮಿತಿಯ ಆಶ್ರಯದಲ್ಲಿ ಕಾರಿಪ್ಪಾಡಿ ಚೌಕಾರು ಶ್ರೀ ಗುಳಿಗ ದೈವದ ವಾರ್ಷಿಕ ಕೋಲ ಉತ್ಸವವು ಏ.12ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 8 ಗಂಟೆಗೆ ನಾಗ ತಂಬಿಲ, 9ಗಂಟೆಗೆ ವಿವಿಧ ತಂಡಗಳಿಂದ ಭಜನೆ, ಮಧ್ಯಾಹ್ನ ಅನ್ನ ಸಂತರ್ಪಣೆ, ಅಪರಾಹ್ನ 2ರಿಂದ ಕುಣಿತ ಭಜನೆ, ಸಂಜೆ 4ಕ್ಕೆ ಶ್ರೀ ಗುಳಿಗಜ್ಜನ ಕೋಲ, ರಾತ್ರಿ 7.30ಕ್ಕೆ ಆನಂದಲಹರಿ ನಡೆಯಲಿದೆ.

ಜಾತಿ, ಭೇದ ಮರೆತು ಒಗ್ಗಟ್ಟಾಗಿ ಭವ್ಯ ಭಾರತದ ಭವಿಷ್ಯಕ್ಕಾಗಿ ಶ್ರಮಿಸೋಣ



ಬಂಟ್ವಾಳ: ವಿಶ್ವ ಹಿಂದೂ ಪರಿಷತ್ - ಬಜರಂಗ ದಳ ಸಜೀಪ, ಕಲ್ಲಡ್ಕ ಪ್ರಖಂಡ ಇದರ ಆಶ್ರಯದಲ್ಲಿ ಮಾರ್ನಬೈಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಸಾರ್ವಜನಿಕ ಶ್ರೀ ಶನಿಪೂಜೆ ಮತ್ತು ಗೋಪೂಜೆ ನಡೆಯಿತು.

ಈ ಸಂದರ್ಭ ನಡೆದ ಬಂಟ್ವಾಳ ತಾ.ಪಂ.ನ ಮಾಜಿ ಅಧ್ಯಕ್ಷ ಯಶವಂತ ಡಿ. ದೇರಾಜೆಗುತ್ತು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲಿಯುಗದಲ್ಲಿ ಸಂಘಟನೆಯೊಂದೇ ಎಲ್ಲದಕ್ಕೂ ಉತ್ತರ ನೀಡಲು ಸಾಧ್ಯ. ಆ ನಿಟ್ಟಿನಲ್ಲಿ ನಾವೆಲ್ಲರೂ ಒಟ್ಟುಗೂಡಿ ಧರ್ಮವನ್ನು ಉಳಿಸೋಣ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ವಿಶ್ವ ಹಿಂದೂ ಪರಿಷತ್ ಕಲ್ಲಡ್ಕ ಪ್ರಖಂಡದ ಅಧ್ಯಕ್ಷ ಸಚಿನ್ ಮೆಲ್ಕಾರ್ ಮಾತನಾಡಿ, ನಾವೆಲ್ಲರೂ ಜಾತಿ, ಭೇದಗಳನ್ನು ಮರೆತು ಒಗ್ಗಟ್ಟಾಗಿ ಭವ್ಯ ಭಾರತದ ಭವಿಷ್ಯಕ್ಕಾಗಿ ಶ್ರಮಿಸೋಣ ಎಂದರು.

ಬಿಜೆಪಿ ನಾಯಕ ಸಂದೇಶ್ ಶೆಟ್ಟಿ ಅರೆಬೆಟ್ಟು, ಉದ್ಯಮಿ ಶ್ರೀಕಾಂತ್ ಶೆಟ್ಟಿ ಸಂಕೇಶ, ಶ್ರೀ ದುರ್ಗಾಪರಮೇಶ್ವರಿ ದೇವಳ ಟ್ರಸ್ಟಿ ರಾಮಕೃಷ್ಣ ರಾವ್ ಮಾರ್ನಬೈಲ್, ಬಜರಂಗದಳದ ಮುಖಂಡ ಮಿಥುನ್ ಪೂಜಾರಿ ಕಲ್ಲಡ್ಕ, ಬಿಜೆಪಿ ಮುಖಂಡ ಗಿರೀಶ್ ಕುಕ್ಕುದಕಟ್ಟೆ, ಬಜರಂಗದಳ ಕಲ್ಲಡ್ಕ ಪ್ರಖಂಡ ಸಂಚಾಲಕ ಅಮಿತ್ ಅಂಚನ್ ಉಪಸ್ಥಿತರಿದ್ದರು.

ನಿಧಿ ಹಸ್ತಾಂತರ, ಗೌರವ

ಇದೇ ವೇಳೆ ಪರಿಸರದ ಅಶಕ್ತ ಕುಟುಂಬಗಳಿಗೆ ನಿಧಿ ಹಸ್ತಾಂತರ, ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿರುವ ವಿವಿಧ ಸಂಘಟನೆ, ಭಜನಾ ತಂಡಗಳ ಗುರುತಿಸಿ ಗೌರವಿಸಲಾಯಿತು.

ವಿಹಿಂಪ ಕಲ್ಲಡ್ಕ ಪ್ರಖಂಡದ ಕಾರ್ಯದರ್ಶಿ ಲೋಹಿತ್ ಪಣೋಲಿಬೈಲ್ ಪ್ರಸ್ತಾವನೆಗೈದು, ಸ್ವಾಗತಿಸಿ, ವಿಹಿಂಪ ಸಜಿಪ ಖಂಡ ಸಮಿತಿಯ ಉಪಾಧ್ಯಕ್ಷ ಹರೀಶ್ ಕೊಳಕೆ ವಂದಿಸಿದರು. ಮನೋಹರ ಕರಾಜೆ ನಿರೂಪಿಸಿದರು.

ಮನೆಹಳ್ಳಿ ಮಠದ ಜಾತ್ರೋತ್ಸವಕ್ಕೆ ಚಾಲನೆ



ಸೋಮವಾರಪೇಟೆ: ತಪೋಕ್ಷೇತ್ರ ಮನೆಹಳ್ಳಿ ಮಠದ ಜಾತ್ರೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ತಾಲೂಕಿನ ಆಲೂರುಸಿದ್ದಾಪುರ ಸಮೀಪದ ಮನೆಹಳ್ಳಿ ಮಠದ ಆವರಣದಲ್ಲಿ ಮಠದ ಶ್ರೀ ಮಹಾಂತಶಿವಲಿಂಗ ಸ್ವಾಮೀಜಿ ಕ್ಷೇತ್ರದ ಆರಾಧ್ಯ ದೇವರಾದ ವೀರಭದ್ರೇಶ್ವರ, ಭದ್ರಕಾಳಿ, ಶ್ರೀ ಗುರುಸಿದ್ದವೀರೇಶ್ವರ ಹಾಗೂ ತಪೋವನೇಶ್ವರಿ ದೇವಿಯವರಿಗೆ ರುದ್ರಾಭಿಷೇಕ, ಅಷ್ಟೋತ್ತರ ನಂತರ ಮಹಾಮಂಗಳಾರತಿ ನೆರವೇರಿಸಿದರು. ಆನಂತರ ಕಲ್ಯಾಣಿ ಸಮೀಪ ಶಟಸ್ಥಲ ಧ್ವಜಾರೋಹಣ ನೆರವೇರಿಸುವ ಮೂಲಕ 2026 ರ ಜಾತ್ರಾಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಸ್ವಾಮೀಜಿ ಶ್ರೀ ಮಠದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಜಾತ್ರಾಮಹೋತ್ಸವ ಶ್ರದ್ಧಾ ಭಕ್ತಿ ಹಾಗೂ ಸಂಭ್ರಮದಿಂದ ನಡೆಯಲಿದೆ.

3 ದಿನ ನಡೆಯಲಿರುವ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಪಾಲ್ಗೊಳ್ಳಲಿ ದ್ದಾರೆ. ಏಪ್ರಿಲ್ 4 ರಂದು ಮದ್ಯಾಹ್ನ 3 ಗಂಟೆಗೆ ಧಾರ್ಮಿಕ ಸಮಾರಂಭ ನಡೆಯಲಿದೆ ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು, ಆಗಮಿಸಲಿದ್ದಾರೆ. ಸಂಜೆ 7 ಕ್ಕೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸ್ವಾಮಿಯವರ ಮಹಾರಥೋತ್ಸವ ನಡೆಯಲಿದೆ ಎಂದರು.

ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ 'ವಿವೇಕ ಚೈತ್ರ' ಶಿಬಿರ ಉದ್ಘಾಟನೆ



ಸುಳ್ಯ: ಜಾಲ್ಸೂರು ವಿನೋಭನಗರ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ವಿವೇಕ ಚೈತ್ರ ಬೇಸಿಗೆ ಶಿಬಿರವು ಎರಡು ವಿಭಾಗಗಳಲ್ಲಿ ಬುಧವಾರ ಉದ್ಘಾಟನೆಗೊಂಡಿತು.

ಪ್ರಾಥಮಿಕ ವಿಭಾಗದ ಶಿಬಿರವನ್ನು ಒಂದನೇ ವೇದಿಕೆಯಲ್ಲಿ ನಿವೇದಿತಾ ಮಹಿಳಾ ಟ್ರಸ್ಟ್ ಅಧ್ಯಕ್ಷೆ ಪುಷ್ಪ ಮೇದಪ್ಪ ಮತ್ತು ಪ್ರೌಢ ವಿಭಾಗದ ಎರಡನೇ ವೇದಿಕೆಯಲ್ಲಿ ನಗರ ಪಂಚಾಯತ್ ಮಾಜಿ ಅಧ್ಯಕ್ಷೆ ಶಶಿಕಲಾ ನೀರಬಿದಿರೆ ಉದ್ಘಾಟಿಸಿ ಶುಭ ಹಾರೈಸಿದರು.

ಈ ಸಂದರ್ಭ ಆಡಳಿತ ಮಂಡಳಿ ಕೋಶಾಧಿಕಾರಿ ಸುಧಾಕರ ಕಾಮತ್, ಸಂಸ್ಥೆ ಸಂಚಾಲಕ ಡಾ. ಗೋಪಾಲಕೃಷ್ಣ ಭಟ್ ಕಾಟೂರು, ಸದಸ್ಯರಾದ ಲತಾ ಮಧುಸೂದನ್, ಹೇಮಂತ್ ಕಾಮತ್ ಅರಂಬೂರು, ಹೇಮಂತ್‌ಮಠ, ಮಾತೃಭಾರತಿ ಅಧ್ಯಕ್ಷೆ ಜಲಜಾ ಆಚಾರ್ಯ, ಶುಭ ಕಾಟೂರು, ಪ್ರಾಥಮಿಕ ವಿಭಾಗದ ಮುಖ್ಯೋಪಾ ಧ್ಯಾಯ ಜಯಪ್ರಸಾದ್ ಕಾರಿಂಜ, ಪ್ರೌಢ ವಿಭಾಗದ ಮುಖ್ಯೋಪಾಧ್ಯಾಯ ಗಿರೀಶ್ ಕುಮಾರ್, ಶಿಬಿರ ಕಾರ್ಯವಾಹರಾದ ಅಕ್ಷಯ್ ನವೀನ್ ಮತ್ತಿತರರಿದ್ದರು.

ಸಹಶಿಕ್ಷಕಿ ವಿದ್ಯಾಲಕ್ಷ್ಮೀ ಸ್ವಾಗತಿಸಿ, ಶಶಿಧರ ಎಂ. ವಂದಿಸಿದರು. ಮಮತಾ ಡಿ. ಕಾರ್ಯಕ್ರಮ ನಿರ್ವಹಿಸಿದರು.

ಅಂತರ್ ಕಾಲೇಜು ಸ್ಪರ್ಧಾಕೂಟ 'ಯುಥೋಪಿಯಾ -2026' ಉದ್ಘಾಟನೆ

ಶಿಸ್ತು, ಜೀವನ ಕೌಶಲ್ಯ ಅಳವಡಿಸಿಕೊಳ್ಳಿ: ಕೋಟ್ಯಾನ್

ಮುಲ್ಕಿ: ಯುವ ಸಮುದಾಯ ಶಿಸ್ತು, ಜೀವನ ಕೌಶಲ್ಯಗಳು, ಹೋರಾಟ ಮನೋಭಾವ, ಛಲಗಳನ್ನು ಅಳವಡಿಸಿಕೊಂಡು ಮುನ್ನಡೆಯಬೇಕು. ಅಂತರ್ ಕಾಲೇಜು ಸ್ಪರ್ಧಾಕೂಟಗಳು ಯುವಜನತೆಗೆ ಬದುಕಿನ ಪಾಠ ಕಲಿಸುತ್ತವೆ ಎಂದು ಶಾಸಕ ಉಮಾನಾಥ ಕೋಟ್ಯಾನ್ ಹೇಳಿದ್ದಾರೆ.

ಅವರು ಹಳೆಯಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರ್ ಕಾಲೇಜು ಬೌದ್ಧಿಕ-ಸಾಂಸ್ಕೃತಿಕ ಸ್ಪರ್ಧಾಕೂಟ 'ಯುಥೋಪಿಯಾ -2026' ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಕಿರಣ್ ಎಂ. ಮಾತನಾಡಿ ವಿದ್ಯಾರ್ಥಿಗಳಲ್ಲಿ ಅಪಾರ ಚೈತನ್ಯ, ಪ್ರತಿಭೆ ಇದ್ದು ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬುತ್ತದೆ ಎಂದರು.

19 ಕಾಲೇಜುಗಳ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೀದಿ ನಾಟಕ, ನೃತ್ಯ, ಹಾಡುಗಾರಿಕೆ, ಉತ್ತಮ ಸವ್ಯಾಸಾಚಿ , ಉತ್ತಮ ಶಾಸಕ ಸೇರಿದಂತೆ 9 ವಿಭಾಗದ ಸ್ಪರ್ಧೆಗಳಲ್ಲಿ ಭಾಗವಹಿಸಿದರು .



ಸಮಾರೋಪ ಸಮಾರಂಭ

ಸಮಾರೋಪದಲ್ಲಿ ಅತಿಥಿಯಾಗಿದ್ದ ಹಳೆಯಂಗಡಿಯ ಪ್ರಿಯದರ್ಶಿನಿ ಸಹಕಾರಿ ಬ್ಯಾಂಕಿನ ಅಧ್ಯಕ್ಷ ವಸಂತ್ ಬರ್ನಾರ್ಡ್ , ಉದ್ಯಮಿ ಜಯಕೃಷ್ಣ ಕೋಟ್ಯಾನ್ ಹಾಗೂ ಮುಲ್ಕಿಯ ನಿವೃತ್ತ ಖಜಾನೆ ಅಧಿಕಾರಿ ಮೀರಾ ಕುಲಕರ್ಣಿ ಕಾಲೇಜಿನ ಆಂತರಿಕ ಗುಣಮಟ್ಟ ಹಾಗೂ ಭರವಸ ಕೋಶದ ಸಂಚಾಲಕ ಡಾ ಲೋಕೇಶ, ಸ್ಪರ್ಧಾಕೂಟದ ಸಂಚಾಲಕ ಡಾ.ಅಜಯ, ಡಾ. ಜಗದೀಶ, ವಿದ್ಯಾರ್ಥಿ ಸಂಚಾಲಕ ಲಕ್ಷ್ಮೀಪತಿ ಹಾಗೂ ಸ್ಮಿತಾ ಉಪಸ್ಥಿತರಿದ್ದರು. ವಿದ್ಯಾರ್ಥಿನಿಗಳಾದ ಸ್ವಾತಿ ಭಟ್ ಪ್ರಾರ್ಥಿಸಿ, ಧನ್ಯ ಹಾಗೂ ಹಿತಾ ನಿರೂಪಿಸಿದರು.

ವಿಜೇತರು

ತೆಂಕನಿಡಿಯೂರಿನ ಸರಕಾರಿ ಪ್ರಥಮದರ್ಜೆ ಕಾಲೇಜು ಸಮಗ್ರ ಪ್ರಶಸ್ತಿ, ವಾಮಂಜೂರಿನ ಸೈಂಟ್ ಜೋಸೆಫ್ ಕಾಲೇಜು ದ್ವಿತೀಯ, ಬ್ರಹ್ಮಾವರದ ಎಸ್‌ಎಂಎಸ್ ಕಾಲೇಜು ತೃತೀಯ ಪ್ರಶಸ್ತಿ ಮುಡಿಗೇರಿಸಿದವು.

ಶುಭಶುಕ್ರವಾರ: ಸಂತ ಅಂತೋಣಿ ದೇವಾಲಯದಲ್ಲಿ ವಿಶೇಷ ಪೂಜೆ

ಸುಂಟಿಕೊಪ್ಪ: ಶುಭಶುಕ್ರವಾರದ ಅಂಗವಾಗಿ ಸಂತ ಅಂತೋಣಿ ದೇವಾಲಯದ ವತಿಯಿಂದ ಸಂತಮೇರಿ ಶಾಲಾ ಸಭಾಂಗಣದಲ್ಲಿ ವಿಶೇಷ ಪೂಜೆ ಪ್ರಾರ್ಥನೆ ಹಾಗೂ ಆರಾಧಾನೆಯನ್ನು ಶುಭ ಶುಕ್ರವಾರದ ಸಾಂಘ್ಯಗಳನ್ನು ಬೆಂಗಳೂರಿನ ಧರ್ಮಕೇಂದ್ರ ಪ್ರೇಮ್‌ಕುಮಾರ್ ಹಾಗೂ ಸಂತ ಅಂತೋಣಿ ದೇವಾಲಯದ ಧರ್ಮಗುರುಗಳಾದ ರೆ.ಫಾ.ವಿಜಯಕುಮಾರ್ ಪ್ರಸುತ್ತ ಪಡಿಸಲಾಗಿದ್ದು, ಕ್ರೈಸ್ತ ಭಾಂದವರು, ವಿಶೇಷ ಪ್ರಾರ್ಥನೆಯಲ್ಲಿ ಶ್ರದ್ಧಾ ಭಕ್ತಿಯಿಂದ ತೊಡಗಿಸಿಕೊಂಡರು.

ದೇವಾಲಯದಲ್ಲಿ ಶುಭಶುಕ್ರವಾರದ ಅಂಗವಾಗಿ ಬೆಳಗ್ಗಿನಿಂದಲೇ ವಿಶೇಷ ಪ್ರಾರ್ಥನೆ ಹಾಗೂ ಸುತ್ತು ಆರಾಧನೆಗಳನ್ನು ದೇವಾಲಯದ ಧರ್ಮ ಗುರುಗಳು ಹಾಗೂ ಕನ್ಯಾಸ್ತ್ರಿಯರು ನೇರವೇರಿಸಿದರು. ನೂರಾರು ಸಂಖ್ಯೆಯಲ್ಲಿ ಕ್ರೈಸ್ತಬಾಂಧವರು ದೇವಾಲಯದಲ್ಲಿ ಪಾಲ್ಗೊಂಡಿದ್ದರು.





ಭೂಲೋಕದಲ್ಲಿ ಮಾನವರ ರಕ್ಷಣೆಗಾಗಿ ಮಾನವರು ಎಸಗಿದ ಪಾಪಗಳಿಗಾಗಿ ಶಿಲುಬೆಯ ಮರದಲ್ಲಿ ಕ್ರೂರವಾದ ನೋವು, ಕಷ್ಟ ಹಿಂಸೆ ಹಾಗೂ ನಿಂದನೆಗಳನ್ನು ಅನುಭವಿಸುವ ಮೂಲಕ ಲೋಕದ ರಕ್ಷಣೆಯನ್ನು ಮಾಡಲಾಗಿದ್ದು ಅದರ ಆಚರಣೆಯ ಅಂಗವಾಗಿ ಪವಿತ್ರ ದಿನವೇ ಶುಭ ಶುಕ್ರವಾರವಾಗಿದೆ.

40 ಉಪವಾಸ ಪ್ರಾರ್ಥನೆ

ಶುಭ ಶುಕ್ರವಾರದ ಹಿಂದಿನ 40 ದಿನಗಳು ಕ್ರೈಸ್ತ ಬಾಂಧವರು ಉಪವಾಸ ಪ್ರಾರ್ಥನೆ ಭಕ್ತಿಯಾದ ಸಂಗೀತ ಭಾವನೆ ಮೂಲಕ ಆರಾಧನೆ ಮಾಡಲಾಗುತ್ತಿದೆ. ಯೇಸು ಕ್ರಿಸ್ತನು ಮಾನವನ ಪಾಪಕ್ಕಾಗಿ ಲೋಕ ರಕ್ಷಣೆ ಮಾಡುವ ದಿಸೆಯಲ್ಲಿ ನೋವು, ಕಷ್ಟ ಯಾತನೆಗಳನ್ನು ಅನುಭವಿಸುವ ಮೂಲಕ ಮಾನವಕುಲವನ್ನು ಸಂರಕ್ಷಿಸಿದರು.

ಇಂದಿನ ಪ್ರಾರ್ಥನಾಕೂಟವನ್ನು ಬೆಂಗಳೂರಿನ ಧರ್ಮಕೇಂದ್ರ ಪ್ರೇಮ್‌ಕುಮಾರ್ ಹಾಗೂ ಸಂತ ಅಂತೋಣಿ ದೇವಾಲಯದ ಧರ್ಮಗುರು ರೇ.ಫಾ. ವಿಜಯ ಕುಮಾರ್ ನೆರವೇರಿಸಿದರು.

ಸುತ್ತಮುತ್ತ

ಡಿಪ್ಲೋಮಾ ಕೋರ್ಸ್ ಲ್ಯಾಟರಲ್ ಎಂಟ್ರಿ: ಅರ್ಜಿ ಆಹ್ವಾನ

ಉಡುಪಿ: ಮೈಸೂರಿನ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ 2026-27 ನೇ ಶೈಕ್ಷಣಿಕ ವರ್ಷದ ಪ್ಲಾಸ್ಟಿಕ್ಸ್ ಮೋಲ್ಡ್ ಟೆಕ್ನಾಲಜಿ ಡಿಪ್ಲೊಮಾ ಹಾಗೂ ಪ್ಲಾಸ್ಟಿಕ್ಸ್ ಟೆಕ್ನಾಲಜಿ ಡಿಪ್ಲೊಮಾ ಕೋರ್ಸ್‌ಗಳಿಗೆ ಲ್ಯಾಟರಲ್ ಎಂಟ್ರಿ (ನೇರ ದ್ವಿತೀಯ ವರ್ಷ) ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ (ವಿಜ್ಞಾನ) ಅಥವಾ ಐಟಿಐ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಲ್ಲದೆ, ವೃತ್ತಿಪರ ಡಿಪ್ಲೊಮಾ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗೂ ಅಂತಿಮ ಸೆಮಿಸ್ಟರ್‌ನಲ್ಲಿ ಕ್ಯಾಂಪಸ್ ಆಯ್ಕೆ ಮೂಲಕ ಉದ್ಯೋಗಾವಕಾಶವನ್ನು ಖಚಿತಪಡಿಸಲಾಗುವುದು. ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ಪ್ರವೇಶ ನೀಡಲಾಗುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.cipet.gov.in ಅಥವಾ ದೂರವಾಣಿ ಸಂಖ್ಯೆ 9480253024, 9791431827 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಉಡುಪಿ: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025 ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಲಾಗಿದೆ. ಬಹುಮಾನಕ್ಕಾಗಿ ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ಪುಸ್ತಕದ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಎರಡನೇ ಮಹಡಿ, ಜೆ.ಸಿ ರಸ್ತೆ, ಬೆಂಗಳೂರು ವಿಳಾಸಕ್ಕೆ ಅಂಚೆ / ಕೊರಿಯರ್ ಮೂಲಕ ಅಥವಾ ಖುದ್ದಾಗಿ ಜೂನ್ 30 ರ ತಲುಪಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್ www.sahithyaacademy.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.12-19: ವರ್ಣ ಕುಟೀರ ಕಲಾ ಶಿಕ್ಷಣ ಸಂಸ್ಥೆಯಲ್ಲಿ ಬೇಸಿಗೆ ಶಿಬಿರ

ಪುತ್ತೂರು: ಕಲ್ಲಾರೆ ಕಾವೇರಿ ಕಾಂಪ್ಲೆಕ್ಸ್‌ನಲ್ಲಿರುವ ವರ್ಣ ಕುಟೀರ ಕಲಾ ಶಿಕ್ಷಣ ಸಂಸ್ಥೆಯಲ್ಲಿ ಏ. 12ರಿಂದ 19ರ ತನಕ ಬೇಸಿಗೆ ಶಿಬಿರ ನಡೆಯಲಿದೆ ಎಂದು ಸಂಸ್ಥೆಯ ಸಂಚಾಲಕ ಪ್ರವೀಣ್ ವರ್ಣ ಕುಟೀರ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರದಲ್ಲಿ ವಿವಿಧ ಕಲಾ ತಯಾರಿಕೆ, ರಂಗ ಶಿಕ್ಷಣ, ಕಲಾ ಶಿಕ್ಷಣದ ಜೊತೆಗೆ ಮಕ್ಕಳ ಮನೋವಿಕಾಸ ಕುರಿತು ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದ್ದು ಅನುಭವಿ ಸಂಪನ್ಮೂಲ ವ್ಯಕ್ತಿಗಳು ವಿವಿಧ ತರಬೇತಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಶಿಬಿರದಲ್ಲಿ ಪಾಪೆಟ್ ತಯಾರಿ, ಹೊಸ ವಿನ್ಯಾಸದ ಅಬ್‌ಸ್ಟ್ರಾಕ್ಟ್ ಪ್ರಿಂಟ್, ಮನೋವಿಕಾಸ ಆಟಗಳು, ರೇಖಾ ಚಿತ್ರದ ವಿನ್ಯಾಸ ಹಾಗೂ ಆಟ ಮೊದಲ ಕಾರ್ಯಕ್ರಮವಾಗಿ ನಡೆಯಲಿದ್ದು, ಬಳಿಕ ವಿಷನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲೆ ಮಾಡಿರುವ ಗೀತಾ ಲಕ್ಷ್ಮಿ ಕೆಮಾರ್ ಅವರು ಕರೋಕೆಯೊಂದಿಗೆ ಹಾಡುವ ವಿಧಾನ, ವೇದಿಕೆಯಲ್ಲಿ ನಿಲ್ಲುವ ಭಂಗಿ, ಭಯವಿಲ್ಲದೆ ಹಾಡುವ ವಿಧಾನ, ಭಜನೆಗಳು ಹಾಗೂ ಭಜನೆಗಳ ಮಹತ್ವ ತಿಳಿಸಿಕೊಡಲಿದ್ದಾರೆ. ನೀನಾಸಂನ ರಂಗ ಗಣೇಶ್ ಭೀಮನ ಕೋಣೆ ಅವರು ರಂಗ ಶಿಕ್ಷಣ, ರಂಗ ಗೀತೆಗಳು, ರಂಗ ವಿನ್ಯಾಸಗಳನ್ನು ಹೇಳಿಕೊಡಲಿದ್ದಾರೆ. ವಿದುಷಿ ಪ್ರಜ್ಞಾಶ್ರೀ ಕೆದಿಮಾರ್, ಸಂಸ್ಥೆಯಲ್ಲಿ ಚಿತ್ರಕಲೆ ಕಲಿತು ವಿದ್ವತ್ ಪಡೆದಿರುವ ವಿದುಷಿ ಲಕ್ಷ್ಮೀ ಯು.ಎಂ., ವಿದ್ವಾನ್ ಗಗನ್, ವಿದುಷಿ ಭುವಿ ವರ್ಣ ಕುಟೀರ ಅವರು ಲಿಪ್ಪನ್ ಆರ್ಟ್‌ಗಳ ಕುರಿತು ತರಬೇತಿ ನೀಡಲಿದ್ದಾರೆ. ವಿದುಷಿ ಮೈತ್ರಿ ಅವರು ಯು.ಎ. ರೆಜಿನ್ ಆರ್ಟ್, ವಿದ್ವಾನ್ ಆರ್ಯನ್ ಆರ್. ಅವರು ನೃತ್ಯ ಹಾಗೂ ನೃತ್ಯ ರೂಪಕಗಳನ್ನು ಹೇಳಿ ಕೊಡಲಿದ್ದಾರೆ ಎಂದವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷೆ ಗೀತಾಲಕ್ಷ್ಮೀ ಕೆದಿಮಾರ್, ಸಂಸ್ಥೆಯ ಉಪ್ಪಿನಂಗಡಿ ಶಾಖೆಯ ಸಂಗೀತ ಶಿಕ್ಷಕಿ ಅನುಷಾ ಅಮ್ಮಣ್ಣಾಯ, ಪೋಷಕರಾದ ಪೂರ್ಣಿಮ ಉರಿಮಜಲು ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಸಹಸ್ರಾರು ಹನುಮಭಕ್ತರಿಂದ ಶೋಭಾಯಾತ್ರೆ

ವೀರಾಜಪೇಟೆಯಲ್ಲಿ ಪ್ರಥಮ ವರ್ಷದ ಹನುಮ ಜಯಂತಿ



ಮಡಿಕೇರಿ: ವೀರಾಜಪೇಟೆಯಲ್ಲಿ ಹನುಮ ಜಯಂತಿ ಆಯೋಜನಾ ಸಮಿತಿ ವತಿಯಿಂದ ಪ್ರಥಮ ಬಾರಿಗೆ ಏರ್ಪಡಿಸಿದ್ದ ಹನುಮ ಜಯಂತಿ ಶೋಭಾಯಾತ್ರೆ ಸಹಸ್ರಾರು ಭಕ್ತರಿಂದ ವಿಜೃಂಭಣೆಯಿಂದ ಜರುಗಿತು.

ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಹನುಮ ಭಕ್ತರು ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದು ಯಾತ್ರೆ ಸಾಗಿಹೋದ ರಸ್ತೆಗಳು ಕೇಸರಿಮಯವಾಗಿ ಕಂಗೊಳಿಸಿದವು. ವೀರಾಜಪೇಟೆ ಪಟ್ಟಣದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಶ್ರೀ ಬಾಲಾಂಜನೇಯ ದೇವಸ್ಥಾನದಲ್ಲಿ ಮಧ್ಯಾಹ್ನ 2 ಗಂಟೆಗೆ ಪೂಜೆ ನೆರವೇರಿದ ಬಳಿಕ ಹನುಮನ ಮೂರ್ತಿಯನ್ನು ಹೊತ್ತ ಬೆಳ್ಳಿರಥಕ್ಕೆ ಚಾಲನೆ ನೀಡಲಾಯಿತು.

ವಿಧಾನ ಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಅವರು ಪೂಜೆ ಸಲ್ಲಿಸಿ ಈಡುಗಾಯಿ ಹಾಕುವುದರ ಮೂಲಕ ಚಾಲನೆ ನೀಡಿದರು. ವಿವಿಧ ಚಂಡೆ ಮೇಳ ಹಾಗೂ ವಾದ್ಯಗಳೊಂದಿಗೆ ಉತ್ಸವ ಮೂರ್ತಿಯನ್ನು ಹೊತ್ತ ರಥವು ಮೆರವಣಿಗೆ ಮೂಲಕ ನಗರದ ಛತ್ರಕೆರೆ ಸಮೀಪವಿರುವ ವೀರಾಂಜನೇಯ ದೇವಸ್ಥಾನಕ್ಕೆ ತೆರಳಿ ಅಲ್ಲಿ ವೀರಾಂಜನೇಯ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ತೆಲುಗರ ಬೀದಿಯಲ್ಲಿರುವ ಮಾರಿಯಮ್ಮ ದೇವಾಲಯದ ಬಳಿ ಸಂಗಮಗೊಂಡಿತು.

ಅಪಾರ ಜನಸ್ತೋಮದೊಂದಿಗೆ ಮಾರಿಯಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ವಿವಿಧ ಕಲಾಮೇಳದೊಂದಿಗೆ ಬೃಹತ್ ಶೋಭಾಯಾತ್ರೆ ಪ್ರಾರಂಭಗೊಂಡಿತು.

ಪಟ್ಟಣದ ತೆಲುಗರ ಬೀದಿ ಮೂಲಕ ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬ, ಖಾಸಗಿ ಬಸ್ಸು ನಿಲ್ದಾಣ, ಮಟನ್ ಮಾರ್ಕೆಟ್, ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದ ಮೂಲಕ ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬ, ಕಾರು ನಿಲ್ದಾಣದ ಮೂಲಕ ಶೋಭಾಯಾತ್ರೆ ಸಾಗಿ ಬಂದು ತಾಲೂಕು ಮೈದಾನದಲ್ಲಿ ಸಮಾವೇಶಗೊಂಡಿತು.

ನಗರದುದ್ದಕ್ಕೂ ಓಂ, ಹನುಮ, ರಾಮ ಭಾವಚಿತ್ರದ ಕೇಸರಿ ಧ್ವಜಗಳು ರಾರಾಜಿಸಿದವು. ಕೇಸರಿ ಮಾಲೆ, ಪೇಟ ಹಾಕಿದ್ದ ಬಹುತೇಕರು ಕೈಯಲ್ಲಿ ಭಗವಾಧ್ವಜ ಹಿಡಿದು ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು. ಗೊಂಬೆ ಕುಣಿತ, ಡೊಳ್ಳು, ಚಂಡೆ ಮೇಳ, ನಾಸಿಕ್ ಬ್ಯಾಂಡ್ ಕೊಡಗಿನ ವಾಲಗ, ನಾಟ್ಯ ಮಯೂರಿ ಹಾಗೂ ನಾಟ್ಯಾಂಜಲಿ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭಜನಾ ಕುಣಿತ, ಆದಿವಾಸಿಗಳ ನೃತ್ಯ, ಸೇರಿ ನಾಡಿನ ಅನೇಕ ಜನಪದ ಕಲಾತಂಡಗಳು ಶೋಭಾಯಾತ್ರೆಗೆ ಮೆರಗು ತಂದವು.

ಶೋಭಾಯಾತ್ರೆ ಸಾಗುವ ಮಾರ್ಗದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಮಾರ್ಗದರ್ಶನದಲ್ಲಿ ವೀರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಶಾಂತಿ ಸುವ್ಯವಸ್ಥೆಗೆ ಖಾಕಿಯ ಭದ್ರ ಕೋಟೆಯೇ ಇತ್ತು.

ಈ ಸಂದರ್ಭದಲ್ಲಿ ಹನುಮ ಜಯಂತಿ ಆಯೋಜನಾ ಸಮಿತಿ ಅಧ್ಯಕ್ಷ ಅಂಜಪರವಂಡ ಅನಿಲ್ ಮಂದಣ್ಣ, ಉಪಾಧ್ಯಕ್ಷರಾದ ಶಾನ್ ಚಂಗಪ್ಪ ಬಿ.ವಿ. ಹೇಮಂತ್, ಸಾಮಾಜಿಕ ಜಾಲತಾಣದ ಶಿನೋಜ್ ಟಿ.ಕೆ., ಕಾರ್ಯದರ್ಶಿ ಕೂತಂಡ ಸಚಿನ್, ಜಂಟಿ ಕಾರ್ಯದರ್ಶಿ ಪ್ರದೀಪ್ ರೈ, ಸುಮೇಶ್, ಖಜಾಂಚಿ ಸುರೇಶ್ ಚಾಮಿ, ಸಹ ಖಜಾಂಚಿ ಶಶಿ ಚಾಮಿ, ಸಾಂಸ್ಕೃತಿಕ ಕಾರ್ಯಕ್ರಮ ಉಸ್ತುವಾರಿ ಚೇತನ್ ಶಿವಪ್ಪ ಹಾಗೂ ವಿವೇಕ್ ರೈ, ಲಕ್ಷ್ಮೀಶ, ಅನ್ನ ಸಂತರ್ಪಣಾ ಉಸ್ತುವಾರಿಗಳಾದ ಸುನಿಲ್, ಉಣ್ಣಿ, ಸಂತೋಷ್, ಈಶ್ವರ್, ಸಂಜು, ಸಜೀವ, ಸಮಿತಿಯ ಕಾನೂನು ಸಲಹೆಗಾರ ಪುಲಿಯಂಡ ಪೊನ್ನಣ್ಣ ಸೇರಿದಂತೆ ವಿವಿಧ ಹಿಂದೂ ಸಂಘಟನೆಗಳ ಪ್ರಮುಖರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಪದಾಧಿಕಾರಿಗಳು, ಸಾವಿರಾರು ಹಿಂದೂ ಬಾಂಧವರು ಪಾಲ್ಗೊಂಡಿದ್ದರು.

ಉತ್ಸವ ಮೂರ್ತಿಗೆ ಪೂಜೆ

ಮೆರವಣಿಗೆ ಆರಂಭವಾಗುತ್ತಿದ್ದಂತೆ ತಂಡೋಪತಂಡವಾಗಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಜಮಾಯಿಸಿದರು. ಮಹಡಿ ಮೇಲೆ ನಿಂತು ಪಟ್ಟಣದ ನಾಗರಿಕರು ಮೆರವಣಿಗೆಯನ್ನು ಕಣ್ತುಂಬಿಕೊಂಡರು. ದಾರಿಯುದ್ದಕ್ಕೂ ಹನುಮನಿಗೆ ಭಕ್ತರು ಪೂಜೆ ಸಲ್ಲಿಸಿದರು.

ಹೆದ್ದಾರಿ 66ರಲ್ಲಿ ಅಪಘಾತ ಹೆಚ್ಚಳ | ಎನ್‌ಎಚ್‌ಎಐ ಕಟ್ಟುನಿಟ್ಟಿನ ಕ್ರಮ

ಅಪಾಯಕಾರಿ ಕ್ರಾಸಿಂಗ್ ತಡೆಗೆ ನಿರ್ಧಾರ



ಸುರತ್ಕಲ್: ಹೆದ್ದಾರಿ 66ರ ರಲ್ಲಿರುವ ಈ ಹಿಂದೆ ಇದ್ದ ಕ್ರಾಸಿಂಗ್ ಗಳಲ್ಲಿ ಹೆಚ್ಚುತ್ತಿರುವ ಅಪಘಾತ ಪ್ರಕರಣಗಳು ಆತಂಕಕಾರಿ ಮಟ್ಟ ತಲುಪಿರುವ ಹಿನ್ನಲೆಯಲ್ಲಿ, ಅಪಾಯಕಾರಿ ಕ್ರಾಸಿಂಗ್ ಬಂದ್ ಮಾಡಲು ಹೆದ್ದಾರಿ ಇಲಾಖೆ ಮಹತ್ವದ ನಿರ್ಧಾರ ಕೈಗೊಂಡಿವೆ.

ಗುರುವಾರ ಸುರತ್ಕಲ್ ಸಮೀಪದ ತಡಂಬೈಲ್ ಬಳಿಯ ಕ್ರಾಸಿಂಗ್ ಬಂದ್ ಮಾಡಲಾಗಿದೆ.ಬುಧವಾರ ಬಾಲಕನೋರ್ವನಿಗೆ ವಾಹನ ಡಿಕ್ಕಿ ಹೊಡೆದ ಬಳಿಕ ಆಕ್ರೋಶ ವ್ಯಕ್ತವಾದ ಹಿನ್ನಲೆ ಬಂದ್ ಮಾಡಲಾಯಿತು.

ಡಿಸೆಂಬರ್‌ನಲ್ಲಿ ಕೆಪಿಟಿ ಸಮೀಪದ ಎಸ್‌ಕೆಎಸ್ ಕ್ರಾಸಿಂಗ್ ಬಳಿ ಹೆದ್ದಾರಿ ಕ್ರಾಸಿಂಗ್ ಬಂದು ಮಾಡುವ ಸಂದರ್ಭ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದರಾದರೂ ಅಪಘಾತ ಅಪಾಯದ ಕುರಿತು ಗಮನ ಸೆಳೆದು ಕ್ರಾಸಿಂಗ್ ಸ್ಥಗಿತಗೊಳಿಸಲಾಯಿತು. ಸುರತ್ಕಲ್ ಹೋಟೆಲ್ ಸೂರಜ್ ಇಂಟರ್ ನ್ಯಾಷನಲ್ ಮುಂಭಾಗವು ಮೇಲ್ ಸೇತುವೆ ಕೊನೆಗೊಳ್ಳುವಲ್ಲಿ ಮತ್ತೊಂದು ಅಪಾಯಕಾರಿ ಕ್ರಾಸಿಂಗ್ ಇದ್ದು ಹಲವಾರು ಅಪಘಾತಗಳು ಉಂಟಾಗಿ ಪ್ರಾಣ ಹಾನಿ ಸಂಭವಿಸಿದೆ.

ಹೆದ್ದಾರಿಗಳಲ್ಲಿರುವ ಕ್ರಾಸಿಂಗ್‌ಗಳನ್ನು ಈ ಹಿಂದೆಸಾರ್ವಜನಿಕರಮನವಿಯಮೇರೆಗೆ ಮಾಡಲಾಗಿತ್ತಾದರೂ ಇದೀಗ ಹತ್ತಾರು ಪ್ರಾಣ ಹಾನಿಯ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಮುಚ್ಚುವ ಕಾರ್ಯಾಚರಣೆ ಆರಂಭಿಸಲು ತೀರ್ಮಾನಿಸಲಾಗಿದೆ.

ಇತ್ತೀಚಿನ ವರದಿಗಳ ಪ್ರಕಾರ, ನಿಯಮ ಉಲ್ಲಂಘಿಸಿ ನಿರ್ಮಾಣವಾಗಿರುವ ಕ್ರಾಸಿಂಗ್‌ಗಳು ವಾಹನ ಸವಾರರಿಗೆ ದೊಡ್ಡ ಅಪಾಯವಾಗಿವೆ. ವಿಶೇಷವಾಗಿ ವೇಗವಾಗಿ ಸಂಚರಿಸುವ ವಾಹನಗಳಿಗೆ ಅಡ್ಡಿಯಾಗುವ ಈ ಕ್ರಾಸಿಂಗ್‌ಗಳು ಅನೇಕ ಸಾವು-ನೋವುಗಳಿಗೆ ಕಾರಣವಾಗುತ್ತಿವೆ. ಇದರಿಂದ ಸಾರ್ವಜನಿಕರ ಸುರಕ್ಷತೆ ಪ್ರಶ್ನಾರ್ಹವಾಗಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ.

ಇದನ್ನು ಗಂಭೀರವಾಗಿ ಪರಿಗಣಿಸಿರುವ ಹೆದ್ದಾರಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಆಡಳಿತದೊಂದಿಗೆ ಸಂಯೋಜನೆ ಮಾಡಿಕೊಂಡು ಕ್ರಮ ಕೈಗೊಳ್ಳಲಿದೆ. ಮೊದಲ ಹಂತದಲ್ಲಿ ಅಪಾಯಕಾರಿಯಾದ ಮತ್ತು ಹೆಚ್ಚು ಅಪಘಾತ ಸಂಭವಿಸಿದ ಸ್ಥಳಗಳನ್ನು ಗುರುತಿಸುವ ಕಾರ್ಯ ನಡೆಯಲಿದೆ. ನಂತರ ಕ್ರಮೇಣ ಉಳಿದ ಸ್ಥಳಗಳಲ್ಲಿಯೂ ಈ ಕಾರ್ಯಾಚರಣೆ ವಿಸ್ತರಿಸುವ ಸಾಧ್ಯತೆಯಿದೆ.

ಇದರ ಜೊತೆಗೆ, ಸಾರ್ವಜನಿಕರಿಗೆ ಸುರಕ್ಷಿತ ಸಂಚಾರಕ್ಕಾಗಿ ಅಕ್ಕತ ಅಂಡರ್‌ಪಾಸ್, ಓವರ್‌ಬ್ರಿಡ್ಜ್ ಹಾಗೂ ಯು-ಟರ್ನ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸುವ ಅಗತ್ಯವೂ ಇದೆ. ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಿಗಳು ಆರಂಭದಲ್ಲಿ ಕೆಲವು ಅಸೌಕರ್ಯಗಳನ್ನು ಎದುರಿಸಬಹುದಾದರೂ, ದೀರ್ಘಾವಧಿಯಲ್ಲಿ ಈ ಕ್ರಮ ಜೀವ ರಕ್ಷಕವಾಗಲಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಒಟ್ಟಾರೆ, ಹೆದ್ದಾರಿಗಳಲ್ಲಿ ಶಿಸ್ತು ಮತ್ತು ಸುರಕ್ಷತೆ ಕಾಪಾಡುವ ಉದ್ದೇಶದಿಂದ ಕೈಗೊಳ್ಳಲಾಗಿರುವ ಈ ಕ್ರಮವು ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರವಹಿಸುವ ನಿರೀಕ್ಷೆಯಿದೆ.

ನಿವೇಶನ ವಿನ್ಯಾಸ, ಕಟ್ಟಡ ನಕ್ಷೆಯ ತಾಂತ್ರಿಕ ಅನುಮೋದನೆ ವಿಳಂಬ

ಶೀಘ್ರ ಪ್ರಕ್ರಿಯೆಗೆ ಖಾಲಿ ಹುದ್ದೆ ಭರ್ತಿ ಆಗ್ರಹ



ಪುತ್ತೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಯೋಜನಾ ಪ್ರಾಧಿಕಾರಗಳಲ್ಲಿ ಹುದ್ದೆಗಳು ಖಾಲಿ ಬಿದ್ದಿರುವ ಹಿನ್ನಲೆಯಲ್ಲಿ ಗ್ರಾಮೀಣ ಭಾಗದಲ್ಲಿ ವಸತಿ, ವಾಣಿಜ್ಯ ಮತ್ತು ಇತರ ಉದ್ದೇಶದ ನಿವೇಶನಗಳಿಗೆ ವಿನ್ಯಾಸ ಅನುಮೋದನೆ ಮತ್ತು ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವಲ್ಲಿ ವಿಳಂಬವಾಗುತ್ತಿದ್ದು, ಈ ಹಿನ್ನಲೆಯಲ್ಲಿ ಅನು ಮೋದನೆ ಪ್ರಕ್ರಿಯೆಯನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ನಗರಾಭಿವೃದ್ಧಿ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದ್ದಾರೆ.

ಇತ್ತೀಚೆಗೆ ನಡೆದ ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನದಲ್ಲಿ ಕಿಶೋರ್ ಕುಮಾರ್ ಪುತ್ತೂರು ಅವರು ಈ ಬಗ್ಗೆ ನಗರಾಭಿವೃದ್ಧಿ ಸಚಿವರಿಗೆ ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಚಿವರು ನೀಡಿದ ಉತ್ತರದಲ್ಲಿ ಈ ಮಾಹಿತಿ ತಿಳಿದು ಬಂದಿದೆ.

ಗ್ರಾ.ಪಂ.ಗಳಿಗೆ ಇದ್ದ ಅಧಿಕಾರವನ್ನು ಸರಕಾರವು ನಗರಾಭಿವೃದ್ಧಿ ಇಲಾಖೆಯ ಸ್ಥಳೀಯ ನಗರ ಯೋಜನಾ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ಬಳಿಕ ವಿನ್ಯಾಸ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಪ್ರಕ್ರಿಯೆ ವಿಳಂಬವಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಕುಂದಾಪುರ ಯೋಜನಾ ಪ್ರಾಧಿಕಾರ, ಕಾಪು ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗೆ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿ ಉಡುಪಿ ಅವರಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ ಯೋಜನಾ ಪ್ರಾಧಿಕಾರ, ಮೂಡಬಿದ್ರೆ ಯೋಜನಾ ಪ್ರಾಧಿಕಾರ, ಪುತ್ತೂರು ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗೆ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿ ಮಂಗಳೂರು ಅವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ನಗರ ಯೋಜನಾ ಪ್ರಾಧಿಕಾರಗಳಿಗೆ ಪ್ರತ್ಯಾಯೋಜಿಸದ ನಂತರ ಉಡುಪಿ ಜಿಲ್ಲೆಯ ಗ್ರಾಮೀಣ ಭಾಗದಿಂದ ವಿನ್ಯಾಸ ಅನುಮೋದನೆ ಕೋರಿ ಇಲ್ಲಿಯವರೆಗೆ ಒಟ್ಟು 6,809 ಅರ್ಜಿಗಳು ಸಲ್ಲಿಕೆಯಾಗಿದ್ದು ಇವುಗಳ ಪೈಕಿ 4,589 ಅರ್ಜಿಗಳು ಮಾತ್ರ ಅನುಮೋದನೆಯಾಗಿ ಉಳಿದ 2,220 ಅರ್ಜಿಗಳು ತಿರಸ್ಕೃತ/ ಹಿಂಬರಹ/ ಬಾಕಿಯಾಗಿರುತ್ತದೆ. ಕಟ್ಟಡ ಪರವಾನಿಗೆ ತಾಂತ್ರಿಕ ಅನುಮೋದನೆ ಕೋರಿ ಇಲ್ಲಿಯವರೆಗೆ ಒಟ್ಟು 696 ಅರ್ಜಿಗಳು ಸಲ್ಲಿಕೆಯಾಗಿದ್ದು, ಇವುಗಳ ಪೈಕಿ 549 ಅರ್ಜಿಗಳು ಅನುಮೋದನೆಯಾಗಿ ಉಳಿದ 147 ಅರ್ಜಿಗಳು ತಿರಸ್ಕೃತ, ಹಿಂಬರಹ, ಬಾಕಿಯಾಗಿರುತ್ತದೆ. ದ.ಕ. ಜಿಲ್ಲೆಯ ಗ್ರಾಮೀಣ ಭಾಗದಿಂದ ವಿನ್ಯಾಸ ಅನುಮೋದನೆ ಕೋರಿ ಇಲ್ಲಿಯವರೆಗೆ ಒಟ್ಟು 9,345 ಅರ್ಜಿಗಳು ಸಲ್ಲಿಕೆಯಾಗಿದ್ದು ಇವುಗಳ ಪೈಕಿ 5,510 ಅರ್ಜಿಗಳು ಮಾತ್ರ ಅನುಮೋದನೆಯಾಗಿ ಉಳಿದ 3,835 ಅರ್ಜಿಗಳು ತಿರಸ್ಕೃತ, ಹಿಂಬರಹ, ಬಾಕಿಯಾಗಿರುತ್ತದೆ. ಕಟ್ಟಡ ಪರವಾನಿಗೆ ತಾಂತ್ರಿಕ ಅನುಮೋದನೆ ಕೋರಿ ಇಲ್ಲಿಯವರೆಗೆ ಒಟ್ಟು 1188 ಅರ್ಜಿಗಳು ಸಲ್ಲಿಕೆಯಾಗಿದ್ದು, ಇವುಗಳ ಪೈಕಿ 782 ಅರ್ಜಿಗಳು ಅನುಮೋದನೆಯಾಗಿ ಉಳಿದ 406 ಅರ್ಜಿಗಳು ತಿರಸ್ಕೃತ, ಹಿಂಬರಹ, ಬಾಕಿಯಾಗಿರುತ್ತದೆ. ಸರ್ಕಾರಿ ಆದೇಶದಂತೆ ಸದರಿ ಅರ್ಜಿಗಳ ವಿಲೇವಾರಿಗೆ 60 ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದ್ದು ಸದರಿ ಅರ್ಜಿಗಳ ಮೇಲುಸ್ತುವಾರಿ ವಹಿಸಲು ಸೂಕ್ತ ಪ್ರಾಧಿಕಾರ ಇಲ್ಲದಾಗಿದೆ ಎಂದು ಅವರು ತಿಳಿಸಿದ್ದಾರೆ.

ಹೆಚ್ಚಿನ ಹುದ್ದೆಗಳು ಖಾಲಿ

ಪುತ್ತೂರು' ಪುತ್ತೂರು, ಮೂಡಬಿದ್ರೆ, ಸುಳ್ಯ, ಮತ್ತು ಕಾಪು ಯೋಜನಾ ಪ್ರಾಧಿಕಾರಗಳಿಗೆ ತಲಾ ಒಂದರಂತೆ ಮಂಜೂರಾದ ಸದಸ್ಯ ಕಾರ್ಯದರ್ಶಿ ಹುದ್ದೆಯ ಪೈಕಿ ಎಲ್ಲಾ ಹುದ್ದೆಗಳು ಖಾಲಿಯಿದ್ದು ನಿಯೋಜನೆ ಮೇರೆಗೆ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಶ್ರೀರಾಮ ಹನುಮ ಜ್ಯೋತಿರಥ ಯಾತ್ರೆಗೆ ಬಿ.ಸಿ.ರೋಡಿನಲ್ಲಿ ಸ್ವಾಗತ



ಬಂಟ್ವಾಳ: ಅಯೋಧ್ಯೆ ಶ್ರೀ ರಾಮ ಮಂದಿರದಿಂದ ಹನುಮಗಿರಿಗೆ ಹೊರಟ ಶ್ರೀ ರಾಮ ಹನುಮ ಜ್ಯೋತಿರಥ ಯಾತ್ರೆಯನ್ನು ಬಿ.ಸಿ. ರೋಡಿನ ರಕ್ತೇಶ್ವರಿ ದೇವಸ್ಥಾನದ ವಠಾರದಲ್ಲಿ ಸ್ವಾಗತಿಸಲಾಯಿತು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ಶ್ರೀರಕ್ತೇಶ್ವರೀ ದೇವಸ್ಥಾನದ ಸೇವಾಸಮಿತಿ ಅಧ್ಯಕ್ಷ ಬಿ. ಮೋಹನ್ ಅವರ ನೇತೃತ್ವದಲ್ಲಿ ಹನುಮಜ್ಯೋತಿ ರಥವನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕ ರಘುಪತಿ ಭಟ್ ಪೂಜಾ ವಿಧಿವಿಧಾನ ನೆರವೇರಿಸಿದರು. ವಿಶ್ವ ಹಿಂದೂ ಪರಿಷತ್‌ನ ಬಂಟ್ವಾಳ ಪ್ರಖಂಡದ ಅಧ್ಯಕ್ಷ ಪ್ರಸಾದ್ ಕುಮಾರ್ ರೈ, ಬೂಡಾ ಮಾಜಿ ಅಧ್ಯಕ್ಷ ದೇವದಾಸ ಶೆಟ್ಟಿ ಸದಾಶಿವ ಬಂಗೇರ, ದೇವಸ್ಥಾನದ ಪದಾಧಿಕಾರಿಗಳಾದ ರಾಜೇಶ್ ಎಲ್. ನಾಯಕ್, ಎನ್. ಶಿವಶಂಕರ್,ಬಿ. ವಿಶ್ವನಾಥ್, ಸತೀಶ್ ಕುಮಾರ್, ಬಿಜೆಪಿ ಮುಖಂಡರಾದಸುದರ್ಶನ್ ಬಜ,ಸುರೇಶ್ ಕೋಟ್ಯಾನ್, ಕಾರ್ತಿಕ್ ಬಲ್ಲಾಳ್, ಶಶಿಕಾಂತ್ ಶೆಟ್ಟಿ ಸರಪಾಡಿ, ಸಂತೋಷ್ ಸರಪಾಡಿ, ಮಾಧವ ಕರ್ಬೆಟ್ಟು,ಪ್ರಣಾಮ್ ಅಜ್ಜಿಬೆಟ್ಟು ಮೊದಲಾದವರಿದ್ದರು. ಬಳಿಕ ಹನುಮಜ್ಯೋತಿ ರಥ ಕಲ್ಲಡ್ಕದತ್ತ ಸಾಗಿತು.

■ ಅಯೋಧ್ಯೆ ಶ್ರೀ ರಾಮ ಮಂದಿರದಿಂದ ಹನುಮಗಿರಿಗೆ ಶ್ರೀ ರಾಮ ಹನುಮ ಜ್ಯೋತಿರಥ ಯಾತ್ರೆ

ಗುರು, ಹಿರಿಯರನ್ನು ಗೌರವಿಸಿ ಮಾಡುವ ದೈವ-ದೇವರ ಸೇವೆ ಶ್ರೇಷ್ಠ: ಕೆ.ಟಿ.ಸುವರ್ಣ



ಉಳ್ಳಾಲ: ದೈವ, ದೇವರಸೇವೆಮಾಡುವುದು ಅತ್ಯಂತ ಪುಣ್ಯದ ಕೆಲಸ. ಆದರೆ ನಮ್ಮ ಮನೆಯ ಹಿರಿಯರನ್ನು ಕಡೆಗಣಿಸಿ ಯಾವ ದೈವ, ದೇವರ ಸೇವೆಗೈದರೂ ಯಾವುದೇ ರೀತಿಯ ಶುಭಫಲಗಳು ಸಿಗಲು ಸಾಧ್ಯವಿಲ್ಲ. ಗುರು, ಹಿರಿಯರನ್ನು ಗೌರವಿಸಿ ಮಾಡುವ ಸೇವೆಗಳು ಎಲ್ಲಕ್ಕಿಂತಲೂ ಶ್ರೇಷ್ಠವೆಂದು ಕಿನ್ಯ ಬೆಳರಿಂಗೆ ಭಂಡಾರ ಮನೆ ಶ್ರೀ ಮಲರಾಯ, ಧೂಮಾವತಿ, ಬಂಟ ದೈವಗಳ ಚಾರಿಟೇಬಲ್ ಟ್ರಸ್ಟ್‌ನ ಗೌರವಾಧ್ಯಕ್ಷ ಕೆ.ಟಿ. ಸುವರ್ಣ ಅಭಿಪ್ರಾಯಪಟ್ಟರು.

ಕಿನ್ಯ ಬೆಳರಿಂಗೆ ಭಂಡಾರ ಮನೆ ಶ್ರೀ ಮಲರಾಯ, ಧೂಮಾವತಿ, ಬಂಟ ದೈವಗಳ ವಾರ್ಷಿಕ ನೇಮದ ಅಂಗವಾಗಿ ಭಂಡಾರ ಮನೆಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ, ಮಾತನಾಡಿದರು.

ಖ್ಯಾತ ಯಕ್ಷಗಾನ ತಾಳಮದ್ದಳೆ ಅರ್ಥಧಾರಿ ಸದಾಶಿವ ಆಳ್ವ ತಲಪಾಡಿ ಧಾರ್ಮಿಕ ಉಪನ್ಯಾಸ ನೀಡಿದರು. ತಲಪಾಡಿ ದೇವಿನಗರ ಶ್ರೀ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲಿನ ಪ್ರಾಂಶುಪಾಲ ಮೋಹನ್ ದಾಸ್, ಶ್ರೀ ಮಲರಾಯ ಧೂಮಾವತಿ ಬಂಟ ದೈವಗಳ ಚಾರಿಟೇಬಲ್ ಟ್ರಸ್ಟ್ ಭಂಡಾರ ಮನೆ ಬೆಳರಿಂಗೆ ಟ್ರಸ್ಟಿ ಎ.ಜೆ. ಶೇಖರ್, ಬೆಳರಿಂಗೆ ಬಂಗೇರ ಕುಟುಂಬದ ಪ್ರಧಾನ ಕಾರ್ಯದರ್ಶಿ ಟ್ರಸ್ಟಿ ನಾರಾಯಣ ಪೂಜಾರಿ ಉರ್ವ, ಸೇವಾ ಸಮಿತಿ ಅಧ್ಯಕ್ಷ ಯಶವಂತ ಬೆಳರಿಂಗೆ ಉಪಸ್ಥಿತರಿದ್ದರು.

ಭಂಡಾರ ಮನೆ ಆವರಣಕ್ಕೆ ಇಂಟರ್ ಲಾಕ್ ಅಳವಡಿಸಿ ಸಹಕರಿಸಿದ ಟ್ರಸ್ಟಿಗಳಾದ ಕೆ.ಪಿ. ಸುರೇಶ್ ಮಾಡೂರು ಮತ್ತು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಆಯ್ಕೆಗೊಂಡ ಕ್ಷೇತ್ರದ ಟ್ರಸ್ಟಿ ಕೃಷ್ಣಪ್ಪ ಕಿನ್ಯ ಅವರನ್ನು ಸನ್ಮಾನಿಸಲಾಯಿತು.

ಟ್ರಸ್ಟ್‌ನ ಅಧ್ಯಕ್ಷ ಬಾಬು ಶಾಸ್ತಾ ಕಿನ್ಯ ಸ್ವಾಗತಿಸಿ, ಪ್ರಸ್ತಾವನೆಗೈದರು, ಪತ್ರಕರ್ತ ವಿದ್ಯಾಧರ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕೃಷ್ಣಪ್ಪ ಕಿನ್ಯ ವಂದಿಸಿದರು.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇಗುಲ ಸಣ್ಣ ರಥೋತ್ಸವ, ಪಲ್ಲಕ್ಕಿ ಉತ್ಸವ



ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ರಾತ್ರಿ ಶ್ರೀ ದೇವರ ಉತ್ಸವ ಬಲಿ, ಸಣ್ಣ ರಥೋತ್ಸವ, ಪಲ್ಲಕ್ಕಿ ಉತ್ಸವ ನಡೆಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯ ನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ ಸತೀಶ್ ಭಂಡಾರಿ, ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮ ಮತ್ತಿತರರು ಉಪಸ್ಥಿತರಿದ್ದರು. ಜಾತ್ರೆ ಪ್ರಯುಕ್ತ ಏ.7ರಂದು ಹಗಲು ರಥೋತ್ಸವ, ರಾತ್ರಿ ಶಯನೋತ್ಸವ ನಡೆಯಲಿದೆ. ಏ.8ರಂದು ಬೆಳಿಗ್ಗೆ ಕವಾಟೋದ್ಘಾಟನೆ ಮತ್ತು ರಾತ್ರಿ ಮಹಾರಥೋತ್ಸವ ನಡೆಯಲಿದೆ.

ರಥಕಟ್ಟು ಕಾರ್ಯ

ರಥೋತ್ಸವಕ್ಕೆ ಸೀಮೆಯ ಒಂಬತ್ತು ಮಾಗಣೆಯ ಭಕ್ತರ ಸಹಕಾರ ದೊಂದಿಗೆ ಮೊಗವೀರ ಸಮಾಜ ಬಾಂಧವರಿಂದ ರಥ ಕಟ್ಟುವ ಕಾರ್ಯ ಭರದಿಂದ ನಡೆಯುತ್ತಿದೆ.

ಏ.5ರಂದು ಉಪ್ಪಿನಂಗಡಿಯಲ್ಲಿ ಲೋಕ ಕಲ್ಯಾಣಾರ್ಥಕವಾಗಿ ಚತುಃಪವಿತ್ರ ನಾಗಮಂಡಲ



ಉಪ್ಪಿನಂಗಡಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಹಾಗೂ ನಾಗಮಂಡಲೋತ್ಸವ ಸಮಿತಿ ಉಪ್ಪಿನಂಗಡಿ ಇದರ ಆಶ್ರಯದಲ್ಲಿ ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥಕವಾಗಿ ಏ.5ರಂದು ಚತುಃಪವಿತ್ರ ನಾಗಮಂಡಲ ನಡೆಯಲಿದೆ ಎಂದು ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಹಾಗೂ ನಾಗಮಂಡಲೋತ್ಸವ ಸಮಿತಿಯ ಗೌರವಾಧ್ಯಕ್ಷ ಅರುಣ್ ಕುಮಾರ್ ಪುತ್ತಿಲ ತಿಳಿಸಿದರು.

ಅವರುಇಲ್ಲಿನಶಕ್ತಿಸಭಾಭವನದಲ್ಲಿಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲೋಕ ಕಲ್ಯಾಣಾರ್ಥ ಹಾಗೂ ಧರ್ಮ ಶ್ರದ್ಧೆ ಇನ್ನಷ್ಟು ಬೆಳೆಯಬೇಕು ಎಂಬ ಉದ್ದೇಶದಿಂದ ಟ್ರಸ್ಟ್‌ನ ವತಿಯಿಂದ ಪ್ರತಿ ವರ್ಷ ಧಾರ್ಮಿಕ ಕಾರ್ಯಕ್ರಮಗಳನ್ನುನಡೆಸಿಕೊಂಡುಬರಲಾಗುತ್ತಿದ್ದು, ಅದರಂತೆ ಈ ಬಾರಿ ನಾಗಮಂಡಲವನ್ನು ಆಯೋಜಿಸಲಾಗಿದೆ. ನಾಗನಿಗೆ ಹಿಂದೂ ಧರ್ಮದಲ್ಲಿ ವಿಶೇಷ ಸ್ಥಾನವಿದ್ದು, ಸಮಾಜದ ಎಲ್ಲಾ ಹಿಂದೂ ಬಾಂಧವರು ಇದರಲ್ಲಿ ಪಾಲ್ಗೊಳ್ಳಬೇಕು. ಶ್ರೀ ನಾಗ ದೇವರ ಅನುಗ್ರಹ ಎಲ್ಲರಿಗೂ ದೊರೆಯಬೇಕು ಎನ್ನುವ ಉದ್ದೇಶದಿಂದ ಸಾರ್ವಜನಿಕವಾಗಿ ನಾವು ಇದನ್ನು ನಡೆಸುತ್ತಿದ್ದು, ಎಲ್ಲಾ ಸಾರ್ವಜನಿಕರಿಗೂ ನಾಗಮಂಡಲ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಡಲಾಗಿದೆ ಎಂದರು.

ಏ.4ರಂದು ಆಶ್ಲೇಷ ಬಲಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಇಲ್ಲಿ ನಡೆಯಲಿದ್ದು, ನಾಗಮಂಡಲ ಸೇವೆ ಮಾಡಿಸುವವರಿಗೆ ಏ.5ರಂದು ಬೆಳಗ್ಗಿನಿಂದಲೇ ಸಂಕಲ್ಪಕ್ಕೆ ಸನ್ನಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಧ್ಯಾಹ್ನ 2ರಿಂದ ಭಜನಾ ಸಂಕೀರ್ತನೆ ನಡೆಯಲಿದ್ದು, ಸಂಜೆ 3ರಿಂದ 6ರವರೆಗೆ ಖ್ಯಾತ ಗಾಯಕರಾದ ಅಜಯ್ ವಾರಿಯರ್, ಕೀರ್ತನ್ ಹೊಳ್ಳ ಮತ್ತು ಸಂಗೀತ ಬಾಲಚಂದ್ರ ತಂಡದವರಿಂದ ಭಕ್ತಿ- ಭಾವ ಸಂಗೀತೋತ್ಸವ ನಡೆಯಲಿದೆ. ಸಂಜೆ 6ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ಹಾಗೂ ಆ್ಯಂಬುಲೆನ್ಸ್‌ಗಳ ಲೋಕಾರ್ಪಣೆ ನಡೆಯಲಿದೆ. ಒಡಿಯೂರಿನ ಶ್ರೀ ಗುರುದೇವದತ್ತ ಸಂಸ್ಥಾನಂ ಶ್ರೀ ಗುರುದೇವಾನಂದ ಸ್ವಾಮೀಜಿಯವರು ಹಾಗೂ ಶ್ರೀ ಕೇಮಾರು ಕ್ಷೇತ್ರದ ಶ್ರೀ ಈಶ ವಿಠಲದಾಸ ಸ್ವಾಮೀಜಿಯವರು ಆಶೀರ್ವಚನ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಅನ್ನದಾನಕ್ಕೆ ವಿಶೇಷ ಮಹತ್ವ

ನಾಗಮಂಡಲ ಸೇವೆಯಲ್ಲಿ ಅನ್ನದಾನಕ್ಕೆ ವಿಶೇಷ ಮಹತ್ವವಿದ್ದು, ಏ.5ರಂದು ಸಂಜೆ 3ರಿಂದ 7ರವರೆಗೆ ಭಕ್ತ ಜನಗಳಿಗೆ ಲೈವ್ ಸೆಟ್ ದೋಸೆ ವಿತರಣೆ ನಡೆಯಲಿದೆ. ರಾತ್ರಿ 8.30ರಿಂದ ಅನ್ನ ಸಂತರ್ಪಣೆ ನಡೆಯಲಿದೆ. ನಾಗಮಂಡಲ ಸೇವೆಗೆ ಸುಮಾರು 5 ಸಾವಿರ ಹಾಳೆ ಹಿಂಗಾರ ಮತ್ತು 5 ಸಾವಿರ ಸೀಯಾಳದ ಅವಶ್ಯಕತೆಯಿದ್ದು, ಇದನ್ನು ಸಮರ್ಪಿಸಲು ಭಕ್ತರಿಗೆ ಅವಕಾಶ ಕಲ್ಪಿಸಲಾಗಿದೆ. ಅಡಿಕೆ, ತೆಂಗಿನಮರಗಳು ಇಲ್ಲದ ಭಕ್ತಾದಿಗಳು ರೂ.200ರ ರಶೀದಿ ಪಡೆದು ಕಾರ್ಯಾಲಯದಿಂದ ಹಿಂಗಾರ ಹಾಗೂ ಸೀಯಾಳವನ್ನು ಪಡೆದು ಅದನ್ನು ನಾಗಮಂಡಲ ಸೇವೆಗೆ ಸಮರ್ಪಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಅರುಣ್ ಕುಮಾರ್ ಪುತ್ತಿಲ ಹೇಳಿದರು.

ಏ.4ರಂದು ಸಂಜೆ 5 ಗಂಟೆಗೆ ಗಾಂಧಿ ಪಾರ್ಕ್‌ನಿಂದ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದವರೆಗೆ ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದ್ದು, ಹಸಿರು ಹೊರೆಕಾಣಿಕೆಯನ್ನು ಈ ಸಂದರ್ಭ ಸಮರ್ಪಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಧಾರ್ಮಿಕತೆಯೊಂದಿಗೆ ಸಾಮಾಜಿಕ ಸೇವೆ

ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಕೈಗೊಳ್ಳುವ ಪ್ರತಿಯೊಂದು ಕಾರ್ಯಕ್ರಮದ ಹಿಂದೆ ಸಾಮಾಜಿಕ ಸೇವೆಯ ಧ್ಯೇಯವಿರುತ್ತದೆ. ಅಂತೆಯೇ ಈ ಬಾರಿ ದಾನಿಗಳು ಟ್ರಸ್ಟ್‌ಗೆ ನೀಡಿದ 2 ಆ್ಯಂಬುಲೆನ್ಸ್‌ಗಳನ್ನು ಸಮಾಜಕ್ಕೆ ಲೋಕಾರ್ಪಣೆಗೊಳಿಸುವ ಕಾರ್ಯಕ್ರಮವನ್ನು ನಡೆಸಲಾಗುವುದು. ಕಡಿಮೆ ಖರ್ಚಿನಲ್ಲಿ ರೋಗಿಗಳಿಗೆ ಇದರ ಸೇವೆ ಲಭ್ಯವಾಗಲಿದೆ. ಹೊಸದಾದ ಎರಡು ಆ್ಯಂಬುಲೆನ್ಸ್‌ಗಳಲ್ಲಿ ಒಂದನ್ನು ಉಪ್ಪಿನಂಗಡಿ ಭಾಗದಲ್ಲಿ ಹಾಗೂ ಇನ್ನೊಂದನ್ನು ಪುತ್ತೂರು ಭಾಗದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿನಾಗಮಂಡಲೋತ್ಸವ ಸಮಿತಿಯ ಅಧ್ಯಕ್ಷ ಚಂದಪ್ಪ ಮೂಲ್ಯ, ಗೌರವಾಧ್ಯಕ್ಷ ಹೇರಂಭ ಶಾಸ್ತ್ರಿ, ಕಾರ್ಯಾಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ನೆಕ್ಕಿಲಾಡಿ, ಕೋಶಾಧಿಕಾರಿ ಯತೀಶ್ ಶೆಟ್ಟಿ ಉಪ್ಪಿನಂಗಡಿ, ಸ್ವಾಗತ ಸಮಿತಿಯ ಜಯಂತ ಪೊರೋಳಿ, ವೈದಿಕ ಸಮಿತಿಯ ಪ್ರದೀಪ ಕಗ್ರಿತ್ತಾಯ, ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ ಉಪಸ್ಥಿತರಿದ್ದರು.

ಬಿಎಂಎಸ್ ಜಿಲ್ಲಾ ಕಾರ್ಯಾಲಯದ ಶಿಲಾನ್ಯಾಸ ಕಾರ್ಯಕ್ರಮ | ಹರಿಕೃಷ್ಣ ಕುಮಾರ್ ಮೆಚ್ಚುಗೆ

ಕಾರ್ಮಿಕರ ಹಿತರಕ್ಷಣೆ ಕಾಪಾಡುವಲ್ಲಿ ಸಂಘಟನೆ ಮುಂಚೂಣಿ

ಕಾಸರಗೋಡು: ಬಿಎಂಎಸ್ ಇಂದು ಇಡೀ ವಿಶ್ವದಲ್ಲೇ ಅತೀ ದೊಡ್ಡ ಕಾರ್ಮಿಕ ಸಂಘಟನೆಯಾಗಿದ್ದು ಇದಕ್ಕೆ ಕಾರ್ಮಿಕರಿಗೆ ಬಿಎಂಎಸ್ ಮೇಲಿರುವ ವಿಶ್ವಾಸವು ಪ್ರಮುಖ ಕಾರಣವಾಗಿದೆ ಎಂದು ಆರ್‌ಎಸ್‌ಎಸ್ ದಕ್ಷಿಣ ಕ್ಷೇತ್ರೀಯ ಪ್ರಚಾರಕ್ ಪಿ.ಎನ್.ಹರಿಕೃಷ್ಣ ಕುಮಾರ್ ಹೇಳಿದ್ದಾರೆ.

ಕರಂದಕ್ಕಾಡು ಶಿವಾಜಿನಗರದಲ್ಲಿ ಶುಕ್ರವಾರ ಬೆಳಿಗ್ಗೆ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಕಾಸರಗೋಡು ಜಿಲ್ಲಾ ಕಾರ್ಯಾಲಯದ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಕಾರ್ಮಿಕರ ಹಿತರಕ್ಷಣೆ ಕಾಪಾಡುವಲ್ಲಿ ದೇಶದ ಇತರ ಯಾವುದೇ ಕಾರ್ಮಿಕ ಸಂಘಟನೆಗಳಿಗಿಂತ ಬಿಎಂಎಸ್ ಮುಂಚೂಣಿಯಲ್ಲಿದೆ. ಇಂದು ಕಾರ್ಮಿಕರು ವಿವಿಧ ಕ್ಷೇತ್ರಗಳಲ್ಲಿ ಹಲವು ರೀತಿಯ ಸಂಕಷ್ಟಗಳ ಎದುರಿಸುತ್ತಿದ್ದಾರೆ. ಅವರ ಸಮಸ್ಯೆಗಳ ಬಗೆಹರಿಸಬೇಕಾದುದು ಸಂಘಟನೆ ಜವಾಬ್ದಾರಿಯಾಗಿದೆ. ಹಾಗೆ ಅವರ ಸಮಸ್ಯೆ ಬಗೆಹರಿಸಿದರೆ ಸಂಘಟನೆ ಎಲ್ಲಾ ಕ್ಷೇತ್ರಗಳಲ್ಲೂ ಬಲಿಷ್ಠಗೊಳ್ಳಲಿದೆ. ಆದಕ್ಕಾಗಿ ಸಂಘಟನೆ ಜವಾಬ್ದಾರರು ಅವಿರತ



ಕೆಲಸ ನಡೆಸಬೇಕು. ಹೀಗೆ ಈ ಸಂಘಟನೆ ಬಲಿಷ್ಠಗೊಂಡರೆ ನಮ್ಮ ದೇಶವೂ ಉನ್ನತಿಗೇರಲಿದೆ. ಆದಕ್ಕಾಗಿ ನಾವೆಲ್ಲರೂ ಅವಿರತ ಶ್ರಮ ವಹಿಸೋಣ ಎಂದು ಬಿಎಂಎಸ್ ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಎಂಎಸ್ ಜಿಲ್ಲಾಧ್ಯಕ್ಷ ಉಪೇಂದ್ರನ್ ಕೋಟೆಕಣಿ ಅಧ್ಯಕ್ಷತೆ ವಹಿಸಿದ್ದರು. ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಬಿಎಂಎಸ್ ಅಖಿಲ ಭಾರತ ಉಪಾಧ್ಯಕ್ಷ ಸಿ. ಉಣ್ಣಿಕೃಷ್ಣನ್ ಉಣ್ಣಿತ್ತಾನ್, ರಾಜ್ಯ ಅಧ್ಯಕ್ಷ ಬಿ.ಶಿವಾಜಿ ಸುದರ್ಶನ್, ದಕ್ಷಿಣ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಎಂ.ಪಿ.ರಾಜೀವನ್, ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಮಹೇಶ್‌ಕುಮಾರ್, ರಾಜ್ಯ ಕೋಶಾಧಿಕಾರಿ ಸಿ.ಬಾಲಚಂದ್ರನ್, ರಾಜ್ಯ ಉಪಾಧ್ಯಕ್ಷ, ವಕೀಲ ಪಿ.ಮುರಳೀಧರನ್, ಜಿಲ್ಲಾ ಸಂಘ ಚಾಲಕ್ ಪ್ರಭಾಕರನ್ ಮಾಸ್ತರ್, ಜಿಲ್ಲಾ ಕಾರ್ಯವಾಹ ಪವಿತ್ರನ್ ಕೆ.ಕೆ.ಪುರಂ, ವಿಭಾಗ್ ಕಾರ್ಯವಾಹ ಲೋಕೇಶ್ ಜೋಡುಕಲ್ಲು, ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ, ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಡಿ.ಶಂಕರ, ವಿಹಿಂಪ ವಿಭಾಗ್ ಸಂಘಟನಾ ಕಾರ್ಯದರ್ಶಿ ಸಂಕಪ್ಪ ಭಂಡಾರಿ, ಬಿಎಂಎಸ್ ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಕೆ.ರಾಜೇಶ್, ಸಹಕಾರ ಭಾರತಿ ಕೇರಳ ರಾಜ್ಯಾಧ್ಯಕ್ಷ, ವಕೀಲ ಕರುಣಾಕರನ್ ನಂಬ್ಯಾರ್, ಜಗನ್ನಾಥ ವಿಟ್ಲ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ರಾಜ್ಯ ಸಮಿತಿ ಸದಸ್ಯ ಎ. ವೇಲಾಯುಧನ್, ಎಬಿವಿಪಿ ಜಿಲ್ಲಾ ಕಾರ್ಯದರ್ಶಿ ಮನೋಜ್, ಎನ್‌ಜಿಒ ಸಂಘ ಜಿಲ್ಲಾಧ್ಯಕ್ಷ ರಂಜಿತ್ ಮಾಣಿಕೋತ್, ಸೇವಾಭಾರತಿ ಜಿಲ್ಲಾಧ್ಯಕ್ಷ ಎಂ.ಟಿ. ದಿನೇಶ್, ಪೆನ್ಶನರ್ಸ್ ಸಂಘ ಜಿಲ್ಲಾಧ್ಯಕ್ಷ ಕುಂಞಿರಾಮನ್, ಮಧುಸೂದನನ್, ದೀವರ್‌ಸಭಾ ರಾಜ್ಯ ಪದಾಧಿಕಾರಿ ಸುರೇಶ್ ಕೀಯೂರು , ಕೆ.ವಿ. ಬಾಬು , ಪಿ.ದಿನೇಶ್ ಬಂಬ್ರಾಣ ಮತ್ತಿತರರಿದ್ದರು.

ಕಾಸರಗೋಡು ಜಿಲ್ಲೆಯಲ್ಲಿ ಬಿಎಂಎಸ್ ಬಲಿಷ್ಠ

ಭಾರತೀಯ ಮಜ್ದೂರ್ ಸಂಘವು ಕಾಸರಗೋಡು ಜಿಲ್ಲೆಯಲ್ಲಿ ಬಲಿಷ್ಠವಾಗಿದೆ. ಸದಸ್ಯರ ಪ್ರೋತ್ಸಾಹ, ಪದಾಧಿಕಾರಿಗಳ ಸೇವೆ, ಕಾರ್ಯಕರ್ತರ ಅವಿರತ ಶ್ರಮವೇ ಇದಕ್ಕೆ ಸಾಕ್ಷಿಯಾಗಿದೆ. ಕಾರ್ಮಿಕರ ಎಲ್ಲಾ ರೀತಿಯ ಸಮಸ್ಯೆಗಳನ್ನು ಬಿಎಂಎಸ್ ಸಂಘಟನಾ ತ್ಮಕವಾಗಿ ಪರಿಹರಿಸುತ್ತಾ ಬಂದಿದೆ. ಇದರಿಂದಾಗಿಯೇ ಈ ಸಂಘಟನೆಗೆ ಸದಸ್ಯರು ಸೇರ್ಪಡೆಗೊಳುತ್ತಲೇ ಇದ್ದಾರೆ. ಅತ್ಯಂತ ಶಿಸ್ತುಬದ್ಧ ಹಾಗೂ ಸಂಘಟನಾ ಕೌಶಲ್ಯ ಹೊಂದಿರುವ ಬಿಎಂಎಸ್ ತತ್ವ ಸಿದ್ಧಾಂತ ಹಾಗೂ ದೇಶಭಕ್ತಿಯ ತಳಹದಿಯಲ್ಲಿ ಹುಟ್ಟಿಕೊಂಡು ನೆಲೆನಿಂತಿದೆ. ದೇಶದ ಸಮಗ್ರ ಅಭಿವೃದ್ಧಿಯ ಗುರಿಯೊಂದಿಗೆ ಸಂಘಟನೆಯು ಕಾರ್ಯನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ಬಿಎಂಎಸ್ ನೇತೃತ್ವದಲ್ಲಿ ಇನ್ನಷ್ಟು ಸಮಾಜಮುಖೀ ಕೈಂಕರ್ಯಗಳು ನಡೆಯುವಂತಾಗಿ ಜನರ ಸಮಗ್ರ ಏಳಿಗೆಗೆ ಶ್ರಮಿಸಲಿ ಎಂಬುದು ಹಾರೈಕೆ.

● ಪಿ.ಎನ್.ಹರಿಕೃಷ್ಣಕುಮಾರ್, ಆರೆಸ್ಸೆಸ್ ದಕ್ಷಿಣ ಕ್ಷೇತ್ರೀಯ ಪ್ರಚಾರಕ್

ಸುತ್ತಮುತ್ತ

ಕಾಪ್ಯ ತರವಾಡಿನಲ್ಲಿ ಕಳಿಯಾಟ ಮಹೋತ್ಸವ

ಕಾಸರಗೋಡು: ಕೊಳತ್ತೂರು ಕಾಪ್ಯ ತರವಾಡು ಶ್ರೀ ಭಗವತೀ ಕ್ಷೇತ್ರದಲ್ಲಿ ಕಳಿಯಾಟ ಮಹೋತ್ಸವವು ಏ.4ಮತ್ತು 5 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಏ.4 ರಂದು ಬೆಳಗ್ಗೆ 9ಕ್ಕೆ ಉಗ್ರಾಣ ತುಂಬಿಸುವುದು, ಸಂಜೆ 6ಕ್ಕೆ ಪದಿಕ್ಕಾಲ್ ಸನ್ನಿಧಿಯಲ್ಲಿ ದೀಪ ಪ್ರಜ್ವಲನೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 10 ರಿಂದ ವಿವಿಧ ದೈವಗಳ ಕೋಲ, ಏ.5 ರಂದು ಬೆಳಿಗ್ಗೆ 9 ಕ್ಕೆ ವಿವಿಧ ದೈವಗಳ ಕೋಲ ಸಹಿತ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನಾಳೆಯಿಂದ ಕೊರಕೋಡು ತರವಾಡು ಕ್ಷೇತ್ರದಲ್ಲಿ ಪ್ರತಿಷ್ಠಾ ದಿನಾಚರಣೆ, ನೇಮ

ಕಾಸರಗೋಡು: ಕೊರಕೋಡು ತರವಾಡು ಕ್ಷೇತ್ರದ ರಾಜಂದೈವ ಶ್ರೀ ಧೂಮಾವತಿ, ಕಲ್ಲಾಲ್ತ ಗುಳಿಗ, ಕುಪ್ಪೆ ಪಂಜುರ್ಲಿ, ಕಲ್ಲುರ್ಟಿ, ಕೊರತಿ ಅಮ್ಮ ಹಾಗೂ ನಾಗದೇವರ ಪ್ರತಿಷ್ಠಾ ದಿನಾಚರಣೆ ಹಾಗೂ ಶ್ರೀ ದೈವಗಳ ನೇಮ ಏ.5 ಮತ್ತು 6ರಂದು ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ಜರಗಲಿದೆ. ಏ.5ರಂದು ಪ್ರತಿಷ್ಠಾ ದಿನಾಚರಣೆ ಅಂಗವಾಗಿ ಬೆಳಗ್ಗೆ 7 ಕ್ಕೆ ಗಣಪತಿ ಹೋಮ, 9ಕ್ಕೆ ನಾಗತಂಬಿಲ, 10 ಗಂಟೆಗೆ ಶ್ರೀ ವೆಂಕಟ್ರಮಣ ದೇವರ ಮುಡಿಪು ಪೂಜೆ, 11 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಅನ್ನದಾನ, ಸಂಜೆ 6ಕ್ಕೆ ಭಂಡಾರ ಇಳಿಯುವುದು, ತೊಡಂಙ್, ರಾತ್ರಿ 7.30ಕ್ಕೆ ಕಲ್ಲಾಲ್ತ ಗುಳಿಗನ ಕೋಲ, 10ಕ್ಕೆ ಕುಪ್ಪೆ ಪಂಜುರ್ಲಿ ಮತ್ತು ಕಲ್ಲುರ್ಟಿ ದೈವದ ಕೋಲ, ಪ್ರಸಾದ ವಿತರಣೆ ಜರಗಲಿದೆ. ಏ.6ರಂದು ಬೆಳಗ್ಗೆ 10ಕ್ಕೆ ರಾಜಂದೈವ ಶ್ರೀಧೂಮಾವತಿ ದೈವದ ಧರ್ಮನೇಮ, ಪ್ರಸಾದ ವಿತರಣೆ, ಅನ್ನದಾನ, ಸಂಜೆ 4ಕ್ಕೆ ಕೊರತಿ ಅಮ್ಮನ ಕೋಲ ಪ್ರಸಾದ ವಿತರಣೆ, 6 ಗಂಟೆಗೆ ಭಂಡಾರ ಏರುವುದು ಜರಗಲಿದೆ.

ಏ.5: ಕೋಚಿಂಗ್ ಕ್ಯಾಂಪ್

ಕಾಸರಗೋಡು: ಜಿಲ್ಲೆಯ ಕ್ರಿಕೆಟ್ ಪ್ರತಿಭೆಗಳನ್ನು ಆರಿಸುವ ಅಂಗವಾಗಿ ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್‌ನ ಆಶ್ರಯದಲ್ಲಿ 16 ವರ್ಷಕ್ಕಿಂತ ಕೆಳಪ್ರಾಯದ ಬಾಲಕರಿಗೆ ಹಾಗೂ ಬಾಲಕಿಯರಿಗೆ ನಡೆಸುವ ಸಮ್ಮರ್ ಕೋಚಿಂಗ್ ಕ್ಯಾಂಪ್ ಏ.5ರಂದು ಆರಂಭಗೊಳ್ಳಲಿದೆ. ಭಾಗವಹಿಸಲಿಚ್ಛಿಸುವವರು ಏ.2ರ ಮುಂಚಿತವಾಗಿ ಜಿಲ್ಲಾ ಕ್ರಿಕೆಟ್ ಆಫೀಸ್‌ನಲ್ಲಿ ಹೆಸರು ನೋಂದಾಯಿಸಬೇಕಾಗಿದೆ. ಹೆಚ್ಚಿನ ಮಾಹಿತಿಗೆ 04994227500 ಅಥವಾ 9778179601 ನಂಬರ್‌ಗೆ ಕರೆ ಮಾಡಬಹುದು.

ಏ.6ರಿಂದ ಬಾಸ್ಕೆಟ್ ಬಾಲ್ ಬೇಸಿಗೆ ಶಿಬಿರ

ಕಾಸರಗೋಡು: ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಷನ್‌ನ ಆಶ್ರಯದಲ್ಲಿ ಜಿಲ್ಲಾ ಕ್ರೀಡಾ ಮಂಡಳಿಯ ಸಹಯೋಗದೊಂದಿಗೆ ನೀಲೇಶ್ವರ ರಾಜಾಸ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಬಾಸ್ಕೆಟ್ ಬಾಲ್ ಬೇಸಿಗೆ ಶಿಬಿರವು ಏ.6ರಂದು ಪ್ರಾರಂಭವಾಗಲಿದೆ. ಭಾಗವಹಿಸಲು ಆಸಕ್ತಿ ಹೊಂದಿರುವವರು ಅದೇ ದಿನ ಬೆಳಗ್ಗೆ 8 ಕ್ಕೆ ಮೈದಾನಕ್ಕೆ ತಲುಪಿ ತಮ್ಮ ಹೆಸರುಗಳ ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ 9961281960 ಅಥವಾ 9847084117 ಕರೆ ಮಾಡಬಹುದು.

ದೃಷ್ಟಿಹೀನ ಮತದಾರರಿಗೆ ಸಾಕ್ಷರತಾ ತರಗತಿ

ಕಾಸರಗೋಡು: ಕಾಸರಗೋಡು ಜಿಲ್ಲಾ ಸಾಕ್ಷರತಾ ಮಿಷನ್ ಮತ್ತು ಜಿಲ್ಲಾ ಅಂಧರ ಒಕ್ಕೂಟವು ದೃಷ್ಟಿಹೀನ ಮತದಾರರಿಗೆ ವಿಧಾನಸಭಾ ಚುನಾವ ಣೆಗೆ ಸಂಬಂಧಿಸಿದ ಸಾಕ್ಷರತಾ ತರಗತಿ ಆಯೋಜಿಸುತ್ತಿದೆ. ಈ ತರಗತಿ ಕಾಸರಗೋಡು ಸರಕಾರಿ ಅಂಧರ ಶಾಲೆಯಲ್ಲಿ ಏ.7ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಂಜೇಶ್ವರದಲ್ಲಿ ನಿರ್ಗತಿಕರಾದ ಒಟ್ಟು 33 ಮಂದಿ ವಾತ್ಸಲ್ಯ ಫಲಾನುಭವಿಗಳಿಗೆ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣುಹಂಪಲು ನೀಡಲಾಯಿತು. ಯೋಜನಾಧಿಕಾರಿ ಶಶಿಕಲಾ ಸುವರ್ಣ, ವಲಯ ಮೇಲ್ವಿಚಾರಕರಾದ ಜಯಶ್ರೀ, ಅಭಿಷೇಕ್, ಸಹದೇವ ನಾಯ್ಕ, ವಾರಿಜಾ, ಸುನೀತಾ, ಪೆರ್ಲ ಮತ್ತಿತರರು ಸುಂಕದಕಟ್ಟೆ ಕುಂಬಳೆ, ತಲಪಾಡಿ, ಪೈವಳಿಕೆಯಲ್ಲಿ ವಿತರಿಸಿದರು.

ಕಲೆಕ್ಟರೇಟ್-ನ್ಯಾಯಾಲಯ ಸಂಕೀರ್ಣದಲ್ಲಿ ಮತ ಯಾಚಿಸಿದ ಕಲ್ಲಟ್ರ ಮಾಹಿನ್ ಹಾಜಿ



ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಕಾಸರಗೋಡು ಜಿಲ್ಲಾ ನ್ಯಾಯಾಲಯ ಸಂಕೀರ್ಣ ಮತ್ತು ಕಲೆಕ್ಟರೇಟ್‌ಗೆ ಭೇಟಿ ನೀಡಿ ಅಧಿಕಾರಿಗಳು, ವಕೀಲರು ಮತ್ತು ನೌಕರರಲ್ಲಿ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಪರಿಸರದ ಮನೆಗಳಿಗೆ ಭೇಟಿ ನೀಡಿ, ಮತ ನೀಡಲು ಮನವಿ ಮಾಡಿದರು.

ಕಾಸರಗೋಡು ನಗರದ ಅಂಗಡಿಗಳು ಮತ್ತು ಮಾರುಕಟ್ಟೆಗಳಿಗೆ ಭೇಟಿ ನೀಡಿ ವ್ಯಾಪಾರಿಗಳು ಮತ್ತು ಗ್ರಾಹಕರನ್ನು ಖುದ್ದಾಗಿ ವಿಚಾರಿಸಿದರು.

ವಕೀಲ ಎನ್. ಎ.ಖಾಲಿದ್, ಹಾರಿಸ್ ಚೂರಿ, ಹಾಶಿಮ್ ಕಡವತ್, ಟಿ.ಇ. ಮುಖ್ತಾರ್, ಕೆ.ಎಂ.ಬಶೀರ್, ಎಂ.ಎಚ್.ಅಬ್ದುಲ್ ಖಾದರ್, ಜಹೀರ್ ಆಸಿಫ್, ವಕೀಲ ಜಾಕೀರ್ ಅಹಮ್ಮದ್, ವಕೀಲ ಪಿ.ಎ.ಫೈಸಲ್, ವಕೀಲ ವಿನೋದ್ ಕುಮಾರ್, ವಕೀಲ ಸಾಜಿದ್ ಕಮ್ಮಡಂ, ವಕೀಲ ಬಿ.ಕೆ.ಶಂಸುದ್ದೀನ್, ವಕೀಲ ಉಣ್ಣಿಕೃಷ್ಣನ್ ಕೋಡೋತ್, ಸಿದ್ದೀಕ್ ಸಂತೋಷನಗರ, ಜಲೀಲ್ ತುರ್ತಿ, ರಹಮಾನ್ ತೊಟ್ಟನ್, ಅಜ್ಮಲ್ ತಳಂಗರೆ, ಮುಝುಮ್ಮಿಲ್ ಫಿರ್ದೌಸ್ ನಗರ, ವಕೀಲ ಪಿ.ಎ.ಮುಹಮ್ಮದ್ ಜಿಯಾದ್, ವಕೀಲ ಮಜ್ರೂಕ್ ಕೆಲೋಟ್, ವಕೀಲ ಪಿ.ಎಸ್. ಜುನೈದ್, ವಕೀಲ ಸಾಬಿತ್ ಕುಳಂಗರ, ವಕೀಲೆ ತಬ್ಶೀರಾ, ವಕೀಲ ಗಿರಿಪ್ರಸಾದ್, ನಾಸರ್ ಚಾಲಕುನ್ನು, ಸಿ.ಬಿ.ಲತೀಫ್, ಫೈಸಲ್ ಪೊಡಿಪಳ್ಳಂ, ಟಿ.ಐ.ಇಕ್ಬಾಲ್, ಸಾದಿಕ್ ಶಮ್ಮಾ, ಅಶ್ರಫ್ ಮೂಲ, ನೌಶಾದ್ ಮಿಲಾದ್ ಮೊದಲಾದವರು ಅಭ್ಯರ್ಥಿಯ ಜೊತೆಗೆ ಇದ್ದರು.

ಆದೂರು ಮಲ್ಲಾವರ ಶ್ರೀ ದೇವಳದಲ್ಲಿ ಶ್ರೀ ಭೂತಬಲಿ ಉತ್ಸವ: ಭಗವತೀ ಸಂದರ್ಶನ



ಮುಳ್ಳೇರಿಯ: ಆದೂರು ಮಲ್ಲಾವರ ಶ್ರೀ ಪಂಚಲಿಂಗೇಶ್ವರ ದೇವಾಲಯದಲ್ಲಿ ಶ್ರೀ ಭೂತಬಲಿ ಉತ್ಸವ ಆರಂಭಗೊಂಡಿದ್ದು ಏ.4ರ ತನಕ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ವಿವಿಧ ಧಾರ್ಮಿಕ ಕಾರ್ಯಕ್ರಮ

ಗಣಪತಿ ಹೋಮ, ನವಕಾಭಿಷೇಕ, ಪ್ರಕಾಶ್ ಆಚಾರ್ಯ ಕುಂಟಾರು ಮತ್ತು ಬಳಗದವರಿಂದ ಸಂಗೀತ ಸೌರಭ, ತುಲಾಭಾರ ಸೇವೆ, ಮಹಾಪೂಜೆ, ಸಮಾರಾಧನೆ, ರಕ್ತೇಶ್ವರಿ ಮತ್ತು ವಿಷ್ಣುಮೂರ್ತಿ ದೈವಗಳಿಗೆ ತಂಬಿಲ, ಚೆಳ್ಳಂಗೋಡು ದೈವಸ್ಥಾನದಿಂದ ಗ್ರಾಮಾದಿ ದೈವಗಳ ಭಂಡಾರ ಆಗಮನ, ಶಾಸ್ತಾ ಕುಣಿತ ಭಜನಾ ಸಂಘ ಬೇಂಗತ್ತಡ್ಕ ಇವರಿಂದ ಕುಣಿತ ಭಜನೆ, ಆದೂರು ಶ್ರೀ ಪಂಚಲಿಂಗೇಶ್ವರ ಭಜನಾ ಸಂಘದವರಿಂದ ಭಜನೆ, ರಂಗಪೂಜೆ, ಅನ್ನಸಂತರ್ಪಣೆ, ಶ್ರೀ ದೇವರ ಭೂತಬಲಿ, ಸಿಡಿಮದ್ದು ಪ್ರದರ್ಶನ ನಡೆಯಿತು.

ಗ್ರಾಮಾದಿ ದೈವಗಳ ಆರಾಧನೆ

ಗುರುವಾರ ಮಲ್ಲಾವರ ಶ್ರೀ ಪಂಚಲಿಂಗೇಶ್ವರ ಮಹಿಳಾ ಭಜನಾ ಸಂಘದವರಿಂದ ಭಜನೆ, ಶ್ರೀ ದೇವರ ಭೂತಬಲಿ, ಭಗವತೀ ಸಂದರ್ಶನ, ರಾಜಾಂಗಣ ಪ್ರಸಾದ, ಮಂತ್ರಾಕ್ಷತೆ, ಗ್ರಾಮಾದಿ ದೈವಗಳ ಆರಾಧನೆ ಈ ಸಂದರ್ಭ ನಡೆಯಿತು.

ಯಕ್ಷಗಾನ ಬಯಲಾಟ

ಕೊಯಕೂಡ್ಲು ಪ್ರದೇಶಿಕ ಸಮಿತಿ ಅವರಿಂದ ನೃತ್ಯ ಸಂಧ್ಯಾ, ಶ್ರೀಹರಿ ಬಾಲಗೋಕುಲ ಜಯನಗರ ಇವರಿಂದ ನೃತ್ಯ ವೈವಿಧ್ಯ, ಶ್ರೀ ಪಂಚಲಿಂಗೇಶ್ವರ ಕೃಪಾಪೋಷಿತ ಯಕ್ಷಗಾನ ಕಲಾಸಂಘ ಮಲ್ಲಾವರ ಇವರಿಂದ ಯಕ್ಷಗಾನ ಬಯಲಾಟ ನಡೆಯಿತು.

ಏ.26-ಮೇ 2ರವರೆಗೆ ಕಾಳ್ಯಂಗಾಡು ಶ್ರೀ ಕ್ಷೇತ್ರದ ಬ್ರಹ್ಮಕಲಶ : ಸಿದ್ಧತಾ ಸಭೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಏ.26ರಿಂದ ಮೇ 2ರ ತನಕ ಜರಗಲಿರುವ ಪುನರ್ ಪ್ರತಿಷ್ಠಾ ಬ್ರಹ್ಮಕಲಶದ ಸಿದ್ಧತಾ ಸಭೆ ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಅಧ್ಯಕ್ಷತೆಯಲ್ಲಿ ಜರಗಿತು.

ಕ್ಷೇತ್ರದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಬ್ರಹ್ಮಕಲಶದ ವಿವಿಧ ಉಪಸಮಿತಿಗಳ ಜವಾಬ್ದಾರಿ, ಆಮಂತ್ರಣ ಪತ್ರಿಕೆ ಸಮಿತಿಯಿಂದ ತಂಡಗಳ ರಚಿಸಿ ವಿವಿಧೆಡೆಗೆ ಹಂಚುತ್ತಿರುವ ಬಗ್ಗೆ ಆರ್ಥಿಕ ವ್ಯವಸ್ಥೆ ಶ್ರಮದಾನದ ಮೂಲಕ ಪರಿಸರದ ಯುವಕರ ಜೊತೆ ಸೇರಿ ತಾವು ಕೆಲಸ ಕಾರ್ಯಗಳಲ್ಲಿ ಭಾಗಿಯಾದ ಬಗ್ಗೆ ಹೊಳ್ಳರು ನುಡಿದರು.

ಈ ಸಂದರ್ಭ ಕ್ಷೇತ್ರ ಮೊಕ್ತೇಸರ ಅಚ್ಚುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ, ಪುಷ್ಪಮ್ಮ ಕಾಳ್ಯಂಗಾಡು, ಮಧೂರು ಪಂ. ಸದಸ್ಯ ಗಣೇಶ್ ಮೀಪುಗುರಿ, ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್‌ರಾಜ್ ಕೊರಕೋಡು, ಸಮಿತಿ ಸಲಹೆಗಾರ ರಘು ಮೀಪುಗುರಿ, ಆರ್ಥಿಕ ಸಮಿತಿ ಪ್ರಮುಖರಾದ ವೇಣು ವಿ., ಕಾರ್ಯದರ್ಶಿ ಗೋವಿಂದ, ಭಜನಾಸಮಿತಿಯ ಗಣೇಶ್ ಕೇಳುಗುಡ್ಡೆ ತಿರುಮಲೇಶ್ ಆಚಾರ್ಯ, ಕೆ.ಜಗದೀಶ್ ಕೂಡ್ಲು, ರೋಹಿತ್ ಮಧೂರು, ಮಾಧ್ಯಮ ಸಮಿತಿ ಜಯ ಮಣಿಯಂಪಾರೆ, ಪುರುಷೋತ್ತಮ ಭಟ್, ವಸಂತ ಕೆರೆಮನೆ, ಮಹಿಳಾ ಸಂಘ ಕಾರ್ಯದರ್ಶಿ ದೀಪಾ ಕಾಳ್ಯಂಗಾಡು, ಕಾರ್ಯಾಲಯ ಸಮಿತಿಯ ಗಣೇಶ ಮನ್ನಿಪ್ಪಾಡಿ , ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಬ್ರಹ್ಮಕಲಶ ಸಮಿತಿ ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬಯಲು ಸ್ವಾಗತಿಸಿ, ಕೋಶಾಧಿಕಾರಿ ಶಾಂತಕುಮಾರ್ ಮುಂಡ್ಯತ್ತಡ್ಕ ವಂದಿಸಿದರು. ರಂಜಿತ್ ಮನ್ನಿಪ್ಪಾಡಿ ಕಾರ್ಯಕ್ರಮಕ್ಕೆ ನೇತೃತ್ವ ನೀಡಿದರು.

ಪುಳಿಕುತ್ತಿ ಐಲ ಬ್ರಹ್ಮಶ್ರೀ ಮೊಗೇರ ದೈವಸ್ಥಾನದಲ್ಲಿ ವಾರ್ಷಿಕ ನೇಮ



ಮಂಜೇಶ್ವರ: ಪುಳಿಕುತ್ತಿ ಐಲ ಬ್ರಹ್ಮಶ್ರೀ ಮೊಗೇರ ಮಹಾಕಾಳಿ ದೈವಸ್ಥಾನದಲ್ಲಿ ವಾರ್ಷಿಕ ನೇಮದ ಅಂಗವಾಗಿ ಸಭೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಅಧ್ಯಕ್ಷತೆಯನ್ನು ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ ವಹಿಸಿದ್ದರು. ಸಾಮಾಜಿಕ ಧಾರ್ಮಿಕ ಮುಂದಾಳು ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು ಧಾರ್ಮಿಕ ಭಾಷಣವನ್ನು ಮಾಡಿದರು.

ದೈವಸ್ಥಾನದ ಗುರಿಕಾರ ರಾಮಕೃಷ್ಣ ಪುಳಿಕುತ್ತಿ, ಕರ್ನಾಟಕದ ಮಾಜಿ ಸಚಿವ ಅಂಗಾರ, ವಿಶ್ವ ಹಿಂದೂ ಪರಿಷತ್ ಮುಖಂಡ ಜಯದೇವ ಖಂಡಿಗೆ, ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಉದ್ಯಮಿ ಮೋಹನ್ ಶೆಟ್ಟಿ ತೂಮಿನಾಡು, ಮಾಜಿ ಪಂಚಾಯತ್ ಸದಸ್ಯೆ ಸುಧಾ ಗಣೇಶ್, ಗೋಪಾಲ ಪೊಲೀಸ್ ಪುಳಿಕುತ್ತಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ದೇವದಾಸ್ ಶೆಟ್ಟಿ ಪ್ರತಾಪನಗರ ಸ್ವಾಗತಿಸಿದರು. ದಿವಾಕರ ಪ್ರತಾಪನಗರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಸನ್ಮಾನ

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ.ಅತುಲ್ಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಅಶ್ವಿನಿ ಅವರನ್ನು ವೇದಿಕೆಯಲ್ಲಿ ಗಣ್ಯರು ಶಾಲು ಹೊದೆಸಿ ಫಲಪುಷ್ಪ ನೀಡಿ ಸನ್ಮಾನಿಸಿದರು.

ಇಂದು ಇಚ್ಲಂಗೋಡು ಎಎಲ್‌ಪಿ ಶಾಲೆಯ 80ನೇ ವಾರ್ಷಿಕೋತ್ಸವ

ಕುಂಬಳೆ: ಎಂಟು ದಶಕಗಳ ಶಿಕ್ಷಣ ಪರಂಪರೆ ಹೊಂದಿರುವ ಇಚ್ಲಂಗೋಡು ಇಸ್ಲಾಮಿಯಾ ಎಎಲ್‌ಪಿ ಶಾಲೆಯ 80ನೇ ವಾರ್ಷಿಕೋತ್ಸವ ಆಚರಣೆ ಏ.4 ರಂದು ನಡೆಯಲಿದೆ ಎಂದು ಸಂಘಟಕರು ಕುಂಬಳೆಯಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಕ್ರಮಗಳು ಮಧ್ಯಾಹ್ನ 2 ಗಂಟೆಯಿಂದ ಬಿರೋಲಿಕಾ ಮೈದಾನದಲ್ಲಿ ಜರಗಲಿವೆ. ಇದರ ಭಾಗವಾಗಿ ಶಾಲೆಯ 80 ವರ್ಷಗಳ ಇತಿಹಾಸವನ್ನು ದಾಖಲಿಸುವ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುವುದು.

ದತ್ತಿನಿಧಿ ವಿತರಣೆ

ನಿವೃತ್ತ ಮುಖ್ಯೋಪಾಧ್ಯಾಯ ದಿ.ರಂಜಿತ್ ಮಾಸ್ತರ್ ಅವರ ಸ್ಮರಣಾರ್ಥ ಸ್ಥಾಪಿಸಲಾದ ದತ್ತಿನಿಧಿಯನ್ನು ವಿತರಿಸಲಾಗುವುದು. ಜೊತೆಗೆ ಶಾಲೆಯಲ್ಲಿ ನಡೆದ ಮೆಗಾ ರಸಪ್ರಶ್ನೆ ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನು ನೀಡಲಾಗುವುದು.

ಸಾಮಾನ್ಯ ಸಭೆಯ ನಂತರ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುವುದು. ಬಳಿಕ ರಾತ್ರಿ 8 ರಿಂದ ರಾಜ್ಯ ಪ್ರಶಸ್ತಿ ವಿಜೇತ ಸುಧೀರ್ ಮಡವೂರು ನೇತೃತ್ವದಲ್ಲಿ ಮ್ಯಾಜಿಕ್ ಸಿಲ್ಸಿಲಾ 30 ಎಂಬ ಮ್ಯಾಜಿಕ್ ಶೋ ಹಾಗೂ ಕೋಝಿಕ್ಕೋಡ್ ಎಕೋ ಮ್ಯೂಸಿಕಲ್ ಬ್ಯಾಂಡ್ ಪ್ರದರ್ಶಿಸುವ ಗೀತೋತ್ಸವ ನಡೆಯಲಿದೆ.

ಮಂಜೇಶ್ವರ ಎಇಒ ಜಾರ್ಜ್ ಕ್ರಾಸ್ತಾ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕುಂಬಳೆ ಸಿಐ ಬೈಜು ಕೆ. ಜೋಸ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕಾರ್ಯಕ್ರಮ ಸಮಿತಿ ಅಧ್ಯಕ್ಷ ಮಜೀದ್ ಪಚ್ಚಂಬಳ ಅಧ್ಯಕ್ಷತೆ ವಹಿಸುವರು. ಮುಖ್ಯ ಶಿಕ್ಷಕ ಜಿಜೇಶ್ ಪ್ರಾಸ್ತಾವಿಕವಾಗಿ ಮಾತನಾಡುವರು. ಪಿಟಿಎ ಅಧ್ಯಕ್ಷ ನಸೀಮ್ ಇಚ್ಲಂಗೋಡು ಉಪಸ್ಥಿತರಿರುವರು.

ಸಂಘಟನಾ ಸಮಿತಿಯ ಪ್ರಧಾನ ಸಂಯೋಜಕ ಮಜೀದ್ ಪಚ್ಚಂಬಳ, ಪ್ರಧಾನ ಸಂಯೋಜಕ ಹಸನ್ ಇಚ್ಲಂಗೋಡ್, ಪಿಟಿಎ ಅಧ್ಯಕ್ಷ ನಸೀಮ್ ಮೊಗರ್, ಮುಖ್ಯ ಶಿಕ್ಷಕ ಜಿಜೇಶ್ ಮತ್ತು ಬಶೀರ್ ಮಾಸ್ತರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸನ್ಮಾನ

ಶಾಲೆಯಲ್ಲಿ ಹೊಸ ಅಡುಗೆ ರೂಮ್ ಮತ್ತು ಅಂಗಡಿಯ ನಿರ್ಮಾಣದ ನೇತೃತ್ವ ವಹಿಸಿದ್ದ ಗುತ್ತಿಗೆದಾರರಾದ ಶಾಲಾ ವ್ಯವಸ್ಥಾಪಕ ಮುಹಮ್ಮದ್ ಅನ್ಸಾರಿ ಶೆರೂಲ್, ಸ್ಮರಣ ಸಂಚಿಕೆ ವಿನ್ಯಾಸಕ ಸಬೀರ್ ಮತ್ತು ತಾರಾನಾಥ ಅವರನ್ನು ಸನ್ಮಾನಿಸಲಾಗುವುದು.



ಮಂಜೇಶ್ವರ ಬಳಿಯ ಕುಂಜತ್ತೂರು ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ಬ್ರಹ್ಮಶ್ರೀ ಮುಗೇರ, ಮಹಾಕಾಳಿ ಹಾಗೂ ಪರಿಹಾರ ದೈವಗಳ ಪುನರ್ ಪ್ರತಿಷ್ಠೆ ಮತ್ತು ಬ್ರಹ್ಮಕಲಶ ಹಾಗೂ ನೇಮದ ಅಂಗವಾಗಿ ಶುಕ್ರವಾರ ತಂತ್ರಿವರ್ಯ ವೇ.ಮೂ. ಕೆ.ಮರಿ ಭಟ್ ಅವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳು ನೆರವೇರಿದವು.



ಪೆರ್ಲ ಸಮೀಪದ ಉಕ್ಕಿನಡ್ಕ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಶುಕ್ರವಾರ ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಪ್ರತಿಷ್ಠೆ, ಜೀವಕಲಶಾಭಿಷೇಕ, ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾ ಬಲಿ ಕಾರ್ಯಕ್ರಮ ಜರಗಿತು.

ಪೊಡಿಪ್ಪಳ್ಳ ಸಭಾಭವನದಲ್ಲಿ ಅರಶಿನ ಕುಂಕುಮ ಕಾರ್ಯಕ್ರಮ | ಸಹನಾ ಕುಂದರ್ ಕಿವಿಮಾತು

ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಮತ ನಿಮ್ಮದಾಗಿರಲಿ

ಬದಿಯಡ್ಕ: ಅರಶಿನ ಕುಂಕುಮ ಹಿಂದು ಧರ್ಮದ ಸಂಸ್ಕೃತಿ. ಮನುಷ್ಯ ಜೀವನದಲ್ಲಿ ನಡೆಯುವ ಪ್ರತೀ ಹೆಜ್ಜೆ ಮತ್ತು ಬದುಕು ಒಂದು ಪರಿಪಾಠವಾಗಿದೆ. ನಾವು ಬದುಕುವ ಮಹತ್ವವೇ ಹಿಂದುತ್ವ, ಹಿಂದು ಧರ್ಮ ಸದಾ ನಮ್ಮ ನೆನಪಲ್ಲಿರಬೇಕು. ಮನೆಯಲ್ಲಿರುವ ಮಕ್ಕಳಿಗೆ ಸಂಸ್ಕಾರ ನೀಡಬೇಕು ಎಂದು ಪ್ರಖರ ವಾಗ್ಮಿ ಸಹನಾ ಕುಂದರ್ ಉಡುಪಿ ಹೇಳಿದ್ದಾರೆ.

ಅವರು ಕಾಸರಗೋಡು ಸನಾತನ ಸಾಂಸ್ಕೃತಿಕ ಯುವ ಕಲಾವೇದಿಕೆ ನೇತೃತ್ವದಲ್ಲಿ ಶುಕ್ರವಾರ ಕುಂಬ್ಡಾಜೆ ಸಮೀಪದ ಪೊಡಿಪ್ಪಳ್ಳ ಶ್ರೀ ಚೀರುಂಬಾ ಭಗವತೀ ಸಭಾಭವನದಲ್ಲಿ ಜರಗಿದ ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದರು. ಉತ್ತಮ ಅಭ್ಯರ್ಥಿ ಆಯ್ಕೆ ಮಾಡುವ ಮತ ನಿಮ್ಮದಾಗಿದ್ದರೆ ಅದು ರಾಜಕೀಯ ಗೆಲುವು ನೀಡುತ್ತದೆ. ನಿಮ್ಮ ಮತ ಸಂಸ್ಕಾರದ ಮತವಾಗಿರಲಿ. ಧರ್ಮ ಉಳಿಸುವ



ಮತವಾಗಿರಲಿ. ನಿಮ್ಮ ಮತ ಹೆಣ್ಣು ಮಕ್ಕಳ ರಕ್ಷಣೆಯ ಮತವಾಗಿರಲಿ ಎಂದು ಅವರು ಹೇಳಿದರು.

ಪೊಡಿಪ್ಪಳ್ಳ ಭಂಡಾರಮನೆಯ ರಾಜೀವಿ ಅಧ್ಯಕ್ಷತೆ ವಹಿಸಿದ್ದರು. ಮಹಾರಾಷ್ಟ್ರ ನಗರ ಪಾಲಿಕಾ ಸದಸ್ಯ ಸಂತೋಷ್ ಶೆಟ್ಟಿ ಮುಂಬೈ, ಪ್ರಮುಖರಾದ ರವೀಂದ್ರ ರೈ ಗೋಸಾಡ, ಕುಂಬ್ಡಾಜೆ ಗ್ರಾ.ಪಂ. ಅಧ್ಯಕ್ಷೆ ಯಶೋಧಾ ಎನ್., ಕಾರಡ್ಕ ಗ್ರಾ.ಪಂ. ಅಧ್ಯಕ್ಷೆ ಎಂ.ಜನನಿ, ಬದಿಯಡ್ಕ ಗ್ರಾ.ಪಂ.ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಅನಿತಾ ನಾಯ್ಕ್ ಕಾಸರಗೋಡು, ವೀಣಾ ಅರುಣ್ ಶೆಟ್ಟಿ, ಪ್ರಮೀಳಾ ಮಜಲು ಮತ್ತಿತರರಿದ್ದರು. ಲಕ್ಷ್ಮೀ ಮಾರ್ಪನಡ್ಕ ಸ್ವಾಗತಿಸಿ, ಚಂದ್ರಕಲಾ ನೆಟ್ಟಣಿಗೆ ವಂದಿಸಿ, ಪೊಡಿಪ್ಪಳ್ಳ ಶ್ರೀ ಶಾರದಾಂಬಾ ಬಾಲಗೋಕುಲ ಮಕ್ಕಳು ಪ್ರಾರ್ಥಿಸಿ, ಬದಿಯಡ್ಕ ಮಂಡಲ ಕುಟುಂಬ ಸಂಗಮ ಸಂಯೋಜಕ ರಾಜೇಶ್ ಶೆಟ್ಟಿ ಕುಂಬ್ಡಾಜೆ ನಿರೂಪಿಸಿದರು.

ಅರಸಿನ ಕುಂಕುಮವಿಟ್ಟು ಗೌರವ

ಇದೇ ವೇಳೆ ಆಗಮಿಸಿದ ಕಾಸರಗೋಡು ವಿಧಾನಸಭಾ ಕ್ಷೇತ್ರ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರಿಗೆ ಅರಸಿನ ಕುಂಕುಮವಿಟ್ಟು ಗೌರವಿಸಲಾಯಿತು.

ಪುಣ್ಯಭೂಮಿಯಲ್ಲಿ ಹುಟ್ಟಿರುವುದು ನಮ್ಮ ಸೌಭಾಗ್ಯ

ತೊಟ್ಟಿಲು ತೂಗುವ ಕೈ ಇಂದು ದೇಶ ಆಳುವ ಮಟ್ಟಿಗೂ ತಲುಪಿದೆ. ಈ ಪುಣ್ಯಭೂಮಿಯಲ್ಲಿ ಹುಟ್ಟಿರುವುದು ನಮ್ಮ ಪಾಲಿನ ಸೌಭಾಗ್ಯ. ಕುಂಕುಮ ಅರಸಿನ ಫ್ಯಾಶನ್ ಅಲ್ಲ, ಅದು ನಮ್ಮ ಸಂಸ್ಕೃತಿ. ಹೆಣ್ಣುಮಕ್ಕಳ ಹಣೆಯಲ್ಲಿ ಕುಂಕುಮ, ಕೈಗಳಿಗೆ ಬಳೆಗಳು, ಕಾಲ್ಬೆರಳಿಗೆ ಕಾಲುಂಗುರ, ಕುತ್ತಿಗೆಗೆ ಆಭರಣ ಭೂಷಣವೂ ಹೌದು ಆರೋಗ್ಯ ಪೂರಕವೂ ಹೌದು.

● ಸಹನಾ ಕುಂದರ್, ಪ್ರಖರ ವಾಗ್ಮಿ

ತೂಮಿನಾಡು ಮುಗೇರ ದೈವಸ್ಥಾನದ ಹೊರೆಕಾಣಿಕೆ ವೇಳೆ ಮುಸ್ಲಿಂ ಬಂಧುಗಳಿಂದ ಮಜ್ಜಿಗೆ ವಿತರಣೆ

ಮಂಜೇಶ್ವರ: ಜಾತಿ ಧರ್ಮಗಳ ಹೆಸರಿನಲ್ಲಿ ದ್ವೇಷದ ಕಿಡಿ ಹರಡುತ್ತಿರುವ ಇಂದಿನ ಕಾಲಘಟ್ಟದಲ್ಲಿ ತೂಮಿನಾಡಿನ ಮುಸ್ಲಿಂ ಯುವಕರು ಮಾನವೀಯತೆ ಮತ್ತು ಸೌಹಾರ್ದತೆಯ ಹೊಸ ಮನ್ವಂತರಕ್ಕೆ ಸಾಕ್ಷಿಯಾಗಿದ್ದಾರೆ.

ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದ ಬ್ರಹ್ಮಕಲಶದ ಅಂಗವಾಗಿ ಗುರುವಾರ ನಡೆದ ಹೊರೆಕಾಣಿಕೆ ಮೆರವಣಿಗೆಯಲ್ಲಿ ಭಾಗವಹಿಸಿದ ಭಕ್ತಾದಿಗಳಿಗೆ ಮಜ್ಜಿಗೆ ವಿತರಿಸುವ ಮೂಲಕ ಈ ಯುವಕರು ಕೋಮು ಸೌಹಾರ್ದತೆಯನ್ನು ಮೆರೆದಿದ್ದಾರೆ.

ಬ್ರಹ್ಮಕಲಶ ಹಾಗೂ ವರ್ಷಾವಧಿ ನೇಮದ ಹಿನ್ನಲೆಯಲ್ಲಿ ಅದ್ದೂರಿ ಹೊರೆಕಾಣಿಕೆ ಮೆರವಣಿಗೆ ಆಯೋಜಿಸಲಾಗಿತ್ತು. ಸುಡುವ ಬಿಸಿಲನ್ನೂ ಲೆಕ್ಕಿಸದೆ ಮೆರವಣಿಗೆಯಲ್ಲಿ ಸಾಗುತ್ತಿದ್ದ ನೂರಾರು ಭಕ್ತರಿಗೆ ಸ್ಥಳೀಯ ಮುಸ್ಲಿಂ ಯುವಕರು ತಂಪು ಮಜ್ಜಿಗೆ ನೀಡಿ ಉಪಚರಿಸಿದರು.



ದೈವಸ್ಥಾನದ ಸಮಿತಿ ಹಾಗೂ ಮೆರವಣಿಗೆಯಲ್ಲಿದ್ದ ಭಕ್ತಾದಿಗಳು ಯುವಕರ ಈ ನಿಸ್ವಾರ್ಥ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

6 ಹೊಸದಿಗಂತ ಸಂಗಮ
ಪುಟ ಸಂಖ್ಯೆ
ನಮ್ಮ ಉಡುಪಿ
ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶನಿವಾರ 04, ಏಪ್ರಿಲ್ 2026

ನಡುಕ ಹುಟ್ಟಿಸಿದೆ ಗಾಳಿಯಲ್ಲಿರುವ ವಿಷದ ಅಂಶ | ಅಪಾಯದ ಮಟ್ಟ ತಲುಪಿದ ವಾಯು ಮಾಲಿನ್ಯ
ಉಡುಪಿ ನಗರವಾಸಿಗಳ ಆರೋಗ್ಯಕ್ಕೆ ವಿಷಗಾಳಿ ಸಂಚಕಾರ!

ಉಡುಪಿ: ಸಾಂಸ್ಕೃತಿಕ ನಗರಿ, ಸ್ವಚ್ಛ ನಗರಿ ಎಂಬ ಹೆಗ್ಗಳಿಕೆಯ ಉಡುಪಿ ನಗರದಲ್ಲಿ ಈಗ ನಿಧಾನವಾಗಿ 'ವಿಷಗಾಳಿ' ಆವರಿಸುತ್ತಿದೆ.

ಕರ್ನಾಟಕ ರಾಜ್ಯ ಹಾಗೂ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಇತ್ತೀಚಿನ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) ಉಡುಪಿ ನಗರವಾಸಿಗಳಲ್ಲಿ ನಡುಕ ಹುಟ್ಟಿಸಿದೆ. ನಗರದ ವಾಯು ಗುಣಮಟ್ಟವು ನಿಗದಿತ ಮಾಪನಕ್ಕಿಂತ (0–100) ಅತ್ಯಂತ ಕಳಪೆ ಮಟ್ಟಕ್ಕೆ (160ರಿಂದ 180) ಕುಸಿದಿರುವುದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ 'ಪರಿಸರ ಸಂಗಮ' ಸಂಘಟನೆಯು ಉಡುಪಿ ನಗರಸಭಾ ಆಯುಕ್ತರಿಗೆ ತುರ್ತು ಪತ್ರ ಬರೆದು ಕ್ರಮಕ್ಕೆ ಆಗ್ರಹಿಸಿದೆ.

ಏನಿದು ಮಾಲಿನ್ಯದ ಗುಟ್ಟು

ಉಡುಪಿ ನಗರದ ಗಾಳಿಯಲ್ಲಿ ಮಾಲಿನ್ಯಕಾರಕ ಕಣಗಳಾದ ಪಿಎಂ 2.5 ಮತ್ತು ಪಿಎಂ 10 ಅಪಾಯಕಾರಿ ಮಟ್ಟದಲ್ಲಿದೆ. ಇದರೊಂದಿಗೆ ಕಾರ್ಬನ್ ಮೊನಾಕ್ಸೈಡ್ (348ಪಿಪಿಬಿ), ಸಲ್ಫರ್ ಡೈಆಕ್ಸೈಡ್, ನೈಟ್ರೋಜನ್ ಡೈಆಕ್ಸೈಡ್ ಹಾಗೂ ಓಝೋನ್ ಕಣಗಳು ಅಧಿಕ ಸಂಖ್ಯೆಯಲ್ಲಿರುವುದು ದೃಢಪಟ್ಟಿದೆ ಎಂದು ಪರಿಸರ ಹೋರಾಟಗಾರ ಪ್ರೇಮಾನಂದ ಕಲ್ಮಾಡಿ ಕಳವಳ ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ 2.5 ಮೈಕ್ರೋನ್‌ಗಿಂತ ಕಡಿಮೆ ವ್ಯಾಸದ ಕಣಗಳು ಶ್ವಾಸಕೋಶದ ಆಳಕ್ಕೆ ಇಳಿಯುವ ಸಾಮರ್ಥ್ಯ ಹೊಂದಿದ್ದು ಇದು ನಾಗರಿಕರ ಜೀವಕ್ಕೆ ಕಂಟಕವಾಗುವ ಸಾಧ್ಯತೆಯಿದೆ.



ಆರೋಗ್ಯದ ಮೇಲೆ ಗಂಭೀರ ಪರಿಣಾಮ

ವಾಯು ಮಾಲಿನ್ಯದ ಈ ಕಳಪೆ ಮಟ್ಟವು ವಿಶೇಷವಾಗಿ ಅಶಕ್ತ ವೃದ್ಧರು, ಮಕ್ಕಳು ಹಾಗೂ ಶ್ವಾಸಕೋಶ ಸಂಬಂಧಿ ಕಾಯಿಲೆ ಇರುವವರ ಮೇಲೆ ತೀವ್ರ ಪರಿಣಾಮ ಬೀರಲಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಉಡುಪಿ ನಗರದ ಜನರು ಕಡ್ಡಾಯ 'ಎನ್‌95' ಮಾಸ್ಕ್ ಧರಿಸಿಯೇ ರಸ್ತೆಗಿಳಿಯಬೇಕಾದ ಅನಿವಾರ್ಯತೆ ಎದುರಾಗಲಿದೆ. ಇದು ಸಂವಿಧಾನಬದ್ಧವಾಗಿ ನಾಗರಿಕರು ಹೊಂದಿರಬೇಕಾದ ಉತ್ತಮ ಪರಿಸರದ ಹಕ್ಕು ಮತ್ತು ಮೂಲಭೂತ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಪತ್ರದಲ್ಲಿ ಎಚ್ಚರಿಸಲಾಗಿದೆ. ರಾಜ್ಯ ಹಾಗೂ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವಾಯು ಗುಣಮಟ್ಟ ಸೂಚ್ಯಂಕದಲ್ಲಿ ಉಡುಪಿ ನಗರವು ನಿಗದಿತ 0–100 ಮಾಪನಕ್ಕಿಂತ ಬಹಳ ಕಳಪೆಯಾದ 160ರಿಂದ 180ರಷ್ಟು ದಾಖಲಾಗುತ್ತಿದೆ.

ಬಿದಿರು ಬೆಳೆಸಲು ಸಲಹೆ

ಈ ಪರಿಸ್ಥಿತಿಯನ್ನು ನಿಯಂತ್ರಿಸಲು 2026–27ನೇ ಸಾಲಿನ ನಗರಸಭೆ ಬಜೆಟ್‌ನಲ್ಲಿ ವಾಯು ಮಾಲಿನ್ಯ ನಿಯಂತ್ರಣಕ್ಕೆ ವಿಶೇಷ ಅನುದಾನ ಮೀಸಲಿಡಬೇಕು ಎಂಬ ಒತ್ತಾಯ ಕೇಳಿಬಂದಿದೆ. ನಗರದ ಖಾಲಿ ಜಾಗಗಳಲ್ಲಿ ಗಿಡಮರಗಳನ್ನು, ಅದರಲ್ಲೂ ವಿಶೇಷವಾಗಿ ಗಾಳಿಯನ್ನು ಶುದ್ಧೀಕರಿಸುವ 'ಬಿದಿರು' ಗಿಡಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸುವಂತೆ ಸಲಹೆ ನೀಡಲಾಗಿದೆ.

ಅತೀ ಸೂಕ್ಷ್ಮ ಕಣಗಳು

ನಗರದ ವಾಯು ಮಾಲಿನ್ಯಕ್ಕೆ ಪ್ರಮುಖವಾಗಿ 2.5 ಮೈಕ್ರೋನ್‌ಗಿಂತ ಕಡಿಮೆ ವ್ಯಾಸದ ಅತಿ ಸೂಕ್ಷ್ಮ ಕಣಗಳಾದ ಪಿಎಂ 2.5 ಮತ್ತು ಪಿಎಂ 10 ಕಾರಣವಾಗಿವೆ. ಇದರ ಜೊತೆಗೆ ಗಾಳಿಯಲ್ಲಿ ಕಾರ್ಬನ್ ಮೋನೋಕ್ಸೈಡ್ 348ಪಿಪಿಬಿ, ಸಲ್ಫರ್ ಡೈಆಕ್ಸೈಡ್ 2ಪಿಪಿಬಿ, ನೈಟ್ರೋಜನ್ ಡೈಆಕ್ಸೈಡ್ 8ಪಿಪಿಬಿ ಹಾಗೂ ಓಝೋನ್ 26ಪಿಪಿಬಿ ಕಣಗಳು ಅಧಿಕ ಸಂಖ್ಯೆಯಲ್ಲಿರುವುದು ದೃಢಪಟ್ಟಿದೆ. ಈ ಮಾಲಿನ್ಯಕಾರಕಗಳು ನೇರವಾಗಿ ಶ್ವಾಸಕೋಶದ ಮೇಲೆ ಪರಿಣಾಮ ಬೀರಲಿದ್ದು, ವೃದ್ಧರು ಮತ್ತು ಅಶಕ್ತರು ಕಡ್ಡಾಯವಾಗಿ ಎನ್‌95 ಮಾಸ್ಕ್ ಬಳಸುವಂತಹ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಸುತ್ತಮುತ್ತ

ಇಂದು ಬಸ್ರೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಕುಂದಾಪುರ: ಬಸ್ರೂರಿನ ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನ ಹಾಗೂ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಆಶ್ರಯದಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಇದರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವು ಮಂಡಿಕೇರಿ ಬಸ್ರೂರು ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನದ ಸಭಾಂಗಣದಲ್ಲಿ ಏ.5ರಂದು ನಡೆಯಲಿದೆ. ಶಿಬಿರದಲ್ಲಿ ಮುಖ್ಯವಾಗಿ ಚರ್ಮರೋಗ, ಮೂಳೆ ಸಂಬಂಧಿತ ತಪಾಸಣೆ ನಡೆಸಲಾಗುವುದು. ರಕ್ತದಲ್ಲಿನ ಸಕ್ಕರೆ ಅಂಶ ಪರೀಕ್ಷೆ, ಮಧುಮೇಹ ಪಾದ ಪರೀಕ್ಷೆ, ಶರೀರ ಸಂಯೋಜನೆ ವಿಶ್ಲೇಷಣೆ ಹಾಗೂ ಇ.ಸಿ.ಜಿ. ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳೂ ನಡೆಯಲಿವೆ. ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯ ತನಕ ಅರ್ಹ ವೈದ್ಯರಿಂದ ಉಚಿತ ತಪಾಸಣೆ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9448311618, 9481259158, 9343888657, 9945985178 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ರಿಷಿಕಾ ದೇವಾಡಿಗರಿಗೆ 'ಅಣ್ಣಾಜಿ ಬಲ್ಲಾಳ ಬಾಲ ಪುರಸ್ಕಾರ'

ಕುಂದಾಪುರ: ಕುಂದಾಪುರ ತಾಲೂಕಿನ ಹಟ್ಟಿಅಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ರಿಷಿಕಾ ದೇವಾಡಿಗ ಅವರಿಗೆ ಪ್ರತಿಷ್ಠಿತ 'ಅಣ್ಣಾಜಿ ಬಲ್ಲಾಳ



ಬಾಲ ಪುರಸ್ಕಾರ' ಲಭಿಸಿದೆ. ಮಿತ್ರ ಮಂಡಳಿ, ಕೋಟ ಇವರ ವತಿಯಿಂದ ಏ. 4 ರಂದು ಕೋಟದಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ.

ಬೈಂದೂರಿನ ರಾಮ ದೇವಾಡಿಗ ಹಾಗೂ ರೂಪಾ ದಂಪತಿಯ ಪುತ್ರಿಯಾಗಿರುವ ರಿಷಿಕಾ ದೇವಾಡಿಗ ಅವರು ಅತಿ ಕಿರಿಯ ವಯಸ್ಸಿನಲ್ಲೇ ಸಾಹಿತ್ಯ, ಸಂಸ್ಕೃತಿ ಹಾಗೂ ಕಲಾ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ. ತಾಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೆ ಅನೇಕ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು ಪ್ರತಿಭೆಯನ್ನು ಮೆರೆದಿದ್ದಾರೆ. 2025ರ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿದ್ದ ಇವರು 'ಮೊದಲ ಹೆಜ್ಜೆ' ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ. ಕಾರ್ಕಳ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಬಾಲ ವಿದ್ಯಾರ್ಥಿ ಸಾಹಿತಿ' ಪ್ರಶಸ್ತಿಯನ್ನು ಪಡೆದಿದ್ದಾರೆ.

ಏ.12ಕ್ಕೆ ವಸತಿ ಶಾಲೆಗಳಿಗೆ ಪ್ರವೇಶ ಪರೀಕ್ಷೆ

ಉಡುಪಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 2026–27 ನೇ ಸಾಲಿನ 6ನೇ ತರಗತಿ ಪ್ರವೇಶಾತಿಗಾಗಿ, ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯು ಏ.12ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರ ವರೆಗೆ ಬೈಂದೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ನಡೆಯಲಿದೆ. ಪ್ರವೇಶ ಪತ್ರಗಳನ್ನು ಆನ್‌ಲೈನ್ https://dom.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಜಿಲ್ಲಾ ಕಚೇರಿ, ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಹಾಗೂ ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0820–2573596, 2574596, 08258–231101 ಮತ್ತು 08254–230370 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ

ಉಡುಪಿ: ಉಡುಪಿ ತಾಲೂಕು ಬಡಗುಬೆಟ್ಟು ಗ್ರಾಮದ ಬೈಲೂರು ಎನ್.ಜಿ.ಒ ಕಾಲೋನಿ ನಿವಾಸಿ ಬಿ ಭಾಸ್ಕರ್ ನಾಯ್ಕ್ (65) ಎಂಬ ವ್ಯಕ್ತಿಯು 2023 ರ ಜನವರಿ ಮಾಹೆಯಲ್ಲಿ ಮನೆ ಬಿಟ್ಟು ಹೋದವರು ಇದುವರೆಗೂ ವಾಪಾಸು ಬಾರದೇ ನಾಪತ್ತೆಯಾಗಿದ್ದಾರೆ.

5 ಅಡಿ 3 ಇಂಚು ಎತ್ತರ, ಸಾಧಾರಣ ಶರೀರ, ದುಂಡು ಮುಖ, ಗೋಧಿ ಮೈಬಣ್ಣ ಹೊಂದಿದ್ದು ಕನ್ನಡ, ತುಳು, ತೆಲುಗು, ಹಿಂದಿ ಹಾಗೂ ಮಲಯಾಳಂ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಉಡುಪಿ ನಗರ ಪೊಲೀಸ್ ಠಾಣಾಧಿಕಾರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಗ್ವಾಡಿ ಮಹಿಷಾಸುರಮರ್ದಿನಿ ದೇಗುಲ ಬ್ರಹ್ಮರಥೋತ್ಸವ ಸಂಪನ್ನ



ಕುಂದಾಪುರ: ಬಗ್ವಾಡಿಯ ಶ್ರೀ ಮಹಿಷಾಸುರಮರ್ದಿನಿ ದೇವಸ್ಥಾನದಲ್ಲಿ ವೈಭವದ ಬ್ರಹ್ಮರಥೋತ್ಸವ ನಡೆಯಿತು.

ಬೆಳಿಗ್ಗೆ ಏಕಕಾಲದಲ್ಲಿ ಒಂದು ಸಾವಿರ ಮಹಿಳೆಯರಿಂದ ಸಾಮೂಹಿಕ ಕುಂಕುಮಾರ್ಚನೆ ನಡೆಯಿತು. ಪ್ರಧಾನ ತಂತ್ರಿ ಪಾದೇಮಠ ವೇದಮೂರ್ತಿ ಬ್ರಹ್ಮಶ್ರೀ ದೇವರಾಜ ಅಡಿಗ ಹಾಗೂ ದೇಗುಲದ ಪ್ರಧಾನ ಅರ್ಚಕ ಗಿರೀಶ ಭಟ್ ಬಗ್ವಾಡಿ ನೇತೃತ್ವದಲ್ಲಿ ಬೆಳಗ್ಗೆ ಪುಣ್ಯಾಹ, ಕಲಶ ಸ್ಥಾಪನೆ, ಪ್ರಧಾನಾಧಿವಾಸ ಹೋಮ, ಕಲಶಾಭಿಷೇಕ, ರಥಶುದ್ಧಿ ಉತ್ಸವ ಬಲಿ ನೆರವೇರಿತು. ಸಂಜೆ ಸಂಭ್ರಮದ ಬ್ರಹ್ಮ ರಥೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್ ಪ್ರವರ್ತಕ ನಾಡೋಜ ಡಾ. ಜಿ. ಶಂಕರ್, ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್, ಬೈಂದೂರು ಕ್ಷೇತ್ರದ ಶಾಸಕ ಗುರುರಾಜ ಗಂಟಿಹೊಳೆ, ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ, ಮೊಗವೀರ ಮಹಾಜನ ಸೇವಾ ಸಂಘ ಮುಂಬಯಿ ಪ್ರಧಾನ ಕಚೇರಿಯ ಗೌರವಾಧ್ಯಕ್ಷ ಸುರೇಶ ಕಾಂಚನ್, ಅಧ್ಯಕ್ಷ ಸಂತೋಷ್ ಪುತ್ರನ್, ಕಾರ್ಯದರ್ಶಿ ಗಣೇಶ ಮೆಂಡನ್, ಬಗ್ವಾಡಿ ಹೋಬಳಿ ಕುಂದಾಪುರ ಶಾಖೆಯ ಅಧ್ಯಕ್ಷ ಉದಯಕುಮಾರ್ ಹಟ್ಟಿಯಂಗಡಿ, ಕಾರ್ಯದರ್ಶಿ ಪ್ರಭಾಕರ ಮೊಗವೀರ ಸೇನಾಪುರ, ಮಹಾ ಅನ್ನಸಂತರ್ಪಣೆ ಸೇವಾಕರ್ತರಾದ ಅಶ್ವಿನಿ ಮತ್ತು ಚಂದ್ರಶೇಖರ ಶೆಟ್ಟಿ ಹಾಗೂ ಅಭಿಜಿತ್ ಸಿ. ಶೆಟ್ಟಿ ಪಡುಮನೆ ಬಗ್ವಾಡಿ, ಹಾಗೂ ಮೊಗವೀರ ಸ್ತ್ರೀ ಶಕ್ತಿ ಸಂಘಟನೆ ಅಧ್ಯಕ್ಷರು, ಮೊಗವೀರ ಯುವ ಸಂಘಟನೆಯ ಹೆಮ್ಮಾಡಿ, ಕುಂದಾಪುರ, ಬೈಂದೂರು, ಶಂಕರನಾರಾಯಣ, ಕೋಟೇಶ್ವರ ಘಟಕಗಳ ಅಧ್ಯಕ್ಷರು, ಗುರಿಕಾರರು ಇದ್ದರು.

'ಬನ್ನಂಜೆ ಒಡೆಯ ಮಹಾಲಿಂಗೇಶ್ವರ' ಧ್ವನಿಸುರುಳಿ ದೇವಸ್ಥಾನದಲ್ಲಿ ಬಿಡುಗಡೆ



ಉಡುಪಿ: ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕುಂಭಾಭಿಷೇಕ ಹಿನ್ನೆಲೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಸಿದ್ಧಪಡಿಸಿರುವ ಖ್ಯಾತ ಗಾಯಕ ವಿದ್ವಾನ್ ಯಶವಂತ್ ಎಂ.ಜಿ. ಅವರ ಕಂಠದಿಂದ ಮೂಡಿಬಂದ 'ಬನ್ನಂಜೆ ಒಡೆಯ ಮಹಾಲಿಂಗೇಶ್ವರ' ಧ್ವನಿಸುರುಳಿಯನ್ನು ಬಿಡುಗಡೆ ಮಾಡಲಾಯಿತು.

ಶುಕ್ರವಾರ ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಂಗಣದಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿ ದೇವಾಲಯಗಳು ಭಕ್ತಿಯ ತಾಣ. ಭಗವಂತನ ಅನುಗ್ರಹ ಪ್ರಾಪ್ತಿಯಿಂದ ಮನಸ್ಸಿಗೆ ನೆಮ್ಮದಿ ಸಾಧ್ಯ ಎಂದರು. ಬ್ರಹ್ಮಕಲಶ ಮಹೋತ್ಸವದ ಯಶಸ್ಸಿಗೆ ಪೊಲೀಸ್ ಇಲಾಖೆ ಸಹಕಾರ ನೀಡಲಿದ್ದು ಅಗತ್ಯ ಬಂದೋಬಸ್ತ್ ಕಾರ್ಯದಲ್ಲಿ ನೆರವಾಗಲಿದೆ ಎಂದರು.

ಧ್ವನಿಸುರುಳಿಗೆ ಧ್ವನಿ ನೀಡಿದ ಯಶವಂತ ಎಂ.ಜಿ., ಕ್ಷೇತ್ರದ ಸ್ಥಳಪುರಾಣ ಆಧರಿಸಿ ಕವನ ರಚಿಸಿ ಸಂಯೋಜಿಸಲಾಗಿದೆ ಎಂದರು.

ನಿಡಂಬೂರು ವಲಯ ಬ್ರಾಹ್ಮಣ ಸಂಘದ ಅಧ್ಯಕ್ಷ ಗಣೇಶ ರಾವ್, ಉಡುಪಿ ಜಿಲ್ಲಾ ಅತ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷ ಹರಿಪ್ರಸಾದ್ ರೈ ಶುಭ ಹಾರೈಸಿದರು. ಬನ್ನಂಜೆ ದೇವಳದ ಆಡಳಿತ ಮೊಕ್ತೇಸರ ಮಾಧವ ಪೂಜಾರಿ ಬನ್ನಂಜೆ ಸ್ವಾಗತಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ರಮೇಶ ಕಾಂಚನ್ ಕಾರ್ಯಕ್ರಮ ಸಂಘಟಿಸಿದ್ದರು. ದೇವಳದ ಪ್ರಧಾನ ಅರ್ಚಕ ವಾಸುದೇವ ಉಪಾಧ್ಯ ಪ್ರಾರ್ಥಿಸಿದರು. ಆಡಳಿತ ಸಮಿತಿ ಸದಸ್ಯ ದಿನೇಶ ಪುತ್ರನ್ ಇದ್ದರು. ಕೃತಿ ಮೂಡಬೆಟ್ಟು ನಿರೂಪಿಸಿದರು.

ಶಿರ್ವ: ನ್ಯಾರ್ಮ ಧರ್ಮ ಜಾರಂದಾಯ ನೇಮ ಸಂಪನ್ನ



ಶಿರ್ವ: ಶಿರ್ವದ ಮಹತೋಭಾರ ಶ್ರೀ ವಿಷ್ಣುಮೂರ್ತಿ ದೇವರ ಸನ್ನಿಧಾನಕ್ಕೆ ಸಂಬಂಧಪಟ್ಟ ನ್ಯಾರ್ಮ ಶ್ರೀ ಧರ್ಮ ಜಾರಂದಾಯ ದೈವಸ್ಥಾನದಲ್ಲಿ ಎರಡು ದಿನಗಳ ನೇಮೋತ್ಸವ ಗುರುವಾರ ಹಾಗೂ ಶುಕ್ರವಾರ ಜರಗಿತು.

ಸಂಪ್ರದಾಯದಂತೆ ಸುಗ್ಗಿ ಹುಣ್ಣಿಮೆಯಂದು ಮಧ್ಯಾಹ್ನ ಮಹತೋಭಾರ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶಿರ್ವ ನಡಿಬೆಟ್ಟು ಕುಟುಂಬಸ್ಥರಿಂದ ದೇವರಿಗೆ ಹೂವಿನ ಪೂಜೆ ನಡೆದು, ಸಂಜೆ ಶಿರ್ವ ನಡಿಬೆಟ್ಟು ಚಾವಡಿಯಿಂದ ದೈವದ ಪಡ್ಯಾಣವನ್ನು ಅಲಂಕಾರದೊಂದಿಗೆ ದೈವಸ್ಥಾನಕ್ಕೆ ತಂದು ರಾತ್ರಿ ನೇಮ ಜರುಗಿತು.

ಶುಕ್ರವಾರ ಜರುಗಿದ ಊರಿನವರ ನೇಮದ ಪ್ರಯುಕ್ತ ಮಧ್ಯಾಹ್ನ ದೈವದರ್ಶನ, ರಾತ್ರಿ ವೈಭವದ ನೇಮ, ಬಾಕ್ಯಾರು ಗದ್ದೆಯಲ್ಲಿ ಕುದುರೆಯೇರಿ ಶ್ರೀ ವಿಷ್ಣುಮೂರ್ತಿ ದೇವರಭೇಟಿ, ತೂಟೆದಾರ ಸಂಪ್ರದಾಯಗಳೊಂದಿಗೆ ನೇಮ ಸಂಪನ್ನಗೊಂಡಿತು. ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಸಹಿತ ಅನೇಕ ಗಣ್ಯರು ಭಾಗವಹಿಸಿದ್ದರು.

ಉಡುಪಿ ಜಿಲ್ಲೆಯಲ್ಲಿ ಪ್ರಾರ್ಥನೆ, ಧ್ಯಾನದೊಂದಿಗೆ ಗುಡ್‌ಫ್ರೈಡೆ ಆಚರಣೆ



ಉಡುಪಿ: ಕ್ರೈಸ್ತ ಸಮುದಾಯದ ಪವಿತ್ರ ದಿನವಾದ ಶುಭ ಶುಕ್ರವಾರವನ್ನು (ಗುಡ್ ಫ್ರೈಡೆ) ಉಡುಪಿ ಜಿಲ್ಲೆಯಾದ್ಯಂತ ಉಪವಾಸ, ಧ್ಯಾನ ಹಾಗೂ ಪ್ರಾರ್ಥನೆಯೊಂದಿಗೆ ಆಚರಿಸಲಾಯಿತು.

ಜಿಲ್ಲೆಯ ಎಲ್ಲಾ ಚರ್ಚುಗಳಲ್ಲೂ ಬೆಳಗ್ಗಿನಿಂದ ಪ್ರಾರ್ಥನೆ, ಧ್ಯಾನ, ಯೇಸುವಿನ ಶಿಲುಬೆಯ ಹಾದಿಯ ವಾಚನ ಜರುಗಿತು. ಧರ್ಮಪ್ರಾಂತದ ಪ್ರಧಾನ ದೇವಾಲಯವಾದ ಕಲ್ಯಾಣಪುರ ಮಿಲಾಗ್ರಿಸ್ ಕ್ಯಾಥೆಡ್ರಲ್ ಧರ್ಮಪ್ರಾಂತದ ಆಡಳಿತಾಧಿಕಾರಿ ಅತಿ ವಂ. ಜೆರಾಲ್ಡ್ ಐಸಾಕ್ ಲೋಬೊ ಪ್ರಾರ್ಥನಾ ವಿಧಿಯನ್ನು ನೆರವೇರಿಸಿ, ಈ ವೇಳೆ ಸಂದೇಶ ನೀಡಿದ ಅವರು ಈ ಲೋಕವನ್ನು ಉಳಿಸಲು ಶತ್ರುಗಳ ವಶವಾದ ಯೇಸುಕ್ರಿಸ್ತರು ಕ್ರೂರ ಶಿಲುಬೆಯ ಮರಣಕ್ಕೆ ಒಳಗಾದರು. ಈ ಲೋಕದಲ್ಲಿ ಪಾಪಮಾಡಿದ ಪ್ರತಿ ಮನುಷ್ಯನಿಗಾಗಿ ಅವರು ಶಿಲುಬೆಯನ್ನು ಹೊತ್ತು ಲೋಕವನ್ನು ಕಾಪಾಡಲು ಅವರು ತಮ್ಮ ಪ್ರಾಣವನ್ನೇ ಅರ್ಪಿಸಿದರು.

ಈ ಸಂದರ್ಭದಲ್ಲಿ ಚರ್ಚಿನ ಪ್ರಧಾನ ಧರ್ಮಗುರು ವಂ.ಫರ್ಡಿನಾಂಡ್ ಗೊನ್ಸಾಲ್ವಿಸ್, ಸಹಾಯಕ ಧರ್ಮಗುರು ವಂ.ಪ್ರದೀಪ್ ಕಾರ್ಡೋಜಾ, ಸಂಪದ ಸಂಸ್ಥೆಯ ನಿರ್ದೇಶಕ ವಂ. ರೆಜಿನಾಲ್ಡ್ ಪಿಂಟೊ, ಪಿಲಾರ್ ಸಭೆಯ ವಂ. ವಿನ್ಸೆಂಟ್ ಮಚಾದೊ ಇದ್ದರು. ಜಿಲ್ಲೆಯ ಕೆಲವು ಚರ್ಚುಗಳಲ್ಲಿ ಯೇಸುಕ್ರಿಸ್ತರ ಬಂಧನ, ಶಿಲುಬೆಯಮೇಲೆಮರಣವನ್ನಪ್ಪುವತನಕದ ಘಟನೆಗಳನ್ನು ಪ್ರಸ್ತುತಪಡಿಸಲಾಯಿತು. ಚರ್ಚಿನಲ್ಲಿ ಧರ್ಮಗುರುಗಳು ರಕ್ತವರ್ಣದ ಪೂಜಾ ಬಟ್ಟೆಯನ್ನು ಧರಿಸಿ ಯೇಸುಕ್ರಿಸ್ತನ ಕೊನೆಯ ಗಳಿಗೆಗಳ ವೃತ್ತಾಂತ ಓದಿದರು. ಭಕ್ತರು ತಮ್ಮ 40 ದಿನಗಳ ತ್ಯಾಗದ ಉಳಿಕೆ ಹಣವನ್ನು ಬಡಬಗ್ಗರಿಗಾಗಿ ನೀಡಿದರು.

ಇಂದು ಕಟಪಾಡಿಯಲ್ಲಿ ಮಿಷನ್ ಆಸ್ಪತ್ರೆ ಆರೋಗ್ಯ ಕೇಂದ್ರ ಉದ್ಘಾಟನೆ

ಉಡುಪಿ: ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಮತ್ತು ಕೈಗೆಟುಕುವ ದರದ ವೈದ್ಯಕೀಯ ಸೇವೆ ಒದಗಿಸುವ ನಿಟ್ಟಿನಲ್ಲಿ, ಉಡುಪಿಯ ಸಿ.ಎಸ್.ಐ ಲೊಂಬಾರ್ಡ್ ಮೆಮೋರಿಯಲ್ (ಮಿಷನ್) ಆಸ್ಪತ್ರೆಯು ಕಟಪಾಡಿಯಲ್ಲಿ ತನ್ನ ನೂತನ ಲೊಂಬಾರ್ಡ್ ಮಿಷನ್ ಆಸ್ಪತ್ರೆ ಹೆಲ್ತ್ ಸೆಂಟರ್ ಅನ್ನು ಆರಂಭಿಸುತ್ತಿದೆ. ಈ ಹೊಸ ಆರೋಗ್ಯ ಕೇಂದ್ರದ ಉದ್ಘಾಟನಾ ಸಮಾರಂಭವು ಏ.4ರ ಶನಿವಾರ ಬೆಳಗ್ಗೆ 10:30ಕ್ಕೆ ಕಟಪಾಡಿ ಬಸ್ ನಿಲ್ದಾಣದ ಬಳಿ ನಡೆಯಲಿದೆ ಎಂದು ಆಸ್ಪತ್ರೆಯ ನಿರ್ದೇಶಕ ಡಾ. ಸುಶಿಲ್ ಜತನ್ನ ತಿಳಿಸಿದ್ದಾರೆ.

ಸಿ.ಎಸ್.ಐ–ಕರ್ನಾಟಕ ದಕ್ಷಿಣ ಧರ್ಮಪ್ರಾಂತ್ಯದ ಬಿಷಪ್ ಆಗಿರುವ ರೈಟ್ ರೆವ. ಹೇಮಚಂದ್ರ ಕುಮಾರ್ ಅವರು ನೂತನ ಆರೋಗ್ಯ ಕೇಂದ್ರವನ್ನು ಆಶೀರ್ವದಿಸಿ ಲೋಕಾರ್ಪಣೆ ಮಾಡಲಿದ್ದಾರೆ. ಆಸ್ಪತ್ರೆಯ ನಿರ್ದೇಶಕ ಡಾ.ಸುಶಿಲ್ ಜತನ್ನ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಹಾಗೂ ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ನಿರ್ದೇಶಕ ಫಾ. ಫೌಸ್ಟಿನ್ ಲೂಕಸ್ ಲೋಬೋ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಗೌರವ ಅತಿಥಿಗಳಾಗಿ ಸರಸ್ವತಿ ಕ್ಲಿನಿಕ್‌ನ ಡಾ. ಎ. ರವೀಂದ್ರನಾಥ ಶೆಟ್ಟಿ, ಕಟಪಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಪ್ರಭಾ ಬಿ. ಶೆಟ್ಟಿ, ಉದ್ಯಮಿ ಇಕ್ಬಾಲ್ ಶಂಸುದ್ದೀನ್, ಕರ್ನಾಟಕ ಸರ್ಕಾರದ ಕ್ರಿಶ್ಚಿಯನ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ನಿರ್ದೇಶಕ ಪ್ರಶಾಂತ್ ಜತನ್ನ ಉಪಸ್ಥಿತರಿರಲಿದ್ದಾರೆ. ಅಲ್ಲದೆ, ಸಿಎಸ್‌ಐ–ಕೆಎಸ್ ಡಿ ಖಜಾಂಚಿ ರೆವ. ಐವಾನ್ ಡಿ. ಸೋನ್ಸ್, ಉಡುಪಿ ಏರಿಯಾ ಚೇರ್ಮನ್ ರೆವ. ಕಿಶೋರ್ ಕುಮಾರ್, ಅಂಬಾಡಿ ಸಿಎಸ್‌ಐ ಚರ್ಚ್‌ನ ರೆವ. ಅಕ್ಷಯ್ ಅಮ್ಮಣ್ಣ ಹಾಗೂ ಸಿಎಸ್‌ಐ–ಕೆಎಸ್‌ಡಿ ಸಹ ಕಾರ್ಯದರ್ಶಿ ಸ್ಟೀಫನ್ ಕರ್ಕಡ ಭಾಗವಹಿಸಲಿದ್ದಾರೆ. ಆರೋಗ್ಯ ಸೇವೆಗಳ ಪ್ರವೇಶ ಸೀಮಿತವಾಗಿರುವ ಸಮುದಾಯಗಳಿಗೆ ತಲುಪುವುದು ನಮ್ಮ ಬದ್ಧತೆಯಾಗಿದೆ. ಯಾರೂ ವೈದ್ಯಕೀಯ ಸೇವೆಯಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಪ್ರಾಥಮಿಕ ಆರೋಗ್ಯ ರಕ್ಷಣೆ ಮತ್ತು ಗ್ರಾಮೀಣ ಸಮುದಾಯಗಳನ್ನು ವಿಶೇಷ ವೈದ್ಯಕೀಯ ಸೇವೆಗಳೊಂದಿಗೆ ಸಂಪರ್ಕಿಸುವ ಕೊಂಡಿಯಾಗಿ ಕೆಲಸ ಮಾಡಲಿದೆ ಎಂದರು.

ಈ ವೇಳೆ ಆಸ್ಪತ್ರೆ ಆಡಳಿತಾಧಿಕಾರಿ ಡೀನಾ ಪ್ರಭಾವತಿ, ಆಪರೇಶನ್ಸ್ ಪ್ರಮುಖೆ ಶಿಲ್ಪಾ ಶೆಟ್ಟಿ, ಪಿಆರ್‌ಒ ರೋಹಿ ರತ್ನಾಕರ್ ಉಪಸ್ಥಿತರಿದ್ದರು.

ಉಚ್ಚಿಲ ದೇವಸ್ಥಾನ ಬಳಿ ತಡೆಗೋಡೆ ಕಾಮಗಾರಿಗೆ ಚಾಲನೆ



ಪಡುಬಿದ್ರಿ: ಉಚ್ಚಿಲ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬಳಿಯ ತಡೆಗೋಡೆ ನಿರ್ಮಾಣಕ್ಕೆ ದೇವಸ್ಥಾನದಿಂದ 14 ಲಕ್ಷ ರೂಪಾಯಿ ಅನುದಾನ ಕಾಯ್ದಿರಿಸಿದ್ದು ಇದರ ಗುದ್ದಲಿ ಪೂಜೆಯನ್ನು ಶುಕ್ರವಾರ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಉಚ್ಚಿಲ ಮಹಾಲಿಂಗೇಶ್ವರ ದೇವಸ್ಥಾನದ ಮೆನೇಜರ್ ಸಂತೋಷ್, ಗಂಗಾಧರ್ ಸುವರ್ಣ, ಬಡಾ ಗ್ರಾಮ ಪಂಚಾಯತ್ ನಿಕಟ ಪೂರ್ವ ಅಧ್ಯಕ್ಷ ಶಿವಕುಮಾರ್ ಮೆಂಡನ್, ಉಚ್ಚಿಲ ಮಹಾಶಕ್ತಿ ಅಧ್ಯಕ್ಷರಾದ ಚಂದ್ರಶೇಖರ್ ಕೋಟ್ಯಾನ್, ಚಂದ್ರಶೇಖರ್ ಶೆಟ್ಟಿ ಕಮಲಾಕ್ಷ ಶೆಣೈ , ಬಡಾ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಇಂದಿರಾ ಶೆಟ್ಟಿ, ವಸಂತ ದೇವಾಡಿಗ, ಸುಧಾಕರ್ ಪೂಜಾರಿ, ಸುಧೀರ್ ಶೆಟ್ಟಿ ಉಪಸ್ಥಿತರಿದ್ದರು.



ದ.ಕ. ಮೊಗವೀರ ಮಹಾಜನ ಸಂಘ ಉಚ್ಚಿಲ ಇದರ ಆಡಳಿತಕ್ಕೊಳಪಟ್ಟ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಮಹಾರಥೋತ್ಸವ ವಿಜೃಂಭಣೆಯಿಂದ ಶುಕ್ರವಾರ ಮಧ್ಯಾಹ್ನ ಜರಗಿತು.

ಏ. 7ರವರೆಗೆ ಇಂದ್ರಾಳಿಯ ಇಂದ್ರಾಣಿ ಶ್ರೀ ಮುಖ್ಯಪ್ರಾಣ ದೇವರು, ನಾಗ ದೇವರ ಪುನಃಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಸಂಭ್ರಮ
ಪೂರ್ವಭಾವಿಯಾಗಿ ವಿಜೃಂಭಣೆಯಿಂದ ಸಾಗಿತು ಹಸಿರು ಹೊರೆಕಾಣಿಕೆಯ ಶೋಭಾಯಾತ್ರೆ

ಉಡುಪಿ: ಇಂದ್ರಾಳಿಯ ಇಂದ್ರಾಣಿ ಶ್ರೀ ಪಂಚದುರ್ಗಾ ಪರಮೇಶ್ವರೀ ದೇವಸ್ಥಾನ ಸಮೀಪದಲ್ಲಿರುವ ಇಂದ್ರಾಣಿ ಶ್ರೀ ಮುಖ್ಯಪ್ರಾಣ ದೇವರು ಹಾಗೂ ನಾಗ ದೇವರ ಪುನಃಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಆರಂಭವಾಗಿದ್ದು, ಏ.7ರ ವರೆಗೆ ನಡೆಯಲಿದೆ. ಇದರ ಪೂರ್ವಭಾವಿಯಾಗಿ ಬುಧವಾರ ಹಸಿರು ಹೊರೆಕಾಣಿಕೆ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು.

ಶ್ರೀಕೃಷ್ಣಮಠದ ರಾಜಾಂಗಣದ ಎದುರಿನಲ್ಲಿ ಪರ್ಯಾಯ ಶ್ರೀ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನತೀರ್ಥ ಶ್ರೀಪಾದರು ಶೋಭಾಯಾತ್ರೆಗೆ ಚಾಲನೆ ನೀಡಿ, ಆಶೀರ್ವದಿಸಿದರು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭೂಪತಿ ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಬಿ. ಜಯಕರ ಶೆಟ್ಟಿ





ಇಂದ್ರಾಳಿ, ಇಂದ್ರಾಣಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಬಿ. ಕುಶಲ ಶೆಟ್ಟಿ, ಪ್ರಮುಖರಾದ ಪುರುಷೋತ್ತಮ ಪಿ. ಶೆಟ್ಟಿ ಶ್ರೀನಾಗೇಶ್ ಹೆಗ್ಡೆ ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಸೀತಾರಾಮ ನಾಯಕ್ ಮಂಚಿ, ಜೀರ್ಣೋದ್ಧಾರ ಸಮಿತಿ ಉಪಾಧ್ಯಕ್ಷ ಸಾಧು ಶೆಟ್ಟಿ ಪ್ರ. ಕಾರ್ಯದರ್ಶಿ ರತ್ನಾಕರ ಇಂದ್ರಾಳಿ, ಪ್ರಧಾನ ಅರ್ಚಕ ಗೋಪಾಲಕೃಷ್ಣ ಉಪಾಧ್ಯಾಯ, ಅರ್ಚಕರಾದ ಪ್ರದ್ಯುಮ್ನ ಭಟ್, ಯೋಗೀಶ್ ಭಟ್, ಸಮಿತಿಯ ಹರಿಶ್ಚಂದ್ರ ನಾಯಕ್, ರಾಜೇಶ್ ನಾಯಕ್, ಮಧುಕರ ಶೆಣೈ, ಸಮಿತಿಗಳ ಪ್ರಮುಖರು, ಭಕ್ತರು ಉಪಸ್ಥಿತರಿದ್ದರು.

ದೇವರಿಗೆ ಸಮರ್ಪಿಸಲ್ಪಡುವ ಪ್ರಭಾವಳಿ, ಬೃಹದಾಕಾರದ ಘಂಟೆ, ಜಾಗಟೆ, ನಂದಾದೀಪ, ಚಿನ್ನದ ದೃಷ್ಟಿ ಆಂಜನೇಯ ಮತ್ತು ಮುಖ್ಯಪ್ರಾಣ ದೇವರ ಪ್ರತಿಕೃತಿ, 200ಕ್ಕೂ ಮಿಕ್ಕಿ ಕುಂಭ ಕಲಶ ಹಿಡಿದ ಮಹಿಳೆಯರು, ಕುಣಿತ ಭಜನೆ, ಹಾಸ್ಯ ಗೊಂಬೆಗಳು, ಯಕ್ಷಗಾನ ವೇಷಗಳು, ಕೀಲು ಕುದುರೆ, ಹುಲಿವೇಷಧಾರಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಬೃಹತ್ ಘಂಟೆ ಸಮರ್ಪಣೆ

ಹನುಮ ಜಯಂತಿಯಂದು ಗುರುವಾರ ಶ್ರೀ ದೇವಳಕ್ಕೆ ಬೃಹತ್ ಘಂಟೆ ಸಮರ್ಪಿಸಲಾಯಿತು. ದೇವಳದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಉಪಾಧ್ಯಾಯ ಬೃಹತ್ ಘಂಟೆಯನ್ನು ಉದ್ಘಾಟಿಸಿದರು. ಬಳಿಕ ದೇವರ ಸನ್ನಿಧಿಯಲ್ಲಿ ಸಾಮೂಹಿಕ ಹನುಮಾನ್ ಚಾಲೀಸಾ ಪಠನಕ್ಕೆ ಚಾಲನೆ, ಮಕ್ಕಳು ಹಾಗೂ ವಿವಿಧ ಭಜನಾ ತಂಡದವರಿಂದ ಭಜನಾ ಕಾರ್ಯಕ್ರಮ ನಡೆಯಿತು.

ಹನುಮ ಜಯಂತಿ ಅಂಗವಾಗಿ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಸರೋಜಿನಿ ಜಯ ಶೆಟ್ಟಿ ಸಂಪಾದಿತ ಕಾರ್ಣಿಕದ ಕ್ಷೇತ್ರ ಇಂದ್ರಾಣಿ ಪುಸ್ತಕವನ್ನು ಶ್ರೀ ಶಿವಾನಂದ ಭಾರತಿ ಸ್ವಾಮೀಜಿ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭೂಪತಿ ಶೆಟ್ಟಿ, ಇಂದ್ರಾಣಿ ದೇವಳ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕುಶಲ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರತ್ನಾಕರ ಇಂದ್ರಾಳಿ, ಯೋಗೀಶ ಭಟ್ ಮೊದಲಾದವರಿದ್ದರು.